ಅಭಿಯಾಚನೆ ಕ್ರಮಾಂಕ 11 — ಯುವಜನ ಸೇವೆ

' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಯುವಜನ ಸೇವೆಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೨೫,೧೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೦,೦೦,೦೦೦ ರೂ ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು. '

ಅಭಿಯಾಚನೆ ಕ್ರಮಾಂಕ 12 — ಕಲೆ. ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿ

' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಲೆ, ಸಂಸ್ಕೃತಿ ಮತ್ತು ಕನ್ನಡಾಭಿವೃದ್ಧಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೨೭,೯೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು, '

ಅಭಿಯಾಚನೆ ಕ್ರಮಾಂಕ 27 — ವಾರ್ತಾ ಮತ್ತು ಪ್ರಚಾರ

' ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಾರ್ತಾ ಮತ್ತು ಪ್ರಚಾರಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೫,೮೪,೯೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೬೯,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರ್ಮಾಡುವುದು. '

II. PAPERS LAID ON THE TABLE

1. SRI A. LAXMISAGAR (Minister for Law and Urban Development).—Sir, on behalf of Minister for Social Welfare and Minister for Transport & Tourism I beg to lay.—

1. Eighth Annual Report & Accounts of the Karnataka Backward Classes & Minorities Development Corporation Limited for the year 1984-85 ;

as required under Section 619A of the Companies Act 1956.

2. Notification No. FTD 23 TMR 84, dated 24th February 1986;

3. The Karnataka Motor Vehicles (Third Amendment) Rules, 1986 ;

as required under sub-section (3) of Section 133 of the Motor Vehicles Act, 1939.

೧೨-೩೦ ಪಿ.ಎಂ.

ವಿತ್ತೀಯ ಕಾರ್ಯಕಲಾಪಗಳು

೧೯೮೬-೮೭ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಬೇಡಿಕೆ ಕ್ರಮಸಂಖ್ಯೆ ೬ ಮತ್ತು ೪೮ ಗಣಿ ಮತ್ತು ಭೂ ವಿಜ್ಞಾನ, ವಿದ್ಯುತ್ ಯೋಜನೆಗಳು

ಶ್ರೀ ಜೆ. ಎಸ್. ದೇಶ್‌ಮುಖ್ (ವಿದ್ಯುಚ್ಛಕ್ತಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಗಣಿಗಳು ಮತ್ತು

ಭೂ ವಿಜ್ಞಾನಕ್ಕೆ (ಬೇಡಿಕೆ ಸಂಖ್ಯೆ ೭) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪,೯೬,೯೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ ಮತ್ತು ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿದ್ಯುಚ್ಛಕ್ತಿ, ಯೋಜನೆಗಳು ಸಂದಾಯ ಮಾಡುವಲ್ಲಿ (ಬೇಡಿಕೆ ಸಂಖ್ಯೆ ೪೮) ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೯೩,೮೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೪೮,೦೫,೩೧,೦೦೦ ರೂ,ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಬೇಡಿಕೆ ಕ್ರಮಸಂಖ್ಯೆ ೧೫, ೧೬, ೧೭, ೧೮, ೨೦, ೩೮, ೩೯, ೪೦, ೪೧ ಮತ್ತು ೪೨ ವರಮಾನ ತೆರಿಗೆ, ಮಾರಾಟ ತೆರಿಗೆ, ಪೆನ್‌ಷನ್ ಚುನಾವಣೆ, ರಾಜ್ಯಪಾಲರ, ಮಂತ್ರಿಗಳ ಪಬ್ಲಿಕ್ ಸರ್ವಿಸ್ ಕಮಿಷನ್ ಮತ್ತು ಜಿಲ್ಲಾ ಆಡಳಿತ ಇತ್ಯಾದಿಗಳಿಗೆ ಸಂಬಂದಪಟ್ಟ ಬೇಡಿಕೆಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಹಾಗೂ ನಗರಾಭಿವೃದ್ಧಿ ಸಚಿವರು) (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳಿಗೆ (ಬೇಡಿಕೆ ಸಂಖ್ಯೆ ೧೫) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೦,೩೫,೫೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಸೇವೆ (ಬೇಡಿಕೆ ಸಂಖ್ಯೆ ೧೬)ಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮,೫೬,೧೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳಿಗೆ (ಬೇಡಿಕೆ ಸಂಖ್ಯೆ ೧೭) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೦೦,೦೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮’ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರ್ಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳಿಗೆ ಸಂದಾಯ ಮಾಡುವಲ್ಲಿ (ಬೇಡಿಕೆ ಸಂಖ್ಯೆ ೧೮) ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಬಂಡವಾಳ ಖಾತೆಯಲ್ಲಿ ೩೨,೨೦,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿವಿಧ ಸಾಮಾನ್ಯ ಸೇವೆಗಳಿಗೆ (ಬೇಡಿಕೆ ಸಂಖ್ಯೆ ೨೦) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨,೭೦,೩೯,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೭೫ ೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩- ೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳು (ಬೇಡಿಕೆ ಸಂಖ್ಯೆ ೩೮) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೫,೦೦ ೦೦೦ ರೂ.ಗಳಿಗಿಂತ ಮೀರಿದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ (ಬೇಡಿಕೆ ಸಂಖ್ಯೆ ೩೯)ಗಳಿಗೆ ಸಂದಾಯ

ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯೧,೪೨,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯಕ್ಕೆ (ಬೇಡಿಕೆ ಸಂಖ್ಯೆ ೪೦) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೦,೨೩,೮೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತಗಳಿಗೆ (ಬೇಡಿಕೆ ಸಂಖ್ಯೆ ೪೧) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫,೭೬,೮೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆಗಳಿಗೆ (ಬೇಡಿಕೆ ಸಂಖ್ಯೆ ೪೨) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೫೨,೪೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು (ಮಂಡಿಸಲು) ನಾನು ಭಿನ್ನವಿಸಿಕೊಳ್ಳುತ್ತೇನೆ.

ಪ್ರಸ್ತಾವಗಳನ್ನು ಮಂಡಿಸಲಾಯಿತು

ಅಧ್ಯಕ್ಷರು.— ಈಗ ಎಲ್ಲಾ ಬೇಡಿಕೆಗಳೂ ಸಭೆಯ ಮುಂದಿವೆ. ಬಂಗಾರಪ್ಪನವರೇ, ಚರ್ಚೆಯನ್ನು ಪ್ರಾರಂಭ ಮಾಡಿ.

† ಶ್ರೀ ಎಸ್. ಬಂಗಾರಪ್ಪ (ವಿರೋಧಪಕ್ಷದ ನಾಯಕರು).— ಮಾನ್ಯ ಸಭಾಧ್ಯಕ್ಷರೇ, ಮುಖ್ಯ ಮಂತ್ರಿಯವರ ಇಲಾಖೆಗಳಿಗೆ ಸಂಬಂಧಪಟ್ಟಿರತಕ್ಕಂಥ ಬೇಡಿಕೆಗಳು ಹಾಗೂ ವಿದ್ಯುಚ್ಛಕ್ತಿ ಇಲಾಖೆಯ ಸಚಿವರಿಗೆ ಸಂಬಂಧಪಟ್ಟಿರತಕ್ಕಂಥ ಬೇಡಿಕೆಗಳ ಮಂಡನೆ ಸದನದಲ್ಲಾಗಿದೆ. ಅವುಗಳ ಒಪ್ಪಿಗೆಗಾಗಿ ಸರ್ಕಾರ ಮಂಡನೆ ಮಾಡಿದೆ. ಇವೆಲ್ಲಾ ಬೇಡಿಕೆಗಳೂ ಸುಮಾರು ಒಟ್ಟು ೧೨ ಇರತಕ್ಕಂಥದ್ದು. ನಾನು ಈ ಬೇಡಿಕೆಗಳನ್ನು ವಿರೋಧ ಮಾಡಿ ಮಾತನಾಡುವುದಕ್ಕೆ ಎದ್ದು ನಿಂತಿದ್ದೇನೆ. ನಾವು ಎಲ್ಲಾ ಬೇಡಿಕೆಗಳ ಚರ್ಚೆ ಮತ್ತು ಒಪ್ಪಿಗೆಯ ಕೊನೆಯ ಹಂತದಲ್ಲಿ ಇದ್ದೇವೆ. ಇದಾದ ನಂತರ ಧನ ವಿನಿಯೋಗ ಮಸೂದೆಗೆ ಒಪ್ಪಿಗೆ ಕೊಡತಕ್ಕಂಥ ಒಂದು ಕಾರ್ಯಕ್ರಮ ರಾಜ್ಯಾಂಗಬದ್ಧವಾಗಿ ಇದೆ. ನಮ್ಮ ಮುಂದೆ ಇರತಕ್ಕಂಥ ಈ ಬೇಡಿಕೆಗಳಲ್ಲಿ ಪವರ್ ಪ್ರಾಜೆಕ್ಟ್‌ಗೆ ಸಂಬಂಧಪಟ್ಟಿರತಕ್ಕಂಥದ್ದು. ಇದರ ಬಗ್ಗೆ ನಾವು ನಿನ್ನೆಯೋ ಅಥವಾ ಮೊನ್ನೆಯೋ ಚರ್ಚೆಯನ್ನು ಮಾಡಿ ಮುಗಿಸಬೇಕಾಗಿತ್ತು. ಅನಿವಾರ್ಯವಾಗಿ ಕಾಲದ ಅಭಾವದಿಂದ ಮಾನ್ಯ ಮುಖ್ಯ ಮಂತ್ರಿಗಳ ಬೇಡಿಕೆಯ ಜೊತೆಯಲ್ಲಿ ಚರ್ಚೆ ಮಾಡಬೇಕಾದಂಥ ಸಂದರ್ಭ ಈ ಸದನಕ್ಕೆ, ನನಗೆ ಬಂದಿದ್ದು ದುರ್ದೈವದ ಸಂಗತಿ ಎಂದು ನನ್ನ ಭಾವನೆ. ಏಕೆಂದರೆ ಒಂದು ದಿನ ಬಿಟ್ಟು ಸದನದ ಸಮಿತಿಯ ಕಾರ್ಯಕಲಾಪದಲ್ಲಿ ಯಾವುದೇ ತೀರ್ಮಾನವನ್ನೂ ಮಾಡದೇ ಒಂದು ತೀರ್ಮಾನವನ್ನು ಮಾಡಿದ್ದು ಒಂದು ದಿನದ ಕಲಾಪವನ್ನು ಮುಂದಕ್ಕೆ ಹಾಕುವುದಕ್ಕೆ ಕಾರಣವಾಯಿತು ಎಂದು ನನ್ನ ಭಾವನೆ.

(ಶ್ರೀಮತಿ ಮನೋರಮಾ ಮಧ್ವರಾಜ್ ಪೀಠವನ್ನು ಅಲಂಕರಿಸಿದ್ದರು)

ಅದು ಏನೇ ಇರಲಿ ಪವರ್ ಪ್ರಾಜೆಕ್ಟ್‌ಗಳಿಗೂ ವಿದ್ಯುಚ್ಛಕ್ತಿ ಉತ್ಪಾದನೆ ಮಾಡತಕ್ಕಂಥ ಯೋಜನೆಗಳನ್ನು ನಾವು ಈ ದಿವಸ ಚರ್ಚೆಗೆ ನಾವು ತೆಗೆದುಕೊಂಡಿದ್ದೇವೆ. ಸುಮಾರಾಗಿ ಇಂದು ಮತ್ತು ನಾಳೆ ಸಾಮಾನ್ಯ ಆಡಳಿತ ಸೇರಿ ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟಿರತಕ್ಕಂಥ ಇಲಾಖೆಗಳು ಟ್ಯಾಕ್ಸ್‌ಸ್ ಇತ್ಯಾದಿ ಎಲ್ಲಾ ಬೇಡಿಕೆಗಳಿಗೆ ಮಾನ್ಯ ಸದಸ್ಯರು ಸಂಪೂರ್ಣವಾಗಿ ತಮ್ಮ ಕಾಲವನ್ನು ವಿನಿಯೋಗ ಮಾಡಿ ವಿತರಣೆ ಮಾಡುವುದಕ್ಕೆ ಸ್ಪಷ್ಟವಾಗಿ ಕಾಲದ ಅಭಾವ ಎಂಬ ಹಿನ್ನೆಲೆಯಲ್ಲಿ ನಾನು ಈ ಮಾತನ್ನು ಆಡುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ನಾವು ಯಾವಯಾವ ವಿಚಾರದಲ್ಲಿ ಆದ್ಯತೆಯನ್ನು ಕೊಡಬೇಕು,

ಯೋಜನಾ ವೆಚ್ಚದಲ್ಲಿ ಹಣವನ್ನು ತೊಡಗಿಸಿದ್ದೇವೆ. ಕೆಲವು ವಿಚಾರದಲ್ಲಿ ಹಿಂದಕ್ಕೆ ಬೀಳುತ್ತಿದ್ದೇವೆ ಎನ್ನುವ ಮಾತು ಪದೇ ಪದೇ ನಮ್ಮ ಮನಸ್ಸಿಗೆ ಬಂದದೆ. ಹಾಗೂ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಸುಮಾರಾಗಿ ನೀರಾವರಿ ತೆಗೆದುಕೊಂಡಾಗ ನಾನು ಈ ಸದನದಲ್ಲಿ ಈ ಗಾಗಲೇ ಚರ್ಚೆ ಮಾಡಿದ್ದೇವೆ. ನಮ್ಮ ಸಾಕಷ್ಟು ಹಣ ಕೃಷ್ಣ ಮೇಲ್ದಂಡೆ ಯೋಜನೆ ಇರಬಹುದು, ಕಾವೇರಿ ಜಲಾನಯನ ಪ್ರದೇಶಗಳು ಇರಬಹುದು, ಮಧ್ಯಮ ಮತ್ತು ಸಣ್ಣ ನೀರಾವರಿ ಅಥವಾ ಅತಿ ಸಣ್ಣ ನೀರಾವರಿ ಇರಬಹುದು. ನಾವು ಸಾಕಷ್ಟು ಹಣವನ್ನು ಯೋಜನಾ ಚೌಕಟ್ಟಿನಲ್ಲ ಇಡುತ್ತಿಲ್ಲ. ಆದ್ದರಿಂದ ರಾಜ್ಯದ ಪ್ರಗತಿ ಕುಂಟಿತಕ್ಕೆ ಒಳಪಡುತ್ತಿದೆ ಎಂದು ಬಹಳ ಆತಂಕದಿಂದ ಮಾನ್ಯ ಸದಸ್ಯರುಗಳು, ಆ ಕಡೆಯವರು, ಈ ಕಡೆಯವರು ಪದೇ ಪದೇ ಮಾತನಾಡಿದ್ದಾರೆ. ಈಗ ನಾವು ಪವರ್ ಜನರೇಷನ್ ಪ್ರಾಜೆಕ್ಟ್ ವಿಚಾರದಲ್ಲಿ ಕಳೆದ ಸಾರಿ ವಿವರಗಳನ್ನು ಇಟ್ಟಿದ್ದೆವು. ಆ ದಿವಸ ಮಾನ್ಯ ಮುಖ್ಯ ಮಂತ್ರಿಗಳು ಸಂಬಂಧಪಟ್ಟಿರತಕ್ಕಂಥ ಉತ್ತರವನ್ನು ಕೊಟ್ಟಿದ್ದಾರೆ. ಇವತ್ತು ನಮ್ಮ ವಿದ್ಯುತ್ ಪ್ರಮಾಣ ಕರ್ನಾಟಕ ರಾಜ್ಯಕ್ಕೆ ಒಟ್ಟು ಎಷ್ಟು ಬೇಕಾಗಿದೆ, ಅದು ಪಂಪ್‌ಸೆಟ್‌ಗೆ ಇರಬಹುದು, ಮನೆಗೆ ಖರ್ಚು ಮಾಡತಕ್ಕಂಥ ವಿದ್ಯುಚ್ಛಕ್ತಿ ಪ್ರಮಾಣವಿರಬಹುದು ಕೈಗಾರಿಕೆಗಳಿಗೆ ಇರಬಹುದು, ವ್ಯವಸಾಯಕ್ಕೆ ಇರಬಹುದು, ಅಥವಾ ಅದು ಬೇರೆ ಯಾವುದೇ ಕ್ಷೇತ್ರ್ರವಾಗಲಿ, ಎಷ್ಟು ಪ್ರಮಾಣದಲ್ಲಿ ಬೇಕೋ ಅಷ್ಟು ವಿದ್ಯುಚ್ಛಕ್ತಿ ಉತ್ಪಾದನೆಯನ್ನು ನಾವು ಸಂಪೂರ್ಣವಾಗಿ ಮಾಡಿಕೊಳ್ಳತಕ್ಕಂಥ ಶಕ್ತಿ ನಮಗಿದ್ದರೂ ಕೂಡ ಸಂಪೂರ್ಣವಾಗಿ ಮಾಡುವುದಕ್ಕೆ ನಮ್ಮಿಂದ ಸಾಧ್ಯವಾಗಿಲ್ಲ ಎನ್ನುವ ಭಾವನೆ ಇದೆ. ಅದಕ್ಕಾಗಿ ಪ್ರತಿ ವರ್ಷ ನಾವು ಕೇರಳದಿಂದ, ಆಂಧ್ರದಿಂದ ಮತ್ತೊಂದು ಕಡೆಯಿಂದ ವಿದ್ಯುತ್ತನ್ನು ಎರವಲು ಪಡೆಯುವುದೇ ಅಲ್ಲ, ಕೆ. ಇ. ಬಿ. ಇತ್ಯಾದಿ ಮುಖಾಂತರ ಖರೀದಿ ಮಾಡತಕ್ಕಂಥ ಕೆಲಸಕ್ಕೂ ರಾಜ್ಯ ಸರ್ಕಾರದವರು ಕೈ ಹಾಕುತ್ತಿದ್ದಾರೆ. ವಿದ್ಯುಚ್ಛಕ್ತಿ ಉತ್ಪಾದನೆಗೋಸ್ಕರ ಕರ್ನಾಟಕ ಪವರ್ ಕಾರ್ಪೊರೇಷನ್ ವಿದ್ಯುಚ್ಛಕ್ತಿಯ ಒಂದು ಮಂಡಳಿಯ ಸಂಧಾರಣೆ ಮಾಡಿ ಹಲವಾರು ವರ್ಷಗಳಿಂದ ಇಟ್ಟುಕೊಂಡಿದ್ದೇವೆ. ಸುಮಾರಾಗಿ ನಾವು ಯಾವ ಈ ಒಂದು ಪವರ್ ಕಾರ್ಪೊರೇಷನ್ ಮುಖಾಂತರ ಯಾವ ಯೋಜನೆಗಳಿಗೆ ಕೈ ಹಾಕುತ್ತಿದ್ದೇವೆ, ಅದಕ್ಕೆ ಇಟ್ಟಿರತಕ್ಕಂಥ ಹಣದ ಪ್ರಮಾಣವನ್ನು ನೋಡಿದಾಗ ಯಾವ ಕೋರ್ ಸೆಕ್ಟರ್, ಪ್ರಯಾರಿಟಿ ಸೆಕ್ಟರ್ ಅಂಡರ್ ಪ್ಲಾನ್‌ನಲ್ಲಿ ಬರುತ್ತದೆ. ಇದಕ್ಕೆ ಎಷ್ಟು ಪ್ರಮಾಣದಲ್ಲಿ ಹಣವನ್ನು ನಾವು ತೊಡಗಿಸಬೇಕಾಗಿತ್ತೋ, ಅಷ್ಟನ್ನು ತೊಡಗಿಸುವುದಕ್ಕೆ ನಮ್ಮಿಂದ ಸಾಧ್ಯವಾಗಿಲ್ಲ. ಸಂಪೂರ್ಣವಾದ ವಿವರಕ್ಕೆ ನಾನು ಹೋಗದೆ ಇದ್ದರೂ ಕೂಡ ಈ ಸಂದರ್ಭದಲ್ಲಿ ಒಂದು ಮಾತನ್ನು ಮಾತ್ರ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ವರ್ಷದಿಂದ ವರ್ಷಕ್ಕೆ ವಿದ್ಯುಚ್ಛಕ್ತಿಯ ಬಳಕೆಯ ಪ್ರಮಾಣ ಜಾಸ್ತಿಯಾಗುತ್ತಿರುವುದರಿಂದ ಉತ್ಪಾದನೆಯ ಶೇಕಡಾವಾರು ಪ್ರಮಾಣವನ್ನು ಲೆಕ್ಕ ಹಾಕಿದಾಗ ಸಹಜವಾಗಿ ನಾವು ಆತಂಕಕ್ಕೆ ಒಳಗಾಗತಕ್ಕಂಥ ಅಂಕಿ ಅಂಶಗಳು ನಮ್ಮ ಗಮನಕ್ಕೆ ಬರುತ್ತವೆ. ಇದನ್ನು ಸರಿಪಡಿಸುವುದಕ್ಕೆ ಯಾವ ದಾರಿ ನಮ್ಮ ಕರ್ನಾಟಕ ರಾಜ್ಯದಲ್ಲಿದೆ ? ಕರ್ನಾಟಕ ರಾಜ್ಯದಲ್ಲಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ಗಳು ನೀರಿನ ಬಳಕೆ ಮಾಡಿ ಜಲ ವಿದ್ಯುತ್ ಯೋಜನೆಗಳಿಂದ ವಿದ್ಯುತ್ತನ್ನು ಉತ್ಪಾದನೆ ಮಾಡತಕ್ಕಂಥದ್ದು, ನಿಜ, ನಮ್ಮದು ಶಿಂಷಾ ಮತ್ತು ಜೋಗದ ಮತ್ತು ಅನಂತರ ಶರಾವತಿ ವ್ಯಾಲಿ ಪ್ರಾಜೆಕ್ಟ್ ಮತ್ತು ಕಾಳಿ ಜಲ ವಿದ್ಯುತ್ ಯೋಜನೆಗಳನ್ನು ಕೂಡ ನಾವು ಕೈಗೆತ್ತಿಕೊಂಡಿದ್ದೇವೆ. ಕೆಲವು ಹಂತ ಮುಗಿದಿದೆ. ಇನ್ನೂ ಮುಕ್ತಾಯ ಆಗಬೇಕಾದುದು ಇದೆ. ಸುಮಾರಾಗಿ ಇರತಕ್ಕ ಜಲ ವಿದ್ಯುತ್ ಯೋಜನೆಗಳನ್ನು ಸಂಪೂರ್ಣವಾಗಿ ನಾವು ಮುಗಿಸಿದರೂ ಕೂಡ ನಮ್ಮ ವಿದ್ಯುತ್ ಉತ್ಪಾದನೆ ನಮ್ಮ ಬೇಡಿಕೆಯನ್ನು ಸರಿದೂಗಿಸುವುದಿಲ್ಲ. ಈ ಅಭಿಪ್ರಾಯವನ್ನು ಸರ್ಕಾರವೂ ಒಪ್ಪಿದೆ. ನಮಗೆ ಕೂಡ ಗೊತ್ತಿರತಕ್ಕ ವಿಚಾರ. ಅದಕ್ಕಾಗಿ ನಾವು ಮಿನಿ ಹೈಡಲ್ ಪ್ರಾಜೆಕ್ಟ್ ಅಥವಾ ಮಿನಿ ಪವರ್ ಜನರೇಟಿಂಗ್ ಡಿವೈಸರ್ಸ್ ಯೋಜನೆ ಮಾಡಬೇಕು. ಥರ್ಮಲ್ 'ಪವರ್ ಪ್ಲಾಂಟ್ ರಾಯಚೂರು ಹತ್ತಿರ ಇರತಕ್ಕದ್ದು ನೋಡಿದ್ದೇವೆ. ಅಟಾಮಿಕ್ ಪವರ್ ಜನರೇಷನ್‌ಗೆ ಕೈಗಾ ಆಯಿತು. ಆದರೆ ಈ ಯೋಜನೆಗಳಿಗೆ ಹಣ ತೊಡಗಿಸುವ ವಿಚಾರದಲ್ಲಿ ಸರ್ಕಾರ ಬಹಳ ಹಿಂದೆ ಹೋಗಿದೆ ಎಂಬುದನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಹಣ ಕಡಿಮೆ ತೊಡಗಿಸುವುದರಿಂದ ವಿದ್ಯುಚ್ಛಕ್ತಿ ವೆಚ್ಚ ವರ್ಷೇ ವರ್ಷೇ ಜಾಸ್ತಿಯಾಗುತ್ತಾ ಹೋಗುತ್ತದೆ ಎಂಬುದನ್ನು ನಾವು ಗಮನದಲ್ಲಿಡಬೇಕಾಗುತ್ತದೆ. ಇದಕ್ಕೆ ಆರ್ಥಿಕ ತೊಂದರೆಗಳಿರುತ್ತವೆ. ಯಾವುದೇ ಸರ್ಕಾರ ಇದ್ದರೂ ಇಂಥ ಖರ್ಚು ಇರುತ್ತದೆಂದು ಹೇಳಿದರೂ ಕೂಡ ಕೆಲವು ಅನಾವಶ್ಯಕ ಬಾಬುಗಳಿಗೆ ಖರ್ಚು ಮಾಡತಕ್ಕ ಹಣವನ್ನು ಈ ಕಡೆಗೆ ತಿರುಗಿಸಿ ತೊಡಗಿಸುವುದರಿಂದ ಉಪಯುಕ್ತವಾಗುತ್ತದೆ ಎಂಬುದರ ಕಡೆ ಸರ್ಕಾರ ಗಮನ ಕೊಡಬೇಕಾಗುತ್ತದೆ. ೧೯೮೫-೮೬ರಲ್ಲಿ ಎನರ್ಜಿ ರಿಕ್ವೈರ್‌ಮೆಂಟ್ ಕರ್ನಾಟಕ ರಾಜ್ಯದಲ್ಲಿ ೧೨,೬೩೭ ಮೆಗಾವಾಟ್ಸ್ ಎಂಬುದು

ಎಕ್ಸ್‌ಪರ್ಟ್ಸ್ ಕಮಿಟಿಯ ವರದಿಯಿಂದ ಗೊತ್ತಾಗುತ್ತದೆ. ಪವರ್ ಕಟ್ ಹಾಕುತ್ತಿದ್ದೀರಿ. ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಇದಿತ್ತು, ಈಗಲೂ ಇದೆ. ಇಲ್ಲ ಎಂದು ಹೇಳುವುದಿಲ್ಲ. ಆದರೆ ತಾವು ಪವರ್ ಕಟ್ ಮಾಡುವಾಗ ಪ್ರೊಡಕ್ಷನ್‌ಗೆ ಕುಂಠಿತವಾಗದ ರೀತಿಯಲ್ಲಿ ನೋಡಬೇಕು. ಇಂಡಸ್ಟ್ರಿಯಲ್ ಪ್ರೊಡಕ್ಷನ್ ಮತ್ತು ಅಗ್ರಿಕಲ್ಚರಲ್ ಪ್ರೊಡಕ್ಷನ್ ಮುಖ್ಯವಾದ ಕ್ಷೇತ್ರಗಳು. ಇದಕ್ಕೆ ತೊಂದರೆಯಾಗದ ರೀತಿಯಲ್ಲಿ ಪವರ್ ಕಟ್ ಮಾಡುವ ಬಗ್ಗೆ ಗಮನ ಕೊಡಬೇಕು. ಐ.ಪಿ ಸೆಟ್ಸ್‌ಗೆ ಮೀಟರ್ ಹಾಕುವ ವಿಚಾರವನ್ನು ಯೋಚನೆ ಮಾಡಿದಾಗಲೇ ಓವರ್ ಆಲ್ ಫುಡ್ ಪ್ರೊಡಕ್ಷನ್‌ಗೆ ಪೆಟ್ಟಾಗುತ್ತದೆ ಎಂದು ಶಾಸನ ಸಭೆಯಲ್ಲಿ ಹೇಳಿದ್ದೇವೆ. ನಮ್ಮ ಪಕ್ಷದ ಸರ್ಕಾರ ಕರ್ನಾಟಕದಲ್ಲಿದ್ದಾಗ ೧೦ ಎಚ್.ಪಿ.ವರೆಗೆ ೫೦೦ ರೂಪಾಯಿಗಳನ್ನು ಮಾತ್ರ ಒಂದು ವರ್ಷಕ್ಕೆ ಫಿಕ್ಸ್ ಮಾಡಲಾಗಿತ್ತು. ಈಗ ಮೀಟರ್ ಹಾಕುವುದರಿಂದ ಬೆಳೆ ತೆಗೆಯುವವರಿಗೆ ಹೆಚ್ಚು ಖರ್ಚು ಬೀಳುತ್ತದೆ. ಅದಕ್ಕೋಸ್ಕರ ಮೀಟರ್ ಇರತಕ್ಕಂಥ ಐ.ಪಿ. ಸೆಟ್ಟುಗಳನ್ನು ಉಪಯೋಗ ಮಾಡುವುದಕ್ಕೆ ಅನೇಕ ಬೇಸಾಯಗಾರರು ತಯಾರಿಲ್ಲದೆ ಕೆಲವರು ಡಿಸ್‌ಕನೆಕ್ಟ್ ಮಾಡುವುದಕ್ಕೆ ಅಪ್ಲಿಕೇಷನ್ ಸಹ ಕೊಟ್ಟಿದ್ದಾರೆ. ಮೀಟರ್‌ನಿಂದ ೧೦ ಎಚ್.ಪಿ ಐ.ಪಿ. ಸೆಟ್ ಇರತಕ್ಕ ಒಬ್ಬ ರೈತ ವರ್ಷಕ್ಕೆ ೯-೧೦-೧೧ ಸಾವಿರ ರೂಪಾಯಿಗಳನ್ನು ಕಟ್ಟಬೇಕಾಗುತ್ತದೆಂದು ಅಂದಾಜು ಮಾಡಿ ಕೆಲವರು ಅಂಕಿ ಅಂಶ ಕೊಟ್ಟಿದ್ದಾರೆ. ಇಷ್ಟು ಖರ್ಚು ಮಾಡಿ ಬೆಳೆ ಬೆಳೆಯತಕ್ಕ ಸಾಹಸಕ್ಕೆ ಯಾರೂ ಕೈ ಹಾಕುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅದರಲ್ಲೂ ಬರಗಾಲ ಇರುವ ಈ ಸಂದರ್ಭದಲ್ಲಿ ಇದನ್ನು ಕೈಬಿಡತಕ್ಕ ಕಡೆ ಗಮನ ಹರಿಸಬೇಕು. ಮೀಟರ್ ಬೋರ್ಡ್ ಹಾಕುವುದಿಲ್ಲ ಎಂದು ಪತ್ರಿಕೆಯಲ್ಲಿ ಹೇಳಿದರೂ ಕೆ.ಇ.ಬಿ.ಯವರು ಆರ್ಡರ್ಸ್ ಹೊರಡಿಸಿದ್ದೀರಾ? ಮೀಟರ್ ಬೋರ್ಡ್ ಹಾಕದೇ ವಿದ್ಯುಚ್ಛಕ್ತಿ ಕೊಡುವುದಕ್ಕೆ ಯೋಚನೆ ಮಾಡಿದ್ದೀರಾ? ಎಚ್.ಪಿ. ರೇಟ್ ಜಾಸ್ತಿ ಮಾಡಿರುವುದನ್ನು ಕಡಿಮೆ ಮಾಡಬೇಕು. ಇಲ್ಲದಿದ್ದರೆ ರೈತ ಹೆಚ್ಚಿನ ಬೆಳೆ ಬೆಳೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಭೀಕರ ಬಂಗಾಲವಿರುವುದರಿಂದ ಈಗ ಗಮನ ಕೊಡದೇ ಹೋದರೆ ಆಹಾರೋತ್ಪಾದನೆಗೆ ಪೆಟ್ಟಾಗುತ್ತದೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಗ್ರಾಮೀಣ ಭಾಗದಲ್ಲಿ ಸಾವಿರಾರು, ಲಕ್ಷಾಂತರ ಐ.ಪಿ. ಸೆಟ್‌ಗಳಿವೆ. ಬಾವಿಗಳಿಂದ, ನದಿಗಳಿಂದ, ಇನ್ನಿತರ ಮೂಲಗಳಿಂದ ನೀರನ್ನು ಉಪಯೋಗ ಮಾಡಿಕೊಳ್ಳುತ್ತಿದ್ದಾರೆ. ಟೋಟಲ್ ಪವರ್ ಕನ್‌ಸಂಪ್‌ಷನ್ ಬಾವಿ ನೀರಿನ ಮಟ್ಟ ಕೆಳಗೆ ಹೋದಾಗ ಖರ್ಚು ಜಾಸ್ತಿಯಾಗುತ್ತದೆ. ಪಂಪ್‌ಸೆಟ್ ಕೆಳಗೆ ಇಳಿಸಬೇಕು. ಈ ದೃಷ್ಟಿಯಿಂದ ಒಟ್ಟು ಖರ್ಚು ರೈತರಿಗೆ ಹೆಚ್ಚಾಗಿ ಬೀಳುತ್ತದೆ. ಈ ಸಂದರ್ಭದಲ್ಲಿ ಯಾವುದೇ ವಿದ್ಯುಚ್ಛಕ್ತಿಯ ಮಿತಿಯನ್ನು ಆಹಾರೋತ್ಪಾದನೆಗೆ ಸಂಬಂಧಪಟ್ಟಿರತಕ್ಕ ವ್ಯಕ್ತಿಗಳ ಮೇಲೆ ಹಾಕಬಾರದು. ಹಾಕುವುದರಿಂದ ಹೆಚ್ಚು ಪೆಟ್ಟಾಗುತ್ತದೆ. ಇವತ್ತು ಹುಲ್ಲು ಬೆಳೆಯುವುದಕ್ಕೆ ಇನ್‌ಸೆಂಟೀವ್ ಕೊಡುತ್ತಿದ್ದಾರೆ. ಕೆ.ಇ.ಬಿ.ಯವರ ಮುಖಾಂತರ ನೀರನ್ನು ಎತ್ತಿ ಬೆಳೆ ಬೆಳೆಯುವಾಗ, ಅದು ಹುಲ್ಲಿರಬಹುದು, ಬೇರೆ ಬೆಳೆಯಿರಬಹುದು, ಹಾಕಿರತಕ್ಕ ನಿರ್ಬಂಧ ನೋಡಿದರೆ ತಮ್ಮ ನಿಬಂಧನೆಗಳಿಗೆ ಹೆದರಿ ಬೆಳೆಯಿಂದ ದೂರ ಸರಿಯತಕ್ಕ ಹಂತಕ್ಕೆ ರೈತ ಬಂದಿದ್ದಾನೆ. ಈ ದೃಷ್ಟಿಯಿಂದ ಪವರ್ ಕಟ್ ಹಾಕುವಾಗ ವಿಚಾರ ಮಾಡಬೇಕು. ೬ರಿಂದ ೧೨ರವರೆಗೆ ಅಥವಾ ೧೨ರಿಂದ ೬ರವರೆಗೆ ವಿದ್ಯುಚ್ಛಕ್ತಿ ಪ್ರಮಾಣವನ್ನು ಅವಲಂಬಿಸಿ ಮಾಡುತ್ತೇವೆ ಎಂದು ಹೇಳಿದರೂ ಕೂಡ ನಂತರವೂ ವಿದ್ಯುಚ್ಛಕ್ತಿ ಕಡಿತ ಆಗಿರತಕ್ಕದ್ದು ಸರ್ಕಾರದ ಗಮನಕ್ಕೆ ಅಥವಾ ಕೆ.ಇ.ಬಿ.ಯವರ ಗಮನಕ್ಕೆ, ಇಲ್ಲವೇ ಮಂತ್ರಿಗಳ ಗಮನಕ್ಕೆ ಬಂದಿರಬಹುದು. ಅದರ ಬಗ್ಗೆ ಬಿಗಿಯಾದ ಕಾರ್ಯಕ್ರಮ ಹಾಕಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಟೋಟಲ್ ಪವರ್ ಜನರೇಷನ್ ಏನಿದೆ ಕರ್ನಾಟಕ ರಾಜ್ಯದಲ್ಲಿ ಅದು ಕಡಿಮೆ ಇರುವಾಗ ಇರತಕ್ಕ ವಿದ್ಯುಚ್ಛಕ್ತಿಯನ್ನು ಸದುಪಯೋಗಪಡಿಸಿಕೊಳ್ಳತಕ್ಕ ದೃಷ್ಟಿಯಿಂದ ಸಾಕಷ್ಟು ಸೌಲಭ್ಯಗಳನ್ನು ರೈತನಿಗೆ ಕೊಡಬೇಕೆಂದು ಹೇಳುತ್ತಿದ್ದೇನೆ. ಅನೇಕ ರಿಸ್ಟ್ರಿಕ್ಷನ್ಸ್ ಹಾಕಿದ್ದಾರೆ. ಗೃಹಕೃತ್ಯಗಳಿಗೆ ಉಪಯೋಗ ಮಾಡುವವರಿಗೆ ರಿಸ್ಟ್ರಿಕ್ಷನ್ಸ್ ಹಾಕಿದ್ದಾರೆ. ಫೈನ್ ಹಾಕುವ ವಿಚಾರ ಇಟ್ಟುಕೊಂಡಿದ್ದಾರೆ. ಹೈಟೆನ್‌ಷನ್ ವಿದ್ಯುಚ್ಛಕ್ತಿ ಉಪಯೋಗ ಮಾಡುವವರಿಗೆ ಕೆಲವರಿಗೆ ಎಗ್ಸೆಂಪ್‌ಷನ್ ಕೊಟ್ಟಿದ್ದಾರೆ. ಸಣ್ಣಪುಟ್ಟ ಜನರಿಗೆ ರಿಸ್ಟ್ರಿಕ್ಷನ್ಸ್ ಹಾಕಿದ್ದಾರೆ ಎಂಬ ಆಪಾದನೆ ಕೆ.ಇ.ಬಿ. ಮೇಲೆ ಬಂದಿದೆ. ಯಾರು ಪ್ರಭಾವ ಬೀರುತ್ತಾರೆ ಅವರಿಗೆ ಪವರ್ ಕಟ್ ಇಂಪೋಸ್ ಮಾಡಿಲ್ಲ ಎಂದು ಹೇಳತಕ್ಕದ್ದು, ಅಥವಾ ಕಡಿಮೆ ಇಂಪೋಸ್ ಮಾಡಿದ್ದಾರೆ ಎಂದು ಹೇಳತಕ್ಕದ್ದು. ಯಾರು ಪ್ರಭಾವ ಬೀರುವುದಕ್ಕೆ ಆಗಿಲ್ಲ ಅವರ ಮೇಲೆ ಹೆಚ್ಚು ರಿಸ್ಟ್ರಿಕ್ಷನ್ಸ್ ಇಂಪೋಸ್ ಮಾಡಿದ್ದಾರೆ ಎಂದು ಹೇಳತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ. ಪವರ್ ಕಟ್ ನೀವು ಮಾಡಬೇಕಾದರೆ ನಾನು ಮೊದಲೇ ಹೇಳಿದ ಹಾಗೆ ಇಂಡಸ್ಟ್ರಿಯಲ್ ಸೆಕ್ಟಾರ್ ಮತ್ತು ಅಗ್ರಿಕಲ್ಚರಲ್ ಸೆಕ್ಟಾರ್‌ನಲ್ಲಿ ಕುಂಠಿತವಾಗದಂತೆ ಆದ್ಯತೆಗೆ ಅನುಸಾರವಾಗಿ ಮಾಡಿ. ಇಂಡಸ್ಟ್ರಿಯಲ್

ಸೆಕ್ಟಾರ್‌ನಲ್ಲಿ ಯಾವುದಕ್ಕೆ ಆದ್ಯತೆ ಕೊಡಬೇಕು ಎಂಬ ವಿಚಾರದ ಬಗ್ಗೆ ಪಟ್ಟಿ ನಿಮ್ಮ ಹತ್ತಿರ ಸಿದ್ಧವಾಗಿರಬಹುದು. ಅದಕ್ಕನುಗುಣವಾಗಿ ಪವರ್ ಕಟ್ ಎಷ್ಟು ಮಾಡಬೇಕು ಎಷ್ಟು ಮಾಡಬಾರದು ಎಷ್ಟು ಮಾಡಲೇಬಾರದು ಎಂಬ ಬಗ್ಗೆ ಗಮನ ಕೊಡಬೇಕು. ಆದರೆ ಪ್ರಭಾವಕ್ಕೆ ಒಳಗಾಗಿ ಆದ್ಯತೆಯನ್ನು ಅನುಸರಿಸದೆ, ಆದ್ಯತೆ ಯಾವುದಕ್ಕೆ ಕೊಡಬೇಕೆಂಬ ಪಟ್ಟಿ ಇದ್ದರೂ ಅದನ್ನು ಕೈಬಿಟ್ಟು ಮಾಡಿರತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ ಆ ರೀತಿ ನಡೆದಿರುವುದು ಕೆಲವು ನಮ್ಮ ಗಮನಕ್ಕೆ ಬಂದಿವೆ. ವಿಧಾನ ಪರಿಷತ್ತಿನಲ್ಲೂ ಕೂಡ ಇದೇ ವಿಚಾರ ಚರ್ಚೆಯಾಗಿರುವುದು ನನ್ನ ಗಮನದಲ್ಲಿದೆ.

ಅದನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡಲಿ ಇಲ್ಲವೇ ಯಾವುದಾದರೂ ಮಂತ್ರಿಗಳು ಮಾಡಲಿ, ಕೆ.ಇ.ಬಿ. ಚೇರ್ಮನ್ ಮಾಡಲಿ, ಯಾರ ಪ್ರಭಾವಕ್ಕೂ ಒಳಗಾಗದೇ ನೇರವಾಗಿ ಇರಬೇಕು. 4000 KVA power was granted to Karnataka Wire Product Ltd. ಬೆಂಗಳೂರಿನಲ್ಲಿರತಕ್ಕಂತಹ ಪ್ರಾಜೆಕ್ಟ್‌ಗೆ ಪವರ್ ಕೊಡಬೇಕಾದರೆ ಆದ್ಯತೆಗಳನ್ನು ಅನುಸರಿಸಿಕೊಡಬೇಕಾಗುತ್ತದೆ. ಆ ರೀತಿ ಕೊಡಬೇಕೆಂದಿದ್ದರೆ, ಏಕೆ ಕೊಟ್ಟಿಲ್ಲ. ಏಕೆ ಅದನ್ನು ಕೊಡುವುದಕ್ಕಾಗಿಲ್ಲ. ಇದಕ್ಕೆ ಹೈ ಪವರ್ ಕಮಿಟಿಯವರು ರೆಕ್‌ಮೆಂಡ್ ಮಾಡಿದ್ದಾರೆ. ಆರ್ಡರ್ ಮಾಡುವುದಕ್ಕಿಂತ ಮುಂಚೆ ಕಮಿಟಿ ಮುಂದೆ ಇಡಬಹುದಿತ್ತು. ನೀವೇ ಮಾಡಿದಂತಹ ಕಮಿಟಿ ಅದು. ಏಕೆ ಅದರ ಮುಂದೆ ಇಡಲಿಲ್ಲವೆಂದು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ದಾಂಡೇಲಿಯಲ್ಲಿ ಫೆರೊ ಅಲಾಯಿಸ್‌ಗೆ ನೇರವಾಗಿ ಮಂಜೂರು ಮಾಡಿದ್ದೀರಿ. ಸಂಬಂಧಪಟ್ಟಿರತಕ್ಕಂತಹವರನ್ನು ಅರ್ಜೆಂಟ್ ಆಗಿ ಕರೆಸಿ ಆರ್ಡರ್ ತೆಗೆದುಕೊಳ್ಳಿ ಎಂದು ಹೇಳುವ ಮಟ್ಟಕ್ಕೆ ಹೋಗುವ ಹಾಗಿದ್ದರೆ, ಇಂಡಸ್ಟ್ರಿಯಲ್ ಸೆಕ್ಟಾರ್ ಕನ್‌ಸರ್ನ್ ಏನಿದೆ, ಅದರ ಗತಿ ಏನಾಗಬೇಕು. ೧೮ ಸಾವಿರ ಒಂದಕ್ಕೆ ಕೊಟ್ಟು ಮತ್ತೊಂದಕ್ಕೆ ನಾಲ್ಕು ಸಾವಿರ, ಈ ರೀತಿ ಕೊಡುತ್ತಾ ಹೋದರೆ ಉಳಿದಿರತಕ್ಕಂತಹ ಪ್ರೊಡಕ್ಷನ್ ಏನಾಗುತ್ತದೆ. ಅದನ್ನು ಯೋಚನೆ ಮಾಡಬೇಕಾಗುತ್ತದೆ. ನಾನು ಹೇಳತಕ್ಕಂಥಾದ್ದು ಏನೆಂದರೆ ನೀವು ಈ ಪವರ್ ಅನ್ನು ಕೊಡಬೇಕಾದರೆ, ಪವರ್ ಕಟ್‌ಗೆ ಒಳಪಡತಕ್ಕಂಥಾದ್ದು ಯಾವುದಿದೆ, ಒಳಪಡದೇ ಇರತಕ್ಕಂಥಾದ್ದು ಯಾವ್ಯಾವುದು ಇದೆ, ಆದ್ಯತೆಗನುಸಾರವಾಗಿ ಪವರ್ ಕಟ್‌ನ್ನು ಇಂಪೋಸ್ ಮಾಡಬೇಕು. ಅದು ಎಷ್ಟು ಇರಬೇಕೆಂಬುದರ ಬಗ್ಗೆ ನಿಗಾ ಇರಬೇಕು. ಪವರ್ ಕಟ್ ವಿಚಾರದಲ್ಲಿ ಕೆಲವಕ್ಕೆ ಅಂದರೆ ಅದರಲ್ಲಿ ಹಾಸ್ಪಿಟಲ್ಸ್, ಐ.ಪಿ. ಸೆಟ್ಸ್, ಮುಂಥಾದವಕ್ಕೆ ಎಕ್ಸೆಂಪ್‌ಷನ್ ಕೊಡುತ್ತೀರಿ. ಅದಕ್ಕೆ ಒಂದು ಕಾನೂನೇ ಇದೆ, ಯಾವ್ಯಾವುದು ಇದರಲ್ಲಿ ಬರುತ್ತದೆ ಎಂದು. ಅವೆಲ್ಲಕ್ಕೂ ಎಕ್ಸೆಂಪ್‌ಷನ್ ಕೊಡುತ್ತೀರಿ. ಯಾವುದೇ ಸರ್ಕಾರವಿದ್ದರೂ ಕೂಡ ಕೊಡಬೇಕಾಗುತ್ತದೆ. ಇಷ್ಟೇ ಪವರ್ ಅನ್ನು ಉಪಯೋಗ ಮಾಡಿ ಎಂದು ಆಸ್ಪತ್ರೆಗಳಿಗೆ ಹಿಡಿತ ಹಾಕುವುದು ತಪ್ಪಾಗುತ್ತದೆ. ಇವತ್ತು ನಮ್ಮ ಮುಂದೆ ಇರತಕ್ಕಂತಹ ಮಹದಾಯಿ ಪ್ರಾಜೆಕ್ಟ್ ಇರಬಹುದು, ಕಾಳಿ ಸ್ಟೇಜ್ ಇರಬಹುದು ಕಾರವಾರ ಜಿಲ್ಲೆಯ ಪ್ರಾಜೆಕ್ಟ್ ಇರಬಹುದು, ಇಲ್ಲವೇ ಬೇಡ್ತಿ ಬಗ್ಗೆ ಕಾರ್ಯಕ್ರಮ ಹಾಕತಕ್ಕಂಥಾದ್ದು ಇರಬಹುದು, ಯಾವುದೇ ಕಾರ್ಯಕ್ರಮವನ್ನು, we have got hour own list of these power projects. ಈ ಪರಿಸರಕ್ಕೆ ಸಂಬಂಧಪಟ್ಟಿರತಕ್ಕಂತಹ ವಿಚಾರದಲ್ಲಿ ಮತ್ತು ಫಾರೆಸ್ಟ್ ಇಲಾಖೆಗೆ ಸಂಬಂಧಪಟ್ಟಿರತಕ್ಕಂತಹ ವಿಚಾರ್ಕದಲ್ಲಿ ಕ್ಲಿಯರೆನ್ಸ್ ಕೊಡದಿದ್ದರೆ, ಕೇಂದ್ರ ಸರ್ಕಾರಕ್ಕೆ ಹೋಗುವುದಿಲ್ಲ. ಇಂತಹ ಪ್ರಾಜೆಕ್ಟ್ ಮಾಡಬೇಕಾದರೆ ಫಾರೆಸ್ಟ್ ಏರಿಯಾ ಕೂಡ ಮುಳುಗಡೆಯಾಗುತ್ತದೆ. ನಾನು ಕಳೆದ ಸಾರಿ ಯಾವ್ಯಾವ ಪ್ರಾಜೆಕ್ಟ್‌ಗಳು ಇವೆ ಎಂಬ ಬಗ್ಗೆ ಪಟ್ಟಿಯನ್ನು ಇಟ್ಟಿದ್ದೇನೆ. ಇದರ ಬಗ್ಗೆ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ಕೇಂದ್ರ ಸರ್ಕಾರದವರು ನೀವು ಕ್ಲಿಯರ್ ಮಾಡಿ ಕಳಿಸಿ ಎನ್ನುವ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಏನು ಹೇಳಿದ್ದಾರೆ, ಇದನ್ನು ಯಾವಾಗ ಕ್ಲಿಯರ್ ಮಾಡಿ ಕಳಿಸುತ್ತೀರಿ ಎಂಬ ಬಗ್ಗೆ ಹೇಳಿದರೆ ಸಾಕು.

ಶ್ರೀ ಬಿ.ಎ. ಜೀವಿಜಯ.—೪೩೩ ಕಡತಗಳನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದೇವೆ. ೯೦ ಅನ್ನು ಮಾತ್ರ ಕ್ಲಿಯರ್ ಮಾಡಿದ್ದಾರೆ. ಕೆಲವು ಮಾತ್ರ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಎಸ್. ಬಂಗಾರಪ್ಪ.—ಕಳೆದ ಸಾರಿ ಪ್ರಸ್ತಾಪ ಮಾಡಿದಾಗ ಫಾರೆಸ್ಟ್ ಇಲಾಖೆಯದು ಇದೆಯೆಂದು ಹೇಳಿದ್ದರು. ಕ್ಲಿಯರ್ ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದರೆ ಸಂತೋಷಪಡುತ್ತಿದ್ದೆ. ಇರಿಗೇಷನ್ ಪವರ್ ಮಿನಿಸ್ಟರ್‌ರವರಿಗೆ ಸಂಬಂಧಪಟ್ಟಿರತಕ್ಕಂಥಾದ್ದು. ಅವರಿಗೆ ಸಂಬಂಧಪಟ್ಟ ಹಾಗೆ they have got their own Committee for that. ಅವರೂ ಕೂಡ ಅದನ್ನು

ಕ್ಲಿಯರ್ ಮಾಡತಕ್ಕಂತಹ ವಿಚಾರವಿದೆ. ಅದನ್ನು ಕಳಿಸಿದ್ದರೆ ಯಾವಾಗ ಕಳಿಸಿದ್ದೀರಿ, ಯಾವ್ಯಾವ ಪ್ರಾಜೆಕ್ಟ್ ಕಳಿಸಿದ್ದೀರಿ, ಪ್ರತಿಯೊಂದು ಪ್ರಾಜೆಕ್ಟ್ ವಿಚಾರದಲ್ಲಿ ರಾಜ್ಯ ಸರ್ಕಾರದ ರಿಮಾರ್ಕ್ಸ್ ಏನು ಬರೆದಿದ್ದೀರಿ, ಅದನ್ನು ಈ ಸದನದ ಮುಂದೆ ಇಟ್ಟಲ್ಲಿ ನಮಗೆ ಅನುಕೂಲವಾಗುತ್ತದೆ. ಪವರ್ ಪ್ರಾಜೆಕ್ಟ್ ಪೆಂಡಿಂಗ್ ಇದೆ, ಅದು ಕ್ಲಿಯರ್ ಆಗಲು ನೀವೂ ಒತ್ತಾಯ ಮಾಡಿ ಎಂದು ಹೇಳಿದ್ದೀರಿ. ಅದನ್ನು ಹೇಳೋಣ. ರಾಜ್ಯದ ಹಿತದೃಷ್ಟಿಯಿಂದ ಆದಷ್ಟು ತ್ವರಿತವಾಗಿ ಈ ಪ್ರಾಜೆಕ್ಟ್ ಅಪ್ರೂವ್ ಕ್ಲಿಯರ್ ಆಗಬೇಕೆಂಬುದು ನಮ್ಮ ನಿಮ್ಮ ಅಭಿಪ್ರಾಯ. ಆದುದರಿಂದ ಈ ಸದನದಲ್ಲಿ ಉತ್ತರ ಕೊಡಬೇಕಾದರೆ ಯಾವುದೇ ಆಗಲಿ, ಮಹದಾಯಿ ಇರಬಹುದು ಕಾಳಿ ಇರಬಹುದು, ಗಂಗಾವಳಿ ಇರಬಹುದು ಅಥವಾ ಶರಾವತಿ ಇರಬಹುದು, ಇವೆಲ್ಲವನ್ನೂ ಕೂಡ ಯಾವ ಹಂತದಲ್ಲಿ ಯಾವಾಗ ಕಳಿಸಿದ್ದೀರಿ, ಎಂಬ ಬಗ್ಗೆ ವಿವರಗಳನ್ನು ಕೊಟ್ಟರೆ ಬಹಳ ಒಳ್ಳೆಯದು. ಈ ಕಾರ್ಯಕ್ರಮದ ಬಗ್ಗೆ ಯಾವ ರೀತಿ ಪತ್ರವ್ಯವಹಾರ ಮಾಡಿದ್ದೀರಿ ಎಂಬುದನ್ನು ಉತ್ತರದಲ್ಲಿ ಹೇಳಿದರೆ ಒಳ್ಳೆಯದು. ತಮ್ಮ ಹತ್ತಿರ ಕಡತ ಅಷ್ಟು ಇದ್ದುದನ್ನು ನೋಡಿದರೆ, ಈ ಯೋಜನೆಗಳು ಕಾರ್ಯಗತವಾಗುವುದು ತಡವಾಗಿದ್ದರೆ, ರಾಜ್ಯ ಸರ್ಕಾರ ಉತ್ತರ ಹಾಕುವುದು ತಡವಾಗಿದ್ದರಿಂದ ಎಂದು ಹೇಳಬೇಕಾಗುತ್ತದೆ. ಅರಣ್ಯ ಇಲಾಖೆಯದೊಂದನ್ನೇ ನಾನು ಹೇಳುತ್ತಿಲ್ಲ. I am referring to all Departments where pojects are pending for their comments and clearance. ಇರತಕ್ಕಂತಹ ವಿಚಾರ. ಇದು ತಡವಾಗಿದ್ದರೆ ರಾಜ್ಯ ಸರಕಾರವೇ ಕಾರಣವೆಂದು ಹೇಳಬೇಕಾಗುತ್ತದೆ. ಪವರ್ ಪ್ರಾಜೆಕ್ಟ್ ವಿಚಾರದಲ್ಲಿ ಕದ್ರಾ ಡ್ಯಾಮ್ ವಿಚಾರದಲ್ಲಿ ಹಿಂದೆ ಕೂಡ ಈ ಸದನದಲ್ಲಿ ಹೇಳಿದ್ದೇನೆ. ಕದ್ರಾ ಡ್ಯಾಮ್ ಕನ್‌ಸ್ಟ್ರಕ್ಷನ್ ವಿಚಾರದಲ್ಲಿ ಟೆಂಡರ್ ಕರೆದರು. ಅದು ಗೋಲ್ ಮಾಲ್ ಆಗಿದೆ. ವಿಧಾನ ಪರಿಷತ್ತಿನಲ್ಲಿ ಕೂಡ ಈ ಬಗ್ಗೆ ಚರ್ಚೆಯಾಗಿದೆ. ಟೆಂಡರ್ಸ್ ಬಂದ ಮೇಲೆ ಹೈಯೆಸ್ಟ್ ಟೆಂಡರ್‌ಗೆ ಕೊಡದೆ ಹಾಗೆ ಇಟ್ಟಿದ್ದೀರಿ. ಇದರಿಂದಾಗಿ ಡ್ಯಾಮ್ ಕನ್‌ಸ್ಟ್ರಕ್ಷನ್ ತೆಗೆದುಕೊಳ್ಳುವುದಕ್ಕಾಗುತ್ತಿಲ್ಲ. ಇದನ್ನು ಏಕೆ ತಡ ಮಾಡುತ್ತಿದ್ದೀರಿ. ಇದರಿಂದ ಕುಡಿಯುವ ನೀರಿನ ಉಪಯೋಗ ಇರಬಹುದು, ಇಲ್ಲವೆ ಯಾವುದೇ ಇರಬಹುದು ಟೆಂಡರ್ಸ್‌ನ್ನು ಫೈನಲೈಸ್ ಮಾಡುವ ವಿಚಾರದಲ್ಲಿ ನಿಧಾನ ಗತಿ ಧೋರಣೆ ಏನಿದೆ ಅದೇ ಕಾರಣವೆಂದು ಪದೇ ಪದೇ ಹೇಳಿದ್ದೇನೆ. ಕದ್ರಾ ಡ್ಯಾಮ್ ವಿಚಾರದಲ್ಲಿ ಯಾವ ಕಾರ್ಯಕ್ರಮವನ್ನು ಸರ್ಕಾರ ಹಾಕಿದೆ ಎಂಬುದನ್ನು ಹೇಳಬೇಕು. ಇನ್ನು ನಿಮಗೇ ಗೊತ್ತಿರುವ ಹಾಗೆ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ನವರು ಪವರ್ ಅನ್ನು ತೆಗೆದುಕೊಂಡು ಡಿಸ್ಟ್ರಿಬ್ಯೂಟ್ ಮಾಡುತ್ತಾರೆ. ಆ ಜವಾಬ್ದಾರಿ ಅವರದ್ದು. ಹೆಚ್ಚಿನ ಪ್ರಮಾಣದಲ್ಲಿ ಕೆ. ಇ. ಬಿ. ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಸುಮಾರಾಗಿ ನಮಗೇ ಗೊತ್ತಿರುವ ಹಾಗೆ ಅನೇಕ ಹಳ್ಳಿಗಳು ಇಂದು ದೀಪವನ್ನು ಕಂಡಿಲ್ಲ. ಹರಿಜನ ಬಸದಿಗಳಿಗೆ, ಕೆಲವು ಗ್ರಾಮಗಳಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಮಜರೆ ಗ್ರಾಮವೆಂದು ಇದ್ದು, ಅವು ಇವತ್ತು ಚಿಕ್ಕ ಚಿಕ್ಕದಾಗಿದ್ದು ೮–೧೦ ಮನೆಗಳು ಇರುತ್ತಿದ್ದವು. ಈಗ ಇವು ದೊಡ್ಡ ಗ್ರಾಮಗಳಾಗಿವೆ. ಇವತ್ತು ಮಜರೆ ಅಥವಾ ದಾಖಲೆ ಗ್ರಾಮದಲ್ಲಿ ೪೦–೬೦–೮೦–೧೦೦ ಮನೆಗಳಾಗಿವೆ. ನಮ್ಮ ತಾಲ್ಲೂಕಿನಲ್ಲಿ ಉದ್ರಿ ಗ್ರಾಮದಲ್ಲಿ ೫–೬ ಮಜರೆ ಗ್ರಾಮಗಳು ಇದೆ. ಮುಖ್ಯ ಗ್ರಾಮಕ್ಕಿಂತ ದೊಡ್ಡ ಗ್ರಾಮವಾಗಿದೆ ತಾವು ಈ ಸದನದಲ್ಲಿ ಉತ್ತರ ಕೊಡಬೇಕಾದರೆ ರೆವಿನ್ಯೂ ವಿಲೇಜ್ ಎಲ್ಲಿ ಇರುತ್ತದೆ ಅಲ್ಲಿಗೆ ವಿದ್ಯುಚ್ಛಕ್ತಿಯನ್ನು ಕೊಟ್ಟಿದ್ದೇವೆಂದು ಹೇಳುತ್ತೀರಿ. ಉಳಿದಿರತಕ್ಕಂತಹ ಮಜರೆ ಗ್ರಾಮಗಳಿಗೆ ವಿದ್ಯುಚ್ಛಕ್ತಿ ಕೊಡತಕ್ಕಂತಹ ವಿಚಾರದಲ್ಲಿ ಅಡೆತಡೆ ಇದೆಯೆಂದು, ಸರ್ಕಾರದಿಂದ ಕ್ಲಿಯರೆನ್ಸ್ ಬರಬೇಕೆಂದು ಕೆ.ಇ.ಬಿ. ಅಧಿಕಾರಿಗಳು ಹೇಳುತ್ತಾರೆ ಮಜರೆ ಗ್ರಾಮವನ್ನು ತೆಗೆದುಕೊಳ್ಳಬೇಕಾದರೆ ತೊಂದರೆಯಾಗುತ್ತದೆಂದು ಏನು ಹೇಳುತ್ತಿದ್ದಾರೆ, ಅದನ್ನು ತೀವ್ರವಾಗಿ ಕ್ಲಿಯರ್ ಮಾಡಬೇಕು, ಮಜರೆ ಗ್ರಾಮಗಳಿಗೂ ಕೂಡ ಯನ್ನು ವಿದ್ಯುಚ್ಛಕ್ತಿ ಕೊಡಬೇಕು. ೨–೩ ಮನೆ ಇದ್ದರೆ ಕೊಡಬಾರದೆಂದು ಹೇಳುವುದಿಲ್ಲ. ದೊಡ್ಡ ದೊಡ್ಡ ಗ್ರಾಮಗಳಿದ್ದಾಗ ಅದಕ್ಕೆ ಆದ್ಯತೆ ಕೊಟ್ಟು ವಿದ್ಯುಚ್ಛಕ್ತಿಯನ್ನು ಅರ್ಜೆಂಟ್ ಆಗಿ ಕೊಡತಕ್ಕಂಥ ಕಾರ್ಯಕ್ರಮ ಹಾಕದೇ ಇದ್ದರೆ ಮಜರೇ ಗ್ರಾಮಗಳು ಹಾಗೇ ಉಳಿಯುತ್ತವೆಂದು ನನ್ನ ಅಭಿಪ್ರಾಯ.

೧–೦೦ ಪಿ. ಎಂ.

ಆದ್ದರಿಂದ ಈ ತಕ್ಷಣವೇ ಸರ್ಕಾರದವರೂ ಮತ್ತು ವಿದ್ಯುಚ್ಛಕ್ತಿ ಮಂಡಲಿಯವರೂ ಒಂದು ಹೇಳಿಕೆಯನ್ನು ಕೊಡಬೇಕು. ನಮ್ಮ ಕರ್ನಾಟಕ ರಾಜ್ಯದಲ್ಲಿ ನೂರಾರು ಗ್ರಾಮಗಳು ಒಂದೊಂದು ಜಿಲ್ಲೆಯಲ್ಲಿ ಸಿಕ್ಕುತ್ತವೆ, ಇವತ್ತು ಏನಾಗಿದೆ ಎಂದರೆ ಸಾಮಾನ್ಯವಾಗಿ ಮಜುರೆ ಗ್ರಾಮಗಳು ಏನಿದೆ ಅವು ಮುಖ್ಯ ಗ್ರಾಮಗಳಿಗಿಂತಲೂ ದೊಡ್ಡದಾಗಿ ಬೆಳೆದಿರುತ್ತವೆ ಅದನ್ನು ನೋಡಿದರೆ ಇದೇ ಮುಖ್ಯ ಗ್ರಾಮವೇನೋ

ಅನಿಸುತ್ತದೆ. ಆದ್ದರಿಂದ ಇಂಥ ಮುಂಜೂರೆ ಗ್ರಾಮಗಳಿಗೆ ತಾವು ಮೊದಲು ವಿದ್ಯುಚ್ಛಕ್ತಿಯನ್ನು ಕೊಡಬೇಕು. ನಾವು ಕೊಡುತ್ತೇವೆಂದು ತಾವು ಒಂದು ಹೇಳಿಕೆಯನ್ನು ತಕ್ಷಣ ಕೊಡಿ. ಇಲ್ಲದಿದ್ದರೆ ಅನೇಕ ಗ್ರಾಮಗಳಿಗೆ ತೊಂದರೆಯಾಗುತ್ತದೆ. ಕರ್ನಾಟಕ ರಾಜ್ಯದ ೧೯ ಜಿಲ್ಲೆಗಳಲ್ಲೂ ಈ ಒಂದು ತೊಂದರೆ ಇದೆಯೆಂದು ತಮಗೆ ಹೇಳುತ್ತಿದ್ದೇನೆ. ಕೆಲವು ಸಂದರ್ಭಗಳಲ್ಲಿ ನಮ್ಮ ಮಲೆನಾಡಿನ ಕೆಲವು ಭಾಗಗಳನ್ನು ನೋಡಿದರೆ ಇದು ಬಯಲು ಸೀಮೆ ಎನ್ನುವಂಥ ಅಭಿಪ್ರಾಯ ಮೂಡುತ್ತದೆ. ಚಕ್ರ, ವರಾಹಿ, ಸಾವೆಹಕ್ಲು ಮುಂತಾದ ಪ್ರಾಜೆಕ್ಟ್‌ಗಳನ್ನು ತಾವು ತೆಗೆದುಕೊಂಡಾಗ ಅಲ್ಲಿ ಮುಳುಗಡೆಯಾದ ಜನರು ತಮ್ಮ ಮನೆ ಮಠಗಳನ್ನು ಕಳೆದುಕೊಂಡು ಹೊಸನಗರ, ಸಾಗರ, ತೀರ್ಥಹಳ್ಳಿ ಈ ಕಡೆಗೆ ಬಂದಿದ್ದಾರೆ. ಈ ರೀತಿ ಮುಳುಗಡೆ ಆದಂಥ ಜನರಿಗೆ ಪುನರ್‌ವಸತಿ ಸೌಕರ್ಯವನ್ನು ಒದಗಿಸಲು ಭೂಸ್ವಾಧೀನ ಮಾಡಿಕೊಳ್ಳತಕ್ಕ ವಿಚಾರದಲ್ಲಿ ಬಹಳಷ್ಟು ತೊಂದರೆಗಳಾಗಿವೆ. ನಾನು ಕಂದಾಯ ಮಂತ್ರಿ ಆಗಿದ್ದಾಗ ಮುಳುಗಡೆಯಾದವರಿಗೆ ಪುನರ್ ವಸತಿ ಸೌಕರ್ಯ ಕಲ್ಪಿಸುವ ಸಲುವಾಗಿ ಒಂದು ಸಮಿತಿಯನ್ನು ಮಾಡಿದ್ದೆವು. ಆಗ ಸರ್ಕಾರದವರು ಭೂಸ್ವಾಧೀನ ಮಾಡಿಕೊಳ್ಳುವ ಸಲುವಾಗಿ ಕೆಲವು ಕ್ರಮಗಳನ್ನು ಕೈಗೊಂಡರು. ಅದಕ್ಕೆ ಸಂಬಂಧಪಟ್ಟಂತೆ ಅನೇಕ ಜನರು ತಮಗೆ ಆಗಿರತಕ್ಕ ತೊಂದರೆಗಳ ಬಗ್ಗೆ ಇನ್ನೂ ಅರ್ಜಿಗಳನ್ನು ಸಲ್ಲಿಸುತ್ತಲೇ ಇದ್ದಾರೆಂದು ತಿಳಿದುಬಂದಿದೆ. ಅದು ತಮ್ಮ ಜಮೀನನ್ನು ಸರ್ಕಾರಕ್ಕೆ ಬಿಟ್ಟುಕೊಟ್ಟ ಬಗ್ಗೆ ಬರಬೇಕಾದ ಪರಿಹಾರದ ಹಣಕ್ಕೆ ಇರಬಹುದು, ಅಥವಾ ನನಗೆ ಕೊಟ್ಟಿರತಕ್ಕ ಜಮೀನು ಚೆನ್ನಾಗಿಲ್ಲ ಬೇರೆ ಜಮೀನನ್ನು ಕೊಡಿ ಎಂದು ಇರಬಹುದು, ಇಲ್ಲವೇ ನನಗೆ ಮನೆಯನ್ನು ಕಟ್ಟಿಸಿ ಕೊಡಿ ಎಂದು ಕೇಳುವುದಕ್ಕೆ ಇರಬಹುದು, ಅದೂ ಇಲ್ಲದಿದ್ದರೆ ಬೇರೆ ಇನ್ನಾವುದೋ ವಿಷಯಕ್ಕೆ ಇರಬಹುದು. ಅಂತೂ ಅವರ ತೊಂದರೆಗಳು ನಿವಾರಣೆ ಆಗದೆ ಇನ್ನೂ ಅರ್ಜಿಗಳನ್ನು ಕೊಡಬೇಕಾಗಿರುವ ಪರಿಸ್ಥಿತಿ ಬಂದಿದೆ. ತಾವು ಈ ದಿಸೆಯಲ್ಲಿ ತೀವ್ರ ಕ್ರಮವನ್ನು ತೆಗೆದುಕೊಂಡು ಅವರ ಕಷ್ಟಗಳನ್ನು ಪರಿಹರಿಸದೇ ಹೋದರೆ ಅದು ಯಾವುದೇ ಸರ್ಕಾರವಾಗಿರಲಿ, ಅಥವಾ ಯಾವುದೇ ಪಕ್ಷ ಆಡಳಿತ ನಡೆಸುತ್ತಿರಲಿ ಅದಕ್ಕೆ ಈ ಜನರ ಶಾಪ ತಟ್ಟಿಯೇ ತಟ್ಟುತ್ತದೆ

ಇದೇ ರೀತಿ ಶರಾವತಿ ಹೈಡ್ರೋ ಎಲೆಕ್ಟ್ರಿಕಲ್ ಪ್ರಾಜೆಕ್ಟನ್ನು ಕೈಗೊಳ್ಳತಕ್ಕ ಸಂದರ್ಭದಲ್ಲಿ ಅಲ್ಲಿ ಮುಳುಗಡೆಯಾದ ಜನರಿಗೆ ಅನುಕೂಲ ಮಾಡಿಕೊಡುತ್ತೇವೆ ಅವರಿಗೆ ಪುನರ್ ವಸತಿ ಸೌಕರ್ಯ ಒದಗಿಸಿ ಕೊಡುತ್ತೇವೆಂದು ಅವರನ್ನೆಲ್ಲಾ ಹೊಸನಗರ, ಶಿಕಾರಿಪುರ, ಸಾಗರ ತಾಲ್ಲೂಕಿಗೆ ತಂದುಬಿಟ್ಟರು. ಆ ಜನರಿಗೆ ಬೇರೆ ಜಮೀನನ್ನು ಮಂಜೂರು ಮಾಡಿಕೊಟ್ಟಿದ್ದೇವೆ. ಮನೆಗಳನ್ನು ಕಟ್ಟಿಸಿಕೊಟ್ಟಿದ್ದೇವೆಂದು ಹೇಳಿದರು, ಆದರೆ ಅದು ಯಾರಿಗೆ ಮಂಜೂರು ಮಾಡಿದರೋ, ಯಾರಿಗೆ ಮನೆ ಕಟ್ಟಿಸಿ ಕೊಟ್ಟರೋ ಗೊತ್ತಿಲ್ಲ ಕೆಲವರಿಗೆ ಯಾವುದೋ ಒಂದು ಭೂಮಿಯನ್ನು ತೋರಿಸಿ ನೀವು ಇದನ್ನು ಉಳುಮೆ ಮಾಡಿಕೊಳ್ಳಿ ಎಂದು ಹೇಳಿದರು. ಆದರೆ ಅವರಿಗೆ ಯಾವುದೇ ಜಮೀನೂ ಸಿಕ್ಕಿಲ್ಲ, ಮೊದಲು ಭೂಮಿಯನ್ನು ಕಳೆದುಕೊಂಡವರು ಅಡಿಕೆ ತೋಟ, ತೆಂಗಿನ ತೋಟ, ಖುಷ್ಕಿ ಭೂಮಿ, ತರಿ ಭೂಮಿ ಮನೆಗಳು ಎಲ್ಲವನ್ನೂ ಇಟ್ಟುಕೊಂಡಿದ್ದವರು ಅದನ್ನೆಲ್ಲಾ ಕಳೆದುಕೊಂಡಿದ್ದಾರೆ. ಜಮೀನು ಕಳೆದುಕೊಂಡ ಕೆಲವರಿಗೆ ಸರ್ಕಾರದಿಂದ ಹಣವನ್ನು ಕೊಟ್ಟಿದ್ದಾರೆ, ಇಲ್ಲವೆಂದು ನಾನು ಹೇಳುವುದಿಲ್ಲ. ೧೯೬೬ನೇ ಇಸವಿಯಲ್ಲಿ ಇದು ನಡೆದಿದೆ, ಯಾವ ಜನರಿಗೆ ಪುನರ್ ವಸತಿ ಸೌಕರ್ಯ ಒದಗಿಸಿಕೊಡುತ್ತೇವೆಂದು ಕರೆದುಕೊಂಡು ಬಂದು ಇಲ್ಲಿ ಬಿಟ್ಟಿದ್ದೀರಿ ಅವರಿಗೆ ಎಷ್ಟರ ಮಟ್ಟಿಗೆ ಅನುಕೂಲ ಮಾಡಿಕೊಡಲಾಗಿದೆ ಎಂಬುದನ್ನು ತಾವು ನೋಡಿದ್ದೀರಾ? ಉದಾಹರಣೆಗೆ ಹೇಳುವುದಾದರೆ ಶಿವಮೊಗ್ಗಾ ತಾಲ್ಲೂಕಿನ ಶೆಟ್ಟಿಕೆರೆ ಎಂಬ ಗ್ರಾಮದಲ್ಲಿ ಈ ಜನರಿಗೆ ಒಂದು ಜಾಗವನ್ನು ತೋರಿಸಿ ನೀವು ಇದನ್ನು ಉಳುಮೆ ಮಾಡಿಕೊಳ್ಳಿ ಎಂದು ಹೇಳಿದಿರಿ. ಆಗಿನ ಸಂದರ್ಭದಲ್ಲಿ ಅರಣ್ಯ ಪ್ರದೇಶವನ್ನು ಈ ಜನರಿಗೆ ತೋರಿಸಿದಿರಿ. ಅಂದಿನಿಂದ ಇಂದಿನವರೆಗೂ ಅವರು ಆ ಜಮೀನನ್ನು ಉಳುಮೆ ಮಾಡುತ್ತಾ ಬಂದಿದ್ದಾರೆ. ಅಡಿಕೆ, ತೆಂಗು ಬೆಳೆಯನ್ನೆಲ್ಲಾ ಇಟ್ಟಿದ್ದಾರೆ. ಆದರೆ ಈಗ ಆ ಅರಣ್ಯ ಇಲಾಖೆಯವರು ಈ ಜಾಗವನ್ನು ಖಾಲಿ ಮಾಡಿ, ಖಾಲಿ ಮಾಡಿ ಎಂದು ಇವರಿಗೆ ಹಿಂಸೆ ಕೊಡುತ್ತಿದ್ದಾರೆ...

ಶ್ರೀ ಬಿ. ಎ. ಜೀವಿಜಯ (ಮಾನ್ಯ ಅರಣ್ಯ ಖಾತೆ ಸಚಿವರು).—ಶರಾವತಿ ಯೋಜನೆ ಕೈಗೊಂಡಾಗ ಮುಳುಗಡೆಯಾದ ಜನರಿಗೆ ಅರಣ್ಯ ಇಲಾಖೆಯಿಂದ ೫೬೦೦ ಎಕರೆ ಜಮೀನು ಇವರಿಗೋಸ್ಕರ ರಿಲೀಸ್ ಆಗಿದೆ ಇದರ ಜೊತೆಗೆ ಸುಮಾರು ೭ ಸಾವಿರ ಎಕರೆ ಅತಿಕ್ರಮಣವಾಗಿದೆ ಕೆಲವು ದಿವಸಗಳ ಹಿಂದೆ ಒಬ್ಬ ಬಸಪ್ಪ ಎನ್ನುವ ವ್ಯಕ್ತಿ ೧೫ ಎಕರೆ ಅತಿಕ್ರಮಣ ಮಾಡಿಕೊಂಡಿದ್ದು ಅಲ್ಲಿ ದನಗಳಿಗೆ ಹುಲ್ಲನ್ನು ಬೆಳೆದುಕೊಡುತ್ತೇನೆಂದು ಹೇಳಿದ್ದರು, ಆದರೆ ಈಗ ಆ ಜಮೀನಿನ ಜೊತೆಗೆ

ಇನ್ನೂ ೫ ಎಕರೆಯನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ. ಆದರೆ ಈ ೫ ಎಕರೆಯನ್ನು ಅತಿಕ್ರಮಣ ಮಾಡುವುದಕ್ಕೆ ಹೋದಾಗ ಅವನನ್ನು ಅರಣ್ಯ ಇಲಾಖೆಯವರು ತಡೆಯುತ್ತಿದ್ದಾರೆ.

ಶ್ರೀ. ಬಿ. ಸ್ವಾಮಿರಾವ್.—ನಾನು ಒಂದು ಸಲಹೆಯನ್ನು ಕೊಡಬಯಸುತ್ತೇನೆ. ಮಾನ್ಯ ಸಚಿವರು ಹೇಳಿದ್ದನ್ನು ಕೇಳುತ್ತಿದ್ದೇನೆ. ಆದರೆ ಅಲ್ಲಿ ಕಳೆದ ೨೦ ವರ್ಷದಿಂದ ಅವರು ಅಲ್ಲಿ ಸಾಗುವಳಿಯನ್ನು ಮಾಡುತ್ತಿದ್ದಾರೆ. ಪ್ರತಿಯೊಬ್ಬರ ಹತ್ತಿರವೂ ಅವರ ಹೆಸರಿಗೆ ಪಹಣಿ ಇದೆ. ನಾನೇ ಆ ತಾಲ್ಲೂಕಿಗೆ ಖುದ್ದಾಗಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಸುಮಾರು ವರ್ಷದಿಂದ ಸಾಗುವಳಿ ಮಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮೊದಲು ಅವರಿಗೆ ಜಾಗವನ್ನು ತೋರಿಸಿ ಇದನ್ನು ನೀವು ಸಾಗುವಳಿ ಮಾಡಿಕೊಂಡಿರಿ ಎಂದು ಹೇಳಿದವರು ಸರ್ಕಾರದವರು. ನಾವು ಆ ರೈತರನ್ನು ಕೇಳಿದರೆ ಸರ್ಕಾರದವರು ಯಾವ ಜಾಗವನ್ನು ನಮಗೆ ತೋರಿಸಿದ್ದರು ಆ ಜಾಗವನ್ನು ಮಾತ್ರ ಸಾಗುವಳಿ ಮಾಡುತ್ತಿದ್ದೇವೆ. ಅದನ್ನು ಬಿಟ್ಟು ಒಂದು ಅಂಗುಲವನ್ನೂ ಕೂಡ ನಾವು ಮುಂದೆ ಹೋಗಿ ಸಾಗುವಳಿಯನ್ನು ಮಾಡುತ್ತಿಲ್ಲವೆಂದು ಹೇಳುತ್ತಿದ್ದಾರೆ. ಬೇಕಾದರೆ ನೀವೇ ಹೋಗಿ ನೋಡಿಕೊಂಡು ಬನ್ನಿ. ಅಲ್ಲಿ ಏನು ನಡೆದಿದೆ ಎಂಬುದನ್ನು ನಾನಂತೂ ನೋಡಿದ್ದೇನೆ. ನಿಮ್ಮ ಅಧಿಕಾರಿಗಳು ಕೊಡತಕ್ಕ ವರದಿಯ ಮೇಲೆ ನೀವು ಅವಲಂಬನೆಯಾಗುವುದು ಬೇಡ, ಮತ್ತು ಆ ಜನರು ಹೇಳುವುದನ್ನೂ ಕೇಳುವುದು ಬೇಡ. ನೀವೇ ಹೋಗಿ ನೋಡಿದರೆ ಗೊತ್ತಾಗುತ್ತದೆ, ಸೆಟ್ಟಿ ಕೆರೆಗೆ ಕೂಡ ನಾನು ಹೋಗಿ ನೋಡಿದ್ದೇನೆ. ನೀವೂ ಹೋಗಿ ನೋಡಿ ಸ್ಥಳದಲ್ಲೇ ತೀರ್ಮಾನವನ್ನು ತೆಗೆದುಕೊಳ್ಳಿ. ಯಾರ್ಯಾರು ಎಷ್ಟೆಷ್ಟು ಜಮೀನನ್ನು ಕಳೆದುಕೊಂಡಿದ್ದರು, ಅದಕ್ಕೆ ಸರ್ಕಾರದವರು ಎಷ್ಟು ಜಮೀನನ್ನು ಅವರಿಗೆ ಇಲ್ಲಿ ಕೊಟ್ಟಿದ್ದೀರಿ. ಅದಕ್ಕಿಂತ ಹೆಚ್ಚಿಗೆ ಜಮೀನನ್ನು ಅವರೇನಾದರೂ ಸಾಗುವಳಿ ಮಾಡುತ್ತಿದ್ದರೆ. ಅಥವಾ ಅತಿಕ್ರಮಣ ಮಾಡಿದ್ದರೆ ಪರಿಶೀಲನೆ ಮಾಡಿನೋಡಿ. ನೀವು ತೋರಿಸಿದ್ದಕ್ಕಿಂತ ಹೆಚ್ಚು ಜಮೀನನ್ನು ಅವರು ಸಾಗುವಳಿ ಮಾಡುತ್ತಿದ್ದರೆ ಅದನ್ನೆಲ್ಲಾ ನೀವು ಬಿಡಿಸಿ. ಅಂದರೆ ಇಲ್ಲಿ ಏನು ಸಮಸ್ಯೆ ಬಂದಿದೆ ಎಂದರೆ ಪಹಣಿ ಇರತಕ್ಕ ಪ್ರದೇಶವನ್ನೂ ಕೂಡ ನಿಮ್ಮ ಅರಣ್ಯ ಇಲಾಖೆಯವರು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನೀವೇ ಖುದ್ದಾಗಿ ಹೋಗಿ ಸ್ಥಳ ಪರಿಶೀಲನೆ ಮಾಡಿ ತೀರ್ಮಾನ ತೆಗೆದುಕೊಳ್ಳಿ. ಹಿಂದೆ ಯಾವಾಗಲೋ ಆಗಿರತಕ್ಕ ತೀರ್ಮಾನ ಸರಿಯಾಗಿಲ್ಲದಿದ್ದರೆ, ಈಗ ನೀವು ಸರಿಯಾದ ತೀರ್ಮಾನವನ್ನು ತೆಗೆದುಕೊಂಡರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ. ಇದೇ ರೀತಿ ನೀವು ರೇಚಿಕೊಪ್ಪಕ್ಕೆ ಕೂಡ ಹೋಗಿ ನೋಡಿಕೊಂಡು ಬನ್ನಿ. ಅಲ್ಲಿಗೆ ಹೋಗಿಬರಲು ಕೇವಲ ಅರ್ಧ ದಿವಸ ಸಾಕು. ರಾಜ್ಯದ ಹಿತದೃಷ್ಟಿಯಿಂದ ಯಾವುದೇ ಒಂದು ನೀರಾವರಿ ಯೋಜನೆಗಾಗಿ ರೈತರು ತಮ್ಮ ಜಮೀನನ್ನು ಕಳೆದುಕೊಂಡರೆ ಅಂಥವರ ಬಗ್ಗೆ ಸರ್ಕಾರ ಕರುಣೆಯನ್ನು ತೋರಿಸಬೇಕು. ಆದರೆ ಕಾನೂನು ಚಲಾವಣೆ ಮಾಡುವುದಕ್ಕೆ ಹೋದರೆ ಅವರಿಗೆ ಬಹಳ ತೊಂದರೆಯಾಗುತ್ತದೆ. ಒಟ್ಟಿನಲ್ಲಿ ರಾಜ್ಯಕ್ಕೆ, ರಾಜ್ಯದ ಜನತೆಗೆ ಅನುಕೂಲವಾಗಬೇಕೆಂಬುದೇ ನಮ್ಮ ಗುರಿ, ಇದನ್ನು ನಾನು ಸಾಂದರ್ಭಿಕವಾಗಿ ಹೇಳಿದ್ದೇನೆ, ಇದಕ್ಕೆ ನೀವು ಉತ್ತರವನ್ನು ಕೊಟ್ಟರೆ ಒಳ್ಳೆಯದು. ತಮಗೆ ಹೆಚ್ಚಿನ ಜವಾಬ್ದಾರಿ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಯಾರು ನೀರಾವರಿ ಯೋಜನೆಗೋಸ್ಕರ ತಮ್ಮ ಜಮೀನನ್ನು ಕಳೆದುಕೊಂಡಿರುತ್ತಾರೆ ಅವರಿಗೆ ಎಲ್ಲ ರೀತಿಯ ಅನುಕೂಲಗಳನ್ನೂ ವ್ಯವಸ್ಥಿತವಾಗಿ ಮಾಡಿಕೊಡದೇ ಹೋದರೆ ಇನ್ನು ಮುಂದೆ ಯಾವುದೇ ಒಂದು ಪ್ರಾಜೆಕ್ಟ್ ಬಂದಾಗಲೂ ಅಲ್ಲಿ ಮುಳುಗಡೆಯಾಗತಕ್ಕ ಪ್ರದೇಶವನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳಬೇಕೆಂದು ತೀರ್ಮಾನವನ್ನು ತೆಗೆದುಕೊಂಡರೂ ಯಾರೂ ಜಮೀನನ್ನು ಬಿಟ್ಟುಕೊಡಲು ಮುಂದೆ ಬರುವುದಿಲ್ಲ. ಅದಕ್ಕೆ ಬದಲಾಗಿ ಆ ಜನರಿಂದ ನಿಮಗೆ ಪ್ರತಿಭಟನೆ ಬರುತ್ತದೆಂದು ಹೇಳಬಯಸುತ್ತೇನೆ.

ಇನ್ನು ಬೇಡ್ತಿ ಯೋಜನೆಯ ಬಗ್ಗೆ ಒಂದು ಮಾತನ್ನು ಹೇಳುವುದಾದರೆ, ಈ ಸದನದ ಸದಸ್ಯರ ಸಮಿತಿಯ ವರದಿ ಬಂದಮೇಲೆ ಮುಂದಿನ ತೀರ್ಮಾನವನ್ನು ತೆಗೆದುಕೊಳ್ಳುವುದಾಗಿ ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ. ನಮ್ಮಲ್ಲಿ ಇನ್ನೂ ಅನೇಕ ಯೋಜನೆಗಳಿವೆ. ನೀವು ಈಗಾಗಲೇ ಏನಾದರೂ ಪ್ರಯತ್ನಪಟ್ಟು ನಮಗೆ ಬೇಕಾದಂಥ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಿಕೊಳ್ಳಲು ಗಮನಕೊಡದಿದ್ದರೆ ನಮ್ಮ ರಾಜ್ಯ ಪ್ರಗತಿಪಥದಲ್ಲಿ ಮುನ್ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೈಗಾರಿಕಾ ಕ್ಷೇತ್ರದಲ್ಲಿ ಏನು ಉತ್ಪಾದನೆಯಾಗ

ಬೇಕು, ಕೃಷಿ ಕ್ಷೇತ್ರದಲ್ಲಿ ಏನು ಆಹಾರೋತ್ಪಾದನೆಯಾಗಬೇಕು ಅದಕ್ಕೆಲ್ಲಾ ಮುಖ್ಯವಾಗಿ ವಿದ್ಯುಚ್ಛಕ್ತಿ ಅವಶ್ಯಕವಾಗಿ ನಮಗೆ ಬೇಕಾಗುತ್ತದೆ. ವಿದ್ಯುಚ್ಛಕ್ತಿ ಉತ್ಪಾದನೆಯಾಗದಿದ್ದರೆ ರಾಜ್ಯದ ಪ್ರಗತಿಗೆ ಧಕ್ಕೆ ಖಂಡಿತವಾಗಿಯೂ ಬರುತ್ತದೆ ಎನ್ನತಕ್ಕ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಾ ಬೇಡ್ತಿ ಯೋಜನೆಯ ಬಗ್ಗೆ ಒಂದು ಸಮಿತಿಯನ್ನು ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದರಿಂದ ನಾನು ಅದರ ಬಗ್ಗೆ ಹೆಚ್ಚಿಗೆ ವಿವರಣೆಗೆ ಹೋಗುವುದಿಲ್ಲ.

ಮಾನ್ಯ ಅಧ್ಯಕ್ಷರೇ ಈ ಸಂದರ್ಭದಲ್ಲಿ ನಾನು ಟ್ಯಾಕ್ಸೇಷನ್ ವಿಚಾರದಲ್ಲಿ ಹೇಳುತಾ ಇನ್‌ಕಮ್ ಮೇಲೆ ಟಾಕ್ಸ್ ಇದೆ, ಸೆಂಟ್ರಲ್ ಟ್ಯಾಕ್ಸೇಷನ್ ಇದೆ, ಮತ್ತು ಪ್ರೊಫೆಷನಲ್ ಟ್ಯಾಕ್ಸ್ ಇದೆ ಎಂದು ಹೇಳಿದ್ದಾರೆ. ಪ್ರೊಫೇಷನಲ್ ಟ್ಯಾಕ್ಸ್ ಏನು ಇದೆ ಈ ಟ್ಯಾಕ್ಸನ್ನು ತೆಗೆದು ಬಿಡುತ್ತೇವೆಂದು ಪದೇ ಪದೇ ಹೇಳುತ್ತಲೆ ಇದ್ದರು. ಈ ಸಂದರ್ಭದಲ್ಲಿ ಇದರ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಾತ ನಾಡಿದ್ದಾರೆ. ಮತ್ತೆ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಟ್ಯಾಕ್ಸನ್ನು ತೆಗೆದು ಕಡಿಮೆ ಮಾಡುವ ಬದಲು ಟ್ಯಾಕ್ಸ್ ಜಾಸ್ತಿ ಮಾಡಿದ್ದಾರೆ. ಈ ಪ್ರೊಫೆಷನಲ್ ಟ್ಯಾಕ್ಸನ್ನು ಕರ್ನಾಟಕದ ಜನತೆಗೆ ಚುನಾವಣೆಯಕಾಲದಲ್ಲಿ ತೆಗೆಯುತ್ತೇವೆಂದು ನುಡಿದ ಮಾತಿಗೆ ವಿರುದ್ಧವಾಗಿ ನಡೆದು ಕೊಂಡಿರುತ್ತಾರೆ ಎನ್ನುವ ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇನ್ನು ಮಾನ್ಯ ಸಭಾಧ್ಯಕ್ಷರೇ, ಟ್ಯಾಕ್ಸೇಷನ್ ಮೂಲಕ ನಮ್ಮ ಕರ್ನಾಟಕ ರಾಜ್ಯದಲ್ಲಿ ರೆವಿನ್ಯೂ ಹೆಚ್ಚು ಬರತಕ್ಕಂಥದ್ದು ಎಂದರೆ ಕಮರ್ಷಿಯಲ್ ಟ್ಯಾಕ್ಸ್ ಒಂದು, ಎರಡನೆಯದಾಗಿ ಎಕ್ಸೈಸ್‌ನಿಂದ ಯಾವಾಗಲೂ ಹೆಚ್ಚು ಬರತಕ್ಕಂಥದ್ದಾಗಿರುತ್ತದೆ. ಈ ಬಾಬಿನಿಂದ ಎಷ್ಟು ಹಣ ಬರಬೇಕಾದ್ದು ಬಾಕಿ ಉಳಿದಿದೆ ಎನ್ನುವ ಮಾತನ್ನೂ ಕೂಡ ತಮ್ಮ ವರದಿಯಲ್ಲಿ ಹೇಳಿದ್ದೀರಿ. ಅನ್ಯುಯಲ್ ರಿಪೋರ್ಟ್ ೧೯೮೫–೮೬ನಲ್ಲಿ ತಮಗೆ ಗೊತ್ತಿರುವಹಾಗೆ ೩೬.೨೭ ಲಕ್ಷ ಸೇಲ್ಸ್‌ಟ್ಯಾಕ್ಸ್ ಬಾಬಿನಿಂದ ಬರತಕ್ಕಂಥ ಬಾಕಿ ಇದೆ, ಈ ಹಣವನ್ನು ವಸೂಲು ಮಾಡುತ್ತಿದ್ದೇವೆಂದೂ ಕೂಡ ಹೇಳಿರುತ್ತೀರಿ. ಅಂದರೆ, ಸಂಪನ್ಮೂಲಗಳನ್ನು ಕ್ರೋಢೀಕರಿಸುವ ವಿಚಾರದಲ್ಲಿ ನಿಮ್ಮ ಸರ್ಕಾರದವರು ವಿಫಲರಾಗಿರುತ್ತಾರೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸುಮಾರು ಕರ್ನಾಟಕ ರಾಜ್ಯದಲ್ಲಿ ಸೇಲ್ಸ್‌ಟ್ಯಾಕ್ಸ್, ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ಮುಖಾಂತರ ಬರತಕ್ಕಂಥದ್ದು ಎಷ್ಟೋ ಕೇಸಸ್ ಬಾಕಿ ಇದೆ ಎನ್ನುವ ಮಾತನ್ನುವ ಕೂಡ ಹೇಳಿರುತ್ತೀರಿ. ಕರ್ನಾಟಕ ಸೇಲ್ಸ್ ಟ್ಯಾಕ್ಸ್, ಇದರಲ್ಲಿ ಅಸೆಸ್‌ಮೆಂಟ್ ಕೇಸಸ್ ಪೆಂಡಿಂಗ್ ಇರತಕ್ಕಂಥದ್ದು ೨,೬೫,೪೩೦ ಕೇಸಸ್, ಇನ್ನೂ ಕೂಡ ಪೆಂಡಿಂಗ್ ಇರತಕ್ಕಂಥದ್ದು. ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್ ೧,೨೪,೨೧೭ ಕೇಸಸ್ ಪೆಂಡಿಂಗ್ ಇರತಕ್ಕಂಥದ್ದಾಗಿದೆ. ಇದನ್ನು ತ್ವರಿತ ಗತಿಯಿಂದ ಇತ್ಯರ್ಥಗೊಳಿಸಬೇಕಾಗಿದೆ. ಏತಕ್ಕೆಂದರೆ ಅಸೆಸಿಂಗ್ ಇಯರ್ ಮುಗಿಯುತ್ತಾ ಬರುತ್ತದೆ. ಕಮರ್ಷಿಯಲ್ ಟ್ಯಾಕ್ಸ್ ಕೇಸಸ್ ಇತ್ಯರ್ಥಗೊಳಿಸಬೇಕಾದರೆ ಅಧಿಕಾರಿಗಳು ತೀವ್ರಗತಿಯಿಂದ ಅಂದರೆ ವಾರ್‌ಫುಟಿಂಗ್ ರೀತಿಯಲ್ಲಿ ಕೆಲಸ ಮಾಡದಿದ್ದರೆ ಖಜಾನೆಗೆ ಹಣ ಬರುವುದಿಲ್ಲ. ಈ ದೃಷ್ಟಿಯಿಂದ ಸುಮಾರು ಮೂರುಲಕ್ಷ ನಾಲ್ಕು ಲಕ್ಷ ಅಂದರೆ ಸಿ.ಎಸ್.ಟಿ. ಎಷ್ಟು ಕೇಸ್ ಪೆಂಡಿಂಗ್ ಇರುತ್ತದೆ ಅದನ್ನೆಲ್ಲ ಇತ್ಯರ್ಥಗೊಳಿಸಬೇಕು. ನಿಮ್ಮ ಕಾಲದಲ್ಲೂ ಇತ್ತು ಎಂದು ಹೇಳಕ್ಕಂಥದ್ದಲ್ಲ. ಆಡಳಿತ ಒಳ್ಳೆಯರೀತಿಯಲ್ಲಿ ನಡೆಯಬೇಕಾದರೆ, ಇರತಕ್ಕಂಥ ಅಧಿಕಾರವನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು. ಅಸೆಸ್ ಮಾಡತಕ್ಕಂಥ ಅಧಿಕಾರಿಗಳು ಏನು ಇದ್ದಾರೆ ಅವರು ಅರ್ಜೆಂಟ್‌ಆಗಿ ತಮ್ಮ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ಮಾಡಬೇಕು. ಆರೀತಿ ಮಾಡದೆ ಇದ್ದರೆ ಖಜಾನೆಗೆ ಒತ್ತಡ ಬೀಳುತ್ತದೆ. ಕಾನೂನು ಬದ್ಧವಾಗಿ ಆಫಿಸರುಗಳು ಕೆಲಸ ಮಾಡದಿದ್ದರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕಂಥ ಹಕ್ಕು ತಮಗೆ ಇದೆ. ರೆವಿನ್ಯೂ ಅಸೆಸಿಂಗ್ ಕೆಲಸ ೩೪ ರಿಂದ ೭೦–೮೦ ಭಾಗದವರೆಗೆ ಬಾಕಿ ಉಳಿಯುತ್ತಾಹೋದರೆ ನಿಮ್ಮ ಯೋಜನಾ ಗಾತ್ರವನ್ನು ದೊಡ್ಡದು ಮಾಡುತ್ತೇವೆಂದು ಹೇಳತಕ್ಕಂಥದ್ದರ ಗತಿ ಏನಾಗುತ್ತದೆ ಎನ್ನುವ ಅಂಶವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇನ್ನು ಈ ಕೆ.ಎಸ್.ಟಿ. ಮತ್ತು ಸಿಎಸ್‌ಟಿ ಒಟ್ಟು ಬೇರೆ ಬೇರೆ ರೂಪದಲ್ಲಿ ಪೆಂಡಿಂಗ್ ಇರತಕ್ಕಂಥ ೮೩೭೦ ಕೇಸಗಳನ್ನು ಅಧಿಕಾರಿಗಳು ಬೇಗನೆ ಮುಗಿಸತಕ್ಕಂಥ ವಿಚಾರದಲ್ಲಿ ಅರ್ಜೆಂಟ್ ಅರ್ಜೆಂಟ್‌ಆಗಿ ಹಿಯರಿಂಗ್ ಮಾಡದೆ, ಕಾನೂನು ಪ್ರಕಾರ ವಿಚಾರ ಮಾಡದೆ ಮಂದಗತಿಯಿಂದ ಸಾಗಿರುವುದನು ನೋಡಿದರೆ ಈ ವಿಚಾರದಲ್ಲಿ ಸರ್ಕಾರದವರು ವಿಫಲರಾಗಿರುತ್ತಾರೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ.

ರೆವಿನ್ಯೂ ಇಲಾಖೆಯವರು ಮತ್ತು ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನವರು ತೀವ್ರಗತಿಯಿಂದ ಕೆಲಸ ಮಾಡತಕ್ಕಂಥ ವಿಚಾರದಲ್ಲಿ ತೀವ್ರ ಕಾರ್ಯಕ್ರಮಗಳನ್ನು ಹಾಕಿಕೊಳ್ಳದೆ ವಿಳಂಬ ಮಾಡಿರತಕ್ಕಂಥದ್ದು. ಆರಾಮ ಜೀವನ ಮಾಡತಕ್ಕಂಥ ಅಧಿಕಾರಿಗಳು ಇರುವುದರಿಂದ, ಮತ್ತು ಕೆಲವು ವಿಚಾರಗಳಲ್ಲಿ ಸರ್ಕಾರದವರು ಮಧ್ಯೆ ಮಧ್ಯೆ ಟ್ರಾನ್ಸ್‌ಫರ್ಸ್ ಮಾಡತಕ್ಕಂಥದ್ದು ಇದ್ದುದರಿಂದ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇಷ್ಟೊಂದು ಕೇಸು ಪೆಂಡಿಂಗ್ ಉಳಿಯಲು ಕಾರಣವಾಯಿತು ಎಂದು ಹೇಳಬೇಕಾಗಿದೆ.

ಇನ್ನು ಹಣದ ವಸೂಲಾತಿಯ ವಿಚಾರವನ್ನು ಹೇಳುವುದಾದರೆ, ಹಣದ ವಸೂಲಾತಿ ಸಂಪೂರ್ಣವಾಗಿ ವಿಫಲವಾಗಿ ಅನೇಕ ವಿಚಾರಗಳಲ್ಲಿ ಅಂತಿಮವಾಗಿ ರಾಜ್ಯದ ಬೊಕ್ಕಸಕ್ಕೆ ಬರಬೇಕಾದ ಹಣದ ಪ್ರಮಾಣ ನಿಂತಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಈ ದೃಷ್ಟಿಯಿಂದ ಮಾನ್ಯ ಅಧ್ಯಕ್ಷರೇ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಈಗ ಅಧಿಕಾರಿಗಳು ಯಾರು ಯಾರು ಕೆಲಸ ಮಾಡುತ್ತಿದ್ದಾರೆ ಅವರನ್ನು ಪಿಲಪ್ ಮಾಡಬೇಕು. ಅವರು ತ್ವರಿತಗತಿಯಲ್ಲಿ ಕೆಲಸ ಮಾಡದೆಹೋದಲ್ಲಿ ನಿಜವಾಗಿಯೂ ಮುಂದಿನ ಯೋಜನಾ ವರ್ಷಕ್ಕೆ ಪೆಟ್ಟು ಬೀಳುತ್ತದೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಮತ್ತೆ ತಾವು ಒಂದುಸಾರಿ ಬಡ್ಜೆಟ್ ಇಟ್ಟುಮೇಲೆ ಅನೇಕ ನೋಟಿಫಿಕೇಷನ್‌ಗಳನ್ನು ಹೊರಡಿಸಿದ್ದೀರಿ. ನೋಟಿಫಿಕೇಷನ್‌ಗಳನ್ನು ಹೊರಡಿಸುವುದಕ್ಕೆ ತಮ್ಮ ಸರ್ಕಾರಕ್ಕೆ ಅಧಿಕಾರವಿರುತ್ತದೆ. ಅದೇರೀತಿಯಲ್ಲಿ ಎಕ್ಸ್‌ಮ್‌ಷನ್ ಕೂಡ ಕೊಡಬೇಕಾಗುತ್ತದೆ. ಯಾವುದೇ ವಿಚಾರವನ್ನು ಹೇಳಲಿ ಅಂಥ ವಿಚಾರದಲ್ಲಿ ನೋಟಿಫಿಕೇಷನ್ ಮಾಡದೆ ದುರುಪಯೋಗ ಮಾಡಿಕೊಂಡರೆ ಟೋಟಲ್ ರೆವಿನ್ಯೂಗೆ ಧಕ್ಕೆ ಆಗುತ್ತದೆ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ಇನ್‌ಕಮ್, ರೆವಿನ್ಯೂ ಟ್ಯಾಕ್ಸೇಷನ್ ಎಷ್ಟು ಪ್ರಮಾಣದಲ್ಲಿ ಬರಬೇಕೋ ಅಷ್ಟು ಪ್ರಮಾಣದಲ್ಲಿ ಬರದೆ ಲ್ಯಾಪ್ಸ್‌ಆಗಿ ತೊಂದರೆಯಾಗುತ್ತದೆ ಎನ್ನುವ ಮಾತನ್ನು ಕೂಡ ತಮ್ಮ ಗಮನಕ್ಕೆ ತರಬಯಸುತ್ತೇನೆ, ಈರೀತಿಯಾಗುವುದರಿಂದ ವರ್ಷೇ ವರ್ಷೇ ನಿಮಗೆ ಗ್ರೋತ್ ರೇಟ್ ಸ್ಪಷ್ಟವಾಗಿ ಕಡಿಮೆಯಾಗುತ್ತಾ ಹೋಗುತ್ತದೆ ರಿಸೋರ್ಸಸ್ ಮೊಬಲೈಸೇಷನ್‌ಗೆ ಪೆಟ್ಟಾಗುತ್ತದೆ. ಮುಂದಿನ ಭವಿಷ್ಯಕ್ಕೆ ಪೆಟ್ಟಾಗುತ್ತದೆ ಎನ್ನುವ ಅಭಿಪ್ರಾಯವನ್ನು ತಮ್ಮಗಮನಕ್ಕೆ ತರಬಯಸುತ್ತೇನೆ.

ಇನ್ನು ಬರಗಾಲದ ಪರಿಸ್ಥಿತಿಯನ್ನು ವಿವರಿಸಿದ್ದೀರಿ. ಬರಗಾಲವನ್ನು ಎದುರಿಸುತ್ತಿರುವುದಕ್ಕೆ ಎಷ್ಟು ಹಣವನ್ನು ಖರ್ಚುಮಾಡಿದರೂ ಸಾಲದು ಎನ್ನುವ ಬಗ್ಗೆ ಎಲ್ಲರದೂ ಒಂದೇ ಅಭಿಪ್ರಾಯವಿದೆ. ಸದನದ ಎರಡೂ ಕಡೆಯ ಸದಸ್ಯರು ತಮ್ಮ ತಮ್ಮ ಅಭಿಪ್ರಾಯವನ್ನು ಇಟ್ಟಿದ್ದಾರೆ, ಆದ್ದರಿಂದ ಕಮರ್ಷಿಯಲ್ ಮತ್ತು ಎಕ್ಸೈಸ್‌ನಿಂದ ಬರಬೇಕಾಗಿರತಕ್ಕಂಥ ಹಣ ಏನು ಇರುತ್ತದೆ, ಅದನ್ನು ನಿರ್ದಾಕ್ಷಿಣ್ಯವಾಗಿ ವಸೂಲಿ ಮಾಡತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಳ್ಳದೇ ಇದ್ದರೆ ಅಂತಿಮವಾಗಿ ಯೋಜನಾ ಅಭಿವೃದ್ಧಿ ಕಾರ್ಯಗಳಿಗೆ ಪೆಟ್ಟಾಗುತ್ತದೆ ಎನ್ನುವ ವಿಷಯವನ್ನು ಮತ್ತೊಮ್ಮೆ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇಂತಹ ಸಂದರ್ಭಗಳಲ್ಲಿ ಅನಾವಶ್ಯಕವಾದಂಥ ಖರ್ಚುಗಳನ್ನು ತಡೆಗಟ್ಟಲು ಕೆಲವೊಂದು ಕ್ರಮಗಳನ್ನು ಕೈಕೊಂಡು ಆ ಬಗ್ಗೆ ನೋಟಿಫಿಕೇಷನ್‌ಗಳನ್ನು, ಸರ್ಕ್ಯುಲರ್‌ಗಳನ್ನು ಹೊರಡಿಸುವುದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ನಮ್ಮ ರಾಜ್ಯದಲ್ಲಿ ಬರಗಾಲ ಬಂದಿರುವುದರಿಂದ ಕೆಲವು ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಬಾರದು ಎಂಬುದನ್ನು ನಾನು ಒಪ್ಪುತ್ತೇನೆ ನನಗೆ ಗೊತ್ತಿರುವಂತೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಸುಮಾರು ೮೦ ಸಾವಿರ ಹುದ್ದೆಗಳು ಖಾಲಿ ಇವೆ, ಈಗ ಇದು ಇನ್ನೂ ಜಾಸ್ತಿಯಾಗಿ ಒಂದು ಲಕ್ಷಕ್ಕೆ ಹೋಗಿರಬಹುದು. ಸರ್ಕಾರದವರು ಒಂದು ಕಡೆ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುತ್ತಿಲ್ಲ. ಮತ್ತೊಂದು ಕಡೆಯಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದೆ. ನಮ್ಮ ರಾಜ್ಯದಲ್ಲಿ ಅಕ್ಟೋಬರ್ ೮೫ ರವರೆಗೆ ೯ ಲಕ್ಷದ ೨ ಸಾವಿರದ ೪೪೦ ನಿರುದ್ಯೋಗಿ ಜನರು ತಮ್ಮ ಹೆಸರುಗಳನ್ನು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ದಾಖಲು ಮಾಡಿಸಿದ್ದಾರೆ. ಇದರಲ್ಲಿ ಎಸ್ ಎಸ್ ಎಲ್ ಸಿ ಪಾಸಾದವರು ಪದವಿಗಳನ್ನು ಪಡೆದವರು, ತಾಂತ್ರಿಕ ಪದವೀಧರರು ಬರುತ್ತಾರೆ, ಈ ಸರ್ಕಾರ ಅಧಿಕಾರಕ್ಕೆ ಬರುವ ಸಮಯದಲ್ಲಿ ೫೨ ಸಾವಿರದಿಂದ ೫೩ ಸಾವಿರದ ವರೆಗೆ ವಿವಿಧ ಇಲಾಖೆಗಳಲ್ಲಿ ಕೆಲಸಗಳು ಖಾಲಿ ಇದ್ದವು. ಈಗ ಅದು ೮೦ ಸಾವಿರದವರೆಗೆ ಹೆಚ್ಚಿದೆ. ಆದ್ದರಿಂದ ಸರ್ಕಾರ ಒಂದು ಕಡೆ ಪಟ್ಟಣ

ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿರುವ ನಿರುದ್ಯೋಗಿಗಳಿಗೆ ಕೆಲಸ ಕೊಡಲು ವಿಚಾರ ಮಾಡಬೇಕಾಗುತ್ತದೆ, ಮತ್ತೊಂದು ಕಡೆ ಸರ್ಕಾರದ ಖಜಾನೆಗೆ ಹೆಚ್ಚಿನ ವರಮಾನ ಬರುವಂತೆ ನೋಡಿಕೊಳ್ಳಬೇಕಾಗಿದೆ ಇವೊತ್ತು ಸಾವಿರಾರು ಜನ ಕೆಲಸಕ್ಕಾಗಿ ಕಾಯುತ್ತಾ ಕುಳಿತಿದ್ದಾರೆ. ಆದರೆ ಸರ್ಕಾರದವರು ಬರಗಾಲದ ಹೆಸರಿನಲ್ಲಿ ಹೊಸದಾಗಿ ಯಾರಿಂದಲೂ ಅರ್ಜಿಗಳನ್ನು ಕರೆಯುತ್ತಿಲ್ಲ ಈಗಾಗಲೇ ಅರ್ಜಿಗಳನ್ನು ಕರೆದಿದ್ದರೆ, ಆ ಬಗ್ಗೆ ಯಾರಿಗೂ ಇಂಟರ್‌ವ್ಯೂಗೆ ಕರೆಯುತ್ತಿಲ್ಲ ಒಂದುವೇಳೆ ಎಲ್ಲಿಯಾದರೂ ಇಂಟರ್‌ವ್ಯೂ ಆಗಿದ್ದರೆ, ಆ ಸಂಬಂಧದಲ್ಲಿ ಯಾರಿಗೂ ಅಪಾಯಿಂಟ್‌ಮೆಂಟ್ ಆರ್ಡರನ್ನು ಕಳುಹಿಸುತ್ತಿಲ್ಲ. ಇಂತಹ ಅನೇಕ ಪ್ರಕರಣಗಳು ಇವೆ. ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಲು ನೀವು ಯಾವುದೇ ಕ್ರಮ ತೆಗೆದುಕೊಂಡಿಲ್ಲದಿರುವುದು ನಿಮ್ಮ ಬಡ್ಜೆಟ್‌ನ್ನು ನೋಡಿದಾಗ ತಿಳಿಯುತ್ತದೆ ಕರ್ನಾಟಕ ರಾಜ್ಯದಲ್ಲಿರುವ ಹೆಣ್ಣುಮಕ್ಕಳಿಗೆ ಮತ್ತು ಗಂಡುಮಕ್ಕಳಿಗೆ ಕೆಲಸ ಒದಗಿಸುವುದಕ್ಕೋಸ್ಕರ ನೀವು ಯಾವುದೇ ಹೊಸ ಕಾರ್ಯಕ್ರಮವನ್ನು ಹಾಕಿಕೊಂಡಿಲ್ಲ. ಈ ಬಗ್ಗೆ ನಿಮ್ಮ ಹತ್ತಿರ ಯಾವುದೇ ಯೋಜನೆಗಳೂ ಇಲ್ಲ. ಇದರ ಜೊತೆಗೆ ಹಣ ಸಂಗ್ರಹ ಮಾಡುವುದರ ಬಗ್ಗೆಯೂ ಸಹ ನೀವು ವಿಫಲರಾಗಿದ್ದೀರಿ ೧೯೮೨-೮೩, ೧೯೮೩-೮೪ ರಲ್ಲಿ ಆದಂಥ ಹಣ ಸಂಗ್ರಹಣೆಯ ಲೆಕ್ಕವನ್ನು ನೋಡಿದಾಗ ಕೇವಲ ಒಂದು ಪರ್ಸೆಂಟ್ ನಷ್ಟು ಹೆಚ್ಚಾಗಿರುವುದು ಕಂಡುಬರುತ್ತದೆ. ಸಂಪನ್ಮೂಲಗಳ ಕ್ರೋಢೀಕರಣ ಸಾಕಷ್ಟು ಆಗದಿದ್ದರೆ ನೀವು ಹೊಸದಾಗಿ ಯಾರಿಗೂ ಕೆಲಸಗಳನ್ನು ಕೊಡುವುದಕ್ಕಾಗುವುದಿಲ್ಲ ಸಂಪನ್ಮೂಲಗಳ ಕ್ರೋಢೀಕರಣದ ಬಗ್ಗೆ ನೀವು ಈ ವರ್ಷ ಪ್ರಯತ್ನ ಮಾಡಿದರೆ, ಅದರ ಪ್ರತಿಫಲ ಸಿಗುವುದು ಮುಂದಿನ ವರ್ಷಕ್ಕೆ. ಆದ್ದರಿಂದ ೧೯೮೦-೮೧, ೧೯೮೧-೮೨ ಮತ್ತು ೧೯೮೨-೮೩ ರಲ್ಲಿ ಈ ಹಿಂದಿನ ಸರ್ಕಾರದವರು ಈ ವಿಚಾರದಲ್ಲಿ ತೆಗೆದುಕೊಂಡಂತಹ ಪ್ರಯತ್ನದ ಫಲವಾಗಿ ಈಗ ಸರ್ಕಾರಕ್ಕೆ ಹೆಚ್ಚಿನ ಆದಾಯ ಬರುತ್ತಿದೆ ಈ ಬಗ್ಗೆ ನೀವೂ ಸಹ ಕೆಲವೊಂದು ಪ್ರಯತ್ನಗಳನ್ನು ಮಾಡಿರಬಹುದು. ಆದರೆ ಅದು ಸಾಲದು ಈ ಬಗ್ಗೆ ನೀವು ಇನ್ನೂ ಹೆಚ್ಚಿನ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ತೆರಿಗೆ ಸಂಗ್ರಹಣೆ ವಿಚಾರದಲ್ಲಿ ಸಹ ನೀವು ಹೆಚ್ಚಿನ ಆಸಕ್ತಿ ವಹಿಸಿಲ್ಲ ತೆರಿಗೆ ಬಾಕಿಯನ್ನು ನೀವು ಸರಿಯಾಗಿ ವಸೂಲಿ ಮಾಡಿಲ್ಲ ಇದನ್ನೆಲ್ಲಾ ನೋಡಿದಾಗ ಮತ್ತು ನಿಮ್ಮ ಆಡಳಿತ ಇದೇರೀತಿ ಮುಂದುವರೆದರೆ ಕರ್ನಾಟಕ ರಾಜ್ಯಕ್ಕೆ ಕೆಟ್ಟ ದಿನಗಳು ಕಾದಿವೆ ಹಾಗೂ ಈ ರಾಜ್ಯ ದಿವಾಳಿಯಾಗುವ ಮಟ್ಟಕ್ಕೆ ಹೋಗಿದೆ ಎಂದು ನಾವು ತಿಳಿದುಕೊಳ್ಳಬೇಕಾಗುತ್ತದೆ. ಕೇಂದ್ರ ಸರ್ಕಾರದವರು ಓವರ್‌ಡ್ರಾಫ್ಟ್ ಬಗ್ಗೆ ಕೆಲವೊಂದು ರಿಯಾಯಿತಿಗಳನ್ನು ತೋರಿಸಿದ್ದಕ್ಕಾಗಿ ಕೇಂದ್ರಸರ್ಕಾರಕ್ಕೆ ಆಭಾರಿ ಆಗಿದ್ದೇವೆಂದು ನೀವು ಹೇಳಿದ್ದೀರಿ. ಕೇಂದ್ರಸರ್ಕಾರದವರು ಈ ಒಂದು ರಿಯಾಯಿತಿಯನ್ನು ತೋರಿಸದಿದ್ದರೆ ನಿಮಗೆ ಮಾರ್ಚಿ ತಿಂಗಳಲ್ಲಿ ಸಂಬಳ ಕೊಡಲು ಹಣ ಇರುತ್ತಿರಲಿಲ್ಲ. ಕಳೆದವರ್ಷ ಸಹ ನಿಮಗೆ ಇದೇ ಪರಿಸ್ಥಿತಿ ಬಂದಿತ್ತು ನೀವು ಕೊಟ್ಟ ಚೆಕ್‌ಗಳೆಲ್ಲಾ ವಾಪಸ್ ಆಗಿದ್ದುವು ಅವುಗಳ ಸಂಖ್ಯೆ ಎಷ್ಟಿತ್ತೆಂದರೆ. ಒಂದು ಗೋಣಿ ಚೀಲದಲ್ಲಿ ತುಂಬುವಷ್ಟು ಇದ್ದುವು. ನಿಮ್ಮ ಸರ್ಕಾರಕ್ಕೆ ಅಂತಹ ಒಂದು ಪರಿಸ್ಥಿತಿ ಬರಬಾರದಾಗಿತ್ತು. ಒಂದು ಕುಟುಂಬದಲ್ಲಿ ಒಬ್ಬರಿಗೆ ಕೆಲಸ ಕೊಡುತ್ತೇವೆಂದು ನೀವು ಘೋಷಣೆ ಮಾಡಿದ್ದು ಇನ್ನೂ ಜಾರಿಗೆ ಬರಲಿಲ್ಲ ಇದರ ಜೊತೆಗೆ ಈಗ ಖಾಲಿ ಇರುವಂತಹ ೧೦ ಸಾವಿರ ಹುದ್ದೆಗಳನ್ನು ಇನ್ನೂ ಭರ್ತಿ ಮಾಡಿಲ್ಲ ವಾಣಿಜ್ಯ. ತೆರಿಗೆ ಇಲಾಖೆಯಲ್ಲಿ ಅನೇಕ ಹುದ್ದೆ ೭೯೦ ಖಾಲಿ ಇವೆ. ಇದರಿಂದ ತೆರಿಗೆ ವಸೂಲಿಗೆ ತೊಂದರೆ ಆಗಿದೆ ಎಂದು ನಾನು ಕೇಳಿದ್ದೇನೆ. ಆದ್ದರಿಂದ ಇಂತಹ ಇಲಾಖೆಗಳಿಗೆ ಸಂಬಂಧಪಟ್ಟಂತೆ ಅರ್ಜಿಗಳನ್ನು ಕರೆದು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವುದು ಒಳ್ಳೆಯದು ಸರ್ಕಾರಕ್ಕೆ ಬರುವ ಆದಾಯದ ಕಡೆಗೆ ಹೆಚ್ಚಿನ ಗಮನ ಕೊಡಬೇಕಾಗುತ್ತದೆ. ಇದು ಎಲ್ಲ ಇಲಾಖೆಗಳಿಗೂ ಅನ್ವಯವಾಗದಿದ್ದರೂ ಸಹ ಹಣ ವಸೂಲಿ ಮಾಡುವಂತಹ ಇಲಾಖೆಗಳಲ್ಲಿ ಹುದ್ದೆಗಳು ಖಾಲಿ ಇದ್ದರೆ ಭರ್ತಿ ಮಾಡಬೇಕಾಗುತ್ತದೆ. ಇದರಿಂದ ಕೆಲವರಿಗಾದರೂ ಕೆಲಸ ಸಿಗುತ್ತದೆ ಸರ್ಕಾರದ ರೆವಿನ್ಯೂ ಜಾಸ್ತಿಯಾಗುವ ಕಡೆಗೆ ಸರ್ಕಾರ ದಿಟ್ಟ ನಿಲುವನ್ನು ತೆಗೆದುಕೊಳ್ಳದಿದ್ದರೆ ಅಂತಿಮವಾಗಿ ನಮ್ಮ ರಾಜ್ಯದ ಆರ್ಥಿಕ ಕ್ಷೇತ್ರಕ್ಕೆ ದೊಡ್ಡ ಪೆಟ್ಟು ಬೀಳುತ್ತದೆಂದು ಹೇಳುತ್ತೇನೆ.

ಇನ್ನು ಸೈಫಂಡರೀ ಪದವೀಧರರ ಕೆಲಸವನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವವರ ಬಗ್ಗೆ ಏನೂ ಹೇಳಿಲ್ಲ ಇವೊತ್ತು ನೀರಾವರಿ ಇಲಾಖೆ, ಲೋಕೋಪಯೋಗಿ ಇಲಾಖೆ, ಹೀಗೆ ನಾನಾ ಇಲಾಖೆಗಳಲ್ಲಿ ದಿನಗೂಲಿ ಮೇಲೆ ಸಾವಿರಾರು ಜನ ಕೆಲಸ ಮಾಡುತ್ತಿದ್ದಾರೆ. ಯಾರು ಯಾರು ಇಂತಹ ತಾರೀಖಿನಿಂದ ಇಂತಹ ತಾರೀಖಿನವರೆಗೆ ಕೆಲಸ ಮಾಡಿದ್ದಾರೋ ಅಂತಹವರನ್ನೆಲ್ಲಾ ಖಾಯಂ ಮಾಡುವುದಾಗಿ ಮಾನ್ಯ ದೇವೇಗೌಡರು ಹೇಳಿದ್ದಾರೆ. ನಾನು

ಲೋಕೋಪಯೋಗಿ ಇಲಾಖೆ ಮಂತ್ರಿಯಾಗಿದ್ದಾಗ ಇಂತಹ ಕೆಲಸದವರನ್ನು ಖಾಯಂ ಮಾಡುವ ಬಗ್ಗೆ
ಮೊದಲ ಸಲ ಪ್ರಕಟ ಮಾಡಿದೆ. ಆದರೆ ಇತ್ತೀಚೆಗೆ ಇಂತಹ ಕೆಲಸಗಾರರನ್ನು ಕೆಲಸದಿಂದ ತೆಗೆದರೆಂಬ
ಕಾರಣದಿಂದ ಕೆಲವರು ಸುಪ್ರೀಂ ಕೋರ್ಟಿನವರೆಗೂ ಹೋದರು. ಸುಪ್ರೀಂ ಕೋರ್ಟಿನವರು ಕೆಲಸದಿಂದ
ತೆಗೆದವರನ್ನೆಲ್ಲಾ ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ತೀರ್ಮಾನಕೊಟ್ಟರು ಆದರೆ ಇವರು ಆ ತೀರ್ಪಿನ
ಪ್ರಕಾರ ಪುನಃ ಕೆಲಸಕ್ಕೆ ತೆಗೆದು ಕೊಳ್ಳಲಿಲ್ಲ ಈ ಕಾರಣದಿಂದ ಸುಪ್ರೀಂ ಕೋರ್ಟಿನವರು ಇದರ ಮೇಲೆ
ಸ್ಟ್ರಿಕ್ಚರ್ಸ್ ಪಾಸ್ ಮಾಡಿದರು. ಇದಾದ ನಂತರ ಈ ರಾಜ್ಯದ ಚೀಫ್-ಸೆಕ್ರೆಟರಿ ಅವರು ಈ ಬಗ್ಗೆ ಅಪಾ
ಲಜಿ ಕೇಳಿದರು ಒಂದು ಸಲ ಕೋರ್ಟಿನ ತೀರ್ಪು ಬಂದಮೇಲೆ ಅದಕ್ಕೆ ಮನ್ನಣೆ ಕೊಟ್ಟು ಅದನ್ನು ಗೌರವ
ದಿಂದ ಜಾರಿಗೆ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಅದು ಕಂಟೆಂಪ್ಟ್ ಆಫ್ ಕೋರ್ಟ್ ಆಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.— ಸುಪ್ರೀಂ ಕೋರ್ಟಿನ ತೀರ್ಪನ್ನು ಜಾರಿಗೆ ಕೊಡುವುದರಲ್ಲಿ ಯಾವುದೇ
ರೀತಿಯ ಪ್ರಮಾದ ನಮ್ಮ ಕೈಯಿಂದ ಆಗಲಿಲ್ಲ. ಇದರಲ್ಲಿ ಒಂದು ಸಣ್ಣ ದೋಷ ಇತ್ತು. ಅದೇನೆಂದರೆ,
ಯಾರು ಯಾರನ್ನು ಕೆಲಸದಿಂದ ತೆಗೆಯಲಾಗಿದೆ ಅವರುಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವ ಬಗ್ಗೆ
ಪತ್ರಿಕೆಗಳಲ್ಲಿ ಪ್ರಕಟ ಮಾಡಬೇಕು ಎಂದು ಸುಪ್ರೀಂ ಕೋರ್ಟಿನ ಆಜ್ಞೆ ಆಗಿತ್ತು. ಈ ರೀತಿ ಪ್ರಕಟ
ಮಾಡಿದ ಮೇಲೆ ಅವರುಗಳು ಪುನಃ ಅರ್ಜಿ ಹಾಕಿಕೊಳ್ಳಬೇಕೆಂದು ಅದರಲ್ಲಿ ಹೇಳಿದ್ದರು. ಅದರ
ಪ್ರಕಾರ ನಾವು ಪತ್ರಿಕೆಗಳಲ್ಲಿ ಪ್ರಕಟ ಮಾಡಿದೆವು. ಈ ವಿಚಾರ ಸಂಯುಕ್ತ ಕರ್ನಾಟಕ ಪತ್ರಿಕೆಯ
ಬೆಂಗಳೂರು ಎಡಿಷನ್‌ನಲ್ಲಿ ಪ್ರಕಟವಾಯಿತು. ಆದರೆ ಆ ಪತ್ರಿಕೆಯ ಹುಬ್ಬಳ್ಳಿ ಎಡಿಷನ್‌ನಲ್ಲಿ ಪ್ರಕಟ
ವಾಗಲಿಲ್ಲ. ಈ ಕಾರಣದಿಂದ ಸುಪ್ರೀಂ ಕೋರ್ಟಿನವರು ಆಕ್ಷೇಪ ಎತ್ತಿದರು ಅದಕ್ಕೆ ನಾವು ವಿವರಣೆ
ಕೊಟ್ಟಿದ್ದೇವೆ. ಆದ್ದರಿಂದ ಇದು ಕಂಟೆಂಪ್ಟ್ ಆಫ್ ಕೋರ್ಟ್ ಆಗುವುದಿಲ್ಲ.

೧-೩೧ ಪಿ.ಎಂ.

ಶ್ರೀ ಎಸ್. ಬಂಗಾರಪ್ಪ —ಸುಪ್ರೀಮ್ ಕೋರ್ಟ್‌ನವರು ಮತ್ತೇ ಈ ಲೋಕಲ್ ಕ್ಯಾಂಡಿಡೇಟ್
ಗಳನ್ನು ಅಪಾಯಿಂಟ್‌ಮೆಂಟ್ ಮಾಡಿಕೊಳ್ಳಬೇಕೆಂದು ಆದೇಶ ಕೊಟ್ಟಿದ್ದರೂ ಸಹ ನಿಮ್ಮ ಸರ್ಕಾರ
ಅದನ್ನು ಮಾಡಲಿಲ್ಲ. ಇದರ ಬಗ್ಗೆ ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಗಮನವೇ
ಹರಿಸಲಿಲ್ಲ. ಮತ್ತೆ ಇನ್ನೊಂದು ಸಾರಿ ಸುಪ್ರೀಮ್ ಕೋರ್ಟ್‌ನವರು ಲೋಕಲ್ ಕ್ಯಾಂಡಿಡೇಟ್‌ಗಳನ್ನು
ಅಪಾಯಿಂಟ್‌ಮೆಂಟ್ ಮಾಡಬೇಕು, ಸುಪ್ರೀಮ್ ಕೋರ್ಟಿನ ಆದೇಶವನ್ನು ಪಾಲಿಸದೇ ಇರುವುದ
ರಿಂದ ಕಂಟೆಮ್ಟ್ ಆಫ್ ಕೋರ್ಟ್ ಆಗಿದೆ ಎಂದು ಸೂಚಿಸಿದರು.

ಶ್ರೀ ಬಿ. ಬಸವಲಿಂಗಪ್ಪ.— ಸುಪ್ರಿಮ್ ಕೋರ್ಟಿನ ಆದೇಶವನ್ನು ಪಾಲಿಸದೇ ಇದ್ದುದರಿಂದ
ಕಂಟೆಮ್ಟ್ ಆಫ್ ಕೋರ್ಟ ಆಗಿತ್ತು, ಆಮೇಲೆ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸುಪ್ರೀಮ್
ಕೋರ್ಟಿನ ಆದೇಶಾನುಸಾರ ನಡೆಯದೇ ಇದ್ದುದಕ್ಕೆ ಕ್ಷಮಾಪಣೆಯನ್ನು ಕೇಳಿದರು. ಅದಕ್ಕೆ ಕಂಟೆಮ್ಟ್
ಆಫ್ ಕೋರ್ಟಿನ ಪ್ರೊಸೀಜರ್‌ನ್ನು ಡ್ರಾಪ್ ಮಾಡಲಾಯಿತು. ಸುಪ್ರಿಮ್ ಕೋರ್ಟಿನವರು ಆರ್ಡರ್
ಕೊಟ್ಟ ಪತ್ರ ನನಗೆ ಬರದೇ ಇದ್ದ ಕಾರಣ ನಾವು ಲೋಕಲ್ ಕ್ಯಾಂಡಿಡೇಟ್‌ಗಳನ್ನು ಮರು ನೇಮಕ
ಮಾಡಿಕೊಳ್ಳಲಿಲ್ಲ ಎಂದು ಕಾರಣವನ್ನು ಕೊಟ್ಟಿದ್ದಾರೆ. ಸುಪ್ರೀಮ್ ಕೋರ್ಟ್ ಆದೇಶ ಕೊಡುವುದು,
ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಗೊತ್ತಾಗಲಿಲ್ಲ ಎನ್ನುವುದು ಸರಿಯಾದ ಕಾರಣವಲ್ಲ.
ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ದಕ್ಷತೆ ಮತ್ತು ಜವಾಬ್ದಾರಿ ಎರಡೂ ಇರಬೇಕಾಗು
ತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸುಪ್ರೀಮ್ ಕೋರ್ಟ್, ಕರ್ನಾಟಕ ಸರ್ಕಾರದಲ್ಲಿ ದಿನಗೂಲಿ ಮೇಲೆ
ಕೆಲಸ ಮಾಡುತ್ತಿದ್ದವರನ್ನು ತೆಗೆದುಹಾಕಿರುವುದರ ವಿರುದ್ಧ ತೀರ್ಪುಕೊಟ್ಟು ದಿನಾಂಕ ೬-೧-೮೬ರೊಳಗೆ
ಎಲ್ಲಾ ದಿನಗೂಲಿ ನೌಕರರನ್ನೂ ಮರು ನೇಮಕ ಮಾಡಿಕೊಳ್ಳಬೇಕು. ಎಲ್ಲಾ ದಿನಗೂಲಿ ನೌಕರರಿಗೂ
ತಿಳಿಯುವಂತೆ ಸರ್ಕಾರದವರು ಎಲ್ಲಾ ದಿನಪತ್ರಿಕೆಗಳಲ್ಲೂ ಇದರ ಬಗ್ಗೆ ಜಾಹಿರಾತನ್ನು ಕೊಡಬೇಕೆಂದು
ಕಡ್ಡಾಯವಾಗಿ ಆದೇಶವನ್ನು ಕೊಟ್ಟಿದ್ದರು. ಈ ಆದೇಶವು ಕೆಲಸದಿಂದ ಹೊರ ಹೋಗಿದ್ದ ಎಲ್ಲಾ
ದಿನಗೂಲಿ ನೌಕರರಿಗೆ ತಿಳಿದು ೬-೧-೮೬ರೊಳಗೆ ಅವರು ಕೆಲಸ ಮಾಡುತ್ತಿದ್ದ ಕಛೇರಿಗಳಿಗೆ ಹೋಗಿ
ಮರು ನೇಮಕ ಮಾಡಿಕೊಳ್ಳಬೇಕೆಂದು ಕೇಳಿದಾಗ, ಅವರನ್ನು ಮರು ನೇಮಕ ಮಾಡಿಕೊಳ್ಳಲಿಲ್ಲ.
ಎಲ್ಲರನ್ನು ಮರು ನೇಮಕ ಮಾಡಿಕೊಳ್ಳಬೇಕೆಂದು ಸುಪ್ರೀಂ ಕೋರ್ಟ್ ಆದೇಶ ಕೊಟ್ಟಿದ್ದರೂ ಸಹ
ನಮ್ಮನ್ನು ನೇಮಕ ಮಾಡಿಕೊಳ್ಳಲಿಲ್ಲವೆಂದು ಮತ್ತೆ ದಿನಗೂಲಿ ನೌಕರರು ಸುಪ್ರೀಮ್ ಕೋರ್ಟಿಗೆ

ತಿಳಿಸಿದರು. ಆಗ ಸುಪ್ರೀಮ್ ಕೋರ್ಟಿನವರು, ನಾವು ಕೊಟ್ಟ ಆದೇಶವನ್ನು ಕರ್ನಾಟಕ ಸರ್ಕಾರವು ಪಾಲನೆ ಮಾಡದೇ ಇರುವುದರಿಂದ ಇದು ಕಂಟೆಮ್ಪ್ಟ್ ಆಫ್ ಕೋರ್ಟ್ ಆಗುತ್ತದೆಂದು ತಿಳಿಸಲಾಯಿತು. ಆಗ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಸುಪ್ರೀಮ್ ಕೋರ್ಟಿನ ಕ್ಷಮಾಪಣೆಯನ್ನು ಕೇಳಿ ಕೇಳಿದಾಗ ಕಂಟೆಮ್ಪ್ಟ್ ಆಫ್ ಕೋರ್ಟ್‌ನ್ನು ಡ್ರಾಪ್ ಮಾಡಲಾಯಿತು. ಯಾವುದೇ ಕೋರ್ಟ್ ಆಗಲೀ ಒಂದು ತೀರ್ಪನ್ನು ಕೊಟ್ಟಮೇಲೆ ಸರ್ಕಾರವು ಅದಕ್ಕೆ ಬದ್ಧವಾಗಿರಬೇಕು. ತಕ್ಷಣ ಕೋರ್ಟಿನ ತೀರ್ಪಿಗೆ ಹಾನರ್ ಮಾಡಬೇಕು. ನೌಕರರಿಗೆ ಸೇವಾ ಭದ್ರತೆಯನ್ನು ಕೊಡುವುದು ಸರ್ಕಾರದ ಮುಖ್ಯ ಕರ್ತವ್ಯವಾಗಿರುತ್ತದೆ. ನೌಕರರುಗಳಿಗೆ ಏನಾದರೂ ತೊಂದರೆ ಬಂದಾಗ ಕೋರ್ಟಿಗೆ ಹೋಗುತ್ತಾರೆ, ಅಥವಾ ಸರ್ಕಾರದ ಗಮನವನ್ನು ಸೆಳೆಯುವುದಕ್ಕೆ ಮುಷ್ಕರಗಳನ್ನು ಮಾಡುತ್ತಾರೆ. ನೌಕರರು ಅವರವರ ಇಲಾಖೆಗಳ ವ್ಯಾಪ್ತಿಯಲ್ಲಿ ಸಂಘಗಳನ್ನು ಮಾಡಿಕೊಂಡಿದ್ದಾರೆ. ಆ ಸಂಘಗಳ ಮುಖಾಂತರ ಸರ್ಕಾರದ ಗಮನವನ್ನು ಸೆಳೆಯುತ್ತಾರೆ. ಇದು ರಾಜ್ಯಾಂಗ ಬದ್ಧವಾದ ಹಕ್ಕು. ರೆವಿನ್ಯೂ ಇಲಾಖೆಯವರು, ಫಾರೆಸ್ಟ್ ಇಲಾಖೆಯವರು ಅಗ್ರಿಕಲ್ಚರಲ್ ಇಲಾಖೆಯವರು ಇತ್ಯಾದಿ ಇಲಾಖೆಯವರು ತಮ್ಮದೇ ಆದ ಸಂಘಗಳನ್ನು ಮಾಡಿಕೊಂಡಿದ್ದಾರೆ. ನಮ್ಮ ಲೆಜಿಸ್ಲೇಚರ್ ಎಂಪ್ಲಾಯೀಸ್ ಅಸೋಸಿಯೇಷನ್ ಸಹ ಇದೆ. ಇವರು ಮೊನ್ನೆ ದಿವಸ ಮುಷ್ಕರವನ್ನೇ ಮಾಡಿಬಿಟ್ಟಿದ್ದರು, ಇವರ ಹಕ್ಕುಗಳನ್ನು ಸರ್ಕಾರದವರು ಮೊಟಕು ಮಾಡಬಾರದು. ಆದರೆ ನೌಕರರು ತಮ್ಮಲ್ಲಿ ಏನಾದರೂ ನ್ಯೂನತೆಗಳು ಇದ್ದಾಗ ಮಾತ್ರ ಮುಷ್ಕರಗಳನ್ನು ನಡೆಸುತ್ತಾರೆ. ಆಗ ಸರ್ಕಾರದವರು ಮಧ್ಯೆ ಪ್ರವೇಶಿಸಿ ಅವರ ಕುಂದು ಕೊರತೆಗಳನ್ನು ತೊಡೆದು ಹಾಕಬೇಕು. ಇಲ್ಲದಿದ್ದರೆ ಸಮಸ್ಯೆ ಉದ್ಭವವಾಗುತ್ತವೆ. ಕೆಲವು ದಿನಗಳ ಹಿಂದೆ ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ರೆವಿನ್ಯೂ ಇಲಾಖೆ ನೌಕರರು ಪೆನ್ ಡೌನ್ ಸ್ಟ್ರೈಕನ್ನು ಮಾಡಿದ್ದರು. ಈಗ ಪೌರ ಕಾರ್ಮಿಕರು ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಮುಷ್ಕರವನ್ನು ಮಾಡುತ್ತಿದ್ದಾರೆ. ಇವರು ಮುಷ್ಕರ ನಡೆಸುತ್ತಿರುವುದರಿಂದ ಸಾರ್ವಜನಿಕರಿಗೆ ಎಷ್ಟು ತೊಂದರೆಯಾಗಿದೆ ಎಂಬುದು ತಮಗೂ ಗೊತ್ತಿದೆ. ಎಜುಕೇಷನ್ ಡಿಪಾರ್ಟ್‌ಮೆಂಟಿನವರೂ ಸಹ ಕೆಲವು ದಿನಗಳ ಹಿಂದೆ ಮುಷ್ಕರ ಮಾಡಿದ್ದರು ಎಂದು ಕಾಣುತ್ತದೆ. ನೌಕರರು ತಮ್ಮ ನ್ಯಾಯಬದ್ಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಮುಷ್ಕರ ಮಾಡುತ್ತಾರೆ. ಸರ್ಕಾರದವರು ಅವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡಿ ಅವರ ಸಮಸ್ಯೆಗಳನ್ನು ಬಗೆಹರಿಸಬೇಕು. ಎಲ್ಲಾ ಇಲಾಖೆಗಳವರ ಬೇಡಿಕೆಗಳನ್ನೂ ಪರಿಶೀಲನೆ ಮಾಡುವುದಕ್ಕೆ ನಿಮ್ಮಲ್ಲಿ ಡಿ.ಪಿ.ಎ.ಆರ್. ಇಲಾಖೆಯೇ ಇದೆ. ಈ ಇಲಾಖೆ ಎಲ್ಲಾ ಇಲಾಖೆಗಳವರ ಬೇಡಿಕೆಗಳನ್ನೂ ಇತ್ಯರ್ಥ ಮಾಡಬೇಕಾಗಿರುತ್ತದೆ. ಈ ಡಿ.ಪಿ.ಎ.ಆರ್. ಇಲಾಖೆ ತನ್ನ ಕೆಲಸದಲ್ಲಿ ಅಸಮರ್ಥತೆಯನ್ನು ತೋರಿಸಿದಾಗ ಇಲ್ಲದ ಸಮಸ್ಯೆಗಳೆಲ್ಲಾ ಹುಟ್ಟಿಕೊಳ್ಳುತ್ತವೆ. ಒಂದು ಇಲಾಖೆಯು ಲೋಕಲ್ ಕ್ಯಾಂಡಿಡೇಟ್‌ಗಳನ್ನು ಸರ್ಕಾರದವರು ಖಾಯಂ ಮಾಡಿದರೆ, ಮತ್ತೊಂದು ಇಲಾಖೆಯಲ್ಲಿ ಕೆಲಸ ಮಾಡುವ ಲೋಕಲ್ ಕ್ಯಾಂಡಿಡೇಟ್‌ಗಳು ನಮ್ಮನ್ನೂ ಖಾಯಂ ಮಾಡಿ ಎಂದು ಮುಷ್ಕರ ಮಾಡಬಹುದು, ಅದರಲ್ಲಿ ಯಾವುದೇ ಅನ್ಯಾಯ ಇರುವುದಿಲ್ಲ. ಹಾಗೂ ಅದು ಕಾನೂನು ಬಾಹಿರವಲ್ಲ. ಅನೇಕ ಇಲಾಖೆಗಳಲ್ಲಿ ಸಾವಿರಾರು ಜನರು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಿದ್ದಾರೆ. ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ, ನನಗೆ ಪರಿಚಯ ಇರುವ ಒಬ್ಬರು ಲೋಕಲ್ ಕ್ಯಾಂಡಿಡೇಟ್ ಆಗಿ ೬–೭ ವರ್ಷಗಳಿಂದ ಡಾಕ್ಟರ್ ಆಗಿ ಕೆಲಸ ಮಾಡುತ್ತಿದ್ದಾರೆ, ೬–೭ ವರ್ಷಗಳಿಂದಲೂ ಪಿ.ಎಸ್.ಸಿ.,ನವರು ಕರೆಯುವ ಸಂದರ್ಶನಕ್ಕೆಲ್ಲಾ ಇವರು ಹಾಜರಾಗುತ್ತಿದ್ದಾರೆ, ಆದರೆ ಇದುವರೆಗೂ ಅವರನ್ನು ಪಿ.ಎಸ್.ಸಿ.,ನವರು ಅಪಾಯಿಂಟ್‌ಮೆಂಟ್ ಮಾಡಿಕೊಂಡಿಲ್ಲ. ಇವರು ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದವರಾಗಿದ್ದಾರೆ. ಒಬ್ಬ ಡಾಕ್ಟರನ್ನು ಇವರು ಖಾಯಂ ಮಾಡುವುದಕ್ಕಾಗಲಿಲ್ಲ ಎಂದರೆ, ಇನ್ನು ಉಳಿದ ಪೋಸ್ಟ್‌ಗಳಲ್ಲಿ ಕೆಲಸ ಮಾಡುತ್ತಿರುವ ನೌಕರರುಗಳನ್ನು ಇವರ ಖಾಯಂ ಮಾಡುತ್ತಾರೆಯೇ ಎಂದು ಅನುಮಾನ ಬರುತ್ತದೆ. ನಮ್ಮ ಪಕ್ಷದ ಸರ್ಕಾರ ಇದ್ದಾಗಲೂ ನಾವು ಅನೇಕ ಜನರಿಗೆ ಲೋಕಲ್ ಕ್ಯಾಂಡಿಡೇಟ್ ಆಗಿ ಕೆಲಸ ಮಾಡುವುದಕ್ಕೆ ಆದೇಶಗಳನ್ನು ಕೊಟ್ಟಿದ್ದೆವು. ಅವರುಗಳು ಇನ್ನೂ ಲೋಕಲ್ ಕ್ಯಾಂಡಿಡೇಟ್ಸ್ ಆಗಿಯೇ ಕೆಲಸ ಮಾಡುತ್ತಿದ್ದಾರೆ. ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡುತ್ತಿರುವವರ ವಯಸ್ಸು ೪೦–೪೫ಕ್ಕೆ ತಲುಪಿದೆ. ಇಂತಹ ಕ್ಯಾಂಡಿಡೇಟ್‌ಗಳ ಗತಿ ಏನು ? ಇವರನ್ನು ಖಾಯಂ ಮಾಡಿದರೂ ಕೂಡ ಕೇವಲ ೧೦–೧೫ ವರ್ಷಗಳ ಕಾಲ ಮಾತ್ರ ಸರ್ವೀಸ್‌ನಲ್ಲಿ ಇರುತ್ತಾರೆ. ಇವರನ್ನು ರೆಗ್ಯುಲರೈಸ್ ಮಾಡಬೇಕು ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಲೋಕಲ್ ಕ್ಯಾಂಡಿಡೇಟ್‌ಗಳ ಮೇಲೆ ತಾರತಮ್ಯವನ್ನು ತೋರಿಸಬಾರದೆಂದು ನನ್ನ ಅಭಿಪ್ರಾಯ.

Like this other persons who are working as Lecturers in Health Department are there. ಅವರೆಲ್ಲರೂ ಕೂಡಾ ಲೋಕಲ್ ಕ್ಯಾಂಡಿಡೇಟ್ಸ್ ಆಗಿ ಕೆಲಸ ಮಾಡಿರತಕ್ಕಂತಹವರು, ಎನ್ನತಕ್ಕಂತಹದ್ದು ನನಗೆ ಬಂದಿರತಕ್ಕಂತಹ ಮಂದಿ. ಡಾಕ್ಟರ್ ಚಿಕ್ಕರಾಜಣ್ಣ, ಲೆಕ್ಚರರ್ ಗವರ್ನಮೆಂಟ್ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್, ಬೆಂಗಳೂರು, ಅವರ ಪೋಸ್ಟಿಂಗ್ ಆದ ಜಾಗ ಕೂಡಾ ತೋರಿಸಿದ್ದೀರಿ. ಡಾಕ್ಟರ್, ಎನ್. ಆರ್. ಗಾಯತ್ರಿ, ಲೆಕ್ಚರರ್ ಗವರ್ನಮೆಂಟ್ ಕಾಲೇಜ್, ಕೆ.ಎಸ್, ಮಾಲಿ, ಎಸ್. ಶಿವರಾಮ್, ಕೆ. ಗೀತಾ ಬಾಯಿ, ಮುಂತಾದವರು ಇದ್ದಾರೆ. ಇದನ್ನು ಮಾಡಬೇಕಾದರೂ ಕೂಡ ಅಲ್ಲಿ ಕೆಲಸ ಮಾಡತಕ್ಕಂತಹ ಎಸ್.ಸಿ. ಲೆಕ್ಚರರ್ಸ್ ಇದ್ದಾರೆ ಅವರನ್ನು ಖಾಯಂ ಮಾಡಿಲ್ಲ ಎನ್ನುವ ದೂರು ಬಂದಿದೆ. ಆ ವಿಚಾರದಲ್ಲಿ ತಾವು ವಿಷಯಗಳನ್ನು ಸಂಗ್ರಹಿಸಿಕೊಳ್ಳಬೇಕಾಗುತ್ತದೆ. ಇವೊತ್ತು ಈಗ ಕಾಂಟ್ರ್ಯಾಕ್ಟ್ ಬೇಸಿಸ್ ಮೇಲೆ ಕೆಲಸ ಮಾಡುವವರಿದ್ದಾರೆ, ಡಾಕ್ಟರ್‌ಗಳಾಗಿ, ಲೆಕ್ಚರರ್ಸ್ ಆಗಿ, ಹಾಗೆಯೇ ಹೆಲ್ತ್ ಡಿಪಾರ್ಟ್‌ಮೆಂಟ್‌ನಲ್ಲಿ ಸಾಕಷ್ಟು ಜನರಿದ್ದಾರೆ. ಅವರನ್ನು ನೋಟಿಫೈ ಮಾಡಿ, ಖಾಯಂ ಮಾಡಿ, ಉಳಿದಿರತಕ್ಕಂತಹವನ್ನು ತಾವು ಹಾಗೇ ಬಿಟ್ಟಿದ್ದೀರಿ ? ಈ ವಿಚಾರದಲ್ಲಿ ಒಟ್ಟಾರೆ ಅಭಿಪ್ರಾಯಕ್ಕೆ ನಾನು ಬರುತ್ತೇನೆ. ಲೆಕ್ಚರರ್ ಕೇಡರ್ಸ್‌ನವರು ಲೆಕ್ಚರರ್ ಆಗಿ ಕೆಲಸ ಮಾಡುತ್ತಾರೆ, ಇನ್ನು ಕೆಲವರನ್ನು ಹಾಸ್ಪಿಟಲ್ ಕೆಲಸಕ್ಕಾಗಿಯೂ ಇಟ್ಟುಕೊಂಡಿರುತ್ತಾರೆ, ಇಲ್ಲಿ ಎಲ್ಲರಿಗೂ ಒಂದೇ ನೀತಿಯನ್ನು ಏಕೆ ಅನ್ವಯ ಮಾಡುವುದಿಲ್ಲ ಎಂದು ನಮ್ಮ ವಿಚಾರ. ನಿಮಗೆ ಬೇಕಾಗಿರತಕ್ಕಂತಹವರು ಕೆಲವರು ಅಲ್ಲಿದ್ದಾರೆ ಎನ್ನತಕ್ಕಂತಹ ಆಪಾದನೆಯನ್ನೂ ಕೂಡಾ ಆ ಜನರು ಇವೊತ್ತು ನಿಮ್ಮ ಮೇಲೆ ಮಾಡುತ್ತಿದ್ದಾರೆ. ಇದರಲ್ಲಿ ಎರಡನೇ ನಂಬರ್ ಎನ್.ಆರ್. ಗಾಯತ್ರಿ ಎನ್ನುವವರು, ಮತ್ತು ಇನ್ನೊಬ್ಬರು ಡಾಕ್ಟರ್ ಶಿವರಾಮ್ ಇವರೆಲ್ಲರೂ ಇರುವುದರಿಂದ ಅವರು ನಿಮಗೆ ಬೇಕಾಗಿತ್ತು ಅವರನ್ನು ಖಾಯಂ ಮಾಡಿದ್ದೀರಿ, ಉಳಿದವರನ್ನು ಏಕೆ ಕೈಬಿಟ್ಟಿದ್ದೀರಿ ಎನ್ನುವ ಒಂದು ಸ್ಪಷ್ಟಮಾತನ್ನು ಅವರು ಇಂದು ಕೇಳುತ್ತಿದ್ದಾರೆ. ಇದು ಏತಕ್ಕೆ ಹೀಗೆ ಆಗುತ್ತದೆ ಎಂದು ಈ ಸದನದ ಮುಂದೆ ಸ್ಪಷ್ಟವಾಗಿ ತಾವು ಹೇಳಬೇಕು, ನೀವು ಈ ಒಂದು ಪಾಲಿಸಿಗೆ ಒಪ್ಪಿದಮೇಲೆ, ಬೇರೆ ಬೇರೆ ಇಲಾಖೆಗಳಲ್ಲಿಯೂ ಹೀಗೆ ಕೆಲಸ ಮಾಡಿರತಕ್ಕಂತಹವರು ಇದ್ದಾರೆ ಅವರನ್ನೂ ಕೂಡಾ ಏಕೆ ಖಾಯಂ ಮಾಡಬಾರದು ಎಂಬ ವಿಚಾರವನ್ನು ನಾವು ಕೇಳುತ್ತಿದ್ದೇವೆ, ಇಲ್ಲದಿದ್ದರೆ ಏನು ಅಭಿಪ್ರಾಯ ಬರುತ್ತದೆ ಅಂದರೆ ನಿಮಗೆ ಬೇಕಾದವರನ್ನು ಮಾತ್ರ ಖಾಯಂ ಮಾಡಿಸಿ, ಅವರೆಲ್ಲರಿಗೂ ಪ್ರಮೋಶನ್ ಕೂಡ ಕೊಟ್ಟು ಇಲ್ಲಿ "promoted to officiate as Assistant Professors and posted to places noted against each, pending finalisation of final gradation list, pending consideration of absorption of Dr. A.R. Ananthapadmanabha." ಇಲ್ಲಿ ಪೆಂಡಿಂಗ್ ಪೆಂಡಿಂಗ್, ಅಂದರೆ ಇದರ ಅರ್ಥ ಏನು ತೋರಿಸುತ್ತದೆ? ತಮ್ಮ ಅಧಿಕಾರವನ್ನು ಸಂಪೂರ್ಣವಾಗಿ ಸದುಪಯೋಗಪಡಿಸಿ, ನ್ಯಾಯವನ್ನು ಏಕರೂಪವಾಗಿ ಕೊಡದೇನೆ. ಕೆಲವನ್ನು ಪೆಂಡಿಂಗ್ ಇಟ್ಟುಕೊಡುತ್ತೇವೆ ಎನ್ನುತಕ್ಕಂತಹ ಪದ ಪ್ರಯೋಗ ಏನಿದೆ ಅದು ನ್ಯಾಯಕ್ಕೆ ಸಮೀಪವಾಗಿರತಕ್ಕಂತಹ ಮಾತು ಅಲ್ಲ. ಇದು ಸಂಬಂಧ ಇಲ್ಲದಿರತಕ್ಕಂತಹ ಮಾತು ಎಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆದುದರಿಂದ ಏತಕ್ಕೆ ಇಂತಹ ಆರ್ಡರನ್ನು ಹೊರಡಿಸಿದ್ದಾರೆ ಎಂಬ ಮಾತನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಪ್ರಮೋಷನ್ ಕೊಟ್ಟಂತಹ ವಿಚಾರದಲ್ಲಿ ಮೊನ್ನೆ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿಯೂ ಕೂಡ ಚರ್ಚೆಯಾಗಿದೆ. ಈ ಮಾತು ಹಿಂದೆಯೂ ಸದನದಲ್ಲಿ ಬಂದಿದೆ. ಅಧಿಕಾರದಲ್ಲಿ ಇರತಕ್ಕಂತಹವರು, ಅದು ದುರುಪಯೋಗ ಆಗಬಾರದು ಎಂಬ ಉದ್ದೇಶವನ್ನು ಇಟ್ಟುಕೊಳ್ಳಬೇಕು ಎಂಬ ಒಂದು ಸದುದ್ದೇಶದಿಂದ ನಾನು ಈ ಮಾತನ್ನು ಆಡುತ್ತಿದ್ದೇನೆ. ಈ ಕೆ.ಎ.ಎಸ್. ಜೂನಿಯರ್ ಸ್ಕೇಲ್‌ನಲ್ಲಿರತಕ್ಕಂತಹವರು, ಇವರಿಗೆ ೧೯೭೭ರ ವರೆಗೆ, ಆ ಬ್ಯಾಚ್ ಏನಿದೆ ಅವರಿಗೆ ಪ್ರಮೋಶನ್ ಕೊಟ್ಟಿದ್ದಾರೆ. ಅವರೆಲ್ಲರೂ ಪ್ರಮೋಶನ್ ತೆಗೆದುಕೊಂಡು ಹೊರಟು ಹೋದರು. The samething is not made applicable to 1978 batch. ಪದೇ ಪದೇ ಹೇಳುತ್ತಾ ಇದ್ದೇನೆ. ಹೈಕೋರ್ಟಿಗೆ ಈ ವಿಚಾರದಲ್ಲಿ ಕೇಸ್ ಹೋಯಿತು. ಹೋದ ಮೇಲೆ ಆ ಕೇಸ್‌ನಲ್ಲಿ ಅಂದರೆ ಕಡ್ಲಿ ಎನ್ನತಕ್ಕಂತಹ ಕೇಸ್ ಅದು. ಈ ಕುರಿತು ಸಾಕಷ್ಟು ಪ್ರಮಾಣದಲ್ಲಿ ಈಗಾಗಲೇ ಚರ್ಚೆ ಆಗಿದೆ. ಅದಕ್ಕೆ ಜಡ್ಜ್‌ಮೆಂಟ್ ಆಗಿ ಅಲ್ಲಿ ಏನು ಹೇಳಿದ್ದಾರೆ ಅಂದರೆ, the rule was laid down in that judgment saying that any vacancy where promotion or direct recruitment should not be carried forward for more than three years and that it should be given effect

to from 1-1-1972.'' ಅದರಲ್ಲಿ ಪ್ರಮೋಶನಲ್ ಎಷ್ಟು ಮತ್ತು ಡೈರೆಕ್ಟ್ ಆಗಿ ಎಷ್ಟು ಎನ್ನುವಂಥ ವಿಚಾರ ಇದೆ. ನಾನು ಡೈರೆಕ್ಟ್ ರಿಕ್ರೂಟ್ಸ್ ಬಗ್ಗೆ ಮಾತನಾಡುತ್ತಿದ್ದೇನೆ. ಏಕೆಂದರೆ ಯಾರ್ಯಾರಿಗೆ ಪ್ರಮೋಶನ್ ಕೊಡಬೇಕೋ ಅವರಿಗೆ ಕೊಡಬೇಕು. ಪ್ರಮೋಶನ್‌ರವರಿಗೆ ಕೊಟ್ಟು, ಅನಂತರ ಡೈರೆಕ್ಟ್ ಆದವರಿಗೆ ಕೆಲವರಿಗೆ ಕೊಟ್ಟು, ಕೆಲವರಿಗೆ ಅದನ್ನು ಕೊಡದಿದ್ದರೆ ಅವರಿಗೆ ಮಹದನ್ಯಾಯ ಆಗುತ್ತದೆ ಎನ್ನತಕ್ಕಂತಹ ವಿಚಾರವು ಇಲ್ಲಿ ಬರುತ್ತದೆ. ಯಾರ್ಯಾರು ಮೊದಲಿನಿಂದಲೂ ಇದ್ದಾರೆ, ಅವರಿಗೆ ಕೊಡಬೇಕೆನ್ನುವ ಮಾತನ್ನು ಹೇಳಿದ್ದೇನೆ. ಇಲ್ಲಿ ಏನಾಗಿದೆ ಅಂದರೆ ೧೯೭೭ರ ವರೆಗೆ ಕೊಟ್ಟರು, ೧೯೭೭ರಿಂದ ಕೊಡುತ್ತಾ ಇಲ್ಲ. ಇಡೀ ಕೇಸ್‌ನ್ನು ಯಾವ ರೀತಿ ಇಂಟರ್‌ಪ್ರಿಟೇಶನ್, ಮಾಡತಕ್ಕಂತದ್ದು ಎಂಬುದು just to suit your own logic and to suit your own argument ತಮಗೆ ಬೇಕಾಗಿರತಕ್ಕಂತಹವರಿಗೆ ಮಾತ್ರ ಪ್ರೊಮೋಶನ್ ಕೊಡತಕ್ಕಂತಹ ವಿಚಾರ ಮಾಡಿದ್ದರಿಂದ ಇದರಲ್ಲಿ ಸಾಕಷ್ಟು ಜನರಿಗೆ ಪೆಟ್ಟು ಬಿದ್ದಿದೆ, ಈ ವಿಚಾರದಲ್ಲಿ ಆಫೀಸರ್ಸ್ ಅನೇಕ ಜನರು ಇದನ್ನು ಸರಕಾರದ ಗಮನಕ್ಕೆ ತಂದಿದ್ದಾರೆ, ಎನ್ನತಕ್ಕಂತಹ ವಿಚಾರ ಕೂಡ ನನ್ನ ಗಮನಕ್ಕೆ ಬಂದಿದೆ. ಯಾವುದೇ ಒಂದು ವಿಚಾರವು ಬಂದಾಗ, ಪದೇ ಪದೇ ನೀವು ಮಾತನಾಡಿದ್ದೀರಿ, ನಾವೂ ಕೂಡ ಮಾತನಾಡಿದ್ದೇವೆ. ಸಮಾಜದಲ್ಲಿ ಬೇಕಾದಷ್ಟು ಜಾತಿಗಳು, ವರ್ಗಗಳು ಇದ್ದಾವೆ. ಅನಂತರ ಮುಸ್ಲಿಮರು, ಕ್ರಿಶ್ಚಿಯನರು ಇದ್ದಾರೆ. ಅನುಸೂಚಿತ ಜಾತಿ ಪಂಗಡಗಳು, ಮುಂತಾಗಿ ಇವೆ. ಸಮಾಜದಲ್ಲಿ ಎಲ್ಲಾ ವರ್ಗದವರಿಗೂ ಕೂಡ ನಿರ್ದಿಷ್ಟವಾದಂಥ ಹಕ್ಕುಗಳಿವೆ. ಒಂದು ಮಾತನ್ನು ನೀವೂ ನಾವೂ, ಎಲ್ಲರೂ ಹೇಳಿದ್ದೇವೆ. ಯಾವ ವರ್ಗಗಳಿಗೆ ಸಮಾಜದಲ್ಲಿ ಉದ್ಯೋಗಾವಕಾಶಗಳು, ಸರಕಾರಿ ಸೇವೆಯಲ್ಲಿ, ಅಥವಾ ವಿದ್ಯಾಸಂಸ್ಥೆಗಳಲ್ಲಿ ಯಾರಿಗೆ ಬಹಳಷ್ಟು ವರ್ಷಗಳಿಂದ ಡಿಲೇ ಆಗಿದೆ ಅಂತಹವರಿಗೆ ಬ್ಯಾಕ್‌ಲಾಗ್‌ನ್ನು ಸೇರಿಸಿ ಮಾಡಬೇಕು. ಪ್ರಮೋಶನ್ ಕೊಡಬೇಕಾದರೆ ರೋಸ್ಟರ್ ಸಿಸ್ಟಮ್‌ನ್ನು ಆಧರಿಸಿ ಮಾಡಬೇಕೆಂದು ಪದೇ ಪದೇ ನಾವೆಲ್ಲರೂ ಹೇಳುತ್ತೇವೆ. ದಿವಂಗತ ದೇವರಾಜ್ ಅರಸ್‌ರವರ ಕಾಲದಲ್ಲಿ ಅದು ಬಹಳ ಬೆಳಕಿಗೆ ಬಂತು. ಅವರು ಅದಕ್ಕೆ ಹೆಚ್ಚಿನ ಒತ್ತಡವನ್ನು ಕೊಟ್ಟರು, ಅದರಿಂದ ತುಳಿತಕ್ಕೆಸಿಕ್ಕಿರತಕ್ಕಂತಹವರಿಗೆ ಒಂದು ನ್ಯಾಯ ದೊರಕಿಸಿ ಕೊಟ್ಟರು, ಹಾಗೆ ರೋಸ್ಟರ್ ಸಿಸ್ಟಮ್ ಮಾಡದಿದ್ದರೆ ಅವರಿಗೆ ಅನ್ಯಾಯ ಆಗುತ್ತದೆ ಎನ್ನುವ ಮಾತನ್ನು ಇಟ್ಟು ಆ ಬ್ಯಾಕ್‌ಲಾಗ್ ಸಂಪೂರ್ಣ ಆಗುವವರೆಗೆ ಬೇರೆಯವರಿಗೆ ಕೊಡಬಾರದು ಎಂದು ಆಗಿನ ಕಾಲದಲ್ಲಿ ಆ ಸರಕಾರ ಮಾಡಿತ್ತು. ತಾವೂ ಕೂಡ ಹೇಳಿದ್ದೀರಿ. ಎಲ್ಲ ಹಿಂದುಳಿದವರಿಗೂ, ಮೈನಾರಿಟೀಸ್‌ನವರಿಗೂ ನಾವು ನ್ಯಾಯ ದೊರಕಿಸಿಕೊಡುತ್ತೇವೆ ಎಂದು ಹೇಳುತ್ತಿದ್ದೀರಿ. ನಿಮ್ಮ ಧೋರಣೆ, ಉವಾಚ ಭಾವನೆ ಅದೇ ಇದೆ. ಅದೇ ಒಂದು ಜಯಕಾರವನ್ನು ನೀವು ಜನತೆಯ ಮುಂದೆ ಇಟ್ಟಿದ್ದೀರಿ. ಇವೊತ್ತು ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಾ ಇದ್ದೇನೆ. ೫-೬-೧೯೮೬ಕ್ಕೆ ಒಂದು ಆರ್ಡರನ್ನು ಹೊರಡಿಸಿದ್ದಾರೆ, ಕೆ.ಎ.ಎಸ್.ಗೆ ಸಂಬಂಧಪಟ್ಟಂತಹ ವಿಚಾರ. ಕೆ.ಎಸ್. ನ್ನಿಂದ ಅವರಿಗೆ ಸೀನಿಯರ್ ಸ್ಕೇಲಿಗೆ ಪ್ರಮೋಶನ್ ಕೊಟ್ಟಿರತಕ್ಕಂತಹ ವಿಚಾರ ''ಅಧಿಕಾರಿಯಾಗಿ ಸ್ಥಾನಾಪನ್ನರಾಗಲು ಬಡ್ತಿ ನೀಡಿ, ಮುಂದಿನ ಆದೇಶ ಬರುವವರೆಗೆ ಹೆಸರಿನ ಮುಂದಿರುವ ಹುದ್ದೆಗೆ ತೈನಾತಿಸಲಾಗಿದೆ.'' ಇದು ಎಂತಹ ಕನ್ನಡ ಶಬ್ದ ಎಂದು ನನಗೆ ಅರ್ಥವಾಗುತ್ತಿಲ್ಲ. ತೈನಾತಿಸಲಾಗಿದೆ ಎಂದರೆ ಏನು ? ಯಾವ ಶಬ್ದ ಕೋಶದಲ್ಲಿ ಹುಡುಕಿದ್ದಾರೆ ಈ ಶಬ್ದವನ್ನು, ಯಾವ ಪಂಡಿತರು ಇದನ್ನು ಕೊಟ್ಟರು, ಇಂತಹ ಪಂಡಿತರು ಸೇರಿಕೊಂಡು ಕನ್ನಡವನ್ನು ಎಲ್ಲಿಗೆ ಒಯ್ಯುತ್ತಿದ್ದಾರೆ ಕನ್ನಡದಲ್ಲಿ ನಮಗೂ ಕೂಡ ಅತೀ ಅಭಿಮಾನ ಇದೆ. ಆದರೆ ಶಬ್ದಗಳ ಉಪಯೋಗ ಎಲ್ಲರಿಗೂ ಅರ್ಥ ಆಗುವುದು ಬೇಡವೆ ? ನಿಮ್ಮ ಇಲಾಖೆಯಲ್ಲಿ ಒಬ್ಬರಿಗೆ ಬಡ್ತಿಯನ್ನು ಕೊಡಬೇಕಾದರೆ ಇವರು ಉಪಯೋಗಿಸಿದ ಶಬ್ದ, ಅವರ ಹೆಸರಿನ ಮುಂದಿರುವ ಹುದ್ದೆಗೆ ತೈನಾತಿಸಲಾಗಿದೆ ಎಂದು. ಇದು ಅರೇಬಿಕ್ ಶಬ್ದವೇ, ಸಂಸ್ಕೃತವೇ ? ಕನ್ನಡವೆ?

ನಾನು ಆ ಮಾತನ್ನು ಈ ಸಂದರ್ಭಕ್ಕೆ ಮಾತ್ರ ಹೇಳಿದೆ. ಕಾರಣ ಇಲ್ಲಿ ಎಂತಹ ಪದಗಳ ಪ್ರಯೋಗ ಮಾಡಿದ್ದಾರೆ ಎನ್ನುವುದಕ್ಕೆ ಮಾತ್ರ ಹೇಳಿದೆ. Posted to the places mentioned against in each name ಆ ಪದಗಳಿಗೆ ಅರ್ಥ ಹೇಳುವುದಕ್ಕೆ ಮಾನ್ಯ ನಾರಾಯಣಕುಮಾರ್ ರವರಿಂದ ಕೂಡ ಸಾಧ್ಯವಾಗುವುದಿಲ್ಲ. ಈ ಹುದ್ದೆಗಳಲ್ಲಿ ಕೆಲವರಿಗೆ ಬಡ್ತಿಯನ್ನು ಕೊಟ್ಟು ಮುಂದಿನ ಸ್ಥಳಗಳಿಗೆ ಕಳುಹಿಸಿಕೊಡಲಾಗಿದೆ ಎನ್ನುವ ಅರ್ಥದಲ್ಲಿರಬಹುದು. ಈಗ ಒಟ್ಟು ೧೬ ಜನರಿಗೆ ಬಡ್ತಿಯನ್ನು ಕೊಟ್ಟಿದ್ದಾರೆ. ಇಲ್ಲಿ ಮೊದಲನೆಯದಾಗಿ ಜಾತಿ ಮತ್ತು ಪಂಗಡ ಹಾಗೂ ಬುಡಕಟ್ಟು ಪ್ರಶ್ನೆ

ಇಲ್ಲ. ಇವತ್ತು ಯಾವುದೇ ಆಧಾರವಿಲ್ಲದಿದ್ದರೂ ಸಹ ಕೊನೆಯ ಪಕ್ಷ ಪಾಪ್ಯುಲೇಶನ್ ಪ್ರಕಾರವಾಗಿ ಯಾರಾದರೂ ಬಡ್ತಿಯನ್ನು ಕೊಡಬೇಕಾಗಿತ್ತು, ಆ ರೀತಿ ಹಿಂದೆ ಕೊಟ್ಟಿದ್ದಾರೆ. ಆ ಪದ್ಧತಿ ಇದೆ. ಕೆಲವು ಹುದ್ದೆಗಳನ್ನು ಮೆರಿಟ್ ಮೇಲೆ ಹಾಗೂ ಇನ್ನೂ ಕೆಲವು ಹುದ್ದೆಗಳನ್ನು ಅರ್ಹತೆಯ ಮೇಲೆ ಬಡ್ತಿಯನ್ನು ಕೊಟ್ಟಿರತಕ್ಕಂಥ ವಿಚಾರಗಳು ಕೂಡ ಇದೆ. ಇಲ್ಲವೆಂದು ನಾನು ಹೇಳುವುದಿಲ್ಲ. ಇಲ್ಲಿ ೧೯೭೭ರಲ್ಲಿ ಒಂದು ಬ್ಯಾಚ್ ಅನ್ನು ತಾವು ರಿಕ್ರೂಟ್ ಮಾಡಿದ್ದೀರಿ. ಅವರಿಗೆ ದಿನಾಂಕ ೫-೩-೮೬ರಲ್ಲಿ ಬಡ್ತಿ ಕೊಟ್ಟು ಬಿಟ್ಟಿದ್ದೀರಿ. ಇದರಲ್ಲಿ ಕ್ಲಾಸಿಫಿಕೇಶನ್ ಯಾವ ರೀತಿ ಮಾಡಿದ್ದೀರಿ ಎಂದರೆ ೮ ಜನ ಬ್ರಾಹ್ಮಣರು, ೪ ಜನ ಲಿಂಗಾಯತರು, ಒಬ್ಬ ಎಸ್.ಸಿ. ಒಬ್ಬ ವೈಶ್ಯ, ಒಬ್ಬ ರೆಡ್ಡಿ, ಇನ್ನೊಂದು ಹುದ್ದೆ ವೀಕರ್ ಸೆಕ್ಷನ್ಸ್‌ಗೆ ಕೊಟ್ಟಿದ್ದೀರಿ. ಇವರೆಲ್ಲ ಕೆ.ಎ.ಎಸ್. ಜೂನಿಯರ್ ಕೇಡರ್‌ನಿಂದ ಸೀನಿಯರ್ ಕೇಡರ್‌ಗೆ ಬಡ್ತಿಯನ್ನು ಕೊಟ್ಟಿದ್ದೀರಿ. ಈಗ ತಾವು ಒಟ್ಟು ೧೬ ಜನರಿಗೆ ಮೇಲ್ಕಾಣಿಸಿದಂತೆ ಬಡ್ತಿಯನ್ನು ಕೊಟ್ಟಿದ್ದೀರಿ. ಇದರಲ್ಲಿ ತಾವು ೮ ಜನ ಬ್ರಾಹ್ಮಣರಿಗೆ ೪ ಜನ ಲಿಂಗಾಯತರಿಗೆ ಬಡ್ತಿಯನ್ನು ಕೊಟ್ಟಿದ್ದೀರಿ. ತಾವು ಬ್ರಾಹ್ಮಣರಿಗೆ ಬಡ್ತಿಯನ್ನು ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಮಾನ್ಯ ಬೊಮ್ಮಾಯಿಯವರು ವಿರೋಧಪಕ್ಷದ ನಾಯಕರಾಗಿದ್ದಾಗ ಇಂತಹ ವಿಷಯಗಳು ಬಂದಾಗ ಬಲವಾದ ವಾದವನ್ನೇ ಸದನದಲ್ಲಿ ಮಾಡಿದ್ದರು. ತಾವು ಈ ರೀತಿ ಅನ್ಯಾಯ ಮಾಡಿದರೆ ಉಳಿದವರ ಗತಿ ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. While promoting certain officers from one post to another why are you brushing aside the larger interest of these sections of the society Alright. you consider the interest of the Brehmins also. ಆ ಪ್ರಶ್ನೆ ಇವತ್ತಿನದು ಇಲ್ಲ. ಬಡ್ತಿಯನ್ನು ಕೊಡಬೇಡಿ ಎಂದು ನಾನು ಹೇಳುತ್ತಿಲ್ಲ. ಆದರೆ ಕರ್ನಾಟಕ ರಾಜ್ಯದ ಜನತೆ ಏನೆಂದುಕೊಂಡಾರು ಎನ್ನುವುದನ್ನು ಕೂಡ ಸ್ವಲ್ಪ ಯೋಚನೆ ಮಾಡಬೇಕು. ತಾವು ಬ್ರಾಹ್ಮಣರಿಗೆ ೮ ಜನರಿಗೆ ಕೊಟ್ಟಿದ್ದೀರಿ. ಈ ರೀತಿ ಬಡ್ತಿಯನ್ನು ಕೊಡುವಾಗ ಮುಂದಿನ ಆಗುಹೋಗುಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ. ಇದರಿಂದ ಬೇರೆಯವರಿಗೆ ಅನ್ಯಾಯವಾಗುವುದನ್ನು ಸಹ ಸ್ವಲ್ಪ ಯೋಚನೆ ಮಾಡಬೇಕು. ತಾವು ತಮ್ಮ ಸರ್ಕಾರದ ನೀತಿಗೆ ತದ್ವಿರುದ್ಧವಾಗಿ ವರ್ತನೆ ಮಾಡಿದ್ದೀರಿ. ನಾನು ನಿಜವಾಗಿಯೂ ಯಾವುದೇ ಜಾತಿಯ ವಿರೋಧಿಯಲ್ಲ ಈ ಮಾತನ್ನು ಪದೇ ಪದೇ ಸ್ಪಷ್ಟಪಡಿಸುತ್ತೇನೆ. ಯಾವ ವರ್ಗಕ್ಕೆ ಅನ್ಯಾಯವಾಗಿದೆಯೋ ಆ ವರ್ಗಕ್ಕೆ ನ್ಯಾಯ ಕೊಡಿಸುವುದಕ್ಕೆ ನಾವು ಹೋರಾಟ ಮಾಡಲೇಬೇಕಾಗುತ್ತದೆ. ಇವತ್ತು ಪ್ರತಿಯೊಬ್ಬ ಶಾಸಕರಿಗೂ ಮತ್ತು ಪ್ರತಿಯೊಬ್ಬ ಮಂತ್ರಿಗಳಿಗೂ ಡಿ.ಪಿ.ಎ.ಆರ್.ನಲ್ಲಿ ಏನು ನಡೆಯುತ್ತಿದೆ ಎನ್ನುವುದು ಗೊತ್ತಾಗುವುದಿಲ್ಲ. ಯಾವುದೇ ಪಕ್ಷ ಆಡಳಿತದಲ್ಲಿ ಇದ್ದರೂ ಇಂತಹ ವಿಚಾರಗಳು ಬಂದಾಗ ನಾವು ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕಾಗುತ್ತದೆ. ತಾವು ಈಗ ೧೯೭೭-೭೮ನೇ ಸಾಲಿನಲ್ಲಿ ಡೈರೆಕ್ಟ್ ರಿಕ್ರೂಟ್‌ಮೆಂಟ್ ಆದ ಕೆ.ಎ.ಎಸ್. ನವರಿಗೆ ಪ್ರೊಮೋಶನ್ ಕೊಟ್ಟಿದ್ದೀರಿ ಇದರಲ್ಲಿ ಯಾರ್‍ಯಾರಿಗೆ ಎಷ್ಟೆಷ್ಟು ಕೋಟಾ ಬರುತ್ತಿತ್ತು ಎಂದು ಅಂದಾಜು ಮಾಡುವುದಾದರೆ ಒಂದು ಬ್ರಾಹ್ಮಣರಿಗೆ ಒಂದು ಲಿಂಗಾಯತರಿಗೆ ಮೂರು ಎಸ್.ಸಿ. ಗಳಿಗೆ ೧೧ ಬ್ಯಾಕ್‌ವರ್ಡ್ ಕ್ಲಾಸ್‌ನವರಿಗೆ ಹೋಗುತ್ತಿತ್ತು. ಆದರೆ ತಾವೇನು ಮಾಡಿದ್ದೀರಿ?

ಶ್ರೀ ಎಂ. ರಘುಪತಿ.—ತಾವು ಒಂದು ನಿಮಿಷ ಅವಕಾಶ ಕೊಡುವುದಾದರೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಿಂದಿನ ಸದನದಲ್ಲಿ ಈ ಪ್ರಮೋಶನ್ ಕೊಟ್ಟಿರುವ ಬಗ್ಗೆ ಪ್ರಸ್ತಾಪ ಮಾಡಿದಂಥ ಜ್ಞಾಪಕ ನನಗೆ ಇದೆ. ಆಗ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಾ ಸ್ವಜನ ಪಕ್ಷಪಾತವಾಗಿದೆ ಎಂದು ತಾವೇ ಆಪಾದನೆ ಮಾಡಿದ್ದಿರಿ. ಶ್ರೀಮಾನ್ ಅಬ್ದುಲ್ ನಜೀರ್‌ಸಾಬ್ ಅವರ ಅಳಿಯ ಮತ್ತು ಶ್ರೀಮಾನ್ ದೇವೇಗೌಡರ ಮಗ ಈ ಪಟ್ಟಿಯಲ್ಲಿಯೇ ಬರುತ್ತಾರೆ.

ಶ್ರೀ ಎಸ್. ಬಂಗಾರಪ್ಪ.— ಆ ಲಿಸ್ಟ್ ಬೇರೆ ಈ ಲಿಸ್ಟ್ ಬೇರೆ.

ಶ್ರೀ ಎಂ ರಘುಪತಿ.—ಇಲ್ಲ ಈ ವಿಷಯದಲ್ಲಿ ನಾನು ಪತ್ರ ಬರೆದಿದ್ದೆ. ಮಾನ್ಯ ಅಬ್ದುಲ್ ನಜೀರ್ ಸಾಬ್‌ರವರ ಅಳಿಯ ಈ ಪಟ್ಟಿಯಲ್ಲಿಯೇ ಬರುತ್ತಾರೆ......

ಶ್ರೀ ಎಸ್. ಬಂಗಾರಪ್ಪ.—ಆ ಪಟ್ಟಿ ಇಲ್ಲ. ಈ ಪಟ್ಟಿ ಬೇರೆಯದು. ಆಗ ನಾನು ಪ್ರಸ್ತಾಪ ಮಾಡಿದಂಥ ವಿಷಯ ಈಗ ಪ್ರಸ್ತಾಪ ಮಾಡುತ್ತಿಲ್ಲ. He is yet to be promoted

ಶ್ರೀ ಎಂ. ರಘುಪತಿ.—ಆ ಲಿಸ್ಟ್‌ನಲ್ಲಿ ೧೦ ಜನ ಬ್ಯಾಕ್‌ವರ್ಡ್ ಕ್ಲಾಸ್‌ನವರು ಬರುತ್ತಿದ್ದರು ಆ ಲಿಸ್ಟ್‌ನಲ್ಲಿಯೇ ಶ್ರೀ ಅಬ್ದುಲ್ ನಜೀರ್ ಸಾಬ್ ಅವರ ಅಳಿಯ ಸಹ ಬರುವುದು...

ಶ್ರೀ ಎಸ್. ಬಂಗಾರಪ್ಪ.— No, no. Please try to understand that. That issue is still there. It is alive.

ಶ್ರೀ ಎಂ. ರಘುಪತಿ.—ಆಗ ಪ್ರೊಮೋಶನ್ ವಿಚಾರದಲ್ಲಿಯೇ ಬಂದಿದ್ದು.

ಶ್ರೀ ಎಸ್. ಬಂಗಾರಪ್ಪ.—ಈ ಪಟ್ಟಿಯಲ್ಲಿರತಕ್ಕಂಥವರಿಗೆ ದಿನಾಂಕ ೫-೩-೮೬ರಲ್ಲಿ ಪ್ರೊಮೋಷನ್ ಕೊಟ್ಟಿರುವುದು. ಈ ಪಟ್ಟಿಯಲ್ಲಿ ಮಾನ್ಯಮಂತ್ರಿಗಳಾದಂಥ ಶ್ರೀ ಅಬ್ದುಲ್ ನಜೀರ್‌ಸಾಬ್ ಅವರ ಅಳಿಯ ಹೆಸರು ಇಲ್ಲ. ಬೇಕಾದರೆ ನಾನು ಈ ಪಟ್ಟಿಯಲ್ಲಿರತಕ್ಕಂಥ ಹೆಸರುಗಳನ್ನು ಓದುತ್ತೇನೆ. (೧) ಜೆ.ಎನ್. ರಾಮನಾಥ್ (೨) ವೆಂಕಟೇಶ್ (೩) ತಿಮ್ಮಾರೆಡ್ಡಿ (೪) ಪಿ.ಎಸ್. ಪಾಟೀಲ್ (೫) ಸಿದ್ದರಾಮಯ್ಯ ಇತ್ಯಾದಿ ಇತ್ಯಾದಿ ಇವೆ, ಈ ಹೆಸರುಗಳಲ್ಲಿ ಅವರ ಅಳಿಯನ ಹೆಸರು ಇಲ್ಲ. That is why I said that matter is quite different from this. In this case it is not in accordance with directions of the High Court in Kadilis case of 1982. That is all the point which I wanted to make. ಮಾನ್ಯ ಅಧ್ಯಕ್ಷರೇ ತಾವು ೧೯೭೮-೭೯ನೇ ಇಸವಿಯಲ್ಲಿ ರಿಕ್ರೂಟ್ ಆದಂಥವರಿಗೆ ಬಡ್ತಿಯನ್ನು ಕೊಟ್ಟಿದ್ದೀರಿ. ಇದರಲ್ಲಿ ಸುಮಾರಾಗಿ ಎಲ್ಲಾ ವರ್ಗಗಳಿಗೂ ಅನ್ಯಾಯವಾಗಿದೆ. ಆದ್ದರಿಂದ ನ್ಯಾಯವನ್ನು ಕೊಡಿ ಎಂದು ಮಾತ್ರ ನಾನು ಈ ಸಂದರ್ಭದಲ್ಲಿ ಹೇಳಿ ಅದನ್ನು ಅಲ್ಲಿಗೆ ನಿಲ್ಲಿಸುತ್ತೇನೆ. ಈ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಮತ್ತೆ ಒಂದೇ ಒಂದು ಮಾತು ಹೇಳುವುದಾದರೆ ಅನುಸೂಚಿತ ಜಾತಿ ಮತ್ತು ಪಂಗಡಗಳಿಗೂ ನ್ಯಾಯ ಸಿಕ್ಕಿಲ್ಲ. ಎಲ್ಲಾ ಇಲಾಖೆಗಳಲ್ಲಿ ಕೆಲಸ ಮಾಡತಕ್ಕಂಥ ವರ್ಗಗಳು ಏನಿವೆ ಈ ವರ್ಗಗಳಿಗೆ ಸಾಕಷ್ಟು ಇದರಿಂದ ಪೆಟ್ಟು ಬಿದ್ದಂತಾಗುತ್ತದೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ಸಿ ಅಂಡ್ ಆರ್ ರೂಲ್ಸ್ ಏನಿದೆ ಇದನ್ನು ಡಿ.ಪಿ.ಎ.ಆರ್.ನವರು ಬದಲಾಯಿಸಿ ದೊಡ್ಡಪ್ರಮಾಣದಲ್ಲಿ ಅನ್ಯಾಯ ಮಾಡಿದರೆ ಇದರ ಬಿಸಿ ದೊಡ್ಡ ಪ್ರಮಾಣದಲ್ಲಿ ನಿರ್ಮಾಣವಾಗುತ್ತದೆ ಎನ್ನತಕ್ಕಂಥ ವಿಚಾರವನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

೨-೦೦ ಪಿ. ಎಂ.

ಮಾನ್ಯ ಸಭಾಧ್ಯಕ್ಷರೇ, ಇದರಿಂದ ಏನಾಗಿದೆ ಎಂದರೆ ದಕ್ಷತೆಗೂ ಕೂಡ ಪೆಟ್ಟು ಆಗುತ್ತದೆ. ಯಾವಾಗ ಪ್ರೊಮೋಷನ್ ಸಿಗಬೇಕಾದ ವ್ಯಕ್ತಿಗೆ ತಡವಾಗುತ್ತದೆ, ಆಗ ಇನ್ ಎಫಿಷಿಯೆನ್ಸಿ ಬರುವುದಕ್ಕೆ ಇದೂ ಕೂಡ ಕಾರಣ. ಕೇವಲ ಸಂಬಳಕ್ಕಾಗಿ ನೌಕರ ಕೆಲಸ ಮಾಡುತ್ತಾನೆ. ಆತ ತನ್ನ ಭಾಗದ ಕೆಲಸ ಇದ್ದರೂ ಮಾಡುವುದಿಲ್ಲ. ಮತ್ತೊಂದು ಇನ್‌ಎಫಿಷಿಯೆನ್ಸಿಗೆ ಕಾರಣ ವರ್ಗಾವಣೆ. ಶಿಕ್ಷಕರ ಬಗ್ಗೆ ಇವರು ಒಂದು ಹೇಳಿಕೆ ಕೊಟ್ಟರು. ಇದನ್ನು ಯಾವ ರೀತಿ ಮಾಡುತ್ತಾರೋ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಒಂದು ಹೇಳಿಕೆ ಕೊಟ್ಟರು. ಶಿಕ್ಷಕರನ್ನು ಅವರ ಸ್ವಂತ ತಾಲ್ಲೂಕಿನಿಂದ, ಇನ್ನೊಂದು ತಾಲ್ಲೂಕಿಗೆ ವರ್ಗಾವರ್ಗಿ ಮಾಡಲಾಗುತ್ತದೆಂದು ಹೇಳಿದ್ದಾರೆ. ಈ ಯೋಜನೆ ಏನಿದೆ, ಇದು ಸರಿಯಾದುದಲ್ಲವೆಂದು ನನ್ನ ಭಾವನೆ. ಏತಕ್ಕೆಂದರೆ, ಆಯಾ ತಾಲ್ಲೂಕುಗಳಲ್ಲಿ ಶಿಕ್ಷಕರು ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ, ಯಾರೋ ಕೆಲವರು ತಪ್ಪು ಮಾಡತಕ್ಕಂಥ ಶಿಕ್ಷಕರು ಇರಬಹುದು. ಇವುಗಳಿಗೆಲ್ಲಾ ಕೆಲವು ಮಾರ್ಜಿನ್ ಇಡಬೇಕು, ನಾನು ಚೆನ್ನಾಗಿ ಕೆಲಸ ಮಾಡತಕ್ಕಂಥ ಶಿಕ್ಷಕರನ್ನು ಕಂಡಿದ್ದೇನೆ. ತಪ್ಪು ಮಾಡತಕ್ಕಂಥವರ ಮೇಲೆ ಕಾರ್ಯಕ್ರಮ ಹಾಕಿಕೊಳ್ಳದೇ, ಯಾರೋ ಎರಡು ಜನರನ್ನು ನೋಡಿಕೊಂಡು, ಒಂದು ತಾಲ್ಲೂಕಿನಿಂದ, ಬೇರೆ ತಾಲ್ಲೂಕಿಗೆ ವರ್ಗ ಮಾಡುವುದಾದರೆ, ಇದು ಬೇರೆ ಯಾವುದೇ ರಾಜಕೀಯ ಉದ್ದೇಶದಿಂದ ಮಾಡಿದ ಹಾಗೆ ಆಗುತ್ತದೆ. ಈ ರೀತಿ ಬದಲಾವಣೆ ಮಾಡತಕ್ಕ ಕಾರ್ಯಕ್ರಮದಿಂದ ಸರಿಯಾದ ಪಾಠ-ಪ್ರವಚನಗಳನ್ನು ಮಕ್ಕಳಿಗೆ ಕೊಡುವುದಕ್ಕೆ, ಸರಿಯಾದ ವ್ಯವಸ್ಥೆ ಅಲ್ಲವೆಂದು ಹೇಳಬೇಕಾಗಿದೆ. ಇವರು ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಮಾಡುತ್ತೇವೆಂದು ಹೇಳಿದರು. ಇದನ್ನು ತಡ ಮಾಡದೇ ಮಾಡಬೇಕು, ಇಲ್ಲದೇ ಹೋದರೆ ಮತ್ತೆ ಅನ್ಯಾಯಗಳು ಹೀಗೆಯೇ ಮುಂದುವರಿಯುತ್ತವೆ. ತೀರ್ಪು ಕೊಡುವುದಕ್ಕೆ ಯಾವುದೇ ದಾರಿ ಕೂಡ ಆಗುವುದಿಲ್ಲ. ಇವರು ಮತ್ತೊಂದು ಭಾಷಣವನ್ನು ಮಾಡಿದರು. ಇನ್‌ಎಫಿಷಿಯೆನ್ಸಿ ಆಫೀಸರ್‌ಗಳು ಯಾರ್ಯಾರು ಇದ್ದಾರೆ

ಅವರನ್ನು ನಿವೃತ್ತಿ ಮಾಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದರು. ಯಾರು ಯಾರು ಆಫೀಸರುಗಳಲ್ಲಿ ಕೆಲಸ ಮಾಡುವುದಿಲ್ಲ ಅವರ ಬಗ್ಗೆ ವರದಿ ಮಾಡಿ, ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರು. ಈ ಬಗ್ಗೆ ಸ್ಕ್ರೀನಿಂಗ್ ಕಮಿಟಿ ಮಾಡಿದ್ದಾರೆ. ಎಷ್ಟು ಜನರ ಸರ್ವೆ ಮಾಡಿದ್ದಾರೆ, ಏನು ರಿಪೋರ್ಟ್ ಕೊಟ್ಟಿದ್ದಾರೆ, ನೀವೇ ಹೇಳಿ ಎಷ್ಟು ದಿವಸ ಆಯಿತು? ಯಾವುದೇ ಕೆಲಸ ಕಾರ್ಯಗಳನ್ನು ಮಾಡದೇ, ಹೇಳಿಕೆಗಳನ್ನು ಕೊಟ್ಟು, ಇನ್‌ಎಫಿಷಿಯೆನ್ಸಿ ಜಾಸ್ತಿಯಾಗುವುದಕ್ಕೆ ಅವಕಾಶವಾಗಿದೆ. ನಾನೂ ಕೂಡ ಕೆಟ್ಟ ಆಫೀಸರುಗಳನ್ನು ನೋಡಿದ್ದೇನೆ. ನಾನು ರೆವಿನ್ಯೂ ಮಂತ್ರಿಯಾಗಿದ್ದಾಗ, ನಮ್ಮ ಇಲಾಖೆಯವರಿಗೆ ಒಂದು ನೋಟ್ ಹಾಕುವುದಕ್ಕೆ ಹೇಳಿದೆ. ಯಾರ್‍ಯಾರು ರೆವಿನ್ಯೂ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರೆ, ಅವರಿಗೆ ಕನ್‌ವರ್ಷನ್ ಚಾರ್ಜ್ ಎಷ್ಟಾಗುತ್ತದೆ ಎಷ್ಟು ಹಣ ನಿಗದಿ ಮಾಡಬೇಕು, ಎಂಬ ಬಗ್ಗೆ ಒಂದು ನೋಟ್ ಹಾಕಿಕೊಂಡು ಬನ್ನಿ ಎಂದು ಹೇಳಿದ್ದೆ. ಏಕೆಂದರೆ ಅವರು ಹಣ ಕಟ್ಟಿ, ಚಲನ್ ಕೊಟ್ಟರೆ ಕನ್‌ವರ್ಷನ್ ಮಾಡಬಹುದು ಎಂದು ಹೇಳಿದ್ದೆ. ಅದಕ್ಕೆ ಆ ಅಧಿಕಾರಿಗಳು ಇದನ್ನು ಬಿ.ಡಿ.ಎ. ಅವರನ್ನು ಕೇಳಬೇಕು, ಟ್ರಸ್ಟ್ ಬೋರ್ಡ್‌ನವರನ್ನು ಕೇಳಬೇಕು ಹೀಗೆಲ್ಲಾ ಹೇಳಿ, ಕೊನೆಗೆ ಬಡವರಿಗೆ ವಿರುದ್ಧವಾಗಿ ನೋಟ್ ಹಾಕಿಕೊಂಡು ಬಂದರು. ಇದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳಬೇಕೆಂದಿದ್ದೆ. ಅಷ್ಟರಲ್ಲಿ ಅವರು ಕ್ಷಮಾಪಣೆ ಕೇಳಿದ ಮೇಲೆ ನಿಲ್ಲಿಸಬೇಕಾಯಿತು. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇನ್ ಎಫಿಷಿಯೆನ್ಸಿ ಆಫೀಸರ್ಸ್ ಬಗ್ಗೆ ನಾವು ಏನು ಬಿಗಿ ಕ್ರಮ ತೆಗೆದುಕೊಂಡರೆ ಎಫಿಷಿಯೆನ್ಸಿ ಬರುತ್ತದೆಂದು ನಮ್ಮ ಅಭಿಪ್ರಾಯ. ಅಂತಹ ಆಫೀಸರುಗಳ ಪಟ್ಟಿ ಮಾಡಬೇಕು. ಇವತ್ತು ಈ ಕೆಲಸವನ್ನು ಕೇಂದ್ರ ಸರ್ಕಾರದವರು ಮಾಡುತ್ತಿದ್ದಾರೆ, ಅವರು ಇನ್‌ಕಂ-ಟ್ಯಾಕ್ಸ್ ಆಫೀಸಿನ ಅನೇಕ ಜನ ಅಧಿಕಾರಿಗಳನ್ನು ನಿವೃತ್ತಿ ಮಾಡಿ ಕಳುಹಿಸಿಕೊಟ್ಟರು. ಮಾನ್ಯ ವಿ.ಪಿ. ಸಿಂಗ್‌ರವರು ಕೇಂದ್ರ ಸರ್ಕಾರದ ತೀರ್ಮಾನದ ಪ್ರಕಾರ ಈ ಕೆಲಸ ಮಾಡುತ್ತಿದ್ದಾರೆ, ಯಾವುದೇ ಮುಲಾಜು ಇಲ್ಲದೆ ಮಾಡುತ್ತಿದ್ದಾರೆ. ನೀವು ಒಂದು ಹೇಳಿಕೊಡುತ್ತೀರಿ. ಈ ಕಾರ್ಯಕ್ರಮರಹಿತವಾದ ನಿಮ್ಮ ಹೇಳಿಕೆ ಆಡಳಿತದಲ್ಲಿ ಒಳ್ಳೆಯ ದಕ್ಷತೆಯನ್ನು ತಂದುಕೊಡುವುದಕ್ಕಾಗುವುದಿಲ್ಲ. ಕಾರ್ಯಗತ ಆಗುವಂತಹ ಹೇಳಿಕೆಗಳು ಬಂದರೆ ಅದಕ್ಕೆ ಇರುತ್ತದೆಂದು ಹೇಳುತ್ತೇನೆ.

ಇನ್ನು ವಿಜಿಲೆನ್ಸ್ ವಿಚಾರದಲ್ಲಿ ಹೇಳುವುದಾದರೆ, ಹಿಂದೆ ವಿಜಿಲೆನ್ಸ್ ಇತ್ತು. ಈಗ ಅದು ಬೇರೆ ಆಗಿದೆ. ಲೋಕಾಯುಕ್ತಕ್ಕೆ ನಾವು ಅರ್ಜಿ ಕೊಟ್ಟರೆ, ಯಾರಾದರೂ ಆಫೀಸರ್ ಮೇಲೆ ದೂರು ಕೊಟ್ಟರೆ, ಅವರು ಇದು ನಮಗೆ ಸಂಬಂಧಪಟ್ಟಿದ್ದಲ್ಲ, ಪೋಲೀಸ್ ಇಲಾಖೆಗೆ ಕೊಡಿ ಎಂದು ಹೇಳುತ್ತಾರೆ. ಪೋಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಟ್ಟರೆ, ಅವರು ನಮಗೆ ಬೇಕಾದಷ್ಟು ಕೆಲಸಗಳು ಇವೆ. ಇದನ್ನು ಲೋಕಾಯುಕ್ತಕ್ಕೆ ಕೊಡಿ ಎಂದು ಹೇಳುತ್ತಾರೆ. ಅಲ್ಲಿಗೆ ಹೋದರೆ, ಇಲ್ಲಿಗೆ ಹೋಗಿ ಎನ್ನುತ್ತಾರೆ, ಇಲ್ಲಿಗೆ ಬಂದರೆ ಅಲ್ಲಿಗೆ ಹೋಗಿ ಎನ್ನುತ್ತಾರೆ. ಅವನು ಲೋಕಾಯುಕ್ತಕ್ಕೆ ಮತ್ತು ಪೋಲೀಸ್ ಸ್ಟೇಷನ್‌ಗೆ ತಿರುಗಾಡತಕ್ಕ ಪರಿಸ್ಥಿತಿ ಇದೆ. ಇವತ್ತು ನೀವು ಲೋಕಾಯುಕ್ತ ಮಾಡಿದ್ದೀರಿ, ಅದಕ್ಕೆ ಬೇಕಾದ ಸಿಬ್ಬಂದಿ ಇಲ್ಲ, ಮತ್ತೊಂದು ಇಲ್ಲ. ಲೋಕಾಯುಕ್ತ ಎಂದು ಬೋರ್ಡ್ ಹಾಕಿದ್ದಾರೆ. ಇದರಿಂದ ಏನೂ ಮಾಡುವುದಕ್ಕಾಗುವುದಿಲ್ಲ. ನೀತಿಯಲ್ಲಿ ಕಾರ್ಯದಲ್ಲಿ ನಂಬಿಕೆ ಇದ್ದರೆ, ಅದಕ್ಕೆ ಬೇಕಾದ ವ್ಯವಸ್ಥೆಯನ್ನು ಒದಗಿಸಿ, ತಕ್ಷಣ ಕಾರ್ಯೋನ್ಮುಖರಾಗಬೇಕು. ಲಂಚ ತಿನ್ನುವವನು ಅನ್ಯಾಯ ಮಾಡುವವನು ಹಾಗೆಯೇ ಉಳಿಯುವುದಕ್ಕೆ ಅವಕಾಶ ಆಗಬಾರದು. ವಿಜಿಲೆನ್ಸ್ ಕಮೀಷನ್‌ಗೆ ಹಿಂದೆ ಏನೇನು ಬರೆದಿದ್ದರು, ಆ ರಿಪೋರ್ಟ್‌ಗಳೆಲ್ಲಾ ತಮ್ಮ ಹತ್ತಿರ ಬಂದಾಗ, ಕ್ಯಾಬಿನೆಟ್ ಮುಂದೆ ಬರುತ್ತವೆ. ಅವುಗಳ ಬಗ್ಗೆಯೂ ಕೂಡ ನೀವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಹಿಂದೆ ನಾವೂ ಕೂಡ ಸರ್ಕಾರ ನಡೆಸಿದ್ದೇವೆ. ಯಾವುದೇ ರಾಜಕೀಯ ಒತ್ತಡಕ್ಕೆ ಒಳಗಾಗದೇ ದೊಡ್ಡ ದೊಡ್ಡ ತಪ್ಪುಗಳನ್ನು ಮಾಡಿರುವ ಆಫೀಸರುಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಇಲ್ಲದೇ ಹೋದರೆ ಅವರು ಯಾವುದೇ ರೀತಿಯಿಂದ ಬಚಾವ್ ಆಗಬಹುದು ಎನ್ನುವ ಅಭಿಪ್ರಾಯಕ್ಕೆ ಬರುತ್ತಾರೆ, ಅಪೀಲು ಹಾಕಿರುವವರ ಕೇಸುಗಳು ಸಿಕ್ಕಾಪಟ್ಟೆ ಬಾಕಿ ಇವೆ. ಸುಮಾರಾಗಿ ಈ ರೀತಿ ಇರತಕ್ಕ ಅಪೀಲುಗಳು, ೩ ತಿಂಗಳು, ೬ ತಿಂಗಳಿಗೆ ಮೇಲ್ಪಟ್ಟು ಹಾಗೆಯೇ ಉಳಿದಿವೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಡಿಪಾರ್ಟ್‌ಮೆಂಟ್ ಭ್ರಷ್ಟಾಚಾರದ ವಿಚಾರದಲ್ಲಿ ಹೇಳಬೇಕಾಗಿದೆ. ಇದನ್ನು ನಿಮ್ಮ ಮೇಲೆ ಗೂಬೆ ಕೂರಿಸುವುದಕ್ಕೆ ಹೇಳುತ್ತಿಲ್ಲ. ಕರಪ್ಷನ್ ಮೊದಲಿನಿಂದಲೂ ಇದೆ. ಇದು ಯಾವ ಹಂತದಲ್ಲಿದೆ, ಎಷ್ಟು ಎತ್ತರದಲ್ಲಿದೆ ಎಂಬುದನ್ನು ತಾವು ನೋಡಬೇಕು. ಇವತ್ತು

ನಿಮ್ಮ ಆಡಳಿತ ಬಂದ ಮೇಲೆ ಕರ್ನಾಟಕ ರಾಜ್ಯದಲ್ಲಿ, ಬಹಳ ದೊಡ್ಡ ಪ್ರಮಾಣದಲ್ಲಿ ತನ್ನ ಕಾರ್ಯಕ್ಷೇತ್ರವನ್ನು ಬಲಪಡಿಸಿಕೊಂಡಿದೆ. ಇವತ್ತು ಬರಗಾಲ ಇರಬಹುದು, ನಮಗೆ, ನಿಮಗೆ ಬರಗಾಲ. ಕೆಲವು ಆಫೀಸರುಗಳಿಗೆ ಬರಗಾಲ ಬೇಕು, ಕೆಲವರಿಗೆ ಕ್ಷಾಮ ಬೇಕು. ಕೆಲವರು ಬರಗಾಲ, ಕ್ಷಾಮ ಎಂದು ಹೇಳಿಕೊಂಡು, ಕಾಂಟ್ರ್ಯಾಕ್ಟ್ ಮಾಡಿಕೊಂಡು, ದುಡ್ಡು ಮಾಡಿಕೊಳ್ಳುತ್ತಾರೆ. ಕುಡಿಯುವುದಕ್ಕೆ ನೀರು ಇಲ್ಲದೇ ಇರಲಿ, ಕಾಮಗಾರಿ ಕೆಲಸ ನಡೆಯದೇ ಹೋಗಲೀ, ಅವರು ದುಡ್ಡು ಮಾಡುವುದಕ್ಕೆ ಇವೆಲ್ಲಾ ಅವಕಾಶಗಳು. ಇವತ್ತು ಲಂಚದ ಗಾತ್ರ ಮತ್ತು ಎತ್ತರ, ಅದು ಬೆಳೆಯುವುದಕ್ಕೆ ಬಿಡಬಾರದು. ಸಂಪೂರ್ಣ ನಾಶ ಮಾಡುವುದಕ್ಕೆ ಆಗದೇ ಹೋದರೆ, ಜನತೆ ತೊಂದರೆ ಅನುಭವಿಸಬೇಕಾಗುತ್ತದೆ. ನನಗೆ ಗೊತ್ತಿದೆ. ಇವತ್ತು ತಮಿಳುನಾಡು, ಕರ್ನಾಟಕ, ಆಂಧ್ರದವರಿಗೆ ವ್ಯವಹಾರ ಆಗಬೇಕಾದರೆ, ಅಲ್ಲೂ ಕೂಡ ಲಂಚ ಬರಬಹುದು. ನೀವು ಇವತ್ತು ಕರೆಕ್ಟ್ ಆಫೀಸರನ್ನು ತರುವುದಕ್ಕೆ, ಎಫಿಷಿಯೆನ್ಸಿ ತರುವುದಕ್ಕೆ ಯಾವ ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಎಂಬುದನ್ನು ತೋರಿಸಿ.

ಈಗ ವಿಲೇಜ್ ಅಕೌಂಟೆಟ್ಸ್‌ನ್ನೇ ತೆಗೆದುಕೊಳ್ಳಿ, Public are in the hand of Village Accountants. ಅವರು ಅತ್ತ ಕಡೆ, ಇತ್ತ ಕಡೆ ಜನರನ್ನು ಓಡಾಡಿಸುತ್ತಾರೆ, ಈ ಬಗ್ಗೆ ನಾವು ಎಷ್ಟೇ ಪಾಠ ಮಾಡಬಹುದು. ಅವರು ಕೆಲಸದ ಬಗ್ಗೆ ವಿಳಂಬ ಮಾಡುವುದನ್ನು ನೋಡಿದರೆ ಎಂಥವರಿಗಾದರೂ ಸಿಟ್ಟು ಬರುತ್ತದೆ ಇದು ಈವೊತ್ತು ವಿಲೇಜ್ ಅಕೌಂಟೆಂಟ್‌ರನ್ನು ಹಿಡಿಯುವುದಕ್ಕಾಗುವುದಿಲ್ಲ. ಅವರೇ ಆ ರೀತಿ ಮಾಡಿದರೆ ಬೇರೆ ಅಧಿಕಾರಿಗಳು ಇನ್ನಾವ ರೀತಿ ಮಾಡಬಹುದು. ಇದರಲ್ಲಿ ಒಳ್ಳೆಯ ಆಫೀಸರ್ಸ್ ಸಹ ಇದ್ದಾರೆ. ಒಳ್ಳೆಯ ಆಫೀಸರ್ಸ್‌ನ್ನು ಬಿಟ್ಟು ಹೇಳುತ್ತಿದ್ದೇನೆ. ಎಲ್ಲರೂ ಕೆಟ್ಟ ಆಫೀಸರ್ ಅಂತ ಹೇಳುವುದಿಲ್ಲ. ಒಳ್ಳೆಯ ಆಫೀಸರ್ಸ್‌ಗೆ ತೊಂದರೆಯಾಗಬಾರದು ಎನ್ನುವ ದೃಷ್ಟಿಯನ್ನಿಟ್ಟು ಕೊಂಡು ಹೇಳುತ್ತಿದ್ದೇನೆ. I have seen very good officers, top officers ನಾನು ಪಿ.ಡಬ್ಲ್ಯು.ಡಿ ಮಿನಿಸ್ಟರ್ ಆಗಿದ್ದಾಗ ಚೀಫ್ ಇಂಜನೀಯರ್ಸ್, ಎಕ್ಸಿಕ್ಯೂಟೀವ್ ಇಂಜನೀಯರ್ಸ್ ಇವರನ್ನೆಲ್ಲಾ ನೋಡಿದ್ದೇವೆ. ಅಲ್ಲಿ ದಕ್ಷ ಅಧಿಕಾರಿಗಳು ಇದ್ದಾರೆ. ಹಾಗೆಯೇ ನಾನು ಅಗ್ರಿಕಲ್‌ಚರ್ ಮಿನಿಸ್ಟರ್ ಆಗಿದ್ದಾಗ ಅಲ್ಲಿಯ ಅಧಿಕಾರಿಗಳನ್ನೂ ನೋಡಿದ್ದೇನೆ ಅಲ್ಲೂ ದಕ್ಷ ಅಧಿಕಾರಿಗಳು ಇದ್ದಾರೆ. I as the Minister of State for Home during 1977 ಆ ಸಂದರ್ಭದಲ್ಲಿ I have seen the best police officers of Course, there were some bad people also. ನೀವು ಈಗ ಕೆಲವು ಕೆಟ್ಟ ಸಂಪ್ರದಾಯಗಳನ್ನು ಕ್ರಿಯೇಟ್ ಮಾಡಿ ಅದನ್ನು ನಾವು ಮಾಡಿದ್ದೇವೆನ್ನುವ ಮಾತನ್ನು ಹೇಳಿದ್ದೀರಿ. ಅದೇನೇ ಇರಲಿ ಇದರ ಬಗ್ಗೆ ನೀವು ಏನೂ ಯೋಚನೆ ಮಾಡಬೇಕಲ್ಲ ನಿಮ್ಮ ಆಡಳಿತದಲ್ಲಿ ಈ ಲಂಚವನ್ನು ನಿಲ್ಲಿಸುವುದಕ್ಕೆ ಏನಾದರೂ ಒಂದು ನಿಶ್ಚಿತವಾದ ಕಾರ್ಯಕ್ರಮಗಳನ್ನು ಹಾಕಿದ್ದೀರಾ? ಈ ಬಗ್ಗೆ ಗೌರ್ನರ್ ಅಡ್ರೆಸ್‌ನಲ್ಲೂ ಇಲ್ಲ, ಬಡ್ಜೆಟ್ ಭಾಷಣದಲ್ಲೂ ಇಲ್ಲ. ಈ ಲಂಚಗುಳಿತನವನ್ನು ನಿರ್ಮೂಲ ಮಾಡುವುದರ ಬಗ್ಗೆ ನಿಮ್ಮ ಯಾವ ಭಾಷಣದಲ್ಲೂ ಇಲ್ಲದೇ ಇರುವುದರಿಂದ ನನಗೆ ಅನಿಸುತ್ತದೆ ಈ ಕರ್ನಾಟಕದಲ್ಲಿರುವ ಜನರಿಗೆ ಹೆಚ್ಚುಕಮ್ಮಿ ಎಷ್ಟು ಜನ ಶೇಕಡ ೬೩ ಜನ ಏನು ಇದ್ದಾರೆ ಅವರಿಗೆ ನಿಮ್ಮಲ್ಲಿ ನಂಬಿಕೆ ಹೋಗಿದೆ. ನಿಮ್ಮ ಬಗ್ಗೆ ಬೆರಳೆಣಿಸುವಷ್ಟು ನಂಬಿಕೆಯೂ ಈವೊತ್ತಿನ ದಿವಸ ಬರುವುದಕ್ಕೆ ಸಾಧ್ಯವೇ ಇಲ್ಲವಾಗಿದೆ ಎಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಹೀಗಾದರೆ ಯಾವ ರೀತಿಯಲ್ಲಿ ಈ ಇಲಾಖೆಗಳು ಕೆಲಸ ಮಾಡುತ್ತವೆ ಅನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಸಂಪೂರ್ಣವಾಗಿ ಈ ಇಲಾಖೆಗಳ ಮೇಲೆ ನಿಮ್ಮ ಕಂಟ್ರೋಲರ್ ಇಲ್ಲವಾಗಿದೆ ಅನ್ನುವುದನ್ನು ಗೊತ್ತಾಗುತ್ತದೆ. ನಿಮ್ಮ ಕಂಟ್ರೋಲ್‌ನಲ್ಲಿರುವ ಡಿ.ಪಿ.ಎ ಆರ್, ತೆಗೆದುಕೊಂಡರೆ ಅಲ್ಲಿ ಹೊಸ ಹೊಸ ರೆಕ್ರೂಟ್‌ಮೆಂಟ್ಸ್ ಇತ್ತೀಚಿನ ಡೆವಲಪ್‌ಮೆಂಟ್ಸ್‌ನ ಪ್ರಮೋಷನ್ ಇವೆಲ್ಲಾ ನೋಡಿದರೆ the point here is now to control those officers ಒಂದು ಶಿಸ್ತು ಇಲ್ಲ. ಇದರ ಬಗ್ಗೆ ನಮ್ಮ ಹೃದಯ ಪರಿವರ್ತನೆಯಾಗಬೇಕು. ನಿಮ್ಮ ಶ್ರೀಮಂತಿಕೆ ಬಿಟ್ಟು, ಸ್ಪಷ್ಟವಾದ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಯಾರಾದರೂ ನಿಮ್ಮ ಹತ್ತಿರ ಅರ್ಜಿಗಳನ್ನು ತಂದು ಕೊಟ್ಟಾಗ ಅವರು ನಿಮ್ಮ ಬಗ್ಗೆ ಚಿಂತನೆ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಕರ್ನಾಟಕದ ಜನತೆಗೆ ಸಮಾಧಾನವಾಗುವಂಥಾ ರೀತಿಯಲ್ಲಿ ಕೆಲಸ ನಡೆಯುವುದಿಲ್ಲ ಅನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ

ಇನ್ನು ವಾರಕ್ಕೆ ೫ ದಿವಸ ಕೆಲಸ ಮಾಡುವ ಹಾಗೆ ಏನು ಮಾಡಿದ್ದೀರಿ ಆ ಬಗ್ಗೆ ನಿಮ್ಮ ಪಕ್ಷದಲ್ಲೂ ವಿಚಾರ ಬಂದಿದೆ ಎಂದು ಕೇಳಿದೆ. ಹಿಂದೆ ೬ ದಿವಸಗಳ ಕಾಲ ಕೆಲಸ ಮಾಡುವುದು ಇತ್ತು.

ಮೊದಲು ಭಾನುವಾರ ರಜಾ ಇತ್ತು, ಈಗ ಶನಿವಾರವೂ ರಜಾ ಮಾಡಿದ್ದೀರಿ. ಕೆಲವು ಆಫೀಸರ್‌ಗಳಿಗೆ ರಜಾ ತೆಗೆದುಕೊಳ್ಳುವುದೇ ಒಂದು ಉದ್ಯೋಗವಾಗಿದೆ. ಕೇಂದ್ರ ಸರ್ಕಾರದ ಆಫೀಸುಗಳಲ್ಲೂ ವಾರಕ್ಕೆ ೫ ದಿವಸ ಕೆಲಸ ಮಾಡುತ್ತಿದೆ, ಇದನ್ನು ಏನಾದರೂ ಪುನರ್ವಿಮರ್ಶೆ ಮಾಡಿದ್ದಾರೋ ಇಲ್ಲವೋ ಗೊತ್ತಿಲ್ಲ. ಇಲ್ಲಿ ವಾರಕ್ಕೆ ೬ ದಿನಸಗಳ ಕಾಲ ಕೆಲಸ ಮಾಡುವುದಕ್ಕೆ all of you will agree with us ಮಾಡೋಣ, ಈಗ ತಾವು ಶನಿವಾರ, ಭಾನುವಾರ ರಜಾ ಏನು ಕೊಟ್ಟಿದ್ದೀರೋ ಇದರ ಜೊತೆಗೆ ಸಾಮಾನ್ಯವಾಗಿ ನಮ್ಮ ಸಮಾಜಕ್ಕೆ ಹಬ್ಬ ಹುಣ್ಣಿಮೆಗಳು ಬರುವುದು ಜಾಸ್ತಿ. ಮುಸ್ಲಿಂ ಬಾಂಧವರಿಗೆ, ಕ್ರಿಶ್ಚಿಯನ್ ಬಾಂಧವರಿಗೆ ಹಬ್ಬ ಕಡಿಮೆ ಇದೆ. ನಮಗೆ ಹಬ್ಬ ಜಾಸ್ತಿ ಇರುವುದರಿಂದ ಅದರಲ್ಲಿ ಅಷ್ಟು ರಜಾ ಸಿಕ್ಕುತ್ತದೆ. ಯಾವತ್ತಾದರೂ ಮಧ್ಯೆ ಒಂದು ದಿವಸ ಹಬ್ಬ ಬಂದು ರಜಾ ಇದ್ದರೆ ಅದನ್ನೂ ಸೇರಿಸಿಕೊಂಡು ರಜಾ ತೆಗೆದುಕೊಂಡು ಹೋಗುತ್ತಾರೆ. ಸಾಮಾನ್ಯವಾಗಿ ಮಹಾತ್ಮ ಗಾಂಧಿ ಜಯಂತಿ, ರಿಪಬ್ಲಿಕ್ ಡೇ ಇಂಥಾ ರಾಷ್ಟ್ರೀಯ ಹಬ್ಬಗಳು ಯಾವುದು ಇದೆ ಅದಕ್ಕೆ ರಜಾ ಕೊಡುವುದರಲ್ಲಿ ಒಂದು ಅರ್ಥ ಇದೆ. ಆ ರಜಾಗಳನ್ನು ಕೊಡಲೇಬೇಕು. ಆದರೆ ನಮ್ಮ ಸಮಾಜದಲ್ಲಿ ವರ್ಷದಲ್ಲಿ ೧೨ ತಿಂಗಳು ಕೂಡ ಹಬ್ಬ ಹುಣ್ಣಿಮೆಗಳು ಇವೆ. ಇದಕ್ಕೆಲ್ಲಾ ರಜಾ ಕೊಡುವುದಾದರೆ ಆಫೀಸಿನ ಕೆಲಸ ಯಾವ ರೀತಿ ನಡೆಯಬೇಕು ಎನ್ನುವುದರ ಬಗ್ಗೆ ಈ ಸಂದರ್ಭದಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ, ಆದುದರಿಂದ ಅವರು ಹೆಚ್ಚು ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಅವರ ಸಂಬಳ ಸಾರಿಗೆಗಳ ವಿಚಾರ ಬೇರೆ. ಅವರಿಗೆ ಡಿ.ಎ. ಕೊಡುವುದು, ಮತ್ತೊಂದು ಕೊಡುವುದು ಇವೆಲ್ಲಾ ಏನು ಕೊಡಬೇಕೋ ಅದನ್ನು ಕೊಡುವ ವಿಚಾರ ಬೇರೆ. ಪ್ರೈಸ್ ಇಂಡೆಕ್ಸ್ ನಂತರ ಕೊಡಬೇಕಾಗುತ್ತದೆ. ಇದರಲ್ಲಿ ಒಳ್ಳೆಯ ಆಫೀಸರ್‌ರೂ ಇದ್ದಾರೆ, ಕೆಟ್ಟ ಆಫೀಸರ್ರೂ ಇದ್ದಾರೆ. ಕೆಟ್ಟ ಆಫೀಸರ್ಸ್ ಇದ್ದರೂ ಕೂಡ ಅವರಿಗೆ ಸಂಬಳ ಕೊಡಬೇಡಿ ಅಂತ ಹೇಳುವುದಕ್ಕಾಗುವುದಿಲ್ಲ ಏತಕ್ಕೆಂದರೆ ಅವರು ಹೆಂಡತಿ ಮಕ್ಕಳು ಇರುತ್ತಾರಲ್ಲಾ ಅವರನ್ನಾದರೂ ನೋಡಬೇಕಲ್ಲಾ ? ಯಾರೇ ಆಗಲಿ ಕೆಟ್ಟ ಆಫೀಸರ್ಸ್ ಏನು ಇದ್ದಾರೆ ಯಾರ್ಯಾರು ಇದ್ದಾರೆ ಅವರನ್ನು ನೋಡಿ ಬಂದು ಹಿಡಿತದಲ್ಲಿಟ್ಟುಕೊಳ್ಳುವ ಕೆಲಸ ಮಾಡಬೇಕು. ಇದು ಅನಿವಾರ್ಯ ಇನ್ನೊಂದು ಕಡೆ ಒಳ್ಳೆಯ ಆಫೀಸರ್ಸ್‌ಗಳೂ ಇದ್ದಾರೆ. ಅವರ ಸಮಾಜದಲ್ಲಿ ಉಳಿಯುವುದಕ್ಕೆ ಕಷ್ಟ. ಅವರು ಹೆಚ್ಚು ಕೆಲಸ ಮಾಡಿದರೂ ಆ ಅಧಿಕಾರಿಗಳಿಗೆ ಅಷ್ಟು ಪ್ರೋತ್ಸಾಹ ಇಲ್ಲ. ಸಮಾಜದಲ್ಲಿ ಈ ರೀತಿಯಾಗಿ ಬೆಳೆಯುತ್ತಾ ಇದೆ. ಈ ಬೆಲೆಗಳ ಏರಿಕೆಯಿಂದ ಅವರು ಲಂಚ ತಿನ್ನುತ್ತಿದ್ದಾರೆ ಎಂದು ಹೇಳುತ್ತಾರೆ. ಆದರೆ ಒಳ್ಳೆಯ ಆಫೀಸರ್‌ಗಳಿಗೆ ತೊಂದರೆ ಕೊಡುವುದು ಬೇಡ. Let us be plain and let us be straight forward. ಯಾರ್ಯಾರು ರಜಾ ಬಂದಾಗ ಈ ರಜಾವನ್ನು ದುರುಪಯೋಗ ಪಡೆದುಕೊಳ್ಳುತ್ತಿದ್ದಾರೆ. ಯಾವ ರೀತಿ ಎಂದರೆ ವಾರದ ಮಧ್ಯದಲ್ಲಿ ಮಂಗಳವಾರ ಏನಾದರೂ ಹಬ್ಬ ಬಂದರೆ ನೀವು ಕೊಡತಕ್ಕಂಥಾ ಶನಿವಾರ ಮತ್ತು ಭಾನುವಾರದ ರಜ ಜೊತೆಗೆ ಸೋಮವಾರ ಒಂದು ದಿವಸ ಸಿ. ಎಲ್. ಹಾಕಿದರೆ ಮತ್ತೆ ಮಂಗಳವಾರ ಹಬ್ಬದ ರಜಾ ಇದನ್ನು ಉಪಯೋಗಿಸಿಕೊಂಡು ಬರುತ್ತಾರೆ. ಹೀಗೆ ಮಾಡುವುದರಿಂದ ಸರ್ಕಾರೀ ಕಛೇರಿಗಳಲ್ಲಿ ಯಾವ ಕೆಲಸವೂ ಆಗುವುದಿಲ್ಲ. ಹೀಗೆ ರಜಾ ತೆಗೆದುಕೊಂಡರೆ ಅವನೇನು ಕೆಲಸ ಮಾಡುವುದು ? ಈವೊತ್ತಿನ ದಿವಸ ಸರ್ಕಾರೀ ನೌಕರನಿಗೆ ಸಿ. ಎಲ್. ಇ. ಎಲ್. ಇದೆ ಜೊತೆಗೆ ಎಲ್. ಟಿ.ಸಿ. ಅಂತ ಬೇರೆ ಇದೆ. ಎಜುಕೇಷನ್ ಡಿಪಾರ್ಟ್‌ಮೆಂಟಿಗಂತೂ ಸಿಕ್ಕಾಪಟ್ಟೆ ರಜಾ ಇದೆ. ಅವರು ಎಲ್.ಟಿ.ಸಿ. ತೆಗೆದುಕೊಂಡು ಅದನ್ನು ದುರುಪಯೋಗ ಮಾಡಿಕೊಂಡಿರುವುದರ ಬಗ್ಗೆ ವಿಚಾರಣೆಗೆ ಹೋಗಿರುವುದೂ ಗೊತ್ತಿದೆ. ಹೀಗೆ ಹೇಳಿದ ಮಾತ್ರಕ್ಕೆ ಅವರು ರಜಾ ಉಪಯೋಗ ಮಾಡಿಕೊಳ್ಳುವುದು ಬೇಡ ಅಂತ ಹೇಳುವುದಿಲ್ಲ. ಹಿಂದೆ ಹೇಗೆ ಇತ್ತು ಎರಡನೇ ಶನಿವಾರ ರಜಾ ಅಂತ ಏನು ಇತ್ತು ಅದನ್ನೇ ಕಂಟಿನ್ಯೂ ಮಾಡಿ. ವಾರಕ್ಕೆ ೫ ದಿವಸ ಇರತಕ್ಕಂಥಾದ್ದನ್ನು ೬ ದಿವಸ ವರ್ಕಿಂಗ್ ಡೇ ಇರುವ ಹಾಗೆ ಮಾಡಬೇಕು. ಇದು ನಮ್ಮ ಪಕ್ಷದ ಸ್ಪಷ್ಟ ಅಭಿಪ್ರಾಯ ಇದು ಬದಲಾವಣೆಯಾಗಬೇಕು. ಏತಕ್ಕೆಂದರೆ ತಮಗೆ ಗೊತ್ತಿರುವ ಹಾಗೆ ಗುಲ್ಬರ್ಗದಿಂದ ಅಥವಾ ಬೀದರ್‌ನಿಂದ ೧೩೫ ರೂಪಾಯಿ ಛಾರ್ಜ್ ಕೊಟ್ಟುಕೊಂಡು ಬೆಂಗಳೂರಿಗೆ ಬಂದರೆ ಇಲ್ಲಿ ಸೆಕ್ರೆಟರಿ ರಜಾ, ಅವರು ರಜಾ ಇವರು ರಜಾ ಅಂದರೆ ಅವನು ಮತ್ತೆ ಇಲ್ಲಿಂದ ೧೫೫ ರೂಪಾಯಿ ಚಾರ್ಜ್ ಕೊಟ್ಟುಕೊಂಡು ವಾಪಸ್ಸು ಹೋಗಬೇಕಾಗುತ್ತದೆ. ಕೆಲಸ ಏನೂ ಆಗುವುದಿಲ್ಲ, ಆದುದರಿಂದ ವಾರಕ್ಕೆ ೬ ದಿವಸ ಕೆಲಸ ಎಂದು ಮಾಡುವುದು ಒಳ್ಳೆಯದು. ಸೆಂಟ್ರಲ್‌ನವರು ಮಾಡಿದ್ದಾರೆ ಅಂತ ನೀವೂ ಏತಕ್ಕೆ ಮಾಡಬೇಕು? Let us take our own decision in Karnataka. ಕೇಂದ್ರ ಸರ್ಕಾರ

ದವರು ಬೇಕಾದರೆ ಮಾಡಿಕೊಳ್ಳಿ. ನಾವು ೬ ದಿವಸ ವರ್ಕಿಂಗ್ ಡೇ ಇಟ್ಟುಕೊಳ್ಳೋಣ. ಶನಿವಾರ ದಿವಸವೂ ಕೆಲಸ ಮಾಡುವುದನ್ನು ಅವರ ಸೇವೆಯನ್ನು ಉಪಯೋಗಿಸಿಕೊಳ್ಳೋಣ. ಇದರ ಬಗ್ಗೆ ತಾವು ಗಮನಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಪಬ್ಲಿಕ್ ಗ್ರಿವೆನ್ಸಸ್ ಸೆಲ್ ಬಗ್ಗೆ ಒಂದು ವಿಚಾರವನ್ನು ಹೇಳುತ್ತೇನೆ. ಈ ಒಂದು ಸೆಲ್ ಹೊಸದಾಗಿ ಅಸ್ತಿತ್ವಕ್ಕೆ ಬಂದ ಒಂದು ಶಾಖೆಯಾಗಿದೆ. ಈ ಒಂದು ಶಾಖೆ ೧೯೮೩ರಲ್ಲಿ ಪ್ರಾರಂಭ ವಾಯಿತು. ಇದರಲ್ಲಿ Cases disposed of during 1983-84 15,869 ಅಂತ ಕೊಟ್ಟಿದ್ದಾರೆ. ಬಂದಂಥಾ ಅರ್ಜಿಯನ್ನು ಡಿಸ್‌ಪೋಸ್ ಮಾಡಿದ್ದೇವೆ ಅಂತ ಹೇಳಿದ್ದಾರಲ್ಲಾ ಇದರ ಅರ್ಥ ಏನು? ಹೀಗೆ ಹೇಳಿದ ಮಾತ್ರಕ್ಕೆ ನಾನು ಮಂತ್ರಿಗಳು ಈ ಕೆಲಸ ಮಾಡಬೇಕು ಅಂತ ಹೇಳುವುದಿಲ್ಲ. ನಾನು ಕೇಳುವುದು ತಾಲ್ಲೂಕು ಆಫೀಸಿಗೂ ಇದಕ್ಕೂ ಏನು ವ್ಯತ್ಯಾಸ ಇದೆ,? ನೀವೇ ಹೋಗಿ ನೋಡಬೇಕು ಅಂತ ನಾನು ಹೇಳುವುದಿಲ್ಲ. I know his limitations. ಇದರಿಂದ ಏನು ಗೊತ್ತಾಗುತ್ತದೆ ಎಂದರೆ ಬಂದಂಥ ಅರ್ಜಿಗಳನ್ನು ಸಂಬಂಧಪಟ್ಟವರಿಗೆ ರವಾನೆ ಮಾಡುವುದಕ್ಕೆ ಒಂದು ಸೆಲ್ ಇದ್ದ ಹಾಗಾಯಿತು. ಸಾರ್ವಜನಿಕರಿಂದ ಬಂದಂಥಾ ದೂರುಗಳ ಬಗ್ಗೆ ಬರೇ ಫರ್ವಾಡ್ ಮಾಡುವುದಕ್ಕೆ ಈ ಒಂದು ಇಲಾಖೆ ಮಾಡಬೇಕೇ? ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ. ನಿಮ್ಮ ಒಂದು ಅಂಕಿ ಅಂಶದ ಪ್ರಕಾರ ಹೇಳುತ್ತೇನೆ. Cases disposed of during 1983-84 15,869. ೧೯೮೪-೮೫ರಲ್ಲಿ 1740 cases ware settled. ಮತ್ತು ೧-೪-೧೯೮೫ರಿಂದ ೩೦-೧೧-೧೯೮೫ರವರೆಗೆ ಅಂದರೆ ೮ ತಿಂಗಳಲ್ಲಿ ೧೪೫೦ cases were settled. ಇದನ್ನು ವಿಲೇವಾರಿ ಮಾಡುವುದಕ್ಕೆ ಇದಕ್ಕೆ ಸಿಬ್ಬಂದಿ ವರ್ಗ ಎಷ್ಟು ಇದೆ ಅನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. Deputy Secretary, Under Secretary-2 section Officers-6, Senior Assistants-6, ssistants 12, Stenographers-3, Typists-6, Junior Assitants 4, Peons 7, Total 47 Officers. I think it is better to appoint a clerk for this job. ಬಂದಂಥಾ ಅರ್ಜಿಯನ್ನು ಕಳುಹಿಸಿಕೊಡುವುದಕ್ಕೆ ೪೭ ಜನ ಆಫೀಸರ್ಸ್‌ನ್ನು ಇಟ್ಟುಕೊಂಡಿದ್ದೀರಿ. ಇದಕ್ಕೆ ಬೇಕಾದಷ್ಟು ಹಣವನ್ನು ಖರ್ಚು ಮಾಡಿ ಈ ಅರ್ಜಿಗಳನ್ನು ವಿಲೇವಾರಿ ಮಾಡುವ ಪರಿಸ್ಥಿತಿಗೆ ಬಂದಿದ್ದೀರಿ. ಇದನ್ನೆಲ್ಲಾ ನೋಡಿ ಕಳುಹಿಸುವುದಕ್ಕೆ ಒಬ್ಬ ಕ್ಲರ್ಕ್‌ನನ್ನು ನೇಮಕ ಮಾಡಿಕೊಂಡರೆ ಸಾಕು. ಈ ಪೋಸ್ಟ್ ಆಫೀಸ್ ಕೆಲಸ ಮಾಡುವುದಕ್ಕೆ ಬಂದಂಥಾ ಅರ್ಜಿಗಳನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿಗೆ ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟಿಗೆ ಆಯಾಯ ಡಿಪಾರ್ಟ್‌ಮೆಂಟ್‌ಗಳಿಗೆ ಫರ್‌ವಾರ್ಡ್ ಮಾಡಲು ಇದು ಬಹು ಸುಲಭವಾದ ಕೆಲಸವಲ್ಲವೇ? ಇದಕ್ಕೆ ಡೆಪ್ಯೂಟಿ ಸೆಕ್ರೆಟರಿ ಏತಕ್ಕೆ ಬೇಕು.?

ಅವನೇ ನೋಟ್ ಹಾಕುತ್ತಾನೆ. ಒಬ್ಬ ಸೆಕ್ಷನ್ ಆಫೀಸರನ್ನು ಇಟ್ಟು, ಇಬ್ಬರು ಅಸಿಸ್ಟೆಂಟ್ಸ್‌ನ್ನು ಅವರಿಗೆ ಕೊಟ್ಟರೆ ಸಾಕು. ಮಾನ್ಯ ಮೊಯಿಲಿಯವರು ಪೋಸ್ಟ್ ಆಫೀಸಿನಿಂದ ಡೆಪ್ಯುಟೇಷನ್ ತೆಗೆದುಕೊಳ್ಳಬೇಕು ಎಂದು ಹೇಳುತ್ತಿದ್ದಾರೆ. ಹೀಗಾದರೆ ಏಕೆ ಈ ಕೆಲಸ ಮಾಡಬೇಕು ? What is the total expenditure for eight months to settle 1450 cases, I want to know. ೧೪೫೦ ಕೇಸಸ್ ಸೆಟ್ಲಾಗಿದೆ ಅಂದರೆ ಏನು ಸೆಟ್ಲಾಗಿದೆ ? ಯಾವ ರೀತಿ ಸೆಟ್ಲಾಗಿದೆ ? ಎಂದು ತಿಳಿಸಿ ದಿನಾಂಕ ೧-೪-೮೫ ರಿಂದ ೩೦-೧೧-೮೫ ರವರೆಗೆ ಇದಕ್ಕಾಗಿ ಎಷ್ಟು ಹಣ ಖರ್ಚಾಗಿದೆ ಎನ್ನುವ ವಿವರಗಳನ್ನು ಕೊಡಬೇಕು. ಇಲ್ಲಿ ನನ್ನ ಲೀಡರ್ ಆಫ್ ದಿ ಆಪೋಸಿಷನ್ ಪಾರ್ಟಿ ಆಫೀಸ್ ಇದೆ ನನಗೆ ಪ್ರೈವೇಟ್ ಸೆಕ್ರೆಟರಿ ಇಲ್ಲ. ಏಕೆಂದರೆ ನನಗೆ ಬೇಕಾದವರನ್ನು ಕೊಡಲಿಲ್ಲ, ಅದಕ್ಕೋಸ್ಕರ ತೆಗೆದುಕೊಳ್ಳುವುದಿಲ್ಲ. ಅದರಲ್ಲಿ ಅನುಮಾನ ಬೇಕಾಗಿಲ್ಲ. Office of the Leader of the Opposition with 5 P.As. ನಿಮ್ಮ ಹತ್ತಿರ ೪೭ ಜನ ಇದ್ದಾರೆ. ನನ್ನ ಆಫೀಸಿನಲ್ಲಿ ೫ ಪ್ಲಸ್ ೪ ಒಟ್ಟು ೯ ಜನ ಇದ್ದಾರೆ. ನಾನು ೧-೪-೮೫ ರಿಂದ ೩೦-೧೧-೮೫ ರವರೆಗೆ ಇದೇ ಪೀರಿಯಡ್ ಹಾಕಿಕೊಂಡಿದ್ದೇನೆ. ಇಲ್ಲಿ ೧೫೦೦ ಪಿಟಿಷನ್ಸ್‌ನ್ನು ವಿಲೇವಾರಿ ಮಾಡಿಸಿದ್ದೇನೆ. ನನ್ನ ಹತ್ತಿರ ರಿಜಿಸ್ಟರ್ ಮೇಂಟೇನ್ ಮಾಡಿಸಿದ್ದೇನೆ. ಪ್ರತಿ ಅರ್ಜಿಯನ್ನು ನಾನು ನೋಡುತ್ತೇನೆ, ಲೆಟರ್ ಬರೆಯುತ್ತೇನೆ, ಇಲಾಖಾ ಮುಖ್ಯಸ್ಥರಿಗೆ ಬರೆದಿದ್ದೇನೆ. ಇದೇ ಪೀರಿಯಡ್‌ನಲ್ಲಿ, ಇಷ್ಟೇ ಸ್ಟಾಫ್‌ನಲ್ಲಿ ೧೫೦೦ ಕೇಸುಗಳನ್ನು ಸೆಟ್ಲ್ ಮಾಡಿದ್ದೇನೆ. ಹಾಗಾದರೆ ಇವರಿಗೆ ಏಕೆ ಇಷ್ಟು ಜನ ಬೇಕು? ಲಕ್ಷಾಂತರ ರೂಪಾಯಿ ಏಕೆ ಖರ್ಚು ಮಾಡಿದ್ದೀರಿ ? ಎಂದು ಕೇಳುತ್ತಾ ಇದ್ದೇನೆ. ಆಮೇಲೆ, Economics of

Grievances Cell working under Chief Minister. ಅದು ಅವರ ಪಬ್ಲಿಕ್ ಗ್ರಿವೆನ್ಸಸ್ ಸೆಲ್ ಆಯಿತು. ಡೆಪ್ಯುಟಿ ಸೆಕ್ರೆಟರಿಗೆ ಸಂಬಳ ಎಷ್ಟಿದೆ ಅಂದರೆ ಆವರೇಜ್ ಪೇ ಪರ್ ಮಂತ್ ೩ ಸಾವಿರ ಟೋಟಲ್ ಅಮೌಂಟ್ ಫಾರ್ ೮ ಮಂತ್ಸ್ ೨೪ ಸಾವಿರ ಆಗುತ್ತದೆ. ಅಂಡರ್ ಸೆಕ್ರೆಟರಿಗಳು-೩, ಒಬ್ಬೊಬ್ಬರಿಗೆ ೨೫೦೦ ರೂಪಾಯಿ, ಒಟ್ಟು ೬೦ ಸಾವಿರ. ಸೆಕ್ಷನ್ ಆಫೀಸರ್ಸ್-೬, ಒಬ್ಬೊಬ್ಬರಿಗೆ ರೂ. ೨೨೦೦-೦೦ ಒಟ್ಟು ರೂ. ೧,೫೦,೬೦೦. ಸೀನಿಯರ್ ಅಸಿಸ್ಟೆಂಟ್ಸ್-೬, ರೂ. ೧೮೦೦-೦೦ ಒಬ್ಬೊಬ್ಬರಿಗೆ, ಒಟ್ಟು ರೂ. ೮೬,೪೦೦. ಅಸಿಸ್ಟೆಂಟ್ಸ್-೧೨, ಒಬ್ಬೊಬ್ಬರಿಗೆ ರೂ. ೧೪೦೦-೦೦ ಒಟ್ಟು ರೂ. ೧,೩೪,೪೦೦-೦೦. ಸ್ಟೆನೋಸ್-೪, ಒಬ್ಬೊಬ್ಬರಿಗೆ ರೂ. ೧೫೦೦-೦೦ ಒಟ್ಟು ರೂ. ೪೮,೦೦೦-೦೦. ಜೂನಿಯರ್ ಅಸಿಸ್ಟೆಂಟ್ಸ್-೭, ಒಬ್ಬೊಬ್ಬರಿಗೆ ರೂ. ೧೧೦೦-೦೦ ಒಟ್ಟು ರೂ. ೬೧,೬೦೦-೦೦. ಟೈಪಿಸ್ಟ್-೬, ಒಬ್ಬೊಬ್ಬರಿಗೆ ೧೨೦೦-೦೦, ಒಟ್ಟು ರೂ. ೫೭,೬೦೦-೦೦. ಪ್ಯೂನ್ಸ್-೪, ಒಬ್ಬೊಬ್ಬರಿಗೆ ರೂ. ೭೦೦-೦೦, ಒಟ್ಟು ರೂ. ೨೨,೪೦೦-೦೦ Total expenditure for eight months from 1-4-85 to 31-12-85 in respect of grievances cell which have settled 1450 petitions. For eight months, the expenditure incurred was Rs. 6 lakhs. ೧೪೫೦ ಅರ್ಜಿಗಳನ್ನು ಫರ್‌ವಾರ್ಡ್ ಮಾಡುವುದಕ್ಕೋಸ್ಕರ ೮ ತಿಂಗಳಿಗೆ ೬ ಲಕ್ಷ ರೂಪಾಯಿಗಳ ಸಂಬಳವನ್ನು ನೀವು ಕೊಟ್ಟಿದ್ದೀರಿ, ಆಮೇಲೆ ಪರ್ ಇಯರ್ ಎಷ್ಟಾಗುತ್ತದೆ ಅಂದರೆ ಸುಮಾರಾಗಿ ೯ ಲಕ್ಷ ಆಗುತ್ತದೆ. 9 lakhs don't forget this figure. ಅಲ್ಲಿ ಟೆಲಿಫೋನ್, ಸ್ಟೇಷನರಿ ಅವೆಲ್ಲಾ ಎಕ್‌ಸ್ಟ್ರಾ. ಅದು ಎಷ್ಟಾಗಿದೆ ಎಂದು ನಾವು ಕುಳಿತುಕೊಂಡು ಲೆಕ್ಕ ಮಾಡಿಕೊಳ್ಳಬೇಕು ಅಷ್ಟೆ, ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ, ಈಗ ನನ್ನದು ಹೇಳುವುದಾದರೆ The staff and other facilities of the Leader of the Opposition are equal to that of the Cabinet rank minister. ಇದು ಹೊಗಳಿಕೆ ಪ್ರಶ್ನೆಯಲ್ಲ. ನನ್ನ ಹತ್ತಿರ ಎಷ್ಟು ಜನ ಇದ್ದಾರೆ ಎಂದರೆ, ಸೀನಿಯರ್ ಅಸಿಸ್ಟೆಂಟ್ಸ್-೨, ಒಂದು ತಿಂಗಳಿಗೆ ರೂ. ೧೮೦೦-೦೦, ಸ್ಟೆನೋಗ್ರಾಫರ್ಸ್-೨, ಇಬ್ಬರದೂ ಸೇರಿ ತಿಂಗಳಿಗೆ ರೂ. ೩೦೦೦-೦೦, ಅಸಿಸ್ಟೆಂಟ್-೧, ರೂ. ೧೪೦೦-೦೦, ಜೂನಿಯರ್ ಅಸಿಸ್ಟೆಂಟ್ ರೂ. ೧೧೦೦-೦೦, ಪ್ಯೂನ್ಸ್-೨, ರೂ. ೧೪೦೦ ಒಟ್ಟು ತಿಂಗಳಿಗೆ ೮,೭೦೦-೦೦ ರೂಪಾಯಿ ಆಗಿದೆ. Total expenditure for eight months in respect of the staff of the Leader of the Opposition who has disposed of more than 1500petitions during the same period is Rs. 69,600 ೧೫೦೦ ಕ್ಕಿಂತ ಜಾಸ್ತಿ ಅರ್ಜಿಗಳನ್ನು ನಾನು ಫಾರ್‌ವಾರ್ಡ್ ಮಾಡಿದ್ದೇನೆ, ೮ ತಿಂಗಳಲ್ಲಿ, ೬೯,೬೦೦ ರೂಪಾಯಿ ಖರ್ಚಾಗಿದೆ, ಅದೇ ಪೀರಿಯಡ್ ಅದೇ ಡೇಟ್, ಅವರದ್ದು ಮಾತ್ರ ೬ ಲಕ್ಷ ರೂಪಾಯಿ ಖರ್ಚಾಗಿದೆ. ೬೯ ಸಾವಿರ ಎಲ್ಲಿ ? ೬ ಲಕ್ಷ ಎಲ್ಲಿ? ಪಬ್ಲಿಕ್ ಗ್ರಿವನ್ಸಸ್ ಸೆಲ್ ಮಾಡಿ ಇಷ್ಟೊಂದು ರಾಜ್ಯ ಸರ್ಕಾರದ ಹಣ ಜನತೆಯ ಹಣ ಹಾಳಾಗುವುದಕ್ಕೆ ಏಕೆ ಕಾರಣಕರ್ತರಾಗಿದ್ದೀರಿ ? ಎಂಬ ವಿಷಯವನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದಿದ್ದೇನೆ. ದಯವಿಟ್ಟು ಈ ಹಣವನ್ನು ಉಳಿಸಿ. ಈಗ ಬರಗಾಲದ ಸಂದರ್ಭ, ಹಣ ವನ್ನು ಉಳಿಸಬೇಕು, ಖರ್ಚನ್ನು ನಿಲ್ಲಿಸಬೇಕು. ಸೆಕ್ಷನ್ ಆಫೀಸರ್ಸ್, ಅಸಿಸ್ಟೆಂಟ್ಸ್ ಹಾಕಿ, ಅವರು ಕೆಲಸ ಮಾಡಿದರೆ, ಖರ್ಚನ್ನು ಉಳಿಸಬಹುದು ಎನ್ನತಕ್ಕ ಸಲಹೆ ವ್ಯಾಲ್ಯುಬಲ್ ಆಗಬಹುದು ಎಂದು ಹೇಳಿದ್ದೇನೆ. ಇಲ್ಲ ಇಲ್ಲ, ಗ್ರಿವನ್ಸಸ್ ಸೆಲ್ ರಾಮಬಾಣ ಸಿದ್ಧೌಷಧ ಎನ್ನತಕ್ಕ ಅಭಿಪ್ರಾಯ ಇಟ್ಟುಕೊಂಡರೆ ನನ್ನ ಅಭ್ಯಂತರವಿಲ್ಲ ಪ್ಲೀಸ್ ಗೊ ಅಹೆಡ್. ಈ ಸಂದರ್ಭದಲ್ಲಿ ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ.

ಇನ್ನು ಕನ್ನಡ ಆಡಳಿತ ಎಲ್ಲಾ ಹಂತದಲ್ಲೂ ಬರಬೇಕು ಎನ್ನತಕ್ಕ ವಿಚಾರ ಇದೆ. ಕನ್ನಡವನ್ನು ಎಲ್ಲಾ ಹಂತಗಳಲ್ಲಿ ಜಾರಿಗೆ ತರಬೇಕು ಎನ್ನತಕ್ಕ ವಿಚಾರದಲ್ಲಿ ನನಗೆ ಗೊತ್ತಿರುವ ಹಾಗೆ ೧೦ ಪರ್ಸೆಂಟ್ ಮಾತ್ರ ಬಂದಿದೆ. ಈಗ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಂಚಾಯಿತಿ ಬಿಲ್ ಇದೆ, ಅದು ಕನ್ನಡಕ್ಕೆ ತರ್ಜುಮೆಯಾಗಿದೆಯೋ ನನಗೆ ಗೊತ್ತಿರುವ ಹಾಗೆ ಅದು ಇಂಗ್ಲೀಷಿನಲ್ಲಿದೆ. ಏಕೆಂದರೆ ಸಾಮಾನ್ಯ ಜನ ಚುನಾವಣೆಯಲ್ಲಿ ಭಾಗವಹಿಸುತ್ತಾರೆ. ಆ ಬಿಲ್ ಕನ್ನಡದಲ್ಲಿದ್ದರೆ ಬಹಳ ಸಂತೋಷ. ಇಲ್ಲಿ ಅನೇಕ ವಿಚಾರಗಳಲ್ಲಿ ಇನ್ನೂ ಕನ್ನಡದಲ್ಲಿ ಮಾಡಲಿಕ್ಕೆ ಆಗಿಲ್ಲ, ಇನ್ನೂ ಆಂಗ್ಲ ಭಾಷೆಯಲ್ಲೇ ನಾವು ವ್ಯವಹಾರ ಮಾಡುತ್ತಾ ಇರುವುದನ್ನು ಸದನದಲ್ಲಿ ನೋಡುತ್ತಾ ಇದ್ದೇವೆ. ಆದುದರಿಂದ ತಕ್ಷಣ ನಮ್ಮ ಕಾನೂನು

ಗಳು ಪ್ರಕಟಣೆಗಳು ಏನೇನಿವೆ ಅವೆಲ್ಲವೂ ಕನ್ನಡದಲ್ಲೇ ಬರಬೇಕು. ಎಲ್ಲ ಜನರೂ ಅರ್ಥಮಾಡಿಕೊಳ್ಳಬೇಕು, ಸಾಮಾನ್ಯ ಜನರಿಗೆ ಅರ್ಥವಾಗಬೇಕು. ಸರ್ಕಾರಕ್ಕೆ ಸಹಾಯ ಕೊಡತಕ್ಕ ವಿಚಾರ ಇರಬಹುದು ಸರ್ಕಾರದಿಂದ ಸೌಲಭ್ಯ ಪಡೆಯತಕ್ಕ ವಿಚಾರ ಇರಬಹುದು ಬೇರೆ ಯಾವುದೇ ವಿಚಾರ ಇರಬಹುದು, ಅಡಿಯಿಂದ ಮುಡಿಯವರೆಗೆ, ಆಪಾದಮಸ್ತಕ ಕನ್ನಡ ವ್ಯವಹಾರವನ್ನು ತರತಕ್ಕ ವಿಚಾರವನ್ನು ಇಟ್ಟುಕೊಳ್ಳಬೇಕಾಗುತ್ತದೆ ಎಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದಿದ್ದೇನೆ.

ಇನ್ನು ತಮ್ಮ ಆಡಳಿತ ಕಾಲದಲ್ಲಿ ಅಧಿಕಾರ ಮತ್ತೊಂದನ್ನು ತಮ್ಮ ತಮ್ಮ ಜನರಿಗೆ ಕೊಡತಕ್ಕಂಥಾದ್ದು ಬೋರ್ಡ್ಸ್ ಕಾರ್ಪೊರೇಷನ್ಸ್ ಏನಿದೆ ಅಲ್ಲಿ ತಮ್ಮ ಜನರನ್ನು ತುಂಬಿಕೊಳ್ಳುತ್ತಾರೆ ಎನ್ನತಕ್ಕ ವಿಚಾರ ಇದೆ. ನಿಮ್ಮ ಸರ್ಕಾರ ಇದ್ದಾಗ ಮಾಡಿದ್ದೀರಿ ಎಂದು ಹೇಳಬಹುದು. ಇಟ್ ಈಸ್ ಆಲ್‌ರೈಟ್. ಲ್ಯಾಂಡ್ ಟ್ರಿಬ್ಯುನಲ್ಸ್‌ನಲ್ಲಿ ಶಾಸಕರು ನಾವು ಇರತಕ್ಕಂಥಾದ್ದು ಬಿಟ್ಟರೆ ಉಳಿದ ಕಡೆಗಳಲ್ಲಿ ನಿಮ್ಮವರನ್ನೇ ತುಂಬಿಕೊಂಡಿದ್ದೀರಿ. ಇಲ್ಲಿ ಒಂದು ಕೇಸ್ ಇದೆ. ಸಿರಸಿ ತಾಲ್ಲೂಕಿನ ಬನವಾಸಿ ಕೇಸ್ ಇದೆ. A retired Income Tax Officer who is living in Bombay ಅವರ ಪರ ಒಂದು ಆರ್ಡರ್ ಕೊಟ್ಟಿದ್ದಾರೆ. ಅದರ ನಂಬರ್ ಈ ರೀತಿ ಇದೆ ಎಸ್.ಆರ್.ಎಲ್.ಆರ್.ಎಂ.೭೩-೪೩

೨-೩೦ ಪಿ.ಎಂ.

ಭೂನ್ಯಾಯ ಮಂಡಲಿಯಿಂದ ಇದನ್ನು ಕೊಟ್ಟಿರುವುದು ರಿಟೈರ್ಡ್ ಇನ್‌ಕಮ್ ಟ್ಯಾಕ್ಸ್ ಆಫೀಸರ್ ಲಿವಿಂಗ್ ಇನ್ ಬಾಂಬೆ. ಆ ವ್ಯಕ್ತಿ ಸ್ವತಃ ಬನವಾಸಿಯಲ್ಲಿ ಇದ್ದ ಇವರೇ ಸಾಗುವಳಿ ಮಾಡುತ್ತಿದ್ದರು ಎಂದು ಲ್ಯಾಂಡ್ ಟ್ರಿಬ್ಯುನಲ್‌ನವರು ಆರ್ಡರ್ ಕೊಟ್ಟಿದ್ದಾರೆ. ನನ್ನ ಹಳ್ಳಿಗೆ ಸುಮಾರು ೭-೮ ಮೈಲಿಯಾಗುತ್ತದೆ, ಬಾಂಬೆಯಲ್ಲಿ ಇರತಕ್ಕಂತಹ ಮನುಷ್ಯ ಇಲ್ಲೇ ಇದ್ದಾರೆಂದು ಹೇಳಿದ್ದಾರೆ. ಒಬ್ಬ ಬಡವನು ಹೈಕೋರ್ಟಿಗೆ ಹೋಗಿ ಸುಸ್ತಾಗಿದ್ದಾನೆ. ಲೀಗಲ್ ಏಡ್ ಬೋರ್ಡ್‌ಗೆ ಹೋದರೂ ಕೂಡ ಯಾರೂ ಇದರ ಬಗ್ಗೆ ಗಮನವನ್ನು ಕೊಟ್ಟಿಲ್ಲ, ಇವತ್ತು ಅವನು ನನ್ನ ಹತ್ತಿರ ಕೊಟ್ಟನು, ಬೇಕಾದರೆ ಕಳಿಸಿಕೊಡುತ್ತೇನೆ ನೋಡಿ. ಭೂನ್ಯಾಯ ಮಂಡಲಿಯ ಸದಸ್ಯರು ಲಂಚ ತಿಂದು ಈ ಆರ್ಡರ್ ಅನ್ನು ಬರೆದಿದ್ದಾರೆಂದು ಹೇಳಿದ್ದಾನೆ. ೩೦೦-೪೦೦ ಎಕರೆ ಭೂಮಿ ಸ್ವಾಧೀನದಲ್ಲಿದೆ ಹೀಗಾದರೆ ಕಾನೂನು ಏಕೆ ಇರಬೇಕು ? ಭೂ ಸುಧಾರಣಾ ಕಾನೂನು ಏಕೆ ಇರಬೇಕು ? ಭೂನ್ಯಾಯ ಮಂಡಲಿಯಲ್ಲಿ ಅನ್ಯಾಯವಾಗುವುದಕ್ಕೆ ಯಾರು ಕಾರಣರು ? ಇದಕ್ಕೆ ಕಾರಣ ನಿಮ್ಮ ನೀತಿ ಹಾಗೂ ಎಲ್ಲಾ ಕಡೆ ನಿಮ್ಮವರನ್ನೇ ತುಂಬಿಕೊಂಡಿರುವುದು ಅಲ್ಲವೇ ? ಕೆಲವರು ಲಂಚ ತೆಗೆದುಕೊಂಡು ಮಾಡಿದ್ದಾರೆ. ಲಂಚ ತಿಂದರೆ ಅಂತಹವರನ್ನು ತೆಗೆದು ಹಾಕಿ. ಈ ರೀತಿ ಮಾಡುವುದರಿಂದ ಕಾನೂನಿನ ಗತಿ ಏನು ? ಸೌಲಭ್ಯದ ಗತಿ ಏನು ? ಹಕ್ಕಿನ ಗತಿ ಏನು ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕಾಗುತ್ತದೆ ಇನ್ನು ಬೋರ್ಡ್‌ಗಳಿಗೆ, ಕಾರ್ಪೊರೇಷನ್‌ಗಳಿಗೆ ನಿಮ್ಮವರನ್ನೇ ತುಂಬಿಕೊಂಡಿದ್ದೀರಿ. ಮೊದಲು ಇವುಗಳಿಗೆಲ್ಲಾ ಬರೀ ಅಧಿಕಾರಿಗಳನ್ನೇ ಇಡುತ್ತೇವೆಂದು ಹೇಳಿದ್ದಿರಿ. ಆ ಒಂದು ಅಭಿಪ್ರಾಯ ಆ ಸಂದರ್ಭದಲ್ಲಿ ಬಂತು. ಮತ್ತೆ ಅದು ಬದಲಾವಣೆಯಾಯಿತು. ಪಿ.ಎಸ್.ಸಿ.ಗೆ ಒಬ್ಬ ಮಾನ್ಯ ಸದಸ್ಯರನ್ನು ಅಧ್ಯಕ್ಷರನ್ನಾಗಿ ಮಾಡತಕ್ಕಂತಹ ತೀರ್ಮಾನ ಮಾಡಿದ್ದೀರಿ. ಕರ್ನಾಟಕ ಜನತೆ ಇದನ್ನೆಲ್ಲಾ ಒಪ್ಪುವ ಹಾಗಿದ್ದರೆ ಒಪ್ಪಿಕೊಳ್ಳಲಿ ನನ್ನದೇನೂ ಅಭ್ಯಂತರವಿಲ್ಲ. ಆದರೆ ಇಷ್ಟು ಮಾತ್ರ ಹೇಳಬಲ್ಲೆ, ಅಧಿಕಾರದಲ್ಲಿದ್ದಾಗ ಯಾರು ತಪ್ಪು ಮಾಡಿರುತ್ತಾರೋ ಅವರು ಪೆಟ್ಟು ತಿನ್ನಲು ಸಿದ್ಧವಾಗಿರಬೇಕಾಗುತ್ತದೆ. ಇದು ನಿಮ್ಮ ಕ್ಯಾಬಿನೆಟ್‌ಗೆ ಸಂಬಂಧಪಟ್ಟಿರ ತಕ್ಕಂತಹ ವಿಚಾರ ಕೂಡ ಹೌದು. ಶ್ರೀಮತಿ ಸರೋಜಿನಿ ಮಹಿಷಿಯವರ ಕಮಿಟಿಯ ಬಗ್ಗೆ ಡಿಸಿಷನ್ ಹೇಳಿಲ್ಲ. ಒಂದು ದೃಷ್ಟಿಯಿಂದ ಕಮಿಟಿಯನ್ನು ಮಾಡುವುದು ಒಳ್ಳೆಯದು. ಆದರೆ ಅದಕ್ಕೆ ಬೇಕಾದಷ್ಟು ಹಣ ಖರ್ಚು ಮಾಡಿ, ಆಫೀಸ್ ಕೊಟ್ಟು, ಕಾರ್ ಕೊಡತಕ್ಕಂತಹ ಅವಶ್ಯಕತೆ ಇದೆಯೆಂದು ನಾನು ಭಾವಿಸುವುದಿಲ್ಲ. ವರದಿಯನ್ನು ತೆಗೆದುಕೊಂಡ ಮೇಲೆ ಅದನ್ನು ಇಂಪ್ಲಿಮೆಂಟ್ ಮಾಡಬೇಕು. Through a notification, a committee has been appointend headed by so and so ಮತ್ತೆ ಕಮಿಟಿಯನ್ನು ಮಾಡಬಹುದು. ಆದರೆ ಇದಕ್ಕೆ ಖರ್ಚು ಮಾಡುವ ಹಣ. ಅಂದರೆ ಅದು ಏರ್ ಟಿಕೆಟ್‌ಗೆ, ಇರಬಹುದು ಇಲ್ಲವೇ ಆಫೀಸ್‌ಗೆ ಇರಬಹುದು ಅಥವಾ ಕಾರ್‌ಗೇ ಇರಬಹುದು, ಇವೆಲ್ಲವೂ ಜನರ ಹಣವಲ್ಲವೇ ? ಇನ್ನು ಮಾನ್ಯ ಮುಖ್ಯಮಂತ್ರಿಗಳ ಸಿಟಿ ಕ್ಲೀನಿಂಗ್ ಪ್ರೋಗ್ರಾಮ್ ಶನಿವಾರ ಎಂದು ಇತ್ತು. ಆ ದಿವಸ ಬೆಂಗಳೂರನ್ನು ಕ್ಲೀನ್ ಮಾಡುವುದಕ್ಕೆ ಹೋಗುತ್ತಾರೆಂದು ಇತ್ತು. ಸುಮಾರು ಎರಡು ಸಾರಿ ಹೋಗಿದ್ದರೆಂದು

ಕಾಣುತ್ತದೆ. ಅದೇನು ಕ್ಲೀನ್ ಮಾಡಿದರೋ ಗೊತ್ತಿಲ್ಲ. ಮಂತ್ರಿ ನಿಮ್ಮ ಪಾಲಿಗೆ ಶನಿವಾರ ಬರಲಿಲ್ಲ. ಕೆಲವು ಡಿಸಿಷನ್‌ಗಳನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಂಡಿದ್ದೀರಿ. ಯಾರ್ಯಾರು ಎನ್‌ಕ್ರೋಚ್ ಮಾಡಿದ್ದಾರೆ ಅವರನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದೀರಿ ಬಡವರು ಎನ್‌ಕ್ರೋಚ್ ಮಾಡಿದ್ದರೆ ಯು ಕನ್‌ಫರ್ಮ್ ದಿಸ್ ಲ್ಯಾಂಡ್ ಇನ್ ದೇರ್ ಫೇವರ್ ಅದು ಫಾರೆಸ್ಟ್ ಇಲಾಖೆಯದು ಇರಬಹುದು ಇಲ್ಲವೇ ರೆವಿನ್ಯೂ ಇಲಾಖೆಯದು ಇರಬಹುದು ಆದರೆ those who are well off and those who have got sufficient landಾ has owners. ಇದನ್ನು ತೆಗೆದುಕೊಂಡು ಹೋಗಿ ಅವರಿಗೆ ಖಾಯಂ ಮಾಡತಕ್ಕಂಥಾದ್ದು ಸರ್ವಥಾ ಮಾನ್ಯ ಮಾಡತಕ್ಕಂತಹ ವಿಚಾರ ಅಲ್ಲ. ಇದರ ಬಗ್ಗೆ ಒಂದು ಕಮಿಟಿ ಮಾಡಿದ್ದೇವೆಂದು ಮಾನ್ಯ ಜೀವಿಜಯರವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಬೊಮ್ಮಾಯಿಯವರು ಕೂಡ ಮುಂದೆ ರೆವಿನ್ಯೂ ಇಲಾಖೆಯಲ್ಲಿ ಮಾಡುತ್ತೇವೆಂದು ಹೇಳಿದ್ದಾರೆ. ಇದೇನು ಸಣ್ಣ ವಿಚಾರವಲ್ಲ. ಇದು ರಾಜ್ಯ ಸರ್ಕಾರದ ಸ್ವತ್ತು. ಯಾರ ಸ್ವತ್ತೂ ಅಲ್ಲ. ಇದು ರಾಜ್ಯ ಸರ್ಕಾರದ ಸ್ವತ್ತಾಗಿ ಉಳಿಯಬೇಕು. ಇತ್ತೀಚೆಗೆ ಮರಗೆಣಸಿಗೆ ಸಂಬಂಧಪಟ್ಟ ಹಾಗೆ ಫೆನ್ನಿಯನ್ನು ತಯಾರು ಮಾಡುವುದಕ್ಕೆ ಲೈಸನ್ಸ್ ಕೊಟ್ಟಿದ್ದೀರೆಂದು ಕೇಳಿದ್ದೇನೆ. ತುಕಾರಾಂ, ಬೀದರ್, ಹಾಗೂ ಶಿವಮೊಗ್ಗದಲ್ಲಿ ಇನ್ನೂ ಬೇರೆ ಬೇರೆ ಕಡೆಗಳಲ್ಲಿ ಕೊಟ್ಟಿದ್ದೀರಿ. ಕರ್ನಾಟಕ ರಾಜ್ಯದಲ್ಲಿ ಮರಗೆಣಸನ್ನು ಬೆಳೆಯುವುದನ್ನು ನಾನು ಎಲ್ಲೂ ನೋಡಿಲ್ಲ. ಕೂರ್ಗ್ ಡಿಸ್ಟ್ರಿಕ್ಟ್‌ನಲ್ಲಿ ಬೆಳೆಯುತ್ತಾರೇನೋ ಗೊತ್ತಿಲ್ಲ. ಸೌತ್ ಕೆನರಾದಲ್ಲಿ ಅಲ್ಲಿ ಇಲ್ಲಿ ಸ್ವಲ್ಪ ಬೆಳೆಯುತ್ತಾರೆ. ಮಂಗಳೂರಿನಲ್ಲಿ, ಕೇರಳದ ಬಾರ್ಡರ್‌ನಲ್ಲಿ ಬೆಳೆಯತಕ್ಕಂಥದ್ದನ್ನು ನೋಡಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.— ಮಂಗಳೂರು ಕಡೆಗಳಲ್ಲಿ ಬೆಳೆಯುತ್ತಾರೆ.

ಶ್ರೀ ಎಸ್. ಬಂಗಾರಪ್ಪ.— ಕೇರಳ ರಾಜ್ಯದಲ್ಲಿ ಮರಗೆಣಸು ಯಥೇಚ್ಛವಾಗಿ ಬೆಳೆಯುತ್ತಿದೆ ಅಲ್ಲಿ ಈ ಲೈಸನ್ಸ್ ಕೊಡದಿರುವ ತೀರ್ಮಾನಕ್ಕೆ ಬಂದಿದ್ದಾರೆ, ಮರಗೆಣಸನ್ನು ಉತ್ಪಾದನೆ ಮಾಡುವುದಕ್ಕೋಸ್ಕರ ಲೈಸನ್ಸ್ ಅನ್ನು ಕೊಟ್ಟಿದ್ದೀರಿ. ಯಾರ್ಯಾರಿಗೆ ಕೊಟ್ಟಿದ್ದೀರಿ, ಎಷ್ಟೆಷ್ಟು ಕೊಟ್ಟಿದ್ದೀರಿ ? ಬೀದರ್ ಜಿಲ್ಲೆಗೆ ಮರಗೆಣಸಿನಿಂದ ಫೆನ್ನಿ ತಯಾರು ಮಾಡತಕ್ಕಂತಹ ಡಿಸ್ಟಿಲರಿ ಕಾರ್ಖಾನೆಗೆ ಲೈಸೆನ್ಸ್ ಕೊಟ್ಟಿದ್ದೀರಿ. ಮರಗೆಣಸು ಬೆಳೆಯತಕ್ಕಂತಹ ಏರಿಯಾ ಇದ್ದು ಅದು ಬೇರೆ ವಿಚಾರ. ಬೀದರ್‌ನಲ್ಲಿ ಮರಗೆಣಸಿನ ಡಿಸ್ಟಿಲರಿಗೆ ಅವಕಾಶ ಕೊಡಬಾರದು. ಇದಕ್ಕೆ ಅವಕಾಶ ಕೊಡುತ್ತಿಲ್ಲವೆನ್ನುವುದನ್ನು ಕೇಳಿದ್ದೇನೆ. ಅದನ್ನು ಕೊಡಬಾರದು ಏಕೆಂದರೆ ಮರಗೆಣಸಿನ ಬೆಲೆಯೂ ಏರುತ್ತದೆ. ಇದರ ಆಧಾರದ ಮೇಲೆ ಕೊಟ್ಟರೆ, ಅದೂ ಕೂಡ ಸಿಗುವುದಿಲ್ಲ ಇದರ ಅರ್ಥ ಏನೆಂದರೆ, ಫೆನ್ನಿ ತಯಾರು ಮಾಡುವುದಕ್ಕೆ ಪ್ರತ್ಯೇಕವಾಗಿ ಅವಕಾಶ ಕೊಟ್ಟರೆ ನಾಳೆ ಎಕ್ಸೈಸ್ ಕಮಿಷನರ್ ಬರುತ್ತಾರೆ, ಎಲ್ಲೂ ಮರಗೆಣಸು ಸಿಗುತ್ತಿಲ್ಲ ಬಹಳ ಅನ್ಯಾಯವಾಗಿದೆ, ಈ ಟಪಿಯೋಕಾ ಇಂಡಸ್ಟ್ರಿಯನ್ನು ಬದಲಾವಣೆ ಮಾಡಿ ಎಂದು ಹೇಳುತ್ತಾರೆ, ಇದನ್ನು ಕೇಳತಕ್ಕಂತಹ ಸಂದರ್ಭ ಬರುತ್ತದೆ, ನಿಮ್ಮ ಕಾಲದಲ್ಲಿ ಮಾಡುವುದಿಲ್ಲವೆಂದು ಹೇಳಬಹುದು, ಆದರೆ ನಾಳೆ ಯಾರೇ ಅಧಿಕಾರಕ್ಕೆ ಬರಲಿ ಮರಗೆಣಸು ಸಿಗುವುದಿಲ್ಲವೆಂದು ಹೇಳಿದಾಗ ಅದನ್ನು ಬದಲಾವಣೆ ಮಾಡುವ ಹಕ್ಕು ಸರ್ಕಾರಕ್ಕೆ ಇರುವುದರಿಂದ ಅದನ್ನು ಮಾಡಲೇ ಬೇಕಾಗುತ್ತದೆ. ಇಂತಹ ಉದಾಹರಣೆಗಳು ನನ್ನ ಹತ್ತಿರ ಇದೆ, ಇದು ನಮ್ಮ ರಾಜ್ಯದಲ್ಲಿ ಇರಬಹುದು ಇಲ್ಲವೇ ಹೊರ ರಾಜ್ಯದಲ್ಲಿ ಇರಬಹುದು. ಮರಗೆಣಸಿನ ಆಧಾರದ ಮೇಲೆ ಡಿಸ್ಟಿಲರಿಯನ್ನು ಕೊಡುವುದಕ್ಕೆ ಹೋದರೆ ಕಷ್ಟವಾಗುತ್ತದೆ. ನಮ್ಮ ಕರ್ನಾಟಕದಲ್ಲಿ ಮರಗೆಣಸಿಗೂ ಈ ಇಂಡಸ್ಟ್ರಿಗೂ ಏನು ಸಂಬಂಧವಿದೆ ? ಮಾನ್ಯ ಜೆ. ಹೆಚ್. ಪಟೇಲರು ಮೊನ್ನೆ ಉತ್ತರ ಕೊಡುತ್ತಿದ್ದರು. ಆ ಸಂದರ್ಭದಲ್ಲಿ ನಾನು ಇರಲಿಲ್ಲ. ಇಂಡಸ್ಟ್ರೀ ವಿಚಾರ ಬಂದಾಗ ಆಲ್ಕೋಹಾಲ್ ಬೇಸ್ಡ್ ಇಂಡಸ್ಟ್ರೀಸ್ ಬಗ್ಗೆ ಮಾತನಾಡುತ್ತಾ, ನನ್ನ ಮಗನಿಗೆ ಲೈಸನ್ಸ್ ಕೊಟ್ಟರೆ ಏನು ತಪ್ಪು ಎಂದರಂತೆ. ಈ ಕಡೆ ಕೂತು ಆಡಿದ್ದರೆ ಅದು ಬೇರೆಯಾಗುತ್ತಿತ್ತು. ಆದರೆ ಅಧಿಕಾರಕ್ಕೆ ಹೋದ ಮೇಲೆ ಕರೆಕ್ಟಾಗಿದೆಯೆಂದು ಹೇಳಬೇಕಾಗುತ್ತದೆ. ಯಾರ್ಯಾರು ಅವರ ಸಂಬಂಧಿಕರು ಇದ್ದಾರೆ ಹಾಗೂ ಅವರ ಮಕ್ಕಳಿಗೆ, ಹಾಗೂ ಚನ್ನಗಿರಿ ತಾಲ್ಲೂಕಿನಲ್ಲಿ ಆಲ್ಕೋಹಾಲ್ ಬೇಸ್ಡ್ ಇಂಡಸ್ಟ್ರೀಸ್‌ಗೆ ಲೈಸನ್ಸ್ ಕೊಟ್ಟಿದ್ದಾರೆ. ದಾವಣಗೆರೆಯಲ್ಲಿ ಒಬ್ಬ ವ್ಯಕ್ತಿಯ ಮೇಲೆ ಟ್ಯಾಕ್ಸೇಷನ್ ಡಿಪಾರ್ಟ್‌ಮೆಂಟಿನಲ್ಲಿ ೬೧,೦೦೦ ಹಣವನ್ನು ವಸೂಲು ಮಾಡತಕ್ಕಂತಹ ಕಾರ್ಯಕ್ರಮ ಹಾಕಿರತಕ್ಕಂತಹ ವ್ಯಕ್ತಿಯ ಹೆಸರಿನಲ್ಲಿ ಲೈಸನ್ಸ್ ಕೊಡತಕ್ಕಂತಹ ಮಟ್ಟಕ್ಕೆ ಹೋದರೆ ಇದು ಅಧಿಕಾರ ದುರುಪಯೋಗವಾಗುತ್ತದೆ. ವಿವರಗಳು ಬೇಕಾದಷ್ಟು ಇವೆ, ಅವನ್ನು ಕೊಡಬೇಕೆಂದರೆ ಕೊಡುತ್ತೇನೆ

ಈ ರೀತಿಯಾಗಿ ಮಂತ್ರಿಮಂಡಲದಲ್ಲಿರತಕ್ಕಂತಹ ಸಚಿವರ ಮಕ್ಕಳಿಗೆ, ಸಂಬಂಧೀಕರಿಗೆ, ಸ್ನೇಹಿತರಿಗೆ ಲೈಸನ್ಸ್ ಕೊಡುತ್ತಾ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಹೋದರೆ, ಇದಕ್ಕೆ ಕೊನೆ ಎಲ್ಲಿ ಇದೆ ?

ಶ್ರೀ ಎಂ. ರಘುಪತಿ.—ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಮಾನ್ಯ ಬಂಗಾರಪ್ಪ ನವರು ಮಂತ್ರಿಗಳ ಮೇಲೆ ಆಪಾದನೆ ಮಾಡುತ್ತಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅವರೇ ಒಪ್ಪಿಕೊಡಿದ್ದಾರೆ.

ಶ್ರೀ ಎಂ. ರಘುಪತಿ.—ಅವರು ಒಪ್ಪಿಕೊಂಡಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಇರಲಿಲ್ಲ, ಅವರು ಒಪ್ಪಿಕೊಂಡಿದ್ದಾರೆ. ಅವರು ಏನು ವಾದ ಇಟ್ಟಿದ್ದಾರೆಂದರೆ, ಮಕ್ಕಳ ಹೆಸರಿನಲ್ಲಿ ಏತಕ್ಕೆ ಕೊಡಬಾರದು ? ಎಂದು ಹೇಳಿದ್ದಾರೆ. ಮಂತ್ರಿಯಾಗಿ ಲೈಸೆನ್ಸ್ ಕೊಡಬಾರದೇ ಎಂದು ಹೇಳಿದ್ದಾರೆ. ಆ ರೀತಿ ಅರ್ಜಿಗಳನ್ನು ಕರೆದು, ಬೇರೆಯವರಿಗಿಂತ ಒಳ್ಳೆಯವರು ಎಂದು ಕಂಡು ಬಂದರೆ ಕೊಡಲಿ, ಆದರೆ, ಎಕ್ಸೈಜ್ ರೂಲ್ಸ್‌ಗಳನ್ನು ಗಾಳಿಗೆ ತೂರಿ, ಕಾನೂನನ್ನು ತೂರಿ ತಮ್ಮ ಮಕ್ಕಳಿಗೆ, ಸಂಬಂಧಿಕರಿಗೆ ಕೊಟ್ಟಿರತಕ್ಕಂಥಾದ್ದು ಮಂತ್ರಿ ಮಂಡಲದಲ್ಲಿ ಯಾರೇ ಸದಸ್ಯರಿರಬಹುದು, ಒಬ್ಬರು ಮಾತ್ರವಲ್ಲ, ಬಾಕಿಯವರಿಗೂ ಕೂಡ ಕೊಟ್ಟಿದ್ದಾರೆಂದು ನನ್ನ ಗಮನಕ್ಕೆ ಬಂದಿದೆ. ಆಲ್ಕೋ ಹಾಲ್ ಬೇಸ್ಡ್ ಲೈಸೆನ್ ಕೊಟ್ಟಿರುವುದರ ಬಗ್ಗೆ ಇರತಕ್ಕ ದಾಖಲೆ ಪತ್ರಗಳನ್ನು ಸದನದ ಮುಂದೆ ಇಡಬೇಕೆಂದು ಕೇಳಿಕೊಳ್ಳುತ್ತೇನೆ. ಇದರಿಂದ ಅಧಿಕಾರ ದುರುಪಯೋಗವಾಗಿದೆ, ಎಕ್ಸೈಜ್ ರೂಲ್ಸ್‌ಗೆ ವಿರುದ್ಧವಾಗಿ, ಕಾನೂನಿಗೆ ವಿರುದ್ಧವಾಗಿ ಸ್ಪಷ್ಟವಾಗಿ ನಡೆದಿದ್ದಾರೆಂದು ನನ್ನ ಆಪಾದನೆ ಸರಿಯಾಗಿ ಕಾನೂನು ಪ್ರಕಾರ ಕೊಟ್ಟಿದ್ದರೆ ಒಪ್ಪಿಕೊಳ್ಳುತ್ತೇನೆ. ಇಷ್ಟು ವಿಚಾರಗಳನ್ನು ತಮ್ಮ ಗಮನಕ್ಕೆ ತಂದು ಉಳಿದಿರತಕ್ಕಂಥ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇನ್ನು ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. ರಾಜಕಾರಣವನ್ನು ನಾವುಗಳೆಲ್ಲಾ ಸೇರಿ ಮಾಡುತ್ತೇವೆ. ಪಕ್ಷ ಪಂಗಡ ಎನ್ನದೇ ನಮ್ಮ ನಮ್ಮ ವಿಚಾರ ಧಾರೆಗಳನ್ನು ಇಡುತ್ತೇವೆ. ಇಲ್ಲಿರತಕ್ಕ ಪ್ರಶ್ನೆ, ನಾವು ಯಾವುದೇ ಮಾತನ್ನು ಆಡಬೇಕಾದರೆ ಜವಾಬ್ದಾರಿಯಿಂದ ಆಡಬೇಕು. ಸಾರ್ವಜನಿಕ ಜೀವನದಲ್ಲಿರತಕ್ಕವರ ಮೇಲೆ ಅನ್ಯಾಯವಾಗಿ ಆಪಾದನೆ ಬರಬಾರದು. ಸುಮಾರಾಗಿ ನಾನು ನೋಡಿದ ಹಾಗೆ ಈ ಸದನದಲ್ಲಿ ಸದಸ್ಯರಾಗಿರತಕ್ಕಂಥವರು ಭಯ ಭೀತಿಯಿಲ್ಲದೆ, ನಿರ್ಭೀತಿಯಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲದೇ ಇರುವುದನ್ನು ನಾವು ನೋಡಿದ್ದೇನೆ. ನಾನು ಹಿಂದೆ ಕಾಂಗ್ರೆಸ್‌ನ ಅಧ್ಯಕ್ಷನಾಗಿದ್ದಾಗಲೂ ನೋಡಿದ್ದೇನೆ. ಪೋಲೀಸಿನವರ ಕಾರ್ಯಾಚರಣೆ ಯಾವ ಮಟ್ಟಕ್ಕೆ ಹೋಗಿದೆ ಅಂದರೆ, ಮಾಜಿ ಮಂತ್ರಿಗಳೊಬ್ಬರ ಮನೆಗೆ ಎಸ್. ಎಸ್. ಬಿ. ಯವರು ಫೋನ್ ಮಾಡಿದ್ದಾರೆ. ಆ ಮಂತ್ರಿಯವರ ಮಾರುತಿ ಕಾರು ನಮ್ಮ ಮನೆಯಲ್ಲಿದೆ. ನಾವು ಅದನ್ನು ಬಳಸುತ್ತಿದ್ದೇವೆ. ಅವರಿಗೆ ಬೇಕಾದಾಗ ಅದನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಇದರ ಬಗ್ಗೆ ಮಾತನಾಡಬೇಕೆಂದು ಫೋನ್ ಮಾಡಿದ್ದಾರೆ. ಇದು ನಿನ್ನೆ ಬೆಳಿಗ್ಗೆ ನಡೆದಿರತಕ್ಕ ಘಟನೆ. ಅವರು ನನಗೆ ತಕ್ಷಣ ಫೋನ್ ಮಾಡಿ ಈ ವಿಷಯ ತಿಳಿಸಿದರು. ಕಾರಿನ ವ್ಯವಹಾರ ಸ್ವಂತ ವ್ಯವಹಾರ, ರಾಮಕೃಷ್ಣ ಹೆಗಡೆಯವರಿರಬಹುದು, ಅಥವಾ ಎರಡೂ ಕಡೆಯ ಸದಸ್ಯರಿರಬಹುದು. ಸಾಮಾನ್ಯವಾಗಿ ಮಕ್ಕಳ ಮದುವೆ ಇರಬಹುದು ಮತ್ತೊಂದು ಇರಬಹುದು, ಅವರವರ ಮಕ್ಕಳ ಮದುವೆ ವ್ಯವಹಾರ ಅವರೇ ಮಾಡಿಕೊಳ್ಳುತ್ತಾರೆ. ಸ್ವಂತ ವ್ಯವಹಾರದಲ್ಲೂ ಕೂಡ ಕೈ ಹಾಕತಕ್ಕ ಮಟ್ಟಕ್ಕೆ ಪೋಲೀಸ್ ಇಲಾಖೆ ಹೋಗಿದೆ ಅವರನ್ನು ಕೇಳುವವರಿಲ್ಲಾ, ಹೇಳುವವರಿಲ್ಲ. ಎಸ್. ಎಸ್. ಬಿ. ಯವರ ಅಧಿಕಾರ ವ್ಯಾಪ್ತಿಯೆಷ್ಟು ? ಅವರಿಗೆ ಉತ್ತರ ಕೊಡೋಣ ಅವರ ಅಧಿಕಾರ ವ್ಯಾಪ್ತಿಯನ್ನು ಮೀರಿದರೆ ಯಾವ ಮಾತನ್ನು ಹೇಳಿಕಳುಹಿಸಬೇಕೋ, ನಾನು ಹೇಳಿಕಳುಹಿಸುತ್ತೇನೆ. ನನ್ನ ಮನೆಯ ಹತ್ತಿರ ಬೆಳಿಗ್ಗೆಯಿಂದ ರಾತ್ರಿ ಹತ್ತರವರೆವಿಗೂ ಯಾರ ಕಾರು ಬಂತು ? ಯಾರು ಬಂದರು ? ಇದನ್ನೇ ನೋಡುವುದೇ ಕಸುಬಾಗಿದೆ ತಾವು ಕೂಡ ವಿರೋಧ ಪಕ್ಷದ ನಾಯಕರಾಗಿ ಮೇಲ್ಮನೆಯಲ್ಲಿ ಕೆಲಸ ಮಾಡಿದ್ದೀರಿ. ಜನಹಿತದೃಷ್ಟಿಯಿಂದ ಕೆಲವು ವಿಚಾರ ಧಾರೆಗಳನ್ನು ಇಡುವುದು ನಮ್ಮ ಆದ್ಯಕರ್ತವ್ಯ ಆಗಿರುತ್ತದೆ. ಪೋಲೀಸಿನವರನ್ನು ಮಂತ್ರಿಮಂಡಲದ ಸದಸ್ಯರ ಮೇಲಿಟ್ಟಿದ್ದೀರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಅದು ಅನಾವಶ್ಯಕ. ಮೊನ್ನೆ ಮೇಲ್ಮನೆಯಲ್ಲೂ ಕೂಡ ಈ ವಿಷಯದಲ್ಲಿ ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಶಾಸಕರ ಭವನದಲ್ಲಿ ನಮ್ಮ ಪಕ್ಷದ ಸದಸ್ಯರ ಮೇಲೆ ನಡೆದ

ವಿಚಾರದಲ್ಲಿ ಹೆಚ್. ಟಿ. ರೆಡ್ಡಿಯವರು ಮತ್ತು ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಶಾಸಕರ ಭವನ ಕೂಡ ವಿಧಾನ ಸಭೆಯ ಒಂದು ಭಾಗ ಇದ್ದಂತೆ. ಅಲ್ಲಿ ಎಲ್ಲ ಪಕ್ಷದ ಸದಸ್ಯರುಗಳು ಇದ್ದಾರೆ. ಎಸ್. ಎಸ್. ಬಿ. ಯಂವರೇ ಶಾಸಕರ ಭವನದ ತುಂಬ ಇದ್ದಾರೆ. ಇಲ್ಲೂ ಕೂಡ ಲಾಂಜಿನಲ್ಲಿದ್ದಾರೆ. ತಾವು ಕ್ಷಮಿಸಬೇಕು. ಅಧಿಕಾರಿಗಳ ಹೆಸರು ಹೇಳುವುದಕ್ಕೆ ನಾನು ಹೋಗುವುದಿಲ. ನಾವು ಎಸ್. ಎಸ್. ಬಿ. ಯವರು ಎಂದು ಅವರೇ ನಮಸ್ಕಾರ ಮಾಡಿ ಹೋಗುವುದನ್ನು ನಾವು ಕಂಡಿದ್ದೇವೆ. ಪತ್ರಿಕಾ ಗ್ಯಾಲರಿಯಲ್ಲಿದ್ದಾರೆ, ಅಧಿಕಾರಿಗಳ ಗ್ಯಾಲರಿಯಲ್ಲಿದ್ದಾರೆ. ಎಸ್. ಎಸ್. ಬಿ. ಯವರು ಇರಬೇಕೆಂದು ಸದನ ಬಹುಮತದಿಂದ ತೀರ್ಮಾನ ಮಾಡಿದರೆ ಅದಕ್ಕೆ ತಲೆಬಾಗೋಣ. ಅಧಿಕಾರಿಗಳ ಹೆಸರಿನಲ್ಲಿ ಬಂದು ಕೂತುಕೊಳ್ಳುವುದು, ಪತ್ರಿಕೆಯವರ ಹೆಸರಿನಲ್ಲಿ ಬಂದು ಕೂತುಕೊಳ್ಳುವುದು, ಹೀಗೆ ಮುಂದುವರಿದರೆ ಇದಕ್ಕೆ ಬೆಲೆ ಇರುತ್ತದೆಯೆ ? ಇದರಿಂದ ಶಾಸಕರು ನಿರ್ಭಯವಾಗಿ ಕೆಲಸ ಮಾಡುವುದಕ್ಕೆ ಸಾಧ್ಯವೆ ? ನಾವು ಏನು ಮಾತನಾಡುವುದಕ್ಕೆ ಹೋದರೂ ಸರ್ಕಾರದ ಕಿವಿ ಇರುತ್ತೆ. ನಮ್ಮ ಹಕ್ಕುಗಳಿಗೆ ಸಂಪೂರ್ಣ ರಕ್ಷಣೆ ಆಗದಿದ್ದರೆ ನಾವು ಯಾರೂ ಕೂಡ ಕೆಲಸ ಮಾಡುವುದಕ್ಕಾಗುವುದಿಲ್ಲ. ಇಂಡಿಯನ್ ಟೆಲಿಫೋನ್ ಕಾಯಿದೆ ಪ್ರಕಾರ ಟೆಲಿಫೋನ್‌ನ್ನು ಕದ್ದು ಕೇಳುವುದು ಅಪರಾಧವಾಗುತ್ತದೆ. ಟೇಪುಗಳನ್ನು ಮಾಡಿಕೊಳ್ಳುವುದು. ನಮ್ಮ ನಮ್ಮ ಪಾರ್ಟಿ ವಿಚಾರ ಮಾತನಾಡಿಕೊಂಡರೆ, ಅದನ್ನು ಟೇಪು ಮಾಡುವುದು ಇದೆಲ್ಲಾ ಏತಕ್ಕಾಗಿ. ಮಾನ್ಯ ಸದಸ್ಯರಾದ ರಮೇಶ್‌ರವರ ವಿಚಾರದಲ್ಲಿ ಪತ್ರಿಕೆಯವರು ಚನ್ನಾಗಿ ಬರೆದಿದ್ದಾರೆ. ಬಂಗಾರಪ್ಪನವರ ಧ್ವನಿ ಇದ್ದಹಾಗೆ ಇರಬಹುದೇನೋ, ಇನ್ನೊಂದು ಕಡೆ. ಶಿವಮೂರ್ತಿಯವರ ಧ್ವನಿ ಇರಬಹುದೇನೋ ಎಂದು ಬರೆದಿದ್ದಾರೆ. ಸಾರ್ವಜನಿಕ ಜೀವನದಲ್ಲಿರತಕ್ಕವರ ಜೊತೆಯಲ್ಲಿ ಹಲವಾರು ಸಂದರ್ಭದಲ್ಲಿ ಫೋಟೋಗಳನ್ನು ತೆಗೆಯುವಾಗ ಒಬ್ಬರ ಹಿಂದೆ ಒಬ್ಬರು ಬಂದು ನಿಂತುಕೊಂಡರೆ, ಅವರ ಚರಿತ್ರೆ ಏನು ಎಂದು ಕೇಳುವುದಕ್ಕಾಗುತ್ತದೆ. ಇದು ತಮಗೂ ಅನುಭವಕ್ಕೆ ಬಂದಿರುವಂಥ ವಿಷಯ. ಬಿ. ಬಿ. ಶಿವಪ್ಪನವರು ಒಂದು ಕಡೆ ಹೇಳಿದ್ದಾರೆ. ಫೋಟೋ ತೆಗೆಯುವವನ ಫೋಟೋ ತೆಗೆಯುವಂಥ ಕ್ಯಾಮರಾಗಳು ಬಂದಿವೆಯಂತೆ. ಮುಂದಕ್ಕೆ ಇಂಥ ಕೆಲಸಗಳನ್ನು ನಿಲ್ಲಿಸದೇ ಹೋದರೆ ಮನಸ್ಸಿಗೆ ತುಂಬಾ ನೋವಾಗುತ್ತದೆ. ಫೋಟೋ ಪ್ರದರ್ಶನ ಮಾಡಬಾರದೆಂದು ಹೇಳಿದ್ದೇನೆ. ನಾವು ಕೆಲವು ಮೌಲ್ಯಗಳನ್ನು ಕಾಪಾಡಿಕೊಂಡು ಬಂದಿದ್ದೇವೆ, ಅವುಗಳನ್ನು ಉಳಿಸಿಕೊಂಡು ಹೋಗುವುದಕ್ಕೆ ಎಲ್ಲರೂ ಪ್ರಯತ್ನ ಮಾಡಬೇಕು. ''ಭಾವಿ ಮುಖ್ಯ ಮಂತ್ರಿ ಸಹ ಚರರೊಡನೆ'' ಎನುವ ಭಿತ್ತಿ ಪತ್ರಗಳನ್ನು ಎಲ್ಲಾ ಕಡೆ ಹಚ್ಚಿದ್ದಾರೆ. ಭಿತ್ತಿ ಪತ್ರಗಳಿಂದಲೇ ರಾಜಕಾರಣ ಬಗೆಹರಿಸುವುದಾದರೆ, ನಿಮ್ಮ ರಾಜಕಾರಣವನ್ನು ಬಗೆಹರಿಸಬಹುದಲ್ಲ. ಈ ದೇಶದಲ್ಲಿ ಎಂದೂ ಕೂಡ ಅದಕ್ಕೆ ಅವಕಾಶ ಕೊಡಬಾರದು. ಬಂಗಾರಪ್ಪ ಹರಿಜನರ ವಿರೋಧಿ, ಹರಿಜನರ ಜಮೀನನ್ನು ತೆಗೆದುಕೊಂಡಿದ್ದಾರೆಂದು ಬಸವನಗುಡಿಯಲ್ಲಿ ರಾಮಕೃಷ್ಣ ಹೆಗಡೆಯವರು ಈ ಮಾತನ್ನು ಹೇಳಿದ್ದಾರೆ.

ಶ್ರೀ ಎಂ. ರಘುಪತಿ.—ನನ್ನ ಕ್ರಿಯಾಲೋಪ.

ಶ್ರೀ ಎಸ್. ಬಂಗಾರಪ್ಪ.—ಮುಗಿಸುತ್ತೇನೆ, ತೊಂದರೆ ಮಾಡಬೇಡಿ.

ಶ್ರೀ ಎಂ. ರಘುಪತಿ.—ನನ್ನದು ಪಾಯಿಂಟ್ ಆಫ್ ಆರ್ಡರ್. ಯಾವುದೋ ಬಹಿರಂಗ ಸಭೆಯಲ್ಲಿ ಯಾವುದೋ ವಿಷಯದ ಬಗ್ಗೆ ಪ್ರಸ್ತಾಪ ಮಾಡಿದ್ದನ್ನು ಈ ಸದನದಲ್ಲಿ ತಂದು ಚರ್ಚೆಯ ಮುಖ್ಯ ಕೇಂದ್ರವಾಗಿ ಪ್ರಸ್ತಾಪಿಸುವಂತಿಲ್ಲ. ಬಹಿರಂಗ ಸಭೆಯಲ್ಲೇ ಅದಕ್ಕೆ ಉತ್ತರವನ್ನು ಅವರು ಕೊಡಲಿ. ಈ ಸದನದ ಬಳಕೆಯಾಗುವುದು ಬೇಡ.

ಶ್ರೀ ಆರ್. ಎನ್. ನಾಯಕ್.—ಹಾಗಾದರೆ ಕಳ್ಳತನ ಮಾಡಿದವರಿಗೆ ಶಿಕ್ಷೆಯನ್ನು ಇನ್ನೊಮ್ಮೆ ಕಳ್ಳತನ ಮಾಡುವಾಗಲೇ ಕೊಡಬೇಕೇ ? ನೀವು ಏನು ಹೇಳುವುದು ?

ಶ್ರೀ ಜಿ. ನಾರಾಯಣಕುಮಾರ್.—ಅಧ್ಯಕ್ಷರೇ, ಆ ಪೋಸ್ಟರಿನಲ್ಲಿ ಇಂಥವರೇ ಮಾಡಿದ್ದು ಎಂದು ಎಲ್ಲಿದೆ, ಫೋಟೋ ಇದೆಯೇ ? ಇವರೇ ಪ್ರಿಂಟ್ ಮಾಡಿಸಿ ಹಾಕಿಸಿಕೊಂಡು ಸುಮ್ಮನೆ ನಮ್ಮನ್ನು ಎಳೆಯುತ್ತಿದ್ದಾರೆ.

ಶ್ರೀ ಎಂ. ರಘುಪತಿ.—ನಾನು ಹೇಳುವುದೇನೆಂದರೆ ಯಾವ ವಿಷಯದ ಮೇಲೆ ಚರ್ಚೆ ಮಾಡಬೇಕೆಂದು ಅಜೆಂಡಾದಲ್ಲಿದೆಯೋ ಆ ವಿಷಯಗಳನ್ನು ಮಾತ್ರ ಚರ್ಚೆ ಮಾಡಬಹುದು. ಬೇಕಾದರೆ ಹೊರಗಡೆಯ ವಿಷಯಗಳನ್ನು ಪಾರ್ಶಿಯಲ್ ಆಗಿ ಇವರು ಪ್ರಸ್ತಾಪಿಸಿಕೊಳ್ಳಲಿ. ಅವರು ಹೀಗೆ ಹೇಳಿದರೆ ನಾನೂ ಹೇಳಬಹುದೇ ? ಬಂಗಾರಪ್ಪನವರು ಒಂದು ಸಮಾರಂಭದಲ್ಲಿ ನಮ್ಮ ರಾಜ್ಯದಲ್ಲಿ ಫೆನ್ನಿ ತಯಾರಿಸುವವರು ಜಾಸ್ತಿ ಬರಬೇಕು ಎಂದು ಹೇಳಿದ್ದರು ಎಂಬುದನ್ನು ಆದರೆ ನಾನು ಹೇಳುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ರಘುಪತಿಯವರು ಎತ್ತಿರುವ ಪಾಯಿಂಟ್ ಆಫ್ ಆರ್ಡರ್ ತೀರ್ಮಾನವಾಗಲೇಬೇಕು. ರಾಜಕಾರಣವೆಂದರೆ ರಾಜಕೀಯ ಪಕ್ಷಗಳು ಇದ್ದೇ ಇರುತ್ತದೆ. ಹೆಗ್ಗಡೆಯವರು ನ್ಯಾಷನಲ್ ಹೈಸ್ಕೂಲ್ ಗ್ರೌಂಡಿನ ಭಾಷಣದಲ್ಲಿ ದುರುದ್ದೇಶದಿಂದ ಬಂಗಾರಪ್ಪನವರ ಬಗ್ಗೆ ಮಾತನಾಡಿದರೆಂದು ಬಂಗಾರಪ್ಪನವರು ಹೇಳಿದರೆ, ಶಿವಮೊಗ್ಗದಲ್ಲಿ ಬಂಗಾರಪ್ಪನವರು ಹೆಗಡೆಯವರ ಬಗ್ಗೆ ಮಾತನಾಡಿದರೆಂದು ಹೆಗಡೆಯವರು ಹೇಳುತ್ತಾರೆ. ರಾಜಕೀಯದಲ್ಲಿರುವ ನಮಗೆ ಟೀಕೆ ಮತ್ತು ಪ್ರಶ್ನೆ ಮಾಡುವ ಹಕ್ಕು ಇದೆ. ಪಬ್ಲಿಕ್ ಮೀಟಿಂಗ್‌ನಲ್ಲೂ ಟೀಕಿಸುತ್ತೇವೆ. ಟೀಕಿಸುವುದು ಸಾರ್ವಜನಿಕ ಸ್ವಾತಂತ್ರ್ಯದ ಪ್ರಶ್ನೆ. ನಾವು ಅವರನ್ನು ಟೀಕೆ ಮಾಡಿದರೆ ಅವರು ನಮ್ಮ ಮೇಲೆ ಆಪಾದನೆ ಹೊರಿಸಿದ್ದಾರೆ. ಬಂಗಾರಪ್ಪನವರು ಶಿವಮೊಗ್ಗದಲ್ಲಿ ಅನ್ಯಾಯವಾಗಿ ಬಡವರ ಜಮೀನನ್ನು ಅಕ್ರಮಿಸಿಕೊಂಡಿದ್ದಾರೆಂದು ಹೆಗಡೆಯವರು ಖಡಾ ಖಂಡಿತವಾಗಿ ಹೇಳಲಿ. ಹಾಗೆ ಹೇಳಿದ ಮೇಲೆ ಬಂಗಾರಪ್ಪನವರು ಅವರ ಮೇಲೆ ಬಂದ ಆರೋಪವನ್ನು ನಿವಾರಣೆ ಮಾಡಿಕೊಳ್ಳಲೇಬೇಕು. ಆದ್ದರಿಂದ ಸಾರ್ವಜನಿಕ ಸಭೆಗಳಲ್ಲಿ ರಾಜಕಾರಣಿಗಳು ಮಾಡುವ ಟೀಕೆಗಳು, ನಿಂದೆಗಳು ಇವನ್ನು ಈ ಸದನದಲ್ಲಿ ಪ್ರಸ್ತಾಪಿಸಲೇಬಾರದು ಎಂದೇನು ಇಲ್ಲ.

ಶ್ರೀ ಕೆ. ಎಸ್. ನಾಗರತ್ನಮ್ಮ.—ಎಲ್ಲೂ ಇಲ್ಲದ್ದನ್ನು ರಘುಪತಿಯವರು ಹೇಳುತ್ತಿದ್ದಾರೆ.

ಶ್ರೀ ಎಂ. ರಘುಪತಿ.—ನಾಗರತ್ನಮ್ಮನವರು ಇಲ್ಲ ಎಂದರೆ ನಾನು ಸುಮ್ಮನಾಗುತ್ತೇನೆ ಏಕೆಂದರೆ ಅವರು ಅಧ್ಯಕ್ಷರಾಗಿದ್ದವರು. ಆದರೆ ನಿಜವಾಗಿಯೂ ಆ ಥರ–ರೂಲಿಂಗ್ ಇದೆ.

ಶ್ರೀ ಎಸ್. ಬಂಗಾರಪ್ಪ.—ಈಗ ಇಂದಿರಾಗಾಂಧಿಯವರ ಬಗ್ಗೆ ರಾಜೀವ್‌ಗಾಂಧಿಯವರ ಬಗ್ಗೆ ಎಷ್ಟೋ ಸಲ ಟೀಕೆ ಬಂದಿದೆ. ಇಲ್ಲಿ ಇವರು ಏನು ಹೇಳಿದ್ದಾರೆ ಅದು ಪತ್ರಿಕೆಗಳಲ್ಲಿ ಬಂದಿದೆ. ಟೇಪ್ ಬಗ್ಗೆ ಮೊನ್ನೆಯದೂ ರೆಕಾರ್ಡಾಗಿದೆ.

ಅಧ್ಯಕ್ಷರು.—ಮುಗಿಸಿ ಬಿಡಿ.

ಶ್ರೀ ಎಸ್. ಬಂಗಾರಪ್ಪ.—ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ನಾನವರ ಘನತೆ ಗಾಂಭೀರ್ಯ ಬಿಟ್ಟು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋದರೆ ರಾಜಕಾರಣ ಕಲುಷಿತವಾಗುತ್ತದೆಂದು ಸ್ಪಷ್ಟಪಡಿಸುತ್ತೇನೆ. ಅವರು ಹೇಳಿದ್ದಾರೆ ಹರಿಜನರ ಬಗ್ಗೆ ಅವರ ಭೂಮಿ ತೆಗೆದುಕೊಂಡಿದ್ದೇನೆಂಬ ಮಾತು. The matter is subjudice. ಇದು ಸಬ್–ಜ್ಯುಡೀಸ್ ಆಗುವುದರಿಂದ ಮಾತಾಡುವುದಕ್ಕೆ ಹೋಗುವುದಿಲ್ಲ. ಹರಿಜನರು ಯಾರೂ ಕೂಡ ಅರ್ಜಿ ಹಾಕಿಲ್ಲ ಎಂದು ೫೦ ಸಲ ಹೇಳಿದ್ದೇನೆ. ಆಗಲಿ, ಇದು ಸಬ್ ಜ್ಯುಡೀಸ್ ಆಗುವುದರಿಂದ ಕೋರ್ಟಿನ ಮುಂದಿರುವುದರಿಂದ ಮಾತನಾಡುವುದಿಲ್ಲ.

ಮತ್ತೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಟೆಲಿಫೋನ್ ರೆಕಾರ್ಡಿಂಗ್ ಮಾಡಿಕೊಳ್ಳುವುದು ಏನಿದೆ ಅದು ಇಂಡಿಯನ್ ಟೆಲಿಫೋನ್ಸ್ ಆಕ್ಟ್ ಪ್ರಕಾರ ಅದೊಂದು ಅಪರಾಧ. ಹೀಗೆಂದು ಕಾನೂನು ತಜ್ಞರು ಹೇಳುತ್ತಿದ್ದಾರೆ. ಪಾರ್ಲಿಮೆಂಟಿನಲ್ಲೂ ಈವ್ಸ್‌ಡ್ರಾಪಿಂಗ್ ಬಗ್ಗೆ ಹಿಂದೆ ಬಂದಿದೆ. ಎಕ್ಸೆಪ್ಟ್ ಸರ್ಟನ್ ಆಲೋಡ್, ಬೇರೆ ಯಾರೂ ಮಾಡುವ ಹಾಗಿಲ್ಲ. ಹಾಗೆ ಮಾಡಿದರೆ ಇಲ್ಲಿ ಯಾರು ಮಾಡಿದ್ದು ? ಏನು ? ಎಂಬುದೆಲ್ಲ ಬರುತ್ತದೆ. ಆದ್ದರಿಂದ ಇವನ್ನೆಲ್ಲ ಪ್ರಕಾರ ಮಾಡತಕ್ಕಂಥಾದ್ದು ಫ್ಯಾಬ್ರಿಕೇಷನ್ ಇದೆಯಲ್ಲ ಇದನ್ನು ನಿಲ್ಲಿಸಿದರೆ ಅದರಿಂದ ರಾಜಕೀಯ ಕ್ಷೇಮಕ್ಕೆ ಮತ್ತು ಆರೋಗ್ಯ ಕ್ಷೇಮಕ್ಕೆ ಬಹಳ ಒಳ್ಳೆಯದು. ಇಷ್ಟನ್ನು ಹೇಳಿ, ನಿಮ್ಮ ಮಗನ ಮದುವೆಗೆ ಹಣ ಎಲ್ಲಿಂದ ಬಂತು ಎಂದು ಕೇಳುತ್ತೇನೆ ನಾನು ಏಕೆಂದರೆ ನನ್ನ ಮಗಳು ಅಥವಾ ನಿಮ್ಮ ಮಗ – ಅವರ ಮದುವೆ – ಇದೆಲ್ಲ ಹುಡುಗಾಟದ ವಿಷಯವಲ್ಲ. ಅಲ್ಲದೆ ನನ್ನ ಮಗಳ ಮದುವೆ ವಿಷಯಕ್ಕೆ ನಾನು ಹಣ ಎಲ್ಲಿಂದ ತಂದೆ ಎಂದು ಕೇಳುವ ಹಕ್ಕು ಯಾರಿಗೂ ಇಲ್ಲ. ನಾನು ಸಾಲ ಮಾಡಿ ತಂದಿರಬಹುದು, ಅದನ್ನು ಕಟ್ಟಿ

ಕೊಂಡು ನಿಮಗೇನು ? ಹಾಗೆಯೇ ನಿಮ್ಮ ಮಕ್ಕಳ ವಿಷಯದಲ್ಲೂ ನಾನು ಕೈಹಾಕುವುದಿಲ್ಲ, ಇವೆಲ್ಲ ಸಣ್ಣ ವಿಚಾರವಲ್ಲ. ಏಕೆಂದರೆ ಸನ್ಮಾನ್ಯ ಅಧ್ಯಕ್ಷರೇ ಇವತ್ತು ಮಕ್ಕಳ ಮದುವೆಗಳು ಬಂದಾಗ ಮದುವೆ ಮಾಡುತ್ತೇವೆ. ಆದರೆ ನಮ್ಮ ಮಕ್ಕಳು ಏನಾದರೂ ದುರ್ವ್ಯವಹಾರದಲ್ಲಿ ತೊಡಗಿದರೆ ಅದನ್ನು ಎತ್ತಿ ಹೇಳುವ ಹಕ್ಕು ನಿಮಗೂ, ನಮಗೂ ಇರುತ್ತದೆ. ಆ ಮಟ್ಟಕ್ಕೆ ಅವರು ಹೋಗದಂತೆ ನೋಡಿ ಕೊಳ್ಳೋಣ. ಆದ್ದರಿಂದ ನನ್ನ ಮಗಳ ಮದುವೆಗೆ ಹಣವನ್ನು ನಾನು, ನನಗೆ ಬೇಕಾದವರಿಂದ ಸಾಲ ಪಡೆದಿರಬಹುದು, ಅದನ್ನೆಲ್ಲ ಇಲ್ಲಿ ನಿಮಗೇನು ಲೆಕ್ಕ ಕೊಡಬೇಕು ? ನೀವು ಫೈನಾನ್ಸ್ ಮಿನಿಸ್ಟರಾಗಿ ದ್ದಾಗ ಸದಾಶಿವನಗರದ ನಿಮ್ಮ ಮನೆ ಕಟ್ಟುವುದಕ್ಕೆ ಯಾವ್ಯಾವ ಎಕ್ಸೈಜ್ ಕಂಟ್ರಾಕ್ಟರ್‌ಗಳಿಂದ ಎಷ್ಟೆಷ್ಟು ಹಣವನ್ನು ಪಡೆದಿರಿ ಎಂದು ನನಗೆ ಗೊತ್ತಿದೆ. ಆದ್ದರಿಂದ ನನ್ನ ಮೇಲಿನ ತಮ್ಮ ಆಪಾದನೆ ಯನ್ನು ನಾನು ಸಂಪೂರ್ಣವಾಗಿ ಅಲ್ಲಗೆಳೆಯುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಇಷ್ಟಾದರೂ ಈ ಚಟ ಹೋಗುವುದಿಲ್ಲ. ಯಾವ ಎಕ್ಸೈಜ್ ಕಂಟ್ರಾಕ್ಟರ್ ನನಗೆ ಮನೆ ಕಟ್ಟಲು ಕೊಟ್ಟಿದ್ದಾರೆ, ಹೇಳಿ ? ನಾನು ನಿರ್ಗತಿಕನಾಗಿ ರಾಜಕಾರಣಕ್ಕೆ ಬಂದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆ ಬ್ಯಾಕ್‌ಗ್ರೌಂಡನ್ನು ಆ ಮೇಲೆ ಚರ್ಚೆ ಮಾಡೋಣ.

ಅಧ್ಯಕ್ಷರು.—ಬಂಗಾರಪ್ಪನವರೇ ಮುಂದೆ ಡಿಮ್ಯಾಂಡ್ಸ್ ಇದೆ ನೀವು ಇದುವರೆಗೆ ಎರಡು ಗಂಟೆ ತಗೊಂಡಿದ್ದೀರಿ. ಸಾಕು ಮುಗಿಸೋಣ.

ಶ್ರೀ ಎಸ್. ಬಂಗಾರಪ್ಪ.—ನೀವೇ ನಕ್ಕುಬಿಟ್ಟರಲ್ಲ. ಅವರು ಏನೇನೋ ಆಪಾದನೆಗಳನ್ನು ಮಾಡಿದ್ದಾರೆ. ಕೊನೆಯ ಡಿಮ್ಯಾಂಡ್ ಇದು. ನೀವು ಅತಿಯಾಗಿ ಮಾತಾಡುವುದನ್ನು ಕಟ್ ಮಾಡು ವುದಕ್ಕೆ ಹೋಗಬೇಡಿ.

MR. SPEAKER.—Please finish early.

ಶ್ರೀ ಎಸ್. ಬಂಗಾರಪ್ಪ.—ಹಾಗಾದರೆ ನಮ್ಮ ಹಕ್ಕನ್ನೂ ನಾವು ಚಲಾವಣೆ ಮಾಡಬೇಕಾಗು ತ್ತದೆ. ಬೇರೆಯವರು ಮಧ್ಯದಲ್ಲಿ ಮಾತಾಡುವುದಕ್ಕೆ ಏಕೆ ಅಲೋ ಮಾಡಿದ್ದಿರಿ ಹಾಗಾದರೆ ?

ಅಧ್ಯಕ್ಷರು.—ನಾನು ಈ ಸಭೆಯ ನಿಮ್ಮೆಲ್ಲರ ಹಿತದೃಷ್ಟಿಯಿಂದ ಸದನದ ಹಿತದೃಷ್ಟಿಯಿಂದ, ರಾಜ್ಯದ ಹಿತದೃಷ್ಟಿಯಿಂದ ನಿಯಮದಂತೆ ನಡೆದುಕೊಳ್ಳಬೇಕಾಗಿದೆ, ಇಡೀ ನಿಮ್ಮ ಪಾರ್ಟಿಗೆ ಇಟ್ಟಿರುವ ಸಮಯವನ್ನೆಲ್ಲ ಬೇಕಾದರೆ ನೀವೊಬ್ಬರೇ ತೆಗೆದುಕೊಂಡು ಮಾತನಾಡಿ. ನಿಮ್ಮ ಪಾರ್ಟಿಗೆ ಫಿಕ್ಸ್ ಮಾಡಿರುವುದು ೧೯೮ ನಿಮಿಷ, ಈಗಾಗಲೇ ಎರಡು ಗಂಟೆ ಮಾತನಾಡಿದ್ದೀರಿ. ಆದ್ದರಿಂದ ದಯಮಾಡಿ ಮುಗಿಸಿಬಿಡಿ.

ಶ್ರೀ ಎಸ್. ಬಂಗಾರಪ್ಪ.—ಪೋಲಿಸ್ ಸರ್ವಿಸ್ ವಿಚಾರದಲ್ಲಿ ಹೇಳುವುದಾದರೆ, ಕಾವೇರಿ ಭವನ ದಲ್ಲಿರತಕ್ಕವರು ಡಿಐಜಿ ಇರಲಿ ಯಾರೇ ಇರಲಿ ಅವರು ನಮ್ಮ ಪಕ್ಷದ ಸದಸ್ಯರು ವಿರೋಧ ಪಕ್ಷದ ಸದಸ್ಯರ ಬಗ್ಗೆ ನಡೆದುಕೊಂಡಿರತಕ್ಕ ವರದಿ ನನ್ನಲ್ಲಿದೆ. ಅವರು ಎಲ್ಲ ವ್ಯವಸ್ಥೆಯನ್ನು ಮಾಡಿ ದೊಡ್ಡ ಜವಾಬ್ದಾರಿಯನ್ನು ಹೊತ್ತಿದ್ದಾರೆ. ರಾಜಕೀಯ ಪ್ರಜಾಪ್ರಭುತ್ವ ವಿಚಾರಧಾರೆ ಏನಿದೆ ಅದಕ್ಕೆ ಮಾರಕವಾಗಿರತಕ್ಕ ಪ್ರಜಾಪ್ರಭುತ್ವ ನೀತಿಗನುಗುಣವಾಗಿ ನೀವು ಮೌಲ್ಯಾಧಾರಿತ ರಾಜಕಾರಣ ಮಾತ ನಾಡುತ್ತೀರಿ. ಈಗಲಾದರೂ ನಿಮ್ಮ ಮಾತಿಗೆ ಅರ್ಥ ಕೊಡತಕ್ಕ ಪ್ರಾಮಾಣಿಕ ಪ್ರಯತ್ನ ಮಾಡಿ ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

೩-೦೦ ಪಿ.ಎಂ.

† ಶ್ರೀ ಡಿ. ಟಿ ಜಯಕುಮಾರ್ (ನಂಜನಗೂಡು).— ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಯ ಸಂಖ್ಯೆ ೧೫, ೧೬, ೧೭, ೧೮, ೨೦ ೩೮, ೩೯, ೪೦, ೪೧ ಮತ್ತು ೪೨ ಇವುಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯಕರು ಸಾಕಷ್ಟು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ನಾನಾದರೂ ಅವರ ಟೀಕೆಗಳಿಗೆ ಉತ್ತರ ಕೊಡುವ ಗೋಜಿಗೆ ಹೋಗುವುದಿಲ್ಲ, ಏಕೆಂದರೆ ಮಾನ್ಯ ಮುಖ್ಯ ಮಂತ್ರಿಗಳು ಸಮರ್ಥ ರೀತಿಯಲ್ಲಿ ಅವರಿಗೆ ಉತ್ತರ ಕೊಡುತ್ತಾರೆ. ನಾನು ಒಂದೆರಡು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ

ಇಚ್ಛೆಪಡುತ್ತೇನೆ. ಫೆಬ್ರುವರಿ ೧೧ನೇ ತಾರೀಖು ಮಾನ್ಯ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಟ್ಟಾಗ ಇಡೀ ಕರ್ನಾಟಕ ರಾಜ್ಯದಲ್ಲಿ ಅನಿಶ್ಚಿತತೆ, ಕಳವಳ, ದುಮ್ಮಾನ ಉಂಟಾಗಿ ಜನಗಳು ಬಹಳ ತಳಮಳ ಗೊಂಡರು. ನಮ್ಮ ಪುಣ್ಯ ಅಥವಾ ಭಾಗ್ಯವೆಂದು, ಹೇಳಬಹುದು ಶಾಸಕರ ಒತ್ತಾಯದ ಮೇರೆಗೆ ಅವರೇ ಮುಖ್ಯ ಮಂತ್ರಿಗಳಾಗಬೇಕೆಂದು ಹೇಳಿದಾಗ ಒಪ್ಪಿಕೊಂಡರು. ಅವರೇ ಪುನಃ ಮುಖ್ಯ ಮಂತ್ರಿಗಳಾಗ ಬೇಕೆಂದು ಅವರು ಮನಸ್ಸಿನಲ್ಲಿ ಇರಲಿಲ್ಲ. ೧೧ನೇ ತಾರೀಖು ನಡೆದಂತಹ ವಿದ್ಯಮಾನದ ಬಗ್ಗೆ ಸಂಕ್ಷಿಪ್ತವಾಗಿ ಯೋಚನೆಯನ್ನು ಮಾಡಿದಾಗ, ನಾವು ಮತ್ತು ಕರ್ನಾಟಕ ರಾಜ್ಯದ ಜನತೆ ಕೂಡ ಹೆಮ್ಮೆಪಡತಕ್ಕ ಒಂದು ಪ್ರಸಂಗ ನಡೆಯಿತು ಅಂದರೆ ತಪ್ಪಾಗಲಾರದು. ರಾಮಾಯಣದಲ್ಲಿ ಸೀತಾಮಾತೆ ಕಳಂಕಿಣಿ ಅಲ್ಲ......

ಶ್ರೀ ಆರ್. ಎನ್. ನಾಯಕ್. — ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್. — ತಮ್ಮ ಪಾಯಿಂಟ್ ಆಫ್ ಆರ್ಡರ್ ಏನು ?

ಶ್ರೀ ಆರ್. ಎನ್. ನಾಯಕ್. — ಮಾನ್ಯ ರಘುಪತಿಯವರು ಒಂದು ವಿಚಾರವನ್ನು ಹೇಳಿದ್ದಾರೆ. ಡಿಮ್ಯಾಂಡಿನ ವಿಚಾರಗಳನ್ನು ಬಿಟ್ಟು ಬೇರೆ ವಿಚಾರಗಳನ್ನು ಮಾತನಾಡಬಾರದೆಂದು ಹೇಳಿದ್ದಾರೆ. ಈಗ ಡಿಮ್ಯಾಂಡಿನ ಬಗ್ಗೆ ಹೇಳುವುದನ್ನು ಬಿಟ್ಟು ಬ್ರಹ್ಮ ಲೋಕದ ಕತೆಯನ್ನು ಹೇಳುತ್ತಿದ್ದೀರಿ ಅದು ಈಗ ಕೋರ್ಟ್‌ನಲ್ಲಿದೆ ಮುಖ್ಯ ಮಂತ್ರಿಗಳು ರಾಜೀನಾಮೆ ಕೊಟ್ಟಿದ್ದು, ಪುನಃ ಬಂದರು ಆ ವಿಚಾರ ಅವರಿಗೆ ಬಿಟ್ಟಿದ್ದು, ನಿಮ್ಮ ಪಕ್ಷಕ್ಕೆ ಬಿಟ್ಟಿದ್ದು. ಅದನ್ನು ಹೊಗಳಿ ಡ್ಯಾಮೇಜ್ ಮಾಡುವುದಕ್ಕೆ ಹೋಗುವುದು ಬೇಡ.

ಶ್ರೀ ಸಿ. ಭೈರೇಗೌಡ. — ಈ ರೀತಿಯಾದ ಪಾಯಿಂಟ್ ಆಫ್ ಆರ್ಡರ್ ಎತ್ತಿದರೆ ಅದರ ಬಗ್ಗೆ ತೀರ್ಮಾನವನ್ನು ತಾವು ಕೊಡಲೇಬೇಕು.

ಶ್ರೀ ಆರ್. ಎನ್. ನಾಯಕ್. — ನಾನು ಹೇಳುವುದು ಬೇರೆ ವಿಚಾರದಲ್ಲಿ. ಅದು ಸರಿ ಅಥವಾ ತಪ್ಪು ಎಂಬುದನ್ನು ತಾವು ವಿಚಾರ ಮಾಡಿಕೊಳ್ಳಿ, ಏನಾದರೂ ತಮಾಷೆ ಮಾಡುವುದು ಇದ್ದರೆ ಮಾಡಿ. ಇಲ್ಲದಿದ್ದರೆ ಡಿಮ್ಯಾಂಡ್‌ನ ಮೇಲೆ ಮಾತ್ರ ಮಾತನಾಡಲಿಕ್ಕೆ ಅವಕಾಶ ಕೊಡಿ.

ಶ್ರೀ [illegible]ಜವರ್ಧನ್. — ಮುಖ್ಯ ಮಂತ್ರಿಗಳ ಬೇಡಿಕೆ ಇದೆ ಅವರಿಗೆ ಸಂಬಂಧಪಟ್ಟಹಾಗೆ ಮಾತನಾಡುತ್ತಿದ್ದಾರೆ. ನೀವು ಹೇಳಿದಹಾಗೆ ಮಾತನಾಡುವಹಾಗೆ ಇಲ್ಲ. ಅವರು ತಮ್ಮ ಅಭಿಪ್ರಾಯ ಗಳನ್ನು ಹೇಳುತ್ತಿದ್ದಾರೆ

ಶ್ರೀ ಸಿ. ಭೈರೇಗೌಡ. — ಹೀಗೆ ಮಾತನಾಡಬೇಕೆಂದು ತಾವು ಬರೆದುಕೊಡಿ ಆ ರೀತಿ ಅವರು ಓದುತ್ತಾರೆ.

ಶ್ರೀ ಆರ್. ಎನ್. ನಾಯಕ್. — ನೀವು ಮಾತನಾಡುವುದನ್ನು ಸಭಾ ನಾಯಕರೇ ಒಪ್ಪಿ ಕೊಳ್ಳುವುದಿಲ್ಲ, ಡಿಮ್ಯಾಂಡ್‌ನ ಮೇಲೆ ಮಾತನಾಡಿ.

ಶ್ರೀ ಜಿ. ನಾರಾಯಣಕುಮಾರ್. — ಮಾನ್ಯ ಅಧ್ಯಕ್ಷರೇ ತಾವು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದೀರಿ ಅವರು ಮಾತನಾಡಲಿ.

ಶ್ರೀ ಡಿ. ಟಿ. ಜಯಕುಮಾರ್. — ನನಗೆ ಮಾತನಾಡಲಿಕ್ಕೆ ಹಕ್ಕು ಇದೆ. ಅಗ್ನಿಪರೀಕ್ಷೆ ಮಾಡಿಸಿ ಸೀತಾಮಾತೆ ಕಳಂಕಿಣಿ ಅಲ್ಲವೆಂದು ಶ್ರೀರಾಮಚಂದ್ರ ಜನಪ್ರಿಯತೆ ಲೋಕಪ್ರಿಯತೆಗೆ ಮನ್ನಣೆ ಕೊಟ್ಟು ಅಗ್ನಿಪರೀಕ್ಷೆ ಮಾಡಿದ ಅದೇರೀತಿ ರಾಮಕೃಷ್ಣ ಹೆಗಡೆಯವರು ಕೂಡ ಬಾಟ್ಲಿಂಗ್ ಹಗರಣದಿಂದ ಜನರ ಅಭಿಪ್ರಾಯಕ್ಕೆ ಮನ್ನಣೆ ಕೊಟ್ಟು ಅಗ್ನಿ ಪರೀಕ್ಷೆ ಮಾಡದೇ ಮುಖ್ಯ ಮಂತ್ರಿಗಳನ್ನಾಗಿ ಮಾಡಿರು ವುದು ಪುಣ್ಯ ಬಂದಿದೆ ವಿರೋಧಪಕ್ಷದ ನಾಯಕರು ಆ ರೀತಿ ಮಾಡುವುದಕ್ಕೆ ಆಗುವುದಿಲ್ಲ ಅದು ಏನೇ ಇರಲಿ, ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ಎಲ್ಲೆಲ್ಲೂ ಆಹಾಕಾರ, ನಿರುದ್ಯೋಗ ಸಮಸ್ಯೆ, ಬಡತನ ನಿವಾರಣೆ, ಮುಂತಾದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಾ ಬಂದಿದ್ದಾರೆ. ಇದಕ್ಕೆ ಕಾರಣ ಯಾರು ? ನಾವೋ ? ನೀವೋ ? ಕಾರಣ ಯಾರು ? ಹಿಂದೆ ಅಧಿಕಾರವನ್ನು ನಡೆಸಿದಂತಹವರಿಗೆ ಈ ತರಹ ಗೊಂದಲಮಯವಾದ ವಾತಾವರಣ ಇರಲಿಲ್ಲ. ತಾವು ಏನು ಹೇಳು ತ್ತಿದ್ದೀರಿ ? ದೀನದಲಿತರ ಉದ್ಧಾರ ಮಾಡುತ್ತೇವೆ, ಅಲ್ಪಸಂಖ್ಯಾತರನ್ನು ಉತ್ತಮಪಡಿಸುತ್ತೇವೆ, ಇನ್ನು ಏನೇನೋ ಮಾಡುತ್ತೇವೆಂದು ಹೇಳಿದ್ದೀರಿ ಇದು ಏತಕ್ಕೋಸ್ಕರ ಅಂದರೆ ಎಲ್ಲಾ ಓಟಿಗೋಸ್ಕರ

ಮಾಡಿದಿರಿ. ನಾವೂ ಕೂಡ ಮಾಡುತ್ತಿದ್ದೇವೆ. ಬಡವರು ಕಾಂಗ್ರೆಸ್‌ನ ಸ್ವತ್ತೇನು ಅಲ್ಲ. ಅವರಿಗಾಗಿ ಇವತ್ತು ನಮ್ಮ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದೆ. ತಾಳಿಭಾಗ್ಯ, ಜನತಾ ಮನೆಗಳನ್ನು ಕೊಡುವುದು, ವಿಧವಾ ಮಾಸಾಶನ, ಬಡವರಿಗೆ ಕೊಡತಕ್ಕ ಪಂಚೆ, ಸೀರೆ, ೨ ರೂಪಾಯಿಗೆ ಒಂದು ಕೆ. ಜಿ. ಅಕ್ಕಿ, ಮಕ್ಕಳಿಗೆ ಉಚಿತ ಪಠ್ಯಪುಸ್ತಕಗಳು ಇವೆಲ್ಲ ಬಡವರಿಗೆ ಮಾಡತಕ್ಕ ಕೆಲಸಕಾರ್ಯಗಳು ಕಾಂಗ್ರೆಸ್‌ನವರು ಅನುಕೂಲ ಮಾಡಿಕೊಡುತ್ತೇವೆಂದು, ಬಡವರ ಉದ್ಧಾರವನ್ನು ಮಾಡುತ್ತೇವೆಂದು ಹೇಳಿದ್ದೀರಿ ಆಗ ನಮಗೆ ಅವಕಾಶ ಇರಲಿಲ್ಲ. ನೀವು ೩೫ ವರ್ಷಗಳಿಂದ ಮಾಡಿರುವುದು ಇಷ್ಟೇ ಕೆಲಸ.

ಶ್ರೀ ಆರ್. ಎನ್. ನಾಯಕ್.— ೩೫ ವರ್ಷಗಳ ಕಾಲದ ಆಡಳಿತದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರು ಇದ್ದರೋ, ಇಲ್ಲವೋ. ನಮ್ಮ ಸಭಾನಾಯಕರನ್ನು ನೀವೇ ಕೇಳಿ.

ಶ್ರೀ ಸಿ. ಭೈರೇಗೌಡ.— ತಾವು ಅವರಿಗೆ ಎಚ್ಚರಿಕೆ ಕೊಡಿ.

ಅಧ್ಯಕ್ಷರು.— ತಾವು ದಯವಿಟ್ಟು ಕೂಡಿ. ನೀವು ಮಾತನಾಡುವಾಗ ಏನಾದರೂ ಅಂತಹದ್ದು ಮಾತನಾಡಿದ್ದರೆ ಎಕ್ಸ್‌ಪಂಜ್ ಮಾಡಿಸುತ್ತೇನೆ. ಅವರು ಏನಾದರೂ ಮಾತನಾಡಿದ್ದರೆ ಅದನ್ನು ಎಕ್ಸ್‌ಪಂಜ್ ಮಾಡಿಸುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್.— ಶತಮಾನಗಳಿಂದ ತುಳಿತಕ್ಕೆ ಸಿಕ್ಕಿ, ಜನರು ಕಷ್ಟಕ್ಕೆ ಸಿಕ್ಕಿರುವಾಗ ಏಕಾಏಕಿ ಅದನ್ನು ತಪ್ಪಿಸಲಿಕ್ಕೆ ಹೋದರೆ ಆ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯಲಿಕ್ಕೆ ಸಾಧ್ಯವಾಗುವುದಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ತಮ್ಮ ಅನುಭವದಿಂದ ಹತ್ತಾರು ವರ್ಷಗಳಿಂದ ತುಳಿತಕ್ಕೆ ಸಿಕ್ಕಿದಂತಹ ಜನರ ಕಲ್ಯಾಣೋದ್ಧೇಶಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡು ನಡೆಸಿಕೊಂಡು ಬಂದಿದ್ದಾರೆ.

(ಶ್ರೀ ಬಿ. ಎಂ. ತಿಪ್ಪೇಸ್ವಾಮಿ ಪೀಠದಲ್ಲಿದ್ದರು)

ಒಳ್ಳೆಯ ಕೆಲಸ ಮಾಡಿದರೂ ವಿರೋಧಪಕ್ಷದವರು ಟೀಕೆ ಟಿಪ್ಪಣಿಗಳನ್ನು ಮಾಡುತ್ತಾರೆ ಅದನ್ನು ನಿಲ್ಲಿಸಬೇಕು. ವಿರೋಧಪಕ್ಷದವರಿಗೆ ಹೆದರಿಕೊಂಡು ಕೆಲಸವನ್ನು ಮಾಡುತ್ತಿಲ್ಲ, ಕರ್ನಾಟಕ ರಾಜ್ಯದ ೪ ಕೋಟಿ ಜನ ಇದ್ದಾರೆ ಅವರ ಕೆಲಸಗಳಿಗೆ ಬೆಲೆ ಕೊಟ್ಟು ಕೆಲಸಮಾಡಬೇಕು. ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರು ಟೀಕೆಗಳನ್ನು ಮಾಡಬೇಕು, ಯಾವ ರೀತಿ ಮಾಡಬೇಕು ? ಅವರಿಂದ ರಚನಾತ್ಮಕವಾದ ಟೀಕೆಗಳು ಬಂದಂತಹ ಸಂದರ್ಭದಲ್ಲಿ ತನ್ಮೂಲಕ ಕೆಲಸವನ್ನು ಮಾಡುತ್ತಾ ಹೋದರೆ ನಿಜವಾಗಿಯೂ ಕಾಂಗ್ರೆಸ್‌ನವರು ೩೫ ವರ್ಷಗಳ ಕಾಲ ಏನು ಮಾಡಿದ್ದರು ಅದಕ್ಕಿಂತಲೂ ಒಳ್ಳೆಯ ಆಡಳಿತವನ್ನು ಕೊಡಬಹುದು. ಆಗ ಜನಪ್ರಿಯ ಸರ್ಕಾರ ಅಧಿಕಾರದಲ್ಲಿದೆ ಎನ್ನುವುದಕ್ಕೆ ಯಾವುದೆ, ಅನುಮಾನವಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಅನೇಕ ರೀತಿಯಲ್ಲಿ ಶ್ರಮಪಟ್ಟು ಒಳ್ಳೆಯ ಕಾರ್ಯವನ್ನು ಮಾಡಿ ಐತಿಹಾಸಿಕವಾಗಿದ್ದಾರೆ ಅವರೆ ಸ್ವಾಮಿ. ಅಧಿಕಾರಿಗಳಾಗಲಿ ಬರೀ ರಾಜಕಾರಣಿಗಳಾಗಲಿ, ಮುಖ್ಯ ಮಂತ್ರಿಗಳಾಗಲೀ ಅಥವಾ ಸರ್ಕಾರ ಮಾತ್ರ ಸುಧಾರಣೆಯ ಬಗ್ಗೆ ಯೋಚನೆ ಮಾಡಿದರೆ ಸಾಲುವುದಿಲ್ಲ. ಇವರ ಜೊತೆಗೆ ಸೇವಾ ದೃಷ್ಟಿಯಿಂದ ಸಮಾಜ ಸುಧಾರಕರು, ರಾಜಕಾರಣಿಗಳು ಹಾಗೂ ಅಧಿಕಾರಿಗಳು ಎಲ್ಲರೂ ಕೂಡ ಈ ರಾಜ್ಯದ ಹಾಗೂ ರಾಷ್ಟ್ರದ ಅಭಿವೃದ್ಧಿ ದಿಕ್ಕಿನಲ್ಲಿ ತೆಗೆದುಕೊಂಡು ಹೋಗಬೇಕೆಂಬ ಮನಸ್ಸು ಮಾಡಿದರೆ ಮಾತ್ರ ಈ ದೇಶದಲ್ಲಿ ಪ್ರಗತಿ ಸಾಧ್ಯವೇ ಹೊರತು ಬರೀ ಸರ್ಕಾರ ಒಂದೇ ಏಳಿಗೆಯನ್ನು ತರುತ್ತವೆ ಎನ್ನುವ ವಿಚಾರದಲ್ಲಿ ಹುರುಳಿಲ್ಲ. ಆದ್ದರಿಂದ ಅಧಿಕಾರಿಗಳು, ಸಮಾಜ ಸುಧಾರಕರು ಹಾಗೂ ರಾಜಕಾರಣಿಗಳು ಸೇವಾ ದೃಷ್ಟಿಯಿಂದ ಈ ರಾಜ್ಯದ. ಈ ರಾಷ್ಟ್ರದ ಪ್ರಗತಿಯನ್ನು ಸಾಧನೆ ಮಾಡುವುದರಲ್ಲಿ ಒಬ್ಬರಿಗೊಬ್ಬರು ಕೈಜೋಡಿಸಿ ಕೆಲಸವನ್ನು ನಿರ್ವಹಿಸಬೇಕೆಂದು ಹೇಳುತ್ತೇನೆ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳಬೇಕು. ಅದಕ್ಕಾಗಿ ತೆರಿಗೆಯನ್ನು ಹಾಕುತ್ತಿದ್ದಾರೆ. ಸರ್ಕಾರ ನಡೆಸಬೇಕು. ಅಧಿಕಾರಿಗಳಿಗೆ ಸಂಬಳ ಕೊಡಬೇಕು. ಇವೆಲ್ಲಕ್ಕೂ ಎಲ್ಲಿಂದ ಬರುತ್ತದೆ ದುಡ್ಡು ? ಪರ ಲೋಕದಿಂದ ಬರುವುದಿಲ್ಲ. ಆಹಾರೋತ್ಪಾದನೆಯ ಮೇಲೂ ತೆರಿಗೆಯನ್ನು ಹಾಕಬೇಕಾಗುತ್ತದೆ ಆದರೆ ದಿನನಿತ್ಯ ವಸ್ತುಗಳ ಮೇಲೆ ಆದರಲ್ಲೂ ಬಡ ಬಗ್ಗರು ಉಪಯೋಗಿಸತಕ್ಕಂತಹ ವಸ್ತುಗಳ ಮೇಲೆ ತೆರಿಗೆಯನ್ನು ಕಡಿಮೆಮಾಡಬೇಕು. ಆದರೆ ಯಾರು ಲಕ್ಷುರೀಯಸ್ ಆಗಿ ಇದ್ದಾರೆ. ಐಶಾರಾಮದ ಜೀವನವನ್ನು ಮಾಡುತ್ತಾ ಇದ್ದಾರೆ, ಅವರ ಮೇಲೆ ಹೆಚ್ಚಿನ ತೆರಿಗೆಯನ್ನು ಹಾಕುವುದರ ಮುಖಾಂತರ ಬಡವ–ಬಲ್ಲಿದನ

ನಡುವೆ ಇರುವಂತಹ ಅಂತರವನ್ನು ಕಡಿಮೆ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಬಡವರು ಉಪಯೋಗ ಮಾಡತಕ್ಕಂತಹ ದಿನನಿತ್ಯದ ವಸ್ತುಗಳ ಮೇಲೆ ಹಾಕಿರುವಂತಹ ತೆರಿಗೆಯನ್ನು ಕಡಿಮೆ ಮಾಡಬೇಕೆಂದು ನಾನಾದರೂ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದೇ ಸಮಯದಲ್ಲಿ ಮತ್ತೊಂದು ಮುಖ್ಯವಾದಂತಹ ಅಂಶವನ್ನು ಪ್ರಸ್ತಾಪ ಮಾಡಿದ್ದೇ ಆದರೆ ಅದು ತಪ್ಪಾಗಲಾರದು ಎಂಬುದಾಗಿ ನಾನು ಭಾವಿಸುತ್ತೇನೆ. ನಾವು ಇಷ್ಟೆಲ್ಲಾ ಪ್ರಗತಿಯನ್ನು ಸಾಧಿಸುತ್ತಿದ್ದೇವೆ. ನಮ್ಮ ಪ್ರಗತಿಯ ಮುನ್ನೋಟವನ್ನು ನೋಡಿದಾಗ, ನಮ್ಮ ಪ್ರಗತಿಗಿಂತ ಹೆಚ್ಚು ಜನಸಂಖ್ಯೆಯು ಮುನ್ನಡೆಯಾಗುತ್ತಿದೆ. ಈ ಒಂದು ಕಾರಣದಿಂದ ನಾವು ಎಷ್ಟೇ ಪ್ರಗತಿಯನ್ನು ಸಾಧಿಸಿದರೂ ಕೂಡ ಹೊಳೆಯಲ್ಲಿ ಹುಣಸೇಹಣ್ಣನ್ನು ಕಿವುಚಿದಹಾಗೆ ಆಗುತ್ತದೆ. ಪ್ರಗತಿಗೆ ತಕ್ಕಂತೆ ಜನಸಂಖ್ಯೆ ನಿಯಂತ್ರಣವನ್ನೂ ಕೂಡ ಮಾಡಬೇಕಾಗುತ್ತದೆ. ಅದಕ್ಕೋಸ್ಕರ ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಇದರ ಬಗ್ಗೆ ಹೆಚ್ಚು ಆಸಕ್ತಿಯನ್ನು ವಹಿಸಬೇಕು. ಪ್ರತಿಯೊಬ್ಬ ಅಧಿಕಾರಿಗಳಿಗೂ ಇಂತಿಷ್ಟು ಸಂತಾನ ಹರಣ, ಶಸ್ತ್ರ ಚಿಕಿತ್ಸೆಯನ್ನು ಮಾಡಬೇಕೆಂದು ಆದೇಶವನ್ನು ನೀಡಬೇಕು. ಇಂತಿಷ್ಟು ಸಂತಾನ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿದಂತಹವರಿಗೆ ಬೋನಸ್ ಕೊಡತಕ್ಕಂತಹದ್ದು, ಹಾಗೂ ಇಂಕ್ರಿಮೆಂಟನ್ನು ಕೊಡುವುದರ ಮುಖಾಂತರ ಎಲ್ಲ ಸರ್ಕಾರಿ ನೌಕರರಿಗೂ ಈ ಜವಾಬ್ದಾರಿಯನ್ನು ವಹಿಸಬೇಕು. ಆ ರೀತಿ ಮಾಡಿದ್ದೇ ಆದರೆ ಜನಸಂಖ್ಯೆಯನ್ನು ನಿಯಂತ್ರಣ ಮಾಡುವುದಕ್ಕೆ ಸಾಧ್ಯವಾಗುತ್ತದೆ. ತನ್ಮೂಲಕ ರಾಜ್ಯದ ಹಾಗೂ ರಾಷ್ಟ್ರದ ಪ್ರಗತಿಯನ್ನು ಸಾಧನೆ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ನಮ್ಮ ಸರ್ಕಾರ ಜನತೆಯ ಕಲ್ಯಾಣಕ್ಕೋಸ್ಕರ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೆ. ಅದೇ ರೀತಿ ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಎಷ್ಟೋ ಕಾರ್ಯಕ್ರಮಗಳು ಶಾಸಕರಾದ ನಮ್ಮಂಥವರಿಗೇ ಗೊತ್ತಿರುವುದಿಲ್ಲ. ಎನ್.ಆರ್.ಇ.ಪಿ. ಆರ್.ಎಲ್.ಇ.ಜಿ.ಪಿ. ಆರ್.ಇ.ಎಸ್. ಡಿ.ಆರ್.ಡಿ.ಎಸ್, ಡಿ.ಪಿ.ಎ.ಪಿ. ಇವೆಲ್ಲ ಬಡ ಜನತೆಗೆ ಒಳ್ಳೆಯದಾಗಬೇಕು. ಅವರು ಉದ್ಧಾರವಾಗಬೇಕು. ಇವೆಲ್ಲದರಲ್ಲೂ ಪ್ರಗತಿಯನ್ನು ಸಾಧಿಸಬೇಕೆಂಬುದೇ ಮೂಲ ಉದ್ದೇಶ. ಇದಕ್ಕಾಗಿ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಾ ಇದೆ. ಉದಾಹರಣೆಗಾಗಿ ಹೇಳುವುದಾದರೆ, ಯಾವುದೇ ಒಂದು ಕೆಲಸವನ್ನು ತೆಗೆದುಕೊಂಡರೂ, ಕೆಲಸಕ್ಕಾಗಿ ಖರ್ಚು ಮಾಡುವಂತಹ ಹಣದಲ್ಲಿ ಶೇಕಡ ೨೦ರಷ್ಟು ಹಣ ಮಾತ್ರ ಆ ಕೆಲಸಕ್ಕಾಗಿ ಖರ್ಚಾಗಿರುತ್ತದೆ. ಆದರೆ ಉಳಿದ ೮೦ ಪರ್ಸೆಂಟ್ ಹಣ ರಾಜಕಾರಣಿಗಳಿಗೆ, ಅಥವಾ ಅಧಿಕಾರಿಗಳಿಗೆ ಹಾಗೂ ಕಂಟ್ರಾಕ್ಟುದಾರರುಗಳಿಗೆ ಅಥವಾ ದಳ್ಳಾಳಿಗಳಿಗೆ ಹೋಗುತ್ತದೆ. ಇದರಿಂದಾಗಿ, ಯಾವ ಧಾಟಿಯಲ್ಲಿ ಪ್ರಗತಿಯನ್ನು ಸಾಧಿಸಬೇಕೋ ಆ ಧಾಟಿಯಲ್ಲಿ ಸಾಗುತ್ತಿಲ್ಲ. ಅರ್ಥಕ್ಕರ್ಥ ದುರುಪಯೋಗವಾಗುತ್ತಿದೆ. ಈ ರೀತಿ ಹಣ ಪೋಲಾಗುವ ಬದಲು ರಾಜ್ಯದಲ್ಲಿರತಕ್ಕಂತಹ ೧೭೫ ತಾಲ್ಲೂಕುಗಳು ಇನಿವೆ ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಕಾರ್ಖಾನೆಯನ್ನು ಅಲ್ಲಿನ ಮಣ್ಣಿಗನುಗುಣವಾಗಿ, ಸ್ಥಳೀಯವಾಗಿ ಸಿಕ್ಕತಕ್ಕಂತಹ ಸಾಮಗ್ರಿಗಳನ್ನು ಉಪಯೋಗ ಮಾಡಿಕೊಂಡು ಕಾರ್ಖಾನೆಯನ್ನು ಮಾಡಿ, ತನ್ಮೂಲಕ ಜೀತ ಪದ್ಧತಿ ಹಾಗೂ ಬಡವರು ಹಾಗೂ ಕೂಲಿಕಾರರು ಹಾಗೂ ಆಸ್ತಿಪಾಸ್ತಿ ಇಲ್ಲದ ಬಡಬಗ್ಗರು ಯಾರು ಇದ್ದಾರೆ, ಅವರಿಗೆ ಕೆಲಸವನ್ನು ಈ ಕಾರ್ಖಾನೆಯ ಮುಖಾಂತರ ಕೊಟ್ಟು ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವ ಕಡೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಇವತ್ತು ರೈತರ ಬಗ್ಗೆ ಎಲ್ಲರೂ ಮಾತನಾಡುತ್ತೇವೆ. ಇವತ್ತಿನ ರೈತರ ಪರಿಸ್ಥಿತಿ ಏನಾಗಿದೆ ಎಂದರೆ, ಇವರ ಸಮಸ್ಯೆ ಸ್ವಾತಂತ್ರ್ಯ ಪೂರ್ವದಿಂದಲೂ ಬಂದವುಗಳಾಗಿವೆ, ಸರ್ಕಾರಿ ನೌಕರಿಯಲ್ಲಿರುವ ಒಬ್ಬ ಜವಾನನ ಜೀವನದ ಮಟ್ಟ ಏನಿದೆ. ಅದರಂತೆ ೧೦ ಎಕರೆಯನ್ನು ಇಟ್ಟುಕೊಂಡಿರತಕ್ಕಂತಹ ರೈತ ಅಷ್ಟು ಉತ್ತಮವಾಗಿ ಜೀವನ ನಡೆಸುವುದಕ್ಕಾಗುವುದಿಲ್ಲ. ಅಂತಹ ಒಂದು ಹೀನಸ್ಥಿತಿಯಲ್ಲಿದ್ದಾನೆ ರೈತ. ರೈತ ಇಂದು ಅನೇಕ ಕಷ್ಟಗಳಿಗೆ ಒಳಗಾಗಿದ್ದಾನೆ. ಇಂತಹವರನ್ನು ಸುಧಾರಣೆ ಮಾಡಬೇಕಾದರೆ, ಯಾರ್ಯಾರಿಗೆ ಜಮೀನು ಇರುವುದಿಲ್ಲ ೧-೨-೩ ಎಕರೆ ಜಮೀನನ್ನು ಇಟ್ಟುಕೊಂಡಿರತಕ್ಕಂತಹ ರೈತರಿಗೆ ಕಾರ್ಖಾನೆಯಲ್ಲಿ ಕೆಲಸವನ್ನು ಒದಗಿಸುವ ಮುಖಾಂತರ ಅವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬಹುದು. ಆ ದಿಕ್ಕಿನಲ್ಲಿ ಸರ್ಕಾರ ಗಮನಹರಿಸಬೇಕೆಂದು ಹೇಳುತ್ತೇನೆ.

ಅದೇರೀತಿ ಇನ್ನೊಂದು ಮುಖ್ಯವಾದಂತಹ ಸಂಗತಿ ಏನೆಂದರೆ, ಪ್ರಜಾಪ್ರಭುತ್ವದಲ್ಲಿ ಚುನಾವಣೆಗಳ ಬಗ್ಗೆ ನಂಬಿಕೆ ಇರತಕ್ಕಂತಹದ್ದರ ಬಗ್ಗೆ ಎಲ್ಲ ಪಕ್ಷಗಳವರೂ ಹೇಳಿಕೊಳ್ಳುತ್ತಾರೆ. ಅದನ್ನು ಎಷ್ಟರ

ಮಟ್ಟಿಗೆ ಅನುಷ್ಠಾನಕ್ಕೆ ತಂದಿದ್ದಾರೆ ? ಅಂತ ಹೇಳಿದಾಗ, ಆ ಪ್ರಶ್ನೆಯನ್ನು ನಾನು ಹಾಕಿದಾಗ ವಿರೋಧಪಕ್ಷದವರಿಗೆ ಕೋಪ ಬರತಕ್ಕಂತಹ ಮಾತು ಆಗಬಹುದು. ೧೪–೧೫ ವರ್ಷಗಳಿಂದಲೂ ಅನೇಕ ಪುರಸಭೆಗಳಿಗೆ, ನಗರಸಭೆಗಳಿಗೆ ಚುನಾವಣೆಗಳನ್ನೇ ನಡೆಸಿರಲಿಲ್ಲ. ಇಂತಹ ಚುನಾವಣೆಗಳನ್ನು ಜನತಾ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ಮಾಡಿದೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆ ಎಂಬುದನ್ನು ತೋರಿಸಿದೆ ಇದನ್ನಾದರೂ ವಿರೋಧ ಪಕ್ಷದವರು ಮೆಚ್ಚಬೇಕಾಗಿತ್ತು, ಅದರಲ್ಲೂ ನಾವು ೧೮ ವರ್ಷ ಮೇಲ್ಪಟ್ಟವರಿಗೆ ಚುನಾವಣೆಯಲ್ಲಿ ಮತ ಚಲಾವಣೆಯ ಅಧಿಕಾರವನ್ನು ಕೊಟ್ಟಿದ್ದೇವೆ ಜೊತೆಗೆ ಮಹಿಳೆಯರಿಗೆ ಶೇಕಡ ೨೦ ಸ್ಥಾನಗಳನ್ನು ಮೀಸಲಾಗಿಡಬೇಕು ಎಂಬ ತೀರ್ಮಾನ ಮಾಡಿ ಅದನ್ನು ಜಾರಿಗೆ ತಂದಿದ್ದೇವೆ. ಜನರಲ್ಲಿ ನಮಗೆ ನಂಬಿಕೆ ಇದೆ. ಅದರಂತೆ ಜನರೂ ನಮ್ಮ ಮೇಲೂ ನಂಬಿಕೆ ಇಟ್ಟಿದ್ದಾರೆ. ಮತ್ತೆ ನಾವು ಅಧಿಕಾರವನ್ನು ವಿಕೇಂದ್ರೀಕರಣ ಮಾಡುತ್ತೇವೆಂದು ಹೇಳಿದ್ದೆವು. ಏಕೆಂದರೆ ಪ್ರತಿಯೊಂದು ಕೆಲಸಕ್ಕೂ ಹಳ್ಳಿಯಿಂದ ಡಿಲ್ಲಿಗೆ ಹೋಗುವಂತಾಗಬಾರದು. ಡಿಲ್ಲಿಯೇ ಹಳ್ಳಿಗಳ ಹತ್ತಿರ ಹೋಗುವಂತಾಗಬೇಕು ಎಂದು ಹೇಳುತ್ತಾ ಬಂದಿದ್ದಾರೆ. ಆದರೆ ಇದನ್ನು ಕಾರ್ಯ ರೂಪಕ್ಕೆ ತಂದಂತಹವರು ಯಾರು ? ಇದನ್ನು ಕಾರ್ಯರೂಪಕ್ಕೆ ತಂದಂತಹವರು ಜನತಾ ಸರ್ಕಾರ. ಅದನ್ನು ಕಾರ್ಯರೂಪಕ್ಕೆ ತಂದಾಗ ಮಾತ್ರ ಜನತೆ ಸಕ್ರಿಯವಾಗಿ ತನಗೆ ಮೆಚ್ಚತಕ್ಕಂತಹ ಅನೇಕ ಕಾರ್ಯಕ್ರಮಗಳನ್ನು ಅವನ ಮಟ್ಟದಲ್ಲೇ ತೀರ್ಮಾನ ಮಾಡುವಂತಾಗಬೇಕು. ಅವರಿಗೆ ಅಧಿಕಾರ ವನ್ನು ಕೊಡುವ ಸಲುವಾಗಿ ಮಂಡಲ್ ಪಂಚಾಯಿತಿ, ಹಾಗೂ ಜಿಲ್ಲಾಪರಿಷತ್ತು ಚುನಾವಣೆಗಳನ್ನು ಮಾಡುವುದಕ್ಕೆ ಎಷ್ಟೇ ಅಡ್ಡಿ ಆತಂಕ ಬಂದರೂ ಕೂಡ ಅದನ್ನು ಕಾರ್ಯರೂಪಕ್ಕೆ ತರುವ ದಿಸೆಯಲ್ಲಿ ಪ್ರಯತ್ನ ಮಾಡಿದ್ದೇವೆ. ಚುನಾವಣೆಯನ್ನು ಮಾಡುತ್ತೇವೆ. ಇದರಲ್ಲಿ ಸೋಲು–ಗೆಲುವು ಮುಖ್ಯವಲ್ಲ ಹೇಳಿದಂತೆ ಕಾರ್ಯಕ್ರಮವನ್ನು ಹಾಕಿಕೊಂಡು ಕಾರ್ಯರೂಪಕ್ಕೆ ತರುತ್ತಿದ್ದೇವೆ ಎಂಬುದನ್ನು ಹೇಳಿದೆ ಇವೆಲ್ಲದರ ಜೊತೆಗೆ ರಾಜಕಾರಿಣಿಗಳು ಅಷ್ಟು ದುಡ್ಡು ಮಾಡುತ್ತಾರೆ. ಮಂತ್ರಿಗಳು ಇಷ್ಟು ದುಡ್ಡು ಮಾಡುತ್ತಾರೆ, ಲಂಚ ಹೊಡೆಯುತ್ತಾರೆ ಎಂಬುದರ ಬಗ್ಗೆ ಈ ಸದನದಲ್ಲಿ ಹಾಗೂ ಸದನದ ಹೊರಗಡೆ ಹೇಳುತ್ತಲೇ ಇರುತ್ತಾರೆ. ಆದ್ದರಿಂದ ಈ ಒಂದು ಭ್ರಷ್ಟಾಚಾರವನ್ನು ಕೊನೆಗಾಣಿಸಬೇಕೆಂಬ ಮೂಲ ಉದ್ದೇಶದಿಂದ ಮೊದಲ ಹೆಜ್ಜೆಯಾಗಿ ಲೋಕಾಯುಕ್ತ ಹಾಗೂ ಉಪ ಲೋಕಾಯುಕ್ತರನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ನೇಮಕ ಮಾಡಿದ್ದಾರೆ. ಇದರಲ್ಲಿ ಶಾಸಕರು, ಮಂತ್ರಿಗಳು ಹಾಗೂ ಮುಖ್ಯಮಂತ್ರಿಗಳನ್ನೂ ಕೂಡ ಇದಕ್ಕೆ ಒಳಪಡಿಸಿದ್ದಾರೆ. ಅವರ ವಿರುದ್ಧ ಶಾಸಕರ ವಿರುದ್ಧ ಯಾರಾದರೂ ಭ್ರಷ್ಟಾಚಾರದ ಆಪಾದನೆಗಳನ್ನು ಮಾಡಿದರೆ, ಅವುಗಳನ್ನು ತನಿಖೆ ಮಾಡುವ ಸಲುವಾಗಿ ಈ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆ. ಇಂತಹ ನಿರ್ಧಾರಗಳನ್ನಾದರೂ ವಿರೋಧಪಕ್ಷದವರು ಮೆಚ್ಚಬಹುದಲ್ಲ, ಆದರೆ ಅವರು ಇದನ್ನು ಮೆಚ್ಚುವುದಿಲ್ಲ. ಒಲ್ಲದ ಗಂಡ ಮೊಸರಿನಲ್ಲಿ ಕಲ್ಲು ಹುಡುಕಿದ ಹಾಗೆ ಎಂಬ ಗಾದೆಯಂತೆ, ಪ್ರತಿಯೊಂದರಲ್ಲೂ ಅವರು ತಪ್ಪನ್ನು ಕಂಡು ಹಿಡಿಯುವುದಕ್ಕೆ ಹೊರಟ್ಟಿದ್ದಾರೆ, ಗುಣಕ್ಕೆ ಮತ್ಸರ ಏಕೆ ? ಇದು ಬಹಳ ವಿಷಾದನೀಯ. ಆದರೂ ಕೂಡ ಅನೇಕ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದೇವೆ. ಅದರಲೆಲ್ಲ ಪ್ರಗತಿಯನ್ನು ಸಾಧಿಸ ಬೇಕಾದರೆ ಅನೇಕ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗಿದೆ. ವರಮಾನ ಪ್ರಮಾಣ ಪತ್ರವನ್ನು ತೆಗೆದುಕೊಳ್ಳುವ ವಿಚಾರದಲ್ಲಿ ಅರ್ಹರಾದವರಿಗೆ ಸರ್ಕಾರದ ಸಹಾಯ ಸಿಕ್ಕಬೇಕು. ಪ್ರತಿಯೊಂದು ಹಂತದಲ್ಲೂ ಅವರು ವರಮಾನ ಪ್ರಮಾಣ ಪತ್ರವನ್ನು ತರಬೇಕು ಎಂದು ಹೇಳುತ್ತಾರೆ ಆವಾಗ ಆತ ತಹಸೀಲ್ದಾರ್, ಡಿ.ಡಿ., ವಿಲೇಜ್ ಅಕೌಂಟೆಂಟ್, ರೆವಿನ್ಯೂ ಇನ್ಸ್‌ಪೆಕ್ಟರ್ ಹತ್ತಿರ ಅಲೆಯಬೇಕು. ಅದಕ್ಕೆ ಸೂಕ್ತ ಸಲಹೆ ಕೊಡುತ್ತೇನೆ ಪ್ರತಿಯೊಂದು ಕುಟುಂಬಕ್ಕೂ ಕೂಡ ಒಂದು ಫ್ಯಾಮಿಲಿ ಐಡೆಂಟಿಫಿಕೇಷನ್ ಕಾರ್ಡ್ ಎಂದು ಕೊಡಬೇಕು. ಆ ರೀತಿ ಕೊಟ್ಟು ಅದರಲ್ಲಿ ನಿಜವಾಗಿ ಅವರಿಗೆ ಇರತಕ್ಕ ಮಕ್ಕಳು, ಆಸ್ತಿಪಾಸ್ತಿ, ವಿದ್ಯಾವಂತರು ಎಷ್ಟು, ಅವಿದ್ಯಾವಂತರು ಎಷ್ಟು ಮಂದಿ ಇದ್ದಾರೆಂಬುದನ್ನೆಲ್ಲ ನಮೂದಿಸಬೇಕು.

ಒಬ್ಬ ಮಾನ್ಯ ಸದಸ್ಯರು.—೬ರಿಂದ ೧೦ ಎಕರೆಗೆ ಜಮೀನು ಇದ್ದವರಿಗೆ ಕಾರ್ಡ್ ಕೊಟ್ಟಿದ್ದಾರೆ ಬೇಕಾದರೆ ಹಳ್ಳಿಯಲ್ಲಿ ಬಂದು ವೆರಿಫೈ ಮಾಡಿದರೆ ಗೊತ್ತಾಗುತ್ತದೆ. ನೂರಕ್ಕೆ ಹತ್ತು ಜನ ಬಡವರಿಗೆ ಮಾತ್ರ ಸಿಕ್ಕಿದೆ.

ಶ್ರೀ ಡಿ. ಟಿ. ಜಯಕುಮಾರ್.—ಫ್ಯಾಮಿಲಿ ಕಾರ್ಡ್ ಎಂದು ಕೊಡಬೇಕು. ಇನ್‌ಕಂ ಸರ್ಟಿಫಿಕೇಟ್ ಕೊಡುವಾಗ ಆದಾಯವನ್ನು ೪೮೦೦ ಎಂದು ನಿಗದಿ ಮಾಡಿದ್ದಾರೆ. ಇವತ್ತು ಜವಾನನ

ಸಂಬಳ ೪೮೦೦ ಬರುತ್ತದೆ. ಅವನು ಯಾವ ರೀತಿ ಸಹಾಯಧನ ಪಡೆಯಬೇಕು. ಎಲ್ಲರಿಗೂ ತಿಳಿದ ಹಾಗೆ ೪೮೦೦ ರೂಪಾಯಿ ವರಮಾನ ಇರುವವರು ಜೀವನ ಮಾಡುವುದು ಕಷ್ಟ. ಕೂಲಿಗಾರನ ಸಂಬಳ ಕೂಡ ೪೮೦೦ಕ್ಕೂ ಹೆಚ್ಚು ಬರುತ್ತದೆ. ಪ್ರಾಮಾಣಿಕವಾದ ಕೂಲಿಗಾರ ಇನ್‌ಕಂ ಸರ್ಟಿಫಿಕೇಟ್ ಪಡೆದುಕೊಳ್ಳುವುದು ಕಷ್ಟವಾಗುತ್ತದೆ. ಆದ್ದರಿಂದ ಫ್ಯಾಮಿಲಿ ಐಡೆಂಟಿಫಿಕೇಷನ್ ಕಾರ್ಡನ್ನು ಕೊಡಬೇಕೆಂದು ಹೇಳುತ್ತೇನೆ. ಅದನ್ನು ಸರಿಯಾದ ರೀತಿಯಲ್ಲಿ ಮಾಡಿದರೆ ಇಂಥ ಗೊಂದಲಕ್ಕೆ ಕಡಿವಾಣ ಹಾಕಬಹುದೆಂದು ಹೇಳುತ್ತೇನೆ. ಅತಿ ಮುಖ್ಯವಾದ ವಿಚಾರವೆಂದರೆ, ಸಮಾಜಕಲ್ಯಾಣ ಇಲಾಖೆಯಲ್ಲಿ ಅಥವಾ ಮುಖ್ಯ ಮಂತ್ರಿಗಳಿಗೆ ಬರತಕ್ಕ ಖಾತೆಯಲ್ಲಿ ಎಸ್.ಸಿ. ಎಸ್.ಟಿ. ಬ್ಯಾಕ್‌ವರ್ಡ್ ಕ್ಲಾಸ್, ಮೈನಾರಿಟಿಸ್ ಎಲ್ಲಾ ಇವೆ. ಇವು ಸಮಾಜದಲ್ಲಿ ಏತಕ್ಕೆ ಹುಟ್ಟಿಕೊಂಡವು ? ಅವರಿಗೆ ೧೫ ಪರ್ಸೆಂಟ್, ೧೮ ಪರ್ಸೆಂಟ್ ೨೫ ಪರ್ಸೆಂಟ್ ಕೊಡಬೇಕೆಂದು ನಾವೂ, ನೀವೂ, (ವಿರೋಧ ಪಕ್ಷದವರು) ಹೋರಾಟ ಮಾಡುತ್ತೇವೆ. ಇದರ ಮೂಲೋದ್ದೇಶ ಏನು ? ಸಮಾಜ ಒಂದೇ ಅಂತರದಲ್ಲಿ ಬೆಳೆದು ಕೊಂಡು ಹೋಗಬೇಕು, ಸಹಜ ಜೀವನ ನಡೆಸಬೇಕೆಂಬುದು ಮೂಲೋದ್ದೇಶ. ಆದರೆ ಇಲ್ಲಿ ಏನಾಗುತ್ತಿದೆ ಎಂದರೆ ರಾಜಕೀಯ ಬೀಜ ಬಿತ್ತಿ ಎಸ್.ಟಿ. ಬಂದರೆ ಏತಕ್ಕೆ ಬಂದ, ಎಸ್.ಸಿ. ಬಂದರೆ ಏತಕ್ಕೆ ಬಂದ ಎಂಬುದಾಗಿದೆ. ಹಿಂದೆ ದೇವರಾಜ ಅರಸುರವರು ಯಾವ ರೀತಿ ನಾಯಕ, ಬೇಡ, ವಾಲ್ಮೀಕಿ ಪಂಗಡದ ಜನಾಂಗಗಳಿಗೆ ಸವಲತ್ತುಗಳನ್ನು ಕೊಟ್ಟಿದ್ದರು ಅದನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಹೇಳುತ್ತೇನೆ. ಅವರಿಗೆ ಇವತ್ತು ಕೊಡುತ್ತಿರತಕ್ಕ ಸವಲತ್ತು ಕಡಿಮೆಯೇ ಎಂದು ಹೇಳುತ್ತಿದ್ದೇನೆ. ಹರಿಜನ ಗಿರಿಜನರಿಗೆ ಅನುಕೂಲವಾಗಿದ್ದರೆ ಸಂತೋಷ, ಅವರೂ ಮುಂದೆ ಬರಬೇಕು ಅವರಲ್ಲಿ ಅನೇಕರು ಡಾಕ್ಟರ್, ಇಂಜಿನಿಯರುಗಳಾದವರನ್ನು ಸಮಾಜದಲ್ಲಿ ನೋಡಬೇಕು. ಇಂದು ಎಸ್.ಸಿ.ಎಸ್.ಟಿ. ಯವರಿಗೆ ಕಲ್ಪಿಸಿರತಕ್ಕ ಸೌಲಭ್ಯಗಳನ್ನು ನೋಡಿ ಹತ್ತು ವರ್ಷದ ನಂತರ ಲಿಂಗಾಯತರು, ಬ್ರಾಹ್ಮಣರು ನಮ್ಮನ್ನು ಎಸ್.ಸಿ. ಎಸ್.ಟಿ. ಮಾಡಿ ಎಂದು ಹೇಳುವ ತಿರುವು ಮುರುವು ಆಗುವ ಕಾಲ ಬರುತ್ತದೆಂದು ಹೇಳಬಹುದು. ಆ ಕಾರಣದಿಂದ ಮಂತ್ರಿಗಳಿಗೆ ವಿಶೇಷವಾಗಿ ಕೃತಜ್ಞತೆ ಸಲ್ಲಿಸಿದರೆ ತಪ್ಪಾಗಲಾರದು. ೪೦ ಲಕ್ಷ ಮಂದಿ ಇದರಡಿಯಲ್ಲಿ ಬರುತ್ತಾರೆ ಅವರೆಲ್ಲ ಬಹಳ ಸಂತೋಷವಾಗಿದ್ದಾರೆ. ಅವರು ರಾಜಕಾರಣಿಗಳಾಗಿ ಬಸವಲಿಂಗಪ್ಪನವರ ವಿರುದ್ಧ ಹೋರಾಟ ಮಾಡಬೇಕೆಂದು ಇಲ್ಲ, ನಾವು ವಿದ್ಯಾಭ್ಯಾಸ ಮಾಡಬೇಕು ಕೆಲಸ ತೆಗೆದುಕೊಳ್ಳಬೇಕು, ಸಮಾಜದಲ್ಲಿ ಇತರರಂತೆ ಬೆಳೆಯಬೇಕೆಂಬ ದೃಷ್ಟಿಯಿಂದ ಪ್ರಯತ್ನ ಮಾಡುತ್ತಾರೆ. ಇದನ್ನು ಬಸವಲಿಂಗಪ್ಪನವರು ಒಪ್ಪಿಕೊಳ್ಳುತ್ತಾರೋ ಇಲ್ಲವೋ ಗೊತ್ತಿಲ್ಲ ಎಸ್.ಸಿ ಎಸ್.ಟಿ.ಯವರ ಬಗ್ಗೆ ಕಳೆದ ವಾರ ನೀವೇ (ತಿಪ್ಪೇಸ್ವಾಮಿಯವರಿಗೆ) ಒಂದು ಖಾಸಗೀ ನಿರ್ಣಯವನ್ನು ತಂದಿರಿ.— ೩೦ ಸಾವಿರ ರೂಪಾಯಿಗಳಿಗಿಂತ ಯಾರಿಗೆ ಆದಾಯ ಹೆಚ್ಚಾಗಿರುತ್ತದೋ ಅವರಿಗೆ ಎಸ್.ಸಿ.ಎಸ್.ಟಿ. ಸೌಲಭ್ಯ ಕೊಡತಕ್ಕದಲ್ಲ ಎಂದು ಐ.ಎ.ಎಸ್, ಐ.ಪಿ.ಎಸ್., ಅಧಿಕಾರಿಗಳಾಗಿ ಅನೇಕರು ಉದ್ಧಾರವಾಗುತ್ತಾ ಬಂದಿದ್ದಾರೆ. ಅನೇಕರು ಮೆಡಿಕಲ್, ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸೀಟು ತೆಗೆದುಕೊಳ್ಳುತ್ತಿದ್ದಾರೆ. ಹರಿಜನರಲ್ಲಿ ಉನ್ನತ ವರ್ಗ ಬೆಳೆಯುತ್ತಿದೆಯೆಂದು ಆ ಅಂತರವನ್ನು ಕಡಿಮೆ ಮಾಡುವುದಕ್ಕೆ ತಾವು ಒಂದು ಖಾಸಗಿ ನಿರ್ಣಯವನ್ನು ತಂದಿರಿ. ಅದನ್ನು ಬಸವಲಿಂಗಪ್ಪನವರು ಒಪ್ಪಿದರೆ ಅವರನ್ನು ಮೆಚ್ಚತಕ್ಕ ಮಾತನ್ನು ಹೇಳಬಹುದಾಗಿತ್ತು. ತಮ್ಮ ಸ್ವಾರ್ಥಕ್ಕೋಸ್ಕರ ತಾವು ಉದ್ಧಾರವಾದರೆ ಸಾಕು, ಬಡ ಹರಿಜನರು ಎಲ್ಲಾದರೂ ಇರಲಿ...

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ ನಾನು ಕ್ರಿಯಾಲೋಪ ಎತ್ತುತ್ತೇನೆ. ಭಾಷಣ ಮಾಡುವುದಕ್ಕೆ ಎಲ್ಲರಿಗೂ ಸ್ವಾತಂತ್ರ್ಯ ಇದೆ. ಯಾರೋ ಒಬ್ಬ ಸದಸ್ಯರ ಬಗ್ಗೆ ಅವರು ಒಳ್ಳೆಯವರು ಇವರು ಕೆಟ್ಟವರು, ಅವರು ದೊಡ್ಡವರು, ಇವರು ಚಿಕ್ಕವರು ಎಂಬ ವ್ಯಾಖ್ಯಾನ ಸರಿಯಲ್ಲ. ನನಗೆ ಅವರು ಚಿಕ್ಕವರಿದ್ದಾರೆ. ಅವರು ಏನು ಮಾತನಾಡಿದರೂ ನಾನು ಕಿವಿ ಮೇಲೆ ಹಾಕಿಕೊಳ್ಳುವುದಿಲ್ಲ. ಅದಕ್ಕೋಸ್ಕರ ನಾನು ಸುಮ್ಮನೆ ಕುಳಿತಿದ್ದೇನೆ. ನನ್ನ ವಾದವನ್ನು ಟೀಕೆ ಮಾಡುವುದಕ್ಕೆ ಸ್ವಾತಂತ್ರ್ಯ ಉಂಟು. ಆದರೆ ನನ್ನ ಬೆಳವಣಿಗೆಯನ್ನು, ಇರುವಿಕೆಯನ್ನು, ನಿಲುವನ್ನು ದಯಮಾಡಿ ಟೀಕೆ ಮಾಡುವುದಕ್ಕೆ ಬರಬೇಡಿ.

ಶ್ರೀ ಡಿ. ಟಿ. ಜಯಕುಮಾರ್.—ಕೊನೆಯದಾಗಿ, ಕೇಂದ್ರ ಸರ್ಕಾರ ಈ ರಾಜ್ಯಕ್ಕೆ ಮಲತಾಯಿ ಧೋರಣೆ, ಉದಾಸೀನತೆಯನ್ನು ಮೊದಲಿನಿಂದಲೂ ತೋರುತ್ತಾ ಬಂದಿದೆ. ಈಗ ಜನತಾ ಸರ್ಕಾರ ಇದೆ ಎಂದು ಅಲ್ಲ ಹಿಂದೆ ಕಾಂಗ್ರೆಸ್ ಸರ್ಕಾರ ಇದ್ದಾಗಲೂ ಇತ್ತು ಇದನ್ನು ತಡೆಯುವ ಶಕ್ತಿ

ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಇದೆ. ಭರತ ಖಂಡದಲ್ಲಿ ರಾಜೀವ ಗಾಂಧಿಯವರನ್ನು ಬಿಟ್ಟರೆ ಎರಡನೆಯದಾಗಿ ರಾಷ್ಟ್ರದ ಜನತೆ ಸರ್ವೇಸಾಮಾನ್ಯವಾಗಿ ಮೆಚ್ಚತಕ್ಕ ವ್ಯಕ್ತಿ ರಾಮಕೃಷ್ಣ ಹೆಗಡೆಯವರು ಎಂದರೆ ತಪ್ಪಾಗಲಾರದು. ಇಂಥ ಪರಿಸ್ಥಿತಿಯಲ್ಲಿ ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ಏನಿದೆ ಅದರ ವಿರುದ್ಧ ಹೋರಾಟ ಮಾಡಲೇಬೇಕಾಗುತ್ತದೆ. ವಿಜಯನಗರ ಉಕ್ಕು ಕಾರ್ಖಾನೆ ನಮ್ಮ ಹಕ್ಕು ಒಂದು ಹೋರಾಟ ಮಾಡಿದಿರಿ, ಸಿಪಿಐ.ನವರು ಸಿಪಿಎಂ.ನವರು ಹೋರಾಟ ಮಾಡಿದರು, ಎಲ್ಲರೂ ಮಾಡಿದರೂ ಎಳ್ಳಷ್ಟೂ ಬೆಲೆ ಸಿಗಲಿಲ್ಲ. ಅವರ ಧೋರಣೆ ಅವರಿಗೆ, ನಮ್ಮ ಧೋರಣೆ ನಮಗೆ. ನಮಗೆ ಹೋರಾಟದ ಧೋರಣೆಯಾದರೆ ಅವರಿಗೆ ನಿರ್ಲಕ್ಷ್ಯದ ಧೋರಣೆ. ಇಂಥ ವಿಚಾರದಲ್ಲಿ ಕಾರ್ಖಾನೆ ಖರಾಗದಿರುವುದು ಮಲತಾಯಿ ಧೋರಣೆ ಅಲ್ಲವೇ ? ವಿಜಯನಗರ ಉಕ್ಕು ಕಾರ್ಖಾನೆಯನ್ನು ಮುಖ್ಯ ಮಂತ್ರಿಗಳು ಸ್ಥಾಪನೆ ಮಾಡಲು ಹೋರಾಟ ನಡೆಸಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ. ಇಡೀ ರಾಷ್ಟ್ರದಲ್ಲಿ ಅತ್ಯಂತ ಕಡಿಮೆ ರೈಲ್ವೆ ಸೌಲಭ್ಯ ಇರುವುದು ಕರ್ನಾಟಕ ರಾಜ್ಯದಲ್ಲಿ ಇಲ್ಲಿ ಬ್ರಾಡ್‌ಗೇಜ್ ಇಲ್ಲ. ಮಾನ್ಯ ಕೆ. ಹನುಮಂತಯ್ಯನವರು ಬಂದಾಗ ಎರಡು ಲೈನ್ ಅನ್ನು ಗುಲ್ಬರ್ಗ ಮತ್ತು ಧಾರವಾಡದಲ್ಲಿ ಮಾಡಿದರು. ನಿಖರವಾಗಿ ಮತ್ತು ನೇರವಾಗಿ ರಾಜ್ಯಕ್ಕೆ ಯಾವುದೇ ರೈಲ್ವೆ ಬ್ರಾಡ್‌ಗೇಜನ್ನು ಇವತ್ತಿನವರೆಗೆ ಕೊಟ್ಟಿಲ್ಲ. ಮೈಸೂರು ಬೆಂಗಳೂರು ಇದೆ. ಇಲ್ಲಿ ಬಹಳ ಕೈಗಾರಿಕೆಗಳು ಬರುತ್ತಿವೆ. ಕೈಗಾರಿಕೆಗಳು ಬಂದಿರುವುದರಿಂದ ನೀರಿನ ಸಮಸ್ಯೆ, ಜಮೀನಿನ ಸಮಸ್ಯೆ, ಹೀಗೆ ಎಲ್ಲಾ ರೀತಿಯ ಸಮಸ್ಯೆಗಳೂ ಬರುತ್ತಿವೆ. ಅದನ್ನು ಸರಿ ಮಾಡಿ. ಬಾಂಬೆ-ಪೂನಾದಲ್ಲಿ ಯಾವ ರೀತಿ ಜೋಡಿ ರಸ್ತೆಗಳು ಇವೆ ಅದೇ ರೀತಿ ಬೆಂಗಳೂರು–ಮೈಸೂರಿನಲ್ಲೂ ಆಗಬೇಕೆಂದು ಹೇಳುತ್ತೇನೆ. ಬ್ರಾಡ್‌ಗ್ರೇಜ್ ಆಗಬೇಕು, ಎಲೆಕ್ಟ್ರಿಕ್ ಟ್ರೈನ್ ಆಗಬೇಕು, ಇದರ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಆದಷ್ಟು ಜಾಗ್ರತೆ ಮಾಡುವಂತೆ ಸತತ ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೇಂದ್ರದ ಉದ್ದಿಮೆಗಳಲ್ಲಿ ಕನ್ನಡಿಗರಿಗೆ ಬಹಳ ಅನ್ಯಾಯವಾಗುತ್ತಿದೆ. ಈ ಅನ್ಯಾಯವನ್ನು ಸರಿಪಡಿಸಲಿಕ್ಕೆ ರಾಜ್ಯ ಸರ್ಕಾರ ಶ್ರೀಮತಿ ಸರೋಜಿನಿ ಮಹಿಷಿ ಸಮಿತಿಯನ್ನು ಮಾಡಿ ಅದರ ಮೂಲಕ ವರದಿಯನ್ನು ತರಿಸಿಕೊಂಡು ಕನ್ನಡಿಗರಿಗೆ ಎಲ್ಲೆಲ್ಲಿ ಅನ್ಯಾಯವಾಗಿದೆ ಅದನ್ನು ಸರಿಪಡಿಸತಕ್ಕ ಕೆಲಸವಾಗಿದೆ. ಆದರೆ ಅದು ಇನ್ನೂ ನಿಧಾನವಾಗಬಾರದು. ಶ್ರೀಮತಿ ಸರೋಜಿನಿ ಮಹಿಷಿಯವರ ಸಮಿತಿಯ ವರದಿಯನ್ನು ತರಿಸಿಕೊಂಡು ಕನ್ನಡದವರಿಗೆ ಎಲ್ಲೆಲ್ಲಿ ಆದ್ಯತೆ ಕೊಟ್ಟಿಲ್ಲ, ಅನ್ಯಾಯವಾಗಿದೆ ಅದೆಲ್ಲವನ್ನೂ ಸರಿಪಡಿಸತಕ್ಕ ಕೆಲಸವನ್ನು ಮುಖ್ಯ ಮಂತ್ರಿ ಮಂತ್ರಿಗಳು ಮಾಡಬೇಕೆಂದು ಬೇಡಿಕೊಳ್ಳುತ್ತೇನೆ ಕರ್ನಾಟಕ ರಾಜ್ಯದಲ್ಲಿ ಹೊರ ರಾಜ್ಯದಿಂದ ಬಂದಂತಹ ಅನೇಕ ಕೈಗಾರಿಕೋದ್ಯಮಿಗಳು ಇವೆ. ಅದು ಶುಭ ಸೂಚನೆ. ಆದರೆ ಅವರಿಗೆ ವಿದ್ಯುಚ್ಛಕ್ತಿ ತೊಂದರೆ ಇದೆ. ಕೈಗಾರಿಕೆಗಳಿಗೆ ಮೂಲವಾಗಿ ಬೇಕಾದುದು ವಿದ್ಯುಚ್ಛಕ್ತಿ. ಇದನ್ನು ಸಮರ್ಪಕವಾದ ರೀತಿಯಲ್ಲಿ ಕೊಡದೇ ಇರುವುದರಿಂದ ಅನೇಕ ಕೈಗಾರಿಕೆಗಳು ಬೇರೆ ಬೇರೆ ರಾಜ್ಯಗಳಿಗೆ ಹೋಗುತ್ತಿವೆ. ಆ ದೃಷ್ಟಿಯಿಂದ ಕರ್ನಾಟಕ ರಾಜ್ಯಕ್ಕೆ ಎಷ್ಟು ವಿದ್ಯುಚ್ಛಕ್ತಿ ಬೇಕು ಎಂಬುದನ್ನು ಸಂಶೋಧನೆ ಮಾಡಿ. ಕರ್ನಾಟಕ ರಾಜ್ಯಕ್ಕೆ ಎಷ್ಟು ವಿದ್ಯುಚ್ಛಕ್ತಿ ಬೇಕು ಅಷ್ಟನ್ನು ಉತ್ಪಾದನೆ ಮಾಡತಕ್ಕ ಕೆಲಸವನ್ನು ನಾವು ಈಗಲಾದರೂ ಮಾಡದೇ ಹೋದರೆ ಮುಂದಿನ ಪೀಳಿಗೆಗೆ ನಮ್ಮನ್ನು ಶಪಿಸುತ್ತದೆ. ಕಾಂಗ್ರೆಸ್ಸಿನವರು ಏನು ಮಾಡಿದ್ದಾರೆ ಅದೇ ರೀತಿ ಮಾಡಿದರೆ ನಾವು ಕೂಡ ಜನರಿಂದ ಬಯ್ಯಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ಕೊಡಬೇಕೆಂದು ಮುಖ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ, ಈಜಿಪ್ಟ್ ದೇಶಕ್ಕೆ ನೈಲ್ ನದಿ ಹೇಗೆ ವರಪ್ರಸಾದವೋ ಹಾಗೆ ನಮ್ಮ ಭಾರತ ದೇಶಕ್ಕೆ ಗಂಗಾ–ಕಾವೇರಿ ಯೋಜನೆ ವರಪ್ರಸಾದ. ಸ್ವಾತಂತ್ರ್ಯ ಪೂರ್ವದಲ್ಲಿ ಇಂಗ್ಲೀಷರು ಒಂದು ಪ್ರಾಜೆಕ್ಟ್ ಅನ್ನು ತಯಾರಿಸಿದರು. ಉತ್ತರ ಭಾರತದಲ್ಲಿ ಅತಿವೃಷ್ಟಿ ಆದಾಗ ಅನೇಕ ಯೋಜನೆಗಳನ್ನು ಮಾಡುತ್ತೇವೆಂದು ಅನೇಕ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ.

೩–೩೦ ಪಿ. ಎಂ.

ದಕ್ಷಿಣ ಭಾರತದಲ್ಲಿ ಬರಗಾಲವನ್ನು ಹೋಗಲಾಡಿಸಲಿಕ್ಕೆ ಅನೇಕ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಈ ಎಲ್ಲಾ ಹಣವನ್ನು ಒಂದೇ ಕಡೆ ಕ್ರೋಢೀಕರಿಸಿಕೊಂಡು ಗಂಗಾ

ಕಾವೇರಿ ಯೋಜನೆಯನ್ನು ಮಾಡಿದ್ದೇ ಆದರೆ ನಾವುಗಳು ಆಹಾರದಲ್ಲಿ ಸ್ವಾವಲಂಬಿಗಳಾಗಬಹುದಾಗಿತ್ತು, ನಿರುದ್ಯೋಗ ಸಮಸ್ಯೆಗಳನ್ನು ಬಗೆಹರಿಸಬಹುದಾಗಿತ್ತು. ಜೊತೆಗೆ ಹೊರ ದೇಶದ ಸಾಗಾಣಿಕೆಯನ್ನು ತಪ್ಪಿಸಬಹುದಾಗಿತ್ತು. ಇಂಥ ಗಂಗಾ ಕಾವೇರಿ ಯೋಜನೆಯನ್ನು ಮಾಡುತ್ತೇವೆ ಎಂದು ಜನತಾ ಪಕ್ಷ ೭೭ನೇ ಇಸವಿಯಲ್ಲಿ ಶ್ರೀ ಮುರಾರ್ಜಿ ದೇಸಾಯಿ ಅವರು ಪ್ರಧಾನ ಮಂತ್ರಿಗಳಾಗಿದ್ದಾಗ ಆಶ್ವಾಸನೆಯನ್ನು ಕೊಟ್ಟಿದ್ದರು. ಈ ಆಶ್ವಾಸನೆಯನ್ನು ಈಡೇರಿಸಿ ಶ್ರೀ ರಾಮಕೃಷ್ಣ ಹೆಗಡೆಯವರಿಗೆ ಆ ಕೆಲಸವನ್ನು ಮಾಡಲು ಶಕ್ತಿ ಸಾಮರ್ಥ್ಯ ಇದೆ ಎಂದು ನಾನಾದರೂ ಭಾವಿಸಿಕೊಂಡಿದ್ದೇನೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಗಮನ ಕೊಡಬೇಕೆಂದು ಹೇಳುತ್ತೇನೆ.

ಇನ್ನೂ ಹೆಚ್ಚಿಗೆ ಹೇಳುತ್ತಾ ಹೋದರೆ ವೇಳೆ ಸಾಕಾಗುವುದಿಲ್ಲ. ಈ ದೇಶದ, ರಾಷ್ಟ್ರದ ಮಹಾತ್ಮಾಗಾಂಧಿಯವರ ಒಂದು ಉದಾತ್ತವಾದ ಗುರಿ ಏನು ಇತ್ತು. ಅವರ ಒಂದು ತತ್ವ ಏನು ಇತ್ತು ಅದನ್ನು ಇವತ್ತಿನವರೆಗೂ ಕಾರ್ಯಾಚರಣೆಗೆ ತರುವುದಕ್ಕೆ ಸಾಧ್ಯವಾಗಿಲ್ಲ. ನಾವು ಈ ದೇಶದಲ್ಲಿ, ರಾಷ್ಟ್ರದಲ್ಲಿ ಎಲ್ಲಾ ರಾಜ್ಯದ ಸಮಸ್ಯೆಗಳಿಗೆ ಒಳಗಾಗಿದ್ದೇವೆ. ಇನ್ನೂ ಬಗೆಹರಿಸದ ಸಮಸ್ಯೆಗಳಿಗೆ ಒಳಗಾಗಿದ್ದೇವೆ. ಅದನ್ನು ಯಾವ ರೀತಿ ಬಗೆಹರಿಸಬೇಕು? ಜನತಾ ಸರ್ಕಾರ, ಕಾಂಗ್ರೆಸ್ ಸರ್ಕಾರ, ಕಮ್ಯೂನಿಸ್ಟ್ ಸರ್ಕಾರ, ಸ್ವತಂತ್ರ ಸರ್ಕಾರ, ಹರಿಹರ ಬ್ರಹ್ಮ ಬಂದರೂ ಕೂಡ ಹೋಗಲಾಡಿಸದ ಮಟ್ಟಕ್ಕೆ ನಾವು ತಲುಪಿದ್ದೇವೆ, ಯೋಜನೆಗಳನ್ನು ಮಾಡಿ. ಚಿಂತೆ ಇಲ್ಲ. ಮುಂದಾದರೂ ಕೂಡ ಹಿಂದಿನ ತಪ್ಪುಗಳನ್ನು ತಿದ್ದುಕೊಂಡು ಪ್ರಗತಿಯತ್ತ ಹೋಗಿ. ಹಳೆಯ ಜಾಡನ್ನು ಬಿಟ್ಟು ಕೃಷಿಗೆ ಬದಲಾವಣೆ ಮಾಡುವಂಥ ರೀತಿಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಆಸಕ್ತಿ ವಹಿಸಬೇಕು. ಎಷ್ಟು ದಿವಸ ಸರ್ಕಾರ ನಡೆಸಬೇಕೆಂಬುದು ಮುಖ್ಯ ಅಲ್ಲ. ಯಾವ ರೀತಿ ನಡೆಸಬೇಕೆಂದು ಮುಖ್ಯ. ಕಾಂಗ್ರೆಸ್‌ನವರಿಗಿಂತ ಉತ್ತಮವಾಗಿ ಪ್ರಾಮಾಣಿಕವಾಗಿ ಕೆಲಸವನ್ನು ಮಾಡಿದರೆ ಪ್ರತಿಯೊಬ್ಬ ಕನ್ನಡಿಗನ ಹೃದಯದಲ್ಲಿ ಅಚ್ಚು ಮೂಡುವಂಥ ಕೆಲಸವನ್ನು ಮಾಡಿದ್ದೇ ಆದರೆ ನಾವು ಯಾವುದೇ ಒಂದು ವಿರೋಧ ಪಕ್ಷದವರಿರಲಿ ಅಥವಾ ಯಾರ್ಯಾರು ರಾಜಕಾರಣಿಗಳೇ ಇರಲಿ ಯಾರಿಗೂ ಹೆದರಬೇಕಾದ ಅವಶ್ಯಕತೆ ಇಲ್ಲ. ನಾಳೆ ಬೆಳಿಗ್ಗೆ ಬೇಕಾದರೆ ಚುನಾವಣೆ ಮಾಡಲಿ. ಅಂಥ ಉತ್ತಮವಾದ ಕೆಲಸವನ್ನು ಮಾಡುತ್ತಾ ಬಂದಿದ್ದೇವೆ. ಆ ರೀತಿ ಕೆಲಸಗಳನ್ನು ಮಾಡಿದ್ದೇ ಆದರೆ ಜನರ ಒಂದು ಹೃದಯದಲ್ಲಿ ನಾಟುವುದು ಖಂಡಿತ. ಇಷ್ಟು ಮಾತನ್ನು ಹೇಳುತ್ತಾ ಹೇಳುತ್ತಾ ಕೊನೆಯದಾಗಿ ಭಗವಂತನು ಮುಖ್ಯ ಮಂತ್ರಿ ರಾಮಕೃಷ್ಣ ಹೆಗಡೆಯವರು ೪ ಕೋಟಿ ಜನರ ಹೃದಯದಲ್ಲಿ ಮನೆ ಮಾಡಿಕೊಂಡಿದ್ದಾರೆ. ಅವರಿಗೆ ಭಗವಂತನು ಸರ್ವಶಕ್ತಿಯನ್ನು ಕೊಡಲಿ ಅವರ ಕುಟುಂಬಕ್ಕೆ ಸುಖಶಾಂತಿಯನ್ನು ಕೊಡಲಿ ಮತ್ತು ಅವರ ಸೇವೆ ಕನ್ನಡ ನಾಡಿನ ಜನರ ಸೇವೆಗೇ ದಯಪಾಲಿಸಲಿ ಎಂದು ನಾನು ಆಶಿಸಿ ಈ ಸಂದರ್ಭದಲ್ಲಿ ಮುಖ್ಯಮಂತ್ರಿಯವರ ಬೇಡಿಕೆಯ ಮೇಲೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಮಾನ್ಯ ಮುಖ್ಯ ಮಂತ್ರಿವರ್ಯರ ಖಾತೆಗಳಿಗೆ ಸಂಬಂಧಿಸಿ ಕೆಲವು ಮಾತುಗಳನ್ನು ಆಡುವ ಅವಕಾಶ ನನಗೆ ಸಿಕ್ಕಿದ್ದಕ್ಕಾಗಿ ಸಂತೋಷವಾಗುತ್ತದೆ. ಇವತ್ತು ನಮ್ಮ ವಿರೋಧಿ ಪಕ್ಷದ ನಾಯಕರು ಅನೇಕ ಮಾತುಗಳನ್ನು ಆಡಿ ಬಹಳಷ್ಟು ಸಮಯವನ್ನು ತೆಗೆದುಕೊಂಡಿದ್ದಾರೆ. ನಾನು ಹೆಚ್ಚು ಸಮಯವನ್ನು ತೆಗೆದುಕೊಳ್ಳಲಿಕ್ಕೆ ಇಚ್ಛೆಪಡುವುದಿಲ್ಲ. ಆದರೆ ಕೆಲವಾರು ಮಾತುಗಳನ್ನು ಅವರ ಗಮನಕ್ಕೆ ತರದಿದ್ದರೆ ನಮ್ಮ ಕರ್ತವ್ಯ ಲೋಪವಾದೀತು ಎನ್ನುವಂಥ ಒಂದು ದೃಷ್ಟಿಯಿಂದ ನಾನು ಕೆಲವು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮೊಟ್ಟಮೊದಲನೆಯದಾಗಿ ಕ್ಯಾಬಿನೆಟ್ ವಿಷಯವಾಗಿ ನಾನು ಅವರ ಗಮನಕ್ಕೆ ಒಂದು ಮಾತನ್ನು ತರಬಹುದು. ಇವತ್ತು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಬಹಳ ದಿವಸ ಕ್ಯಾಬಿನೆಟ್‌ನಲ್ಲಿ ಅನುಭವವುಳ್ಳವರಾಗಿದ್ದಾರೆ. ಈ ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಆಳುವಂಥ ಬಹು ಭಾಗದ ಸಮಯದಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಬಹುಭಾಗ ಪಾಲ ಇದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಕಾಂಗ್ರೆಸ್ಸನವರ ಕೀರ್ತಿಯಾಗಲೀ, ಅಪಕೀರ್ತಿಯಾಗಲೀ ಅದು ಅವರಿಗೇ ಸಲ್ಲಬೇಕು. ಅನೇಕ ಮಂತ್ರಿಗಳು ಮುಖ್ಯಮಂತ್ರಿಗಳು ಆಗಿದ್ದರೂ ಸಹಾ ಅವರೆಲ್ಲರ ಬ್ರೇನ್ ರಾಮಕೃಷ್ಣ ಹೆಗಡೆಯವರು ಆಗಿ ಕಾರ್ಯವನ್ನು ಮಾಡಿರುವುದರಿಂದ ಕರ್ನಾಟಕ ರಾಜ್ಯಕ್ಕೆ ಕೀರ್ತಿ ಬಂದಿದೆ ಎಂದರೆ ಅದರಲ್ಲಿ ಸ್ವಲ್ಪವಾದರೂ ಅಂಶ ರಾಮಕೃಷ್ಣ ಹೆಗಡೆಯವರಿಗೆ ಸಲ್ಲಲೇಬೇಕು. ಅದೇ ರೀತಿಯಾಗಿ ಅದರಲ್ಲಿ ಬರತಕ್ಕಂಥ ಟೀಕೆಗಳು ಏನಾದರೂ ಇದ್ದರೆ ಅವರು ಜನತಾ ಪಕ್ಷದಲ್ಲಿ ಇದ್ದೇವೆ

ಎಂದು ಅರಿಸಿಕೊಳ್ಳಲಿಕ್ಕೆ ಬರುವುದಿಲ್ಲ. ಆ ದೃಷ್ಟಿಯಿಂದ ನಾನು ಅವರ ಅನುಭವ ಅತಿಯಾಗಿದ್ದರೂ ಸಹಾ ಅನುಭವ ಮತ್ತು ಹೆಚ್ಚಾಗಿ ಹೇಳುವುದು ಎಂದರೆ ಮನುಷ್ಯನಿಗೆ ತಾನು ಅಧಿಕಾರದಲ್ಲಿದ್ದಾಗ ಅಲ್ಲಿ ಆಗತಕ್ಕಂಥ ನ್ಯೂನತೆಗಳು ಅವರಿಗೇ ತಿಳಿಯುವುದಿಲ್ಲ. ಅದಕ್ಕಾಗಿ ಎರಡನೆಯವರ ಸಲಹೆ ಬೇಕೇ ಬೇಕು. "ಒಬ್ಬರಿಗಿಂತ ಇಬ್ಬರು ಮೇಲು" ಎನ್ನುವ ಮಾತಿದೆ, ಅವರು ವಿರೋಧಪಕ್ಷದಲ್ಲಿದ್ದರೂ ಸಹಾ ಕಾಂಗ್ರೆಸ್ಸಿನ ವಿಷಯದಲ್ಲಿ ನನ್ನ ಅವರ ಅಭಿಪ್ರಾಯ ಯಾವಾಗಲೂ ಒಂದಾಗಿದೆ ಎಂದು ಹೇಳುವುದರಲ್ಲಿ ಮೊದಲನೆಯವನಾಗಿದ್ದೇನೆ. ಅವರು ಬಂದಿರುವುದು ನಿಜವಾಗಿ ಫ್ರೀಡಂ ಫೈಟರ್ ಫ್ಯಾಮಿಲಿಯಿಂದ ಬಂದಿದ್ದಾರೆ, ಈ ರಾಜ್ಯದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯ ನಂತರ ಯಾವ ಯಾವ ಅನಾಹುತಗಳಾಗಿವೆ, ಏನೇನು ಆಗುತ್ತಿವೆ, ಸಂಪೂರ್ಣವಾಗಿ ಅನುಭವ ಪಡೆದಂಥ ಮನೆತನದಿಂದ ಬಂದಂಥವರು. ಅವರಿಗೆ ಇವತ್ತಿನ ದಿವಸ ನಾನು ಹೇಳುತ್ತಿದ್ದೇನೆ. ಮುಖ್ಯಮಂತ್ರಿಯಾಗಿ ಸೌಭಾಗ್ಯ ಬಂದಿರುವುದರಿಂದ ಈ ಕ್ಯಾಬಿನೆಟ್‌ನಲ್ಲಿ ಇರತಕ್ಕಂಥ ದ್ವಂದ್ವವನ್ನು ಅವರು ಗಮನಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ಕ್ಯಾಬಿನೇಟ್ ಎಂದರೆ ಒನ್ ಮ್ಯಾನ್ ಎಂದು ಹೇಳುತ್ತಾರೆ. ಕ್ಯಾಬಿನೆಟ್‌ನಲ್ಲಿ ಎರಡು ಸ್ವರವಾಗಲೀ, ಅಪಸ್ವರವಾಗಲೀ ಯಾವುದು ಬರಬಾರದು. ನಮಗೆ ಏತಕ್ಕೆ ಹೇಳುತ್ತೀರಿ ಎಂದು ಕೇಳಬಹುದು. ಆದರೆ ಕ್ಯಾಬಿನೆಟ್‌ನಲ್ಲಿ ನಮಗೂ ಸಹಾ ಅದರಲ್ಲಿ ಸಮಪಾಲು ಭಾಗ ಇದೆ. ಇವತ್ತು ನೀವು ಆಳುವ ಪಕ್ಷದವರು ಇರಬಹುದು. ನಾವು ಕೇಳುವ ಪಕ್ಷದವರು ಇರಬಹುದು. ಆದರೆ ಸೌಜನ್ಯವಾದ ಭಾಷೆಯಲ್ಲಿ ಕೇಳುವ ಹಕ್ಕು ನಮಗಿದೆ. ಸಮರ್ಪಕವಾದ ನ್ಯಾಯವನ್ನು ಕೊಡುವ ಅಧಿಕಾರ ನಿಮಗಿದೆ. ನಾನು ಅನೇಕ ದೃಷ್ಟಿಯಿಂದ ನೋಡುತ್ತಿದ್ದೇನೆ. ಅದು ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಒಬ್ಬೊಬ್ಬ ಮಂತ್ರಿಗಳು ಒಂದೊಂದು ವಿಷಯದಲ್ಲಿ ಒಂದೊಂದು ಊರಿನಲ್ಲಿ ಭಾಷಣ ಮಾಡುತ್ತಾರೆ. ಪ್ರಾಯಶ: ರಾಮಕೃಷ್ಣ ಹೆಗಡೆಯವರಿಗೆ ಗೊತ್ತಾಗದೇ ಹೋಗಬಹುದು. ಆ ದೃಷ್ಟಿಯಿಂದ ಇವತ್ತು ಅವರ ಗಮನವನ್ನು ಸೆಳೆಯಲಿಕ್ಕೆ ಇಚ್ಛೆಪಡುತ್ತೇನೆ. ಯಾವ ಯಾವ ಮಂತ್ರಿಗಳು ಎಂದು ಹೇಳಿದರೆ ಅವರ ಮನಸ್ಸಿಗೆ ನೋವಾದೀತು ಎಂದು ನಾನು ಹೇಳಲಿಕ್ಕೆ ಇಚ್ಛೆಪಡುವುದಿಲ್ಲ. ಇದರಲ್ಲಿ ಒಂದು ದೊಡ್ಡ ಆರ್ಟ್ ಇದೆ. ಒಬ್ಬೊಬ್ಬ ಮಂತ್ರಿಯೂ ತಮ್ಮ ಖಾತೆ ಅಷ್ಟೇ ಅಲ್ಲ. ಬೇರೆ ಖಾತೆಯಲ್ಲಿಯೂ ಸ್ವಲ್ಪ ಪಾಲಿಸಿ ಸ್ಟೇಟ್‌ಮೆಂಟ್ ಮಾಡುವಂಥದ್ದನ್ನು ಓದುತ್ತಿದ್ದೇನೆ. ಈ ರೀತಿ ಆದರೆ ಕರ್ನಾಟಕ ರಾಜ್ಯದ ಘನತೆ ಕಡಿಮೆಯಾದೀತು. ಆ ರೀತಿ ಆಗಬಾರದು ಎನ್ನತಕ್ಕಂಥ ದೃಷ್ಟಿಯಿಂದ ಅವರ ಗಮನಕ್ಕೆ ತರಬಯಸುತ್ತೇನೆ, ದೇವರಾಜ ಅರಸ್ ಮಂತ್ರಿಮಂಡಲದಲ್ಲಿ ನಾನು ಒಬ್ಬ ಸದಸ್ಯನಾಗಿದ್ದೆ. ಅನೇಕ ವಿಷಯಗಳಲ್ಲಿ ನನಗೂ ಅವರಿಗೂ ಮತಭೇದ ಬರುತ್ತಿತ್ತು. ಎಲ್ಲಿಯವರೆಗೆ ಮಂತ್ರಿ ಮಂಡಲ ಬಿಟ್ಟು ಹೊರಗೆ ಹೋಗುತ್ತಿದ್ದೆವೋ ಅಲ್ಲಿಯೇ ನನ್ನ ಮತಬೇದಗಳು ನನ್ನಲ್ಲೇ ಇರುತ್ತಿತ್ತು ಅದು ಅವರಲ್ಲಿರುತ್ತಿತ್ತು. ಮಂತ್ರಿಮಂಡಲದಲ್ಲಿ ಒಂದೇ ಅಭಿಪ್ರಾಯದವರಾಗಬೇಕು. ನನಗೂ ಅವರಿಗೂ ಹೊಂದಾಣಿಕೆಯಾಗದೇ ಇದ್ದಾಗ ನಾನು ರಾಜೀನಾಮೆ ಕೊಟ್ಟು ಹೊರಗೆ ಬಂದಮೇಲೆ ನಮ್ಮ ಅವರ ಜಗಳ ಬಯಲಿಗೆ ಬಂತು. ಆ ದೃಷ್ಟಿಯಿಂದ ಇವತ್ತಿನ ದಿವಸ ಕರ್ನಾಟಕದ ಘನತೆಯ ದೃಷ್ಟಿಯಿಂದ ಈ ಮಂತ್ರಿಮಂಡಲದಲ್ಲಿ ನಿಜವಾಗಿಯೂ ಒಂದು ಸ್ವಾರಸ್ಯಕರವಾದ ರೀತಿಯಲ್ಲಿ ಆಗಿದೆ. ಮಂತ್ರಿಮಂಡಲವನ್ನು ಕರೆಯಬೇಕು. ನೀವು ನಿಜವಾಗಿಯೂ ಈ ರೀತಿಯಾಗಿ ಒಬ್ಬರೇ ಆಗಿ ಪಾಲಿಸಿ ಡಿಸಿಷನ್ ಮಾಡಬೇಕು ಎನ್ನತಕ್ಕಂಥ ಮಾತನ್ನು ನಡೆಸಿಕೊಳ್ಳುತ್ತೀರಿ ಎಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮತ್ತು ಇಂಥ ದಿವಸ ಕ್ಯಾಬಿನೆಟ್‌ನ್ನು ಸಹಾ ಕೂಡಿಸುತ್ತೇವೆ ಎಂಬ ನಿಲುವೆಯನ್ನು ತಾಳಿದ್ದೀರಿ. ಈ ಕರ್ನಾಟಕ ರಾಜ್ಯದಲ್ಲಿ ಬಹು ದಿವಸದಿಂದ ಬಂತು. ತಮ್ಮ ಕಾಲದಲ್ಲಿ ಬದಲಾವಣೆಯಾಗಿದೆ ಎಂದು ಕೇಳುತ್ತಿದ್ದೇನೆ. ಯಾವಾಗ ಬೇಕಾದರೂ ನೀವು ಕರೆಯಬಹುದು ಎಂದು ಕೇಳಿದ್ದೇನೆ. ಅದು ಹೌದೋ ಅಲ್ಲವೋ ಗೊತ್ತಿಲ್ಲ. ತಾವು ಭಾರತೀಯರಾಗಿ ರಾಜಕಾರಣಿಗಳು ಹೆಚ್ಚಾಗಿ ಕೈವಾಡ ಮಾಡಿರುವಾಗ ಅವಕಾಶ ಇರುತ್ತಿರಲಿಲ್ಲ. ಹೆಚ್ಚು ಭಾಗ ಕರ್ನಾಟಕಕ್ಕೆ ಹಾಕಿ ನಿರ್ದಿಷ್ಟವಾದ ದಿವಸ, ನಿಯಮವನ್ನು ಮಾಡಿ ಆ ದಿವಸ ಕ್ಯಾಬಿನೆಟ್ ಆಗಲೇಬೇಕು ಎಂದು ಮಾಡಿದರೆ ಬಹಳ ಸಂತೋಷ. ಅಥವಾ ಹೀಗೆ ಮಾಡದಿದ್ದರೂ ಸಂತೋಷ ಅಷ್ಟಕ್ಕೆ ಈ ಮಾತನ್ನು ಬಿಟ್ಟುಬಿಡುತ್ತೇನೆ. ಯಾವ ಯಾವ ಮಂತ್ರಿಗಳು ಏನೇನು ಮಾಡಿದರು, ಅದು ನನ್ನ ಹತ್ತಿರ ಇದ್ದರೂ ಸಹಾ ಈ ಸಭೆಯಲ್ಲಿ ಕಲುಷಿತವಾದ ವಾತಾವರಣವನ್ನು ಮಾಡಲಿಕ್ಕೆ ನಾನು ಇಚ್ಛೆಪಡುವುದಿಲ್ಲ

ಅಡ್ಮಿನಿಸ್ಟ್ರೇಷನ್‌ನಲ್ಲಿ ಇವತ್ತಿನ ದಿವಸ ಮಾನ್ಯ ಹೆಗ್ಗಡೇಜಿಯವರಿಗೆ ಹೇಳಿದರೆ ಅವರ ಮನಸ್ಸಿಗೂ ನೋವಾಗಬಹುದು. ಇವತ್ತು ಐ ಎ ಎಸ್ ಕೇಡರ್‌ನಲ್ಲಿ ನೋಡಿದರೆ ಕರ್ನಾಟಕದವರು ಯಾರು ಇದ್ದಾರೆ ? ಎಷ್ಟು ಜನರು ಇದ್ದಾರೆ ? ಎಲ್ಲರೂ ಹೊರಗಿನ ರಾಜ್ಯದವರು. ನಿಜ. ಇಲ್ಲಿ ಬಂದರೆ

ನಮ್ಮವರಾಗುತ್ತಾರೆ. ಬೆಂಗಳೂರು ಒಂದು ಸ್ತ್ರೀಯೋಪಾದಿಯಲ್ಲಿ ಇದೆ ಎಂದು ಹೇಳಿದರೆ ನಾಗರತ್ನಮ್ಮ ನವರು ಸಿಟ್ಟಾಗಲಿಕ್ಕಿಲ್ಲ ಎಂದು ಹಾಸ್ಯ ಮಾಡುತ್ತೇನೆ. ಎಲ್ಲರಿಗೂ ಆಕರ್ಷಣೀಯವಾದ ಈ ಬೆಂಗಳೂರು ನೈಸರ್ಗಿಕವಾದ ಸೊಬಗನ್ನು ಸವಿಯುವುದಕ್ಕೆ ಬರುತ್ತಿದ್ದಾರೆ. ಬಂದಮೇಲೆ ನಮ್ಮವರಾಗಿ ಕನ್ನಡ ಕಲಿತಾಕ್ಷಣ ನಮ್ಮವರಾಗುತ್ತಾರೆ. ಹೊರಗಿನವರನ್ನು ತೆಗೆದುಕೊಳ್ಳಬಾರದು ಎಂದು ಹೇಳುತ್ತಿಲ್ಲ. ಅಖಿಲ ಭಾರತ ಮಟ್ಟದಲ್ಲಿ ಭಾರತೀಯರಾದ ನಾವು ಭಾರತ ದೇಶದ ಜನಾಂಗಕ್ಕೆ ಸಂಪೂರ್ಣವಾದಂಥ ಒಂದು ಸ್ವಯಂ ಅಧಿಕಾರವನ್ನು ಕೊಟ್ಟಿದ್ದೇವೆ. ಆದರೆ ಈ ಕರ್ನಾಟಕ ರಾಜ್ಯದಲ್ಲಿ ಐ ಎ ಎಸ್ ನವರು ಬಹಳ ಮಂದಿ ಇಲ್ಲ. ನಮ್ಮಲ್ಲಿ ಬೇಕಾಗುವಂಥ ಇನ್‌ಫ್ರಾಸ್ಟ್ರಕ್ಚರ್ ತಯಾರು ಮಾಡಿಲ್ಲ. ಇವತ್ತು ನೀವು ಹೇಳಬಹುದು. ಅವರು ಬರದಿದ್ದರೆ ನಾವು ಏನು ಮಾಡಲಿ ಎಂದು ಹೇಳಬಹುದು. ಐ ಎ ಎಸ್ ಪರೀಕ್ಷೆಯನ್ನು ಸೆಂಟ್ರಲ್‌ನವರು ಮಾಡುತ್ತಾರೆ ನಾವೇನು ಮಾಡೋಣ ಎಂದು ಹೇಳಬಹುದು. ಕೇರಳದವರಾಗಲೀ. ಆಂಧ್ರದವರಾಗಲೀ, ತಮಿಳುನಾಡಿನವರಾಗಲಿ ಅವರೇ ಇದ್ದಾರೆ. ಆದರೆ ನಾವು ಇವತ್ತಿನ ದಿವಸ ನಮ್ಮ ತರುಣ ಜನಾಂಗಕ್ಕೆ ಐ ಎ ಎಸ್ ಅಗತ್ಯ. ಇನ್‌ಫ್ರಾಸ್ಟ್ರಕ್ಚರ್‌ನ್ನು ಹೆಚ್ಚಾಗಿ ತಯಾರು ಮಾಡಿಲ್ಲ. ಉಳಿದ ರಾಜ್ಯಗಳಲ್ಲಿ ದೆಹಲಿಯಲ್ಲಿ, ಬಾಂಬೆಯಲ್ಲಿ ಅಲ್ಲಿ ತಯಾರಿ ಕಾಲೇಜು ಎಂದು ಏನು ಇದೆಯೋ, ಆ ರೀತಿಯಾಗಿ ಒಂದು ವ್ಯವಸ್ಥೆ ತರುವುದಕ್ಕೆ ರಾಮಕೃಷ್ಣ ಹೆಗಡೆಯವರು ಇದತ್ತಿನ ದಿವಸ ಮುಂದಾಗಬೇಕು ಎಂದು ನಾನು ಕೇಳುತ್ತೇನೆ. ನಾನು ಯಾವುದೇ ಸಲಹೆಯನ್ನು ಮಾಡುವಾಗ ನಿಮ್ಮ ಕಾಲದಲ್ಲಿ ಏನು ಮಾಡಿದ್ದೀರಿ ಎಂದು ಕೇಳಬೇಡಿ. ಮಾಡುವಂಥ ಶಕ್ತಿ ಇದ್ದರೆ ಆ ದೃಷ್ಟಿಯಿಂದ ಸಲಹೆಗಳನ್ನು ಮಾಡುತ್ತೇನೆ.

ಆಮೇಲೆ ಕೆ ಎ ಎಸ್ ಸೆಲೆಕ್ಷನ್ ಮಾಡುತ್ತೀರಿ. ಅದನ್ನು ಮಾಡುವಾಗ ಅದು ಒಂದು ರೀತಿ ನಾಮಿನೇಷನ್ ಇದ್ದ ಹಾಗೆ. ಯಾವುದಾದರೂ ನಾಮಿನೇಟ್ ಮಾಡಿ ಅವರು ಒಪ್ಪಲಿ, ಒಪ್ಪದೇ ಇರಲಿ ಕೆ ಎ ಎಸ್ ನಾಮಿನೇಷನ್ ಆಗುತ್ತದೆ. ಕೆಲವು ಸಂದರ್ಭದಲ್ಲಿ ಕಠಿಣವಾದಂಥ ಒತ್ತಾಯ ಬರುತ್ತದೆ. ಪೊಲಿಟಿಕಲ್ ಪ್ರೆಷರ್ ಆಗುತ್ತದೆ. ಜಾತೀಯ ಒತ್ತಾಯ ಬರುತ್ತದೆ. ಹೀಗಾಗಿ ಯಾರಿಗೆ ಜಾತಿಯ ಒತ್ತಾಯದ ಬಲ ಇರುವುದಿಲ್ಲವೋ, ಯಾರಿಗೆ ಪ್ರೆಸರೈಸ್ ಮಾಡುವಂಥ ಶಕ್ತಿ ಇಲ್ಲವೋ ಅಂತಹ ಜನಗಳಿಗೆ ಸಿಗದೆ ಅವರು ಯೋಗ್ಯತಾ ಸಂಪನ್ನರು ಇದ್ದರೂ ಕೂಡಾ ಸಿಗುತ್ತಿಲ್ಲ. ಅವರಿಗೆ ಆಗಲಿಕ್ಕೆ ಆಗುವುದಿಲ್ಲ. ಯಾರಿಗೆ ಜಾತೀಯ ಬಲ ಇರುತ್ತದೆಯೊ ಅಂಥವರು ಮೂರ್ಖ ಶಿರೋಮಣಿ ಇರಲಿ ಅವನು ಕೆ ಎ ಎಸ್ ಆಗುತ್ತಾನೆ. ಅವನು ಕೆ ಎ ಎಸ್ ಆಗಿ ಅಧಿಕಾರಕ್ಕೆ ಬಂದ ಮೇಲೆ ಕೆಲಸ ಮಾಡಲಿಕ್ಕೆ ಬರುವುದಿಲ್ಲ. ಯಾರಿಗೂ ಹೆದರುವುದಿಲ್ಲ. ಈ ರೀತಿಯಾದಂಥ ಪರಿಸ್ಥಿತಿಯಾಗಿದೆ. ತಮ್ಮ ಹಾಗೆ ಉಳಿದ ರಾಜ್ಯಗಳಿಗೆ ಹೋಗಿ ನೋಡಿಲ್ಲ. ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳಬೇಕಾಗುತ್ತದೆ ಬಹುಶಃ ಡೈರೆಕ್ಟ್ ಆಗಿ ಕೆ ಎ ಎಸ್ ಆದಂಥ ಜನ ಹೊರಗಿನಿಂದ ಬಂದವರು ಇದ್ದಾರೆ. ಐ ಎ ಎಸ್ ಆದವರು ಕಣ್ಣಿಗೆ ಕಾಣದ ಹಾಗೆ ಇದ್ದಾರೆ. ಕೆ ಎ ಎಸ್ ನವರು ಯಾವುದೋ ಒಂದು ಪೊಲಿಟಿಕಲ್ ಪ್ರೆಷರ್‌ನಿಂದ ಬಂದಿದ್ದಾರೆ. ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ನೀವು ಹೆಚ್ಚು ಸೌಕರ್ಯ ಕೊಡುತ್ತೀರಿ, ಬ್ಯಾಕ್‌ವಾರ್ಡ್ ಕ್ಲಾಸ್‌ನವರಿಗೆ ಸೌಜನ್ಯ ತೋರುತ್ತೀರಿ, ಮೈನಾರಿಟಿಯವರಿಗೆ ತೋರುತ್ತೀರಿ. ಬಹಳ ಸಂತೋಷ. ನಾನು ಯಾವುದೇ ಸಲಹೆಗಳನ್ನು ಮಾಡಿದರೂ, ಅವುಗಳನ್ನು ಕಾರ್ಯರೂಪಕ್ಕೆ ತರುವಂತಿರಬೇಕು. ಇವತ್ತು ಕೆ ಎ ಎಸ್ ಸೆಲೆಕ್ಷನ್ ಮಾಡುವಾಗ ನಿಮ್ಮದೇ ಆದಂಥ ರೀತಿಯಲ್ಲಿ ನಾಮಿನೇಷನ್ ಮಾಡುತ್ತೀರಿ ಅನೇಕ ಸಂದರ್ಭಗಳಲ್ಲಿ ರಾಜಕೀಯ ಒತ್ತಡ, ಜಾತೀಯ ಒತ್ತಡ ಬರುತ್ತದೆ. ಜಾತಿಯ ಒತ್ತಡದಿಂದ ಯೋಗ್ಯತಾ ಸಂಪನ್ನರು ಕೂಡ ಒಮ್ಮೆ ಹಿಂದೆ ಉಳಿಯುವಂಥ ಸಂದರ್ಭ ಉಂಟು. ಜಾತಿಯ ಬಲದಿಂದ ಮೂರ್ಖಶಿಖಾಮಣಿಗಳು ಕೆ ಎ ಎಸ್ ನಲ್ಲಿ ಬಂದು ಬಿಡುತ್ತಾರೆ. ಅಂಥವರ ಕೈನಲ್ಲಿ ಮಂತ್ರಿಗಳು ಎಷ್ಟರಮಟ್ಟಿಗೆ ಕೆಲಸ ಮಾಡಿಸುವುದಕ್ಕೆ ಆಗುತ್ತದೆ. ಅವರು ಹೇಗೆ ಕೆಲಸ ಮಾಡುತ್ತಾರೆ ಎನ್ನುವುದನ್ನು ತಾವು ಹೋಗಿ ನೋಡುವುದಕ್ಕೆ ಆಗುವುದಿಲ್ಲ, ಡೈರೆಕ್ಟ್ ಐ ಎ ಎಸ್ ನಲ್ಲಿ ಕರ್ನಾಟಕದವರು ಯಾರೂ ಬರುತ್ತಿಲ್ಲ, ಹೊರಗಿನವರೇ ಬಂದಿದ್ದಾರೆ, ನಮ್ಮಲ್ಲಿ ಕೆಲವರು ಇದ್ದರೂ ಕೂಡ ಕಣ್ಣಿಗೆ ಕಾಣದ ಹಾಗೆ ಇದ್ದಾರೆ. ಕೆ ಎ ಎಸ್ ನಲ್ಲಿ ಹರಿಜನ ಗಿರಿಜನರಿಗೆ ಅಲ್ಪಸಂಖ್ಯಾತರಿಗೆ ಉತ್ತೇಜನ ಕೊಡುತ್ತಿದ್ದೀರಿ ಇದು ಸಂತೋಷದ ವಿಷಯ. ಕೆ ಎ ಎಸ್ ನವರನ್ನು ನೀವು ಬಂದಮೇಲೆ ಎಷ್ಟು ಜನರಿಗೆ ಐ ಎ ಎಸ್‌ಗೆ ಏರಿಸಿದ್ದೀರಿ ? ಇದರ ಬಗ್ಗೆ ತಮ್ಮ ಹೃದಯವನ್ನು ಮುಟ್ಟಿ ನೋಡಿಕೊಳ್ಳಿ. ಅವರಿಗೆ ನ್ಯಾಯವಾಗಿ ಕೊಡಬೇಕಾದ ಸೌಕರ್ಯ ಕೊಟ್ಟಿಲ್ಲವೆಂದು ಹೇಳುತ್ತೇನೆ. ನಾವು ಯಾವುದೇ ರೀತಿಯ ಮೆಜಾರಿಟಿ ಕಮ್ಯೂನಿಟಿ ಇಲ್ಲದೇ ಇರುವುದರಿಂದ

ನಾನು ಧೈರ್ಯವಾಗಿ ಹೇಳುತ್ತೇನೆ. ತಾವು ಕೊಟ್ಟಂತಹ ವರದಿಯನ್ನು ನೋಡಿದ್ದೇನೆ. ಅದರ ಬಗ್ಗೆ ಅಭಿನಂದನೆ ಸಲ್ಲಿಸುವಂಥ ಸಂಗತಿ ಕೂಡ ಇದೆ. ಹರಿಜನ ಗಿರಿಜನರಿಗೆ ಹಿಂದುಳಿದ ವರ್ಗದವರಿಗೆ ಆಗಿರ ತಕ್ಕ ಅನ್ಯಾಯಗಳನ್ನು ನಿವಾರಣೆ ಮಾಡುವ ಸಲುವಾಗಿ ಕೆಲವೊಂದು ಹಂದ್ದೆಗಳನ್ನು ಕಾದಿರಿಸಲಾಗಿದೆ. ಇದು ಬಹಳ ಉತ್ತಮವಾದ ಕೆಲಸ. ಇದರ ಬಗ್ಗೆ ಪ್ರಯತ್ನ ನಡೆದಿದೆಯೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ, ಇಲಾಖೆಗಳಲ್ಲಿ ಯಾವ ಯಾವ ಕೆಲಸ ನಡೆದಿದೆ ಎನ್ನುವುದನ್ನು ನೋಡುವುದಕ್ಕೆ ಸೂಪರ್ ವೈಸರಿ ಕೆಲಸ ಏನು ಮಾಡಿದ್ದೀರಿ ? ಹರಿಜನ ಗಿರಿಜನರಲ್ಲಿ ಯೋಗ್ಯತಾ ಸಂಪನ್ನರ ಇದ್ದರೂ ಕೂಡ ಅವರಿಗೆ ನ್ಯಾಯ ಸಿಗುತ್ತಿಲ್ಲ. ಒಬ್ಬಳು ಹರಿಜನ ಹೆಣ್ಣು ಮಗಳು ಅಗ್ರಿಕಲ್ಚರ್ ಸೈನ್ಸ್ ಕಾಲೇಜಿಗೆ ಅರ್ಜಿ ಹಾಕಿಕೊಂಡಿದ್ದಳು. ನಾನು ಅದಕ್ಕೆ ಛೇರ್ಮನ್ ಆಗಿದ್ದೆ. ಯೋಗ್ಯತೆ ಇಲ್ಲದ ರೆಡ್ಡಿಗಳು, ಬ್ರಾಹ್ಮಣರೂ ಕೂಡ ಬಂದಿದ್ದರು. ನನ್ನ ಮೇಲೆ ಅನೇಕ ಒತ್ತಾಯ ಕೂಡ ಬಂತು, ಅದರಲ್ಲಿ ಸೆಂಟ್ರಲ್ ಗೌರ್ನಮೆಂಟ್‌ನವರು ಕಮಿಟಿಯಲ್ಲಿದ್ದರು. ಹರಿಜನ ಹೆಣ್ಣುಮಗಳನ್ನು ನಾನು ಆಫೀಸ್ ಸೂಪರಿಂಟೆಂಡೆಂಟ್ ಆಗಿ ನೇಮಿಸಿದೆ. ಕ್ವಾಲಿಫಿಕೇಷನ್ ಸಾಕಷ್ಟು ಇತ್ತು. ಆಕೆಗಿಂತ ಜಾಸ್ತಿ ಕ್ವಾಲಿಫಿಕೇಷನ್ ಇದ್ದವರನ್ನು ಏತಕ್ಕೆ ತೆಗೆದುಕೊಂಡಿಲ್ಲ ಎಂದಾಗ ನಾನು ಉತ್ತರ ಹೇಳುವಂಥ ಸ್ಥಿತಿಯಲ್ಲಿ ಇಲ್ಲ. ಇವತ್ತು ಆಕೆ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾಳೆ. ಮುಂದುವರಿದ ಸಮಾಜದಲ್ಲಿ ಹಿಂದುಳಿದವರೂ ಕೂಡ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ. ಲಿಂಗಾಯತರೆಲ್ಲರೂ ಪತಿತಪಾವನರಲ್ಲ. ಅದರಲ್ಲಿಯೂ ಉಪವಾಸ, ವನವಾಸ ಮಾಡುವವರಿದ್ದಾರೆ. ಒಕ್ಕಲಿಗ ಸಮಾಜದಲ್ಲಿಯೂ ತಿನ್ನಲಿಕ್ಕೆ ಕೂಳೂ ಇಲ್ಲದವರು ಇದ್ದಾರೆ. ಇಂಥವರ ಬಗ್ಗೆ ತಾವು ನಿಗಾವಹಿಸಬೇಕೆಂದು ಹೇಳುತ್ತೇನೆ. ಇನ್ನು ಪಬ್ಲಿಕ್ ಅಂಡರ್‌ಟೇಕಿಂಗ್ಸ್ ವಿಚಾರದಲ್ಲಿ ತಾವು ನಮ್ಮ ಸಲಹೆಯನ್ನು ಒಪ್ಪಲೇಬೇಕು. ದೊಡ್ಡ ದೊಡ್ಡ ಉದ್ದಿಮೆಗಳನ್ನು ಆಡಳಿತಗಾರರ ಕೈಯಲ್ಲಿಟ್ಟಿದ್ದೀರಿ. ರಾಯಚೂರಿನಲ್ಲಿರುವ ಟೆಕ್ಸ್‌ಟೈಲ್ ಮಿಲ್ ಮತ್ತು ಆಯಿಲ್ ಕಂಪನಿಗೆ ಜಿಲ್ಲಾಧಿಕಾರಿಯವರನ್ನು ಅಧ್ಯಕ್ಷರಾಗಿ ನೇಮಿಸಿದ್ದೀರಿ. ಒಬ್ಬ ಜಿಲ್ಲಾಧಿಕಾರಿ ಮಿಲ್ ನಡೆಸುವುದಕ್ಕೆ ಆಗದಿದ್ದರೆ, ಜಿಲ್ಲಾಧಿಕಾರಿಯಾಗಿ ಹೇಗೆ ಕೆಲಸ ಮಾಡುತ್ತಾನೆ, ಅಂಥವರನ್ನು ಪ್ಯಾನ್ ಆಗಿ ಏತಕ್ಕೆ ನೇಮಕಮಾಡಬಾರದು ? ಇವರು ನಮ್ಮನ್ನೂ ನಿಮ್ಮನ್ನೂ ತಪ್ಪುದಾರಿಗೆ ಎಳೆಯುತ್ತಾರೆ. ಸ್ವಂತಃ ನೀವೇ ಮಾಡುವುದಕ್ಕೆ ಹೋದರೆ ನಿಯಮಗಳು ಅಡ್ಡಬರುತ್ತವೆ. ಅಭಿಪ್ರಾಯ ಕೊಡಿ ಅಂದರೆ, ತಪ್ಪು ತಪ್ಪು ಮಾಹಿತಿ ಕೊಡುತ್ತಾರೆ. ನಿಮ್ಮ ಥಿಂಕ್ ಟ್ಯಾಂಕ್ ಏನು ಮಾಡುತ್ತಿದೆ ? ಅದರಲ್ಲಿ ರಿಟೈರ್ಡ್ ಅವರನ್ನೇ ಹಾಕಿದ್ದೀರಿ. ಇದು ನಿಮ್ಮ ತಪ್ಪಲ್ಲ. ಆಡಳಿತದ ಬುಕ್ಕುಗಳನ್ನು ಓದಿದವರಿಗೆ, ಪುಸ್ತಕಗಳನ್ನು ರೆಫರ್ ಮಾಡಿದಂತೆ, ಆಡಳಿತ ವರ್ಗದ ಮಾತುಗಳನ್ನು ಕೇಳಲೇ ಬೇಕು, ಕೇಳಲೇ ಬೇಕು ಎನ್ನುವ ಮನಸ್ಸು ಬರುತ್ತೆ. ಕೇಳಿದ ಕೂಡಲೇ ತಪ್ಪುದಾರಿಗೆ ಎಳೆಯುತ್ತಾರೆ. ಹೀಗಾಗಿ ಇವತ್ತು ಸಾರ್ವಜನಿಕ ಉದ್ದಿಮೆಗಳು ಫೆಲ್ಯೂರ್ ಆಗಿವೆ. ಅಲ್ಲಿಗೆ ಹೋದ ಕೂಡಲೇ ಬೋರ ಚಟಗಳಿಗೆ ಬಿದ್ದು ಹಾಗೆ ಮಾಡುತ್ತಾರೆಂದು ಅಂದು ಕೊಳ್ಳೋಣವೇ ? ಬುದ್ಧಿ ಇಲ್ಲ ಎನ್ನುವ ಹಾಗೆ ಇಲ್ಲ. ಬುದ್ಧಿಪೂರ್ವಕವಾಗಿ ಮಾಡುತ್ತಾರೆ. ಇವರ ಬಗ್ಗೆ ತಾವು ತೆಗೆದುಕೊಳ್ಳುವಂಥ ಕ್ರಮ ಏನು ? ಯಾವ ಅಧಿಕಾರಿ ಉದ್ದಿಮೆಗಳನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತಾನೋ ಅಂಥವನಿಗೆ ಪ್ರೊಮೋಷನ್ ಕೊಡುತ್ತೇವೆನ್ನುವ ಷರತ್ತು ಹಾಕಿ. ಇಲ್ಲದೇ ಹೋದರೆ, ಟೆಕ್ನಿಕಲ್ ವ್ಯಕ್ತಿಯನ್ನು ನೇಮಕ ಮಾಡುವುದಕ್ಕೆ ಪರವಾನಗಿ ಕೊಡಿ. ನಾಳೆ ಬಂಗಾರಪ್ಪನವರು ಮುಖ್ಯಮಂತ್ರಿಯಾದರೂ ಎಂದು ಇಟ್ಟುಕೊಳ್ಳೋಣ ಒಬ್ಬ ಅಧಿಕಾರಿಯನ್ನು ಕನಿಷ್ಟ ೨-೩ ವರ್ಷ ಒಂದುಕಡೆ ಇಡಬೇಕು. ವರ್ಷದ ಮಧ್ಯದಲ್ಲಿ ೩-೪ ಕಡೆ ವರ್ಗ ಮಾಡುವುದರಿಂದ ಯಾವ ಕೆಲಸವೂ ಆಗುವುದಿಲ್ಲ. ಇದು ನಮ್ಮದೇ ಆದಂಥ ಸರ್ಕಾರ ಇದ್ದಾಗಲೂ ನಡೆಯುತ್ತಿತ್ತು. ತಾವು ಆಡಳಿತದಲ್ಲಿ ಸುಧಾರಣೆ ಮಾಡುತ್ತೀರೆಂದು ಪತ್ರಿಕೆಯಲ್ಲಿ ಓದಿದ್ದೆ. ಇವತ್ತು ಸರ್ಕಾರದ ಸೋಪು ಫ್ಯಾಕ್ಟರಿ ಏನಾಗಿದೆ, ಇದರ ಬಗ್ಗೆ ನಾನು ಮೊದಲಿನಿಂದಲೂ ಹೇಳುತ್ತಾ ಇದ್ದೇನೆ. ಇಡೀ ವಿಶ್ವಕ್ಕೆ ಗಂಧದೆಣ್ಣೆ ಕೊಡುವಂಥ ಕಾರ್ಖಾನೆ ನಮ್ಮಲ್ಲಿತ್ತು, ಇಂಗ್ಲೆಂಡ್‌ನಲ್ಲಿ ಮೈಸೂರು ಸೋಪು ಸಿಗುತ್ತದೆ, ಡೆಲ್ಲಿಯಲ್ಲಿ ಸೋಪು ಸಿಗುತ್ತವೆ, ಆದರೆ, ಕರ್ನಾಟಕದಲ್ಲಿ ಮಾತ್ರ ಮೈಸೂರು ಸ್ಯಾಂಡಲ್ ಸೋಪು ಸಿಗುತ್ತಿಲ್ಲ. ತಾವು ಒಮ್ಮೆ ಜನತಾ ಬಜಾರಕ್ಕೆ ಹೋಗಿ ನೋಡಿಕೊಂಡು ಬನ್ನಿ, ಅಲ್ಲಿ ಟಾಟಾ ಸೋಪುಗಳು ಮತ್ತಿತರ ಸೋಪುಗಳೇ ಕಾಣಿಸುತ್ತದೆ. ಸ್ವದೇಶಿ ವಸ್ತುಗಳನ್ನು ಆಚರಣೆಗೆ ತರುವಂಥ ಪಕ್ಷ ಜನತಾ ಪಕ್ಷ ಎಂದು ಹೇಳುತ್ತೀರಿ. ಮಹಾತ್ಮ ಗಾಂಧೀಜಿಯವರ ತತ್ವದಂತೆ ಸ್ವದೇಶಿ ನಿಮ್ಮ ಮನೆ ಧರ್ಮವಾಗಿದೆ. ನಾನು ತಮ್ಮನ್ನು ಹಣಕಾಸಿನ ಮಂತ್ರಿಗಳಾಗಿದಾಗಿನಿಂದಲೂ ನೋಡುತ್ತಾ ಬಂದಿದ್ದೇನೆ. ಮುಖ್ಯಮಂತ್ರಿಗಳಾದ ಮೇಲೂ

ನೋಡಿದ್ದೇನೆ, ಕೇಂದ್ರ ಸರ್ಕಾರದ ಅನುದಾನ ಹೆಚ್ಚಾಗಿದೆ. ಅನೇಕ ಇಂಡಸ್ಟ್ರೀಸ್‌ಗೆ ಇನ್‌ಸೆಂಟೀವ್ ಕೊಡುತ್ತಿದ್ದಾರೆ. ಸರ್ಕಾರ ಕೊಡುವಂಥ ಇನ್‌ಸೆಂಟೀವ್ ಯಾರಿಗೆ ಮುಟ್ಟುತ್ತದೆಯೋ ಗೊತ್ತಿಲ್ಲ. ಸರ್ಕಾರದ ಇನ್‌ಸೆಂಟೀವ್ ತೆಗೆದುಕೊಳ್ಳಬೇಕಾದರೆ, ಎದೆ ಗಟ್ಟಿ ಇರಬೇಕು. ಅದನ್ನು ತಡೆದುಕೊಳ್ಳುವಂಥ ತ್ರಾಣ ಇರಬೇಕು. ಅಂಥವರಿಗೆ ಮಾತ್ರ ಕೊಡುತ್ತಾರೆ. ಸಮಾಜದಲ್ಲಿರುವಂಥ ಹರಿಜನರು, ಹಿಂದುಳಿದವರು ಕೈಗಾರಿಕೆಗಳನ್ನು ನಡೆಸಿದರೆ, ಪೂರ್ತಿ ಮುಂಗಿಯಲಿ, ಲಕ್ಷಗಟ್ಟಲೆ ಫಾಯಿಂದೆ ಮಾಡಿ ನಂತರ ಕೊಡುತ್ತೇವೆಂದು ಹೇಳುತ್ತಾರೆ. ಆ ಸ್ಥಿತ್ತಿಗೆ ಕೈಗಾರಿಕೆ ದಿವಾಳಿಯಾಗುತ್ತದೆ. ಸರ್ಕಾರದಲ್ಲಿ ಹಣ ಇಲ್ಲವೆಂದು ಅಧಿಕಾರಿಗಳ ಹತ್ತಿರ ಹೇಳಬೇಡಿ, ನಾವೂ ನೀವೂ ಹೇಳೋಣ. ಹಣ ಇಲ್ಲದೆ ಇದ್ದರೆ, ಇ ವರ್ಷದ ಬಾಂಡ್ ಕೊಡಿ, ಸಹಕಾರ ಸಂಘಗಳು ನಡೆಸುವಂಥ ಕಾರ್ಖಾನೆಗಳಿಗೆ ಹಣ ಕೊಡುವುದಿದ್ದರೆ, ಷೇರುಗಳನ್ನು ಮಾರಿದುಕೊಳ್ಳಿ, ಅಧಿಕಾರಿಗಳ ಕೈಯಲ್ಲಿ ಹೇಳಿದರೆ, ಬೇಕಾದವರಿಗೆ ಕೊಡುತ್ತಾರೆ, ಬಡವರಿಗೆ ಕೊಡುವುದಿಲ್ಲ. ಇದರಿಂದ ಅಧಿಕಾರಿಗಳು ಕೃತ್ರಿಮ ಮಾಡುವುದಕ್ಕೆ ಅನುಕೂಲವಾಗುತ್ತದೆ. ಇದು ಸರ್ಕಾರದ ಮೇಲೆ ಬರುತ್ತದೆ.

ನಮ್ಮ ವಿರೋಧ ಪಕ್ಷದವರ ಕೈಯಲ್ಲಿ ಅಧಿಕಾರ ಬಂದಾಗ ನಿಮ್ಮ ಸರ್ಕಾರ ಎಷ್ಟು ತಿಂದಿದೆ ಅದಕ್ಕೆ ನೀವು ಲಂಚಕೋರರೆಂದು ಹೇಳುವಂತಹ ದೌರ್ಭಾಗ್ಯ ನಮಗೆ ಉತ್ಪನ್ನವಾಗುತ್ತದೆ. ಅದನ್ನು ಬಂದ್ ಮಾಡಬೇಕೆಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಯಾವ ಇನ್‌ಸೆಂಟೀವನ್ನು ಎಷ್ಟು ಕೊಡಲು ಸಾಧ್ಯವಿದೆ ಅಷ್ಟನ್ನು ಮಾತ್ರ ಕೊಡಿ. ಇನ್‌ಸೆಂಟೀವನ್ನು ಕೊಡದೇ ಇದ್ದರೆ ಬದಲಾವಣೆ ಮಾಡುವಂತಹ ಕಾನೂನನ್ನು ಮಾಡಿ. ನಾನು ಹಣಕಾಸಿನ ಇಲಾಖೆಯ ಬಗ್ಗೆ ಹೇಳುತ್ತೇನೆ. ಆ ಒಂದು ಇಲಾಖೆಗೆ ಸ್ಟ್ರಿಕ್ಟ್ ಆದ ಆಫೀಸರ್‌ನ್ನು ಕೊಟ್ಟಿದ್ದಾರೆ. ಸ್ಟ್ರಿಕ್ಟ್ ಅಧಿಕಾರಿಗೂ ನಿಮ್ಮ ಸಮಾಜ ಸುಧಾರಣೆಗೂ ಏನು ಸಂಬಂಧ ಬರುತ್ತದೆ ? ಶ್ರೀ ಅಬ್ದುಲ್ ನಜೀರ್ ಸಾಬ್‌ರವರಿಗೂ ತಿರುಪತಿಗೂ ಹೇಗೆ ಸಂಬಂಧ ಇಲ್ಲವೋ ಹಾಗೆ ಆಗುತ್ತದೆ. ಮುಖ್ಯಮಂತ್ರಿಗಳು ಈ ಖಾತೆಯನ್ನು ವಹಿಸಿರುವುಗರಿಂದ ನಮಗೆ ಸಮಾಧಾನ ತರಬಹುದು. ನೀವು ಆ ಖಾತೆಯನ್ನು ಬಿಟ್ಟು ಬಿಡಿ. ನೀವು ಇಲ್ಲನೆ ಇದ್ದ ಕಾಲವೂ ಒಂದು ಇತ್ತಲ್ಲ. ಮುಖ್ಯಮಂತ್ರಿಗಳ ಫೈಲ್ ಸಹಿತ ಹಣಕಾಸಿನ ಕಾರ್ಯದರ್ಶಿಯವರಿಗೆ ಹೋಗಬೇಕು ಎನ್ನುವ ವ್ಯಾಖ್ಯಾನ ಆದರೆ ಅಂಥ ಒಂದು ಶಕ್ತಿ ಆದರೆ ಉಳಿದ ಖಾತೆಗಳ ಕಾರ್ಯದರ್ಶಿಗಳು ಬರೆಯತಕ್ಕದ್ದನ್ನು ಒಂದು ಇಲಾಖೆಯ ಅಧೀನ ಕಾರ್ಯದರ್ಶಿ, ಅಥವಾ ಉಪ ಕಾರ್ಯದರ್ಶಿ ರದ್ದು ಮಾಡುವಂತಹ ಶಕ್ತಿ ಅವರಿಗೆ ಕೊಟ್ಟರೆ ವಿಕಸ್ವಾಮ್ಯವಾಗುವುದಿಲ್ಲವೇ ? ನೀವೇ ಹೇಳುತ್ತೀರಿ. ನನ್ನ ಸರ್ಕಾರದಲ್ಲಿ ಆಯಾಯ ಖಾತೆಗಳನ್ನೂ ಆಯಾಯ ಮಂತ್ರಿಗಳಿಗೆ ಕೊಟ್ಟುಬಿಟ್ಟಿದ್ದೇನೆ. ನಾನು ಅವರನ್ನು ಸ್ವತಂತ್ರರನ್ನಾಗಿ ಮಾಡಿದ್ದೇನೆ, ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಈ ರೀತಿ ಮಾಡಿರುವುದಕ್ಕೆ ನಾನು ನಿಜವಾಗಿ ಅವರನ್ನು ಅಭಿನಂದಿಸುತ್ತೇನೆ. ಯಾವುದೇ ಸಣ್ಣ ಕೆಲಸವಾಗಲಿ, ಅಭಿವೃದ್ಧಿ ಕೆಲಸವಾಗಲಿ ಒಂದು ನೋಟ್ ಬಂದರೆ ಸೆಕ್ರೆಟರಿಯಾಗಲಿ, ಡೆಪ್ಯೂಟಿ ಸೆಕ್ರೆಟರಿಯಾಗಲಿ. ಅಂಡರ್ ಸೆಕ್ರೆಟರಿಯಾಗಲಿ ಅದು ಆಗುವುದಿಲ್ಲವೆಂದು ಹೇಳುವುದಕ್ಕೆ ಏನು ಅಧಿಕಾರವಿದೆ ? ಬಡ್ಜೆಟ್‌ನಲ್ಲಿ ಪ್ರಾವಿಷನ್ ಇಲ್ಲವೆಂದು ಹೇಳಿದರೆ ನಾನು ಒಪ್ಪುತ್ತೇನೆ. ಹಣವಿಲ್ಲವೆಂದು ಹೇಳಿದರೆ ನಾನು ಒಪ್ಪುತ್ತೇನೆ. ಈ ಹಣಕಾಸಿನ ಇಲಾಖೆಗೆ ದುರ್ದೈವದಿಂದಲೋ, ಸುದೈವದಿಂದಲೋ ಶ್ರೀ ಶಂಕರ್‌ನಾರಾಯಣ್‌ರವರನ್ನು ನೇಮಿಸಿದ್ದಾರೆ. ಅವರು ಹಣಕಾಸಿನ ಇಲಾಖೆಗೆ ಕಾರ್ಯದರ್ಶಿಯಾಗಿರುವುದರಿಂದ ಅವರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವರು ಬಹಳ ಸ್ಟ್ರಿಕ್ಟ್ ಆದ ಮನುಷ್ಯರು ಎಂಬುದು ನನಗೆ ಗೊತ್ತಿದೆ.

ಇದನ್ನು ತಾವು ಒಪ್ಪುತ್ತೀರಾ ? ಶ್ರೀ ಮುರಾರ್ಜಿ ದೇಸಾಯಿಯವರು ಇದರ ಬಗ್ಗೆ ಅನೇಕ ಸಲ ಹೇಳಿದ್ದಾರೆ. ತಾವು ಈಗ ಫೈನಾನ್ಸ್ ಮಂತ್ರಿಯಾಗಿದ್ದೀರಿ. ಇತರರ ಹಾಗೆ ದೀರ್ಘ ಒತ್ತು ನೋಡುವುದಕ್ಕೆ ಹೋಗುವುದಿಲ್ಲ. ಈ ಒತ್ತು ದೀರ್ಘವನ್ನು ನೀವು ನೋಡದೇ ನಿಮ್ಮ ಸೆಕ್ರೆಟರಿಯವರು ನೋಡಿದರೆ ನಿಮಗೆ ಹೇಗೆ ಶಹಭಾಸಗಿರಿ ಸಿಗುತ್ತದೆ ? ಆ ದೃಷ್ಟಿಯಿಂದ ಸರಿಯಾಗಿ ನೀವು ಪರಿವರ್ತನೆ ಮಾಡಬೇಕು. ಆಯಾಯ ಇಲಾಖೆಗೆ ಬೇಕಾದಂತಹ ಹಣವನ್ನು ವಿತರಣೆ ಮಾಡಬೇಕು. ಇವತ್ತು ಕೆ.ಎಸ್.ಡಿ.ಸಿ. ಯವರಿಗೆ ಕೊಟ್ಟಂತಹ ಹಣವನ್ನು ಅವರು ಹೇಗೆ ಖರ್ಚು ಮಾಡಬೇಕು ಎಂಬುದನ್ನು ಹಣಕಾಸಿನ ಅಧಿಕಾರಿಯನ್ನು ಕೇಳಿ ಮಾಡಬೇಕೇ ? ನೀವು ಒಂದು ಕೋಟಿ ರೂಪಾಯಿ ಕೊಟ್ಟರೆ ಅದನ್ನು ಹೇಗೆ ಖರ್ಚು ಮಾಡಬೇಕು ಎಂಬುದು ಆ ಇಲಾಖೆಗೆ ಸಂಬಂಧಪಟ್ಟಿರುತ್ತದೆ. ಪಾಲಿಸಿ ತೀರ್ಮಾನವನ್ನು ಅಪ್ರೂವ್ ಮಾಡಿ, ಇಲ್ಲದಿದ್ದರೆ ಕೆಲಸದ ಪ್ರಗತಿಯಲ್ಲಿ ಕುಂಠಿತ

ಬರುತ್ತದೆ. ಈಗಿರುವ ನಿಯಮಗಳು ಅಡ್ಡ ಬರುತ್ತದೆ ಅದನ್ನು ಹೊರತುಪಡಿಸಿ ಬೇರೆ ನಿಯಮಗಳನ್ನು ಮಾಡಿ ಆಯಾಯ ಕಾರ್ಯದರ್ಶಿಯವರಿಗೆ ಅಧಿಕಾರವನ್ನು ಕೊಡಬೇಕೆಂದು ತಮ್ಮಲ್ಲಿ ವಿನಯ ಪೂರ್ವಕವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹತ್ತು ರೂಪಾಯಿ ಖರ್ಚುಮಾಡಿದರೆ ತೊಂದರೆಯಾಗುತ್ತದೆಂದು ಹೇಳುವ ಹಣಕಾಸಿನ ಇಲಾಖೆಯ ಆಫೀಸರ್ ಇವತ್ತು ಕೇಂದ್ರ ಸರ್ಕಾರದಿಂದ ಬರತಕ್ಕ ಹೇರಳವಾದ ಹಣವನ್ನು ಹೇಗೆ ಖರ್ಚು ಮಾಡುತ್ತಿದ್ದಾರೆ ? ಇವತ್ತು ಅನೇಕ ವಿಧವಾದ ಹಾಸ್ಟೆಲ್‌ಗಳನ್ನು ತೆಗೆದುಕೊಳ್ಳಿ ಅಥವಾ ಸ್ಕೂಲ್‌ಗಳನ್ನು ತೆಗೆದುಕೊಳ್ಳಿ ನಿಮಗೆ ಮಾಡಬೇಕು ಎನ್ನುವ ಮನಸ್ಸಿದೆ ಆದರೆ ಏತಕ್ಕೆ ಎನ್ನುವ ಜಿಜ್ಞಾಸೆ ನಮ್ಮ ಹಣಕಾಸಿನ ಇಲಾಖೆಗೆ. ಇವುಗಳನ್ನೆಲ್ಲಾ ತೆಗೆದುಕೊಂಡು ಏನು ಮಾಡಬೇಕು ಎನ್ನುವ ತಾತ್ಸಾರ ಮನೋಭಾವ, ಬರೀ ಕೊಕ್ಕೆಯನ್ನು ಯಾರೂ ಬೇಕಾದರೂ ಹಾಕಬಹುದು. ಕಲಿತವರೇ, ನುರಿತವರೇ, ಅನುಭವಿಗಳೇ ಹಾಕಬೇಕು ಎನ್ನುವುದೇನೂ ಇಲ್ಲ. ಇದನ್ನು ತಾವು ಪರಿಶೀಲನೆ ಮಾಡಬೇಕು. ಈ ಅಧಿಕಾರಸ್ಥರನ್ನು ಕೇಳಿದರೆ ಮಾಡುವುದಿಲ್ಲ. ಎಲ್ಲಾ ಅಧಿಕಾರಸ್ಥರೊಳಗೆ ಅದನ್ನು ತೆಗೆದರೆ ಸ್ಟ್ರಿಕ್ಟ್‌ನೆಸ್ ಸ್ವಲ್ಪ ಹೆಚ್ಚು ಕಡಿಮೆಯಾಗುತ್ತದೆ. ಹಿಂದೆ ಗೋಪಾಲರೆಡ್ಡಿಯವರು ಸ್ವಲ್ಪ ಅಡ್ಜಸ್ಟ್ ಮಾಡುತ್ತಿದ್ದರು. ಈ ನಿಯಮಗಳನ್ನು ಮಾನವೀಯತೆ ಅಂತಾ ಸ್ವಲ್ಪ ಬದಲಾವಣೆ ಮಾಡುತ್ತಿದ್ದರು. ಆದ್ದರಿಂದ ಈ ನಿಯಮಗಳನ್ನು ಬದಲಾವಣೆ ಮಾಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸೆಂಟ್ರಲ್ ಏಯ್ಡ್ ಸಲುವಾಗಿ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲೂ ಸಹಾ ನಮಗೆ ಬಹಳ ಹಣ ಲ್ಯಾಪ್ಸ್ ಆಗುತ್ತಿದೆ. ಇದರಿಂದ ಎಷ್ಟೋ ಕಾರ್ಯಕ್ರಮಗಳನ್ನು ತೆಗೆದುಕೊಂಡಿಲ್ಲ. ಈ ಕಾರ್ಯಕ್ರಮಗಳನ್ನು ತೆಗೆದುಕೊಳ್ಳದೇ ಇದ್ದರೆ ನಮ್ಮ ಯೋಗ್ಯತೆಯನ್ನು ಹೇಳುವುದಕ್ಕೆ ಬರುತ್ತದೆಯೇ ? ನಮ್ಮಲ್ಲಿ ಹಣ ಇಲ್ಲವೆಂದು ಹೇಳುವುದು, ಜೊತೆಗೆ ನಮಗೆ ಹಣ ಹೊರಗಿನಿಂದ ಬಾರದೆ ಇರುವುದು ಇವುಗಳನ್ನು ನೋಡಿದರೆ ನಾವು ತಲೆಯನ್ನು ಕೆಳಗೆ ಮಾಡಬೇಕಾಗುತ್ತದೆ. ತಮಗೆ ಬೇಕಾದರೆ ಪಟ್ಟಿಯನ್ನು ಕೊಡುತ್ತೇನೆ. ಸಮಾಜ ಕಲ್ಯಾಣ ಇಲಾಖೆಯನ್ನು ನೋಡಿದರೆ ನಮ್ಮ ರಕ್ತ ಕುದಿಯುತ್ತದೆ. ವಿ. ಎಲ್. ಪಾಟೀಲರ ಮನಸ್ಸನ್ನು ನೋಯಿಸಬಾರದೆಂದು ನಾನು ಈ ಸಾರಿ ಬಡ್ಜೆಟ್‌ಗೆ ಬರಲಿಲ್ಲ 100 ಹಾಸ್ಟೆಲ್‌ನ್ನು ಕೊಡುತ್ತೇವೆಂದು ಶ್ರೀ ವಿ. ಎಲ್. ಪಾಟೀಲ್‌ರ ತಮ್ಮ ಉತ್ತರದಲ್ಲಿ ಹೇಳಿದರು. ಆದರೆ ಇವತ್ತು ಅವರ ಕೈಕೆಳಗೆ ಕೆಲಸ ಮಾಡುವ ನಿರ್ದೇಶಕಿ ಹೆಣ್ಣುಮಗಳು ಒಂದು ಹಾಸ್ಟೆಲ್‌ನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಜೊತೆಗೆ ಹಣವಿಲ್ಲವೆಂದು ಪತ್ರ ಬರೆದಿದ್ದಾರೆ. ಆಮೇಲೆ ತಮಗೂ ಬರೆದೆವು. ಯಾವುದೋ ಹಾಸ್ಟೆಲ್ ಸಲುವಾಗಿ ಉತ್ತರ ಕೊಟ್ಟರಿ ಹಾಸ್ಟೆಲ್‌ನ್ನು ಮಾಡಿಕೊಡಿಯೆಂದು ಶ್ರೀ ಥಾಮಸ್‌ರವರಿಗೂ ಬರೆದೆವು, ಅವರು ಹಾಸ್ಟೆಲ್‌ನ್ನು ಮಾಡಿಕೊಟ್ಟರು. ಈ ರೀತಿ ಎಷ್ಟು ಜನರಿಗೆ ಬಂದು ನಿಮ್ಮನ್ನು ಕಾಣಲು ಸಾಧ್ಯವಾಗುತ್ತದೆ ? ಎಲ್ಲದಕ್ಕೂ ನ್ಯಾಯ ನಿಮ್ಮಿಂದಲೇ ದೊರಕಬೇಕು ಎಂದರೆ ಎಷ್ಟು ಜನರಿಗೆ ಸಾಧ್ಯವಾಗುತ್ತದೆ ? ನಮಗೆ ಬರತಕ್ಕ ಅಪಾದನೆಯ ಬಹುಭಾಗ ನಿಮ್ಮ ಹಿಂದೆ ಇರತಕ್ಕ ಅಧಿಕಾರಿಗಳ ವರ್ಗ ಕಾರಣವಾಗಿದೆ—ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ವ್ಯವಸಾಯ ಖಾತೆಯ ಮಂತ್ರಿಯವರು ಮಾತನಾಡುವಾಗ ಹೇಳಿದರು. ಇವತ್ತು ಮಣ್ಣು ಪರೀಕ್ಷೆ ಸಣ್ಣ ಕೆಲಸ. ಈ ಸಣ್ಣ ಕೆಲಸವನ್ನು ನಮ್ಮ ಅಪ್ಪನವರ ಕಾಲದಿಂದ ಹೇಳಿಕೊಂಡು ಬಂದರು. ನೀವು ಹಣಕಾಸಿನ ಮಂತ್ರಿಯಾಗಿದ್ದಾಗ ಹೇಳಿದ್ದಿರಿ. ಈಗ ನೀವು ಮುಖ್ಯ ಮಂತ್ರಿಗಳಾಗಿದ್ದೀರಿ. ಈ ರಾಜ್ಯದೊಳಗೆ ಮಣ್ಣಿನ ಪರೀಕ್ಷೆ ಮಾಡಿ ವರದಿ ಕೊಡುವಂತಹ ಕೆಲಸ ಒಳ್ಳೆಯದು. ಇದು ದೊಡ್ಡ ಕೆಲಸವಲ್ಲ. ಅಧಿಕಾರಿಗಳು ಮುತುವರ್ಜಿ ವಹಿಸಿ, ಯಾರಾದರೂ ನಿಷ್ಠೆಯಿಂದ ಕೆಲಸ ಮಾಡುವವರು ಇರುತ್ತಾರೆ. ಇವರು ಕೇವಲ ಪ್ರಚಾರ ಪ್ರಿಯರಾಗಿದ್ದಾರೆ. ಇವತ್ತು, ಒಬ್ಬ ಅಧಿಕಾರಿ ನಾಲ್ಕು ಜನ ರಾಜಕಾರಣಿಗಳನ್ನು ಹಿಡಿಯುತ್ತಾನೆ. ಒಬ್ಬರಿಗೊಬ್ಬರಿಗೆ ಹೇಳುವಂತಹ ವಿಧಾನ ಅನುಸರಿಸುತ್ತಾ ಇದ್ದಾರೆ. ನಾವು ಹೋಗುವ ದಾರಿಯನ್ನು ತಪ್ಪಿಸಿ ಕಳ್ಳವಿಳ್ಳ ಆಡಿಸಿ ಬಿಡುತ್ತಾರೆ. ಇವತ್ತು ನಮ್ಮ ದೇಶದಲ್ಲಿ ಎರಡು ಪಕ್ಷಗಳು ಇವೆ. ಒಂದು ಅಧಿಕಾರಿಗಳ ಪಕ್ಷ ಮತ್ತೊಂದು ಅಧಿಕಾರೇತರ ಪಕ್ಷ. ಸುಮ್ಮನೆ ನಾವು ಕಾಂಗ್ರೆಸ್. ಜನತಾಯೆಂದು ಹೊಡೆದಾಡುವುದು ವ್ಯರ್ಥ. ಎಮ್.ಎಲ್.ಎಗಳೇ ಈ ರಾಜ್ಯದಲ್ಲಿ ಕಾನೂನು ಮಾಡುವವರು, ಕಾಯಿದೆ ಮಾಡುವವರು. ಆದರೆ ಮಂತ್ರಿಗಳು ಇದ್ದರೂ ಈ ಅಧಿಕಾರಿಗಳು ಕೊಡತಕ್ಕ ವರದಿಯನ್ನು ನಮಗೆ ಒಪ್ಪಿಸುತ್ತಾರೆ. ಆ ವರದಿ ಮಂತ್ರಿಗಳ ಜವಾಬ್ದಾರಿಯಾಗಿರುತ್ತದೆ. ಆದರೆ ಈ ಅಧಿಕಾರೇತರ ವಿಷಯವಾಗಿ ಹೇಳಬೇಕಾದರೆ ಅವರದೊಂದು ಕ್ಲಬ್ ಇದೆ. ಅಲ್ಲಿ ಹೋಗಿ ನೋಡಿ. ಅಲ್ಲಿ ಏನು ನಡೆಯುತ್ತಾ ಇದೆ ಎನ್ನುವುದನ್ನು ಯಾವ ಅಧಿಕಾರಿ ಈ ದಿವಸ ಕ್ಲಬ್ ಲೈಫ್‌ನಿಂದ ವಿಮುಕ್ತ

ನಾಗಿದ್ದಾನೆ ? ಅವನಿಗೆ ಬರತಕ್ಕ ಪಗಾರದಿಂದ ಈ ರೀತಿ ಮಾಡಲು ಸಾಧ್ಯವೇ ? ಈ ರೀತಿ ಅಧಿಕಾರಿಗಳು ಕ್ಲಬ್‌ಗೆ ಹೋಗದಿದ್ದರೆ ಅವರನ್ನು ಬಿಲೋ ದಿ ಡಿಗ್ನಿಟಿಯೆಂದು ತಿಳಿದುಕೊಳ್ಳುತ್ತಾರೆ. ಸಿನಿಮಾ. ರೇಸು ಎಲ್ಲದಕ್ಕೂ ಅವರಲ್ಲಿ ಅನೇಕರು ಹೋಗಬೇಕಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ ನಮ್ಮನ್ನು ದಾರಿ ತಪ್ಪಿಸುವ ಕೆಲಸ ಇವರಿಂದ ಆಗುತ್ತಿದೆ. ಸುಮ್ಮನೇ ನಮ್ಮನ್ನು ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರುಯೆಂದು ಕರೆಯುತ್ತಾರೆ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಅವರದೇ ಒಂದು ವರ್ಗ ಇದೆ. ಅದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು,

೪-೦೦ ಪಿ. ಎಂ.

ನೀವು ಹೋಗಲಿಲ್ಲ, ರಾಜೀನಾಮೆ ಕೊಡಬೇಡಿ. ನೀವು ಹೆಚ್ಚು ಕೆಲಸಮಾಡಿ. ನಿಮಗೆ ಯಾವುದೇ ರೀತಿಯಲ್ಲಿ ಶಕ್ತಿಯನ್ನು ಕೊಡಬೇಕೆಂಬುದರ ಬಗ್ಗೆ ವಿರೋಧಪಕ್ಷದವರನ್ನು ಕೇಳಿ. ನಾವು ಕೊಡುತ್ತೇವೆ. ವಿರೋಧಪಕ್ಷದ ನಾಯಕರು ಸಿಟ್ಟಿನಿಂದ ಮಾತನಾಡಿದರೆ, ಅವರನ್ನು ಕರೆಸಿ, ಕೂಡಿಸಿ, ಯಾವ ರೀತಿಯಲ್ಲಿ ಸಮರ್ಪಕವಾಗಿ, ಸಮಾಧಾನ ಮಾಡಿ, ಕೆಲಸ ಮಾಡುವಂತಹ ಶಕ್ತಿ ನಿಮಗಿದೆ. ಅಧಿಕಾರವನ್ನು ನೀವು ಪಡೆದುಕೊಂಡಿದ್ದೀರಿ. ಆದ್ದರಿಂದ ಹೆಚ್ಚು ಪ್ರಾಮಾಣಿಕವಾಗಿ ಕೆಲಸ ಮಾಡುವ ಧೈರ್ಯ ಶಕ್ತಿ ನಿಮಗಿದೆ. ದೇವರು ನಿಮ್ಮ ಆಯಸ್ಸನ್ನು ಹೆಚ್ಚು ಮಾಡಿ, ಒಳ್ಳೆಯ ಸೇವೆ ಮಾಡಲು ಅವಕಾಶ ಕೊಡಲಿ. ಈಗ ನಿಮಗೆ ಸಿಕ್ಕಿರತಕ್ಕಂತಹ ಅಧಿಕಾರವನ್ನು ಸದುಪಯೋಗ ಮಾಡಿಕೊಳ್ಳತಕ್ಕಂತಹ ಎಲ್ಲಾ ಪ್ರಯತ್ನವನ್ನೂ ಮಾಡಿ. ನೀವು ಒಳ್ಳೆಯ ಮನೆತನದಿಂದ ಬಂದವರು ನಿಮ್ಮ ಮನೆತನವು ತ್ಯಾಗಕ್ಕೆ ಬಹಳ ಪ್ರಸಿದ್ಧಿಯಾಗಿದೆ. ನಿಮ್ಮ ಮನೆತನದವರು ಜೈಲಿನಲ್ಲಿದ್ದವರು. ನೀವು ಒಬ್ಬರು ಉಳಿದಿದ್ದೀರಿ. ನಾವು ನಿಮ್ಮನ್ನು ಹಾಕಿದ್ದೆವು ಅದೇನೇ ಇರಲಿ, ಇವತ್ತಿನ ದಿವಸ ನೀವು ನಿಮ್ಮ ಮನೆತನದ ಗೌರವವನ್ನು ಕಾಪಾಡಬೇಕಾಗಿದೆ. ತಾವು ಜನಸಾಮಾನ್ಯರ ಕೆಲಸವನ್ನು ನಿಷ್ಪಕ್ಷಪಾತದಿಂದ ಮಾಡಬೇಕೆಂದು ಹೇಳಬಯಸುತ್ತೇನೆ. ಇವತ್ತು ರಾಮಕೃಷ್ಣ ಹೆಗಡೆಯವರು ಬಹಳ ಪ್ರಾಂಜಲವಾದ ಮನಸ್ಸಿನ ಮುಖ್ಯಮಂತ್ರಿಯಾಗಿರುವುದರಿಂದ ಅನೇಕಸಲ ಕೆಲಸದಲ್ಲಿಯೂ ಅನ್ಯಾಯವಾಗಿರುತ್ತದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಅನೇಕ ವಿಷಯಗಳನ್ನು ಗಮನಕ್ಕೆ ತಂದಿರುವುದಿಲ್ಲ. ಇವತ್ತು ಕರ್ನಾಟಕ ಭವನಕ್ಕೆ ಹೋದರೆ ಅಲ್ಲಿ ಅಧಿಕಾರಿಗಳಿಗೆ ೬ ಚಪಾತಿ ತಿಂದರೂ ಚಾರ್ಜ್ ಕಡಿಮೆ. ಅದೇ ಒಬ್ಬ ಎಂಎಲ್‌ಎ ಒಂದು ಚಪಾತಿ ತಿಂದರೂ ಡಬಲ್, ಚಾರ್ಜ್ ಹಾಕುತ್ತಾರೆ. ಮಂತ್ರಿಗಳಿಗೊಂದು ರೀತಿ ಅಧಿಕಾರಿಗಳಿಗೊಂದು ರೀತಿ ತಾರತಮ್ಯ ನಡೆಯುತ್ತಿದೆ. ಇದು ಅಧಿಕಾರಶಾಹಿ ಸರ್ಕಾರವಾಗಿದೆ. ಎಂಎಲ್‌ಎ ಗಳಿಗೆ ಕೋಳಿಊಟ ಸಿಕ್ಕುವುದಿಲ್ಲ ಅದೇ ಅಧಿಕಾರಿಗಳಿಗೆ ಅದನ್ನು ರಿಜರ್ವ್ ಮಾಡಿರುತ್ತಾರೆ. ರೂಂ ರೆಂಟ್‌ನಲ್ಲೂ ಕೂಡ ಅಧಿಕಾರಿಗಳಿಗೆ, ಮತ್ತು ಎಂಎಲ್‌ಎ ಗಳಿಗೆ ಅಂತರವಿದೆ ಈ ತರಹ ಒಂದು ವರ್ಗ ಕ್ರಿಯೇಟ್ ಆಗಿದೆ. ಒಬ್ಬ ಅಧಿಕಾರಿ ವರ್ಗದವನು ಇರುತ್ತಾನೆ, ಉದಾಹರಣೆಗೆ, ಒಬ್ಬ ಅಂಡರ್ ಸೆಕ್ರೆಟರಿ ಇರುತ್ತಾನೆ. ಆತನಿಗೆ ರೂಮ್ ನಂಬರ್ ೧ ಕೊಡುತ್ತಾರೆ. ದಿವಂಗತ ದೇವರಾಜ ಅರಸರು ಮುಖ್ಯಮಂತ್ರಿಗಳಾಗಿದ್ದಾಗ, ಶ್ರೀ ನಿಜಲಿಂಗಪ್ಪನವರು ಬಂದರು. ಆಗ ಅವರು ಕೆಳಗೆ ರೂಂ ನಂಬರ್ ೩ ನ್ನು ಕೇಳಿದರು. ಒಬ್ಬ ಅಧಿಕಾರಿ ಬಂದ ಕಾರಣ, ಅವರಿಗೆ ಕೊಟ್ಟಿದ್ದೇವೆ. ಆದ್ದರಿಂದ ನಿಮಗೆ ಕೊಡಲಾಗುವುದಿಲ್ಲ ಎಂದು ಹೇಳಿದರು. ಆಗ ನಿಜಲಿಂಗಪ್ಪನವರಂಥವರಿಗೇ ಕೊಡುವುದಿಲ್ಲವೆನ್ನುವುದು ಏನು ಅವಿವೇಕತನ ? ಆಗ ಶ್ರೀ ಮುರಾರ್ಜಿ ದೇಸಾಯಿಯವರು ಅವರ ರೂಮಿಗೆ ಬಂದರು. ಆಗ ಅವರು ಪ್ರಧಾನ ಮಂತ್ರಿಗಳಾಗಿದ್ದರು. ಇವಾದ ತಕ್ಷಣವೇ ಎಲ್ಲರೂ ನಿಜಲಿಂಗಪ್ಪನವರ ಹತ್ತಿರ ಬಂದು ಅವರ ಆರೈಕೆ ಮಾಡಿದರು. ಅಧಿಕಾರವಿದ್ದಾಗ ಎಲ್ಲರೂ ಬರುತ್ತಾರೆ. ನಿಮ್ಮ ಮೇಲೆ ಚಾಡಿ ಹೇಳಲು ಕೆಲವರು ದೆಹಲಿಗೆ ಹೋಗಬಹುದು. ಅಥವಾ ನಿಮಗೆ ಅನುಕೂಲ ಮಾಡಿಕೊಡಲು ಬಹಳ ಮಂದಿ ಹೋಗಬಹುದು. ಆದ್ದರಿಂದ ಕರ್ನಾಟಕ ಭವನದಲ್ಲಿ ಅಧಿಕಾರಿಗಳಿಗೆ ಮತ್ತು ಅಧಿಕಾರೇತರರಿಗೆ ಇರತಕ್ಕಂತಹ ವ್ಯತ್ಯಾಸವನ್ನು ಕೂಡಲೇ ತೆಗೆಯಬೇಕು. ನಮ್ಮ ರಾಜ್ಯದ ಎಂಎಲ್‌ಎಗಳಿಗೆ ಅಲ್ಲಿ ಹೆಚ್ಚಿನ ಆದ್ಯತೆ ಕೊಡಬೇಕು. ನಮಗೆ ನೀವು ಪಗಾರ ಜಾಸ್ತಿ ನೀಡಿದ್ದೀರಿ. ಆದರೆ, ಅನೇಕ ಸಲ ನಾವು ನಮ್ಮ ಕ್ಷೇತ್ರದ ಜನಗಳ ಕಾರ್ಯಗಳ ಸಲುವಾಗಿ ನೂರಾರು ಪತ್ರಗಳನ್ನು ಬರೆಯಬೇಕಾಗುತ್ತದೆ. ಆ ಪತ್ರಗಳನ್ನು ಬರೆಯುವಂತಹ ಶಕ್ತಿ ಕೆಲವರಿಗೆ ಇರುವುದಿಲ್ಲ. ಆದ್ದರಿಂದ ಪ್ರತಿಯೊಬ್ಬ ಎಂಎಲ್‌ಎ ಗಳಿಗೆ ಒಬ್ಬ ಸ್ಟೆನೋ ಕೊಡಿ ಕೇಂದ್ರ ಸರ್ಕಾರದಲ್ಲಿ ಏನೇನು ಮಾಡಿದ್ದಾರೆ. ಅದನ್ನು ಅನುಕರಣೆ ಮಾಡುತ್ತೇವೆಂದು ಹೇಳಿದ್ದೀರಿ ಶನಿವಾರ ಅವರು ಸೂಟಿ ಬಿಡಲು ನಿರ್ಧಾರ ಮಾಡಿದ್ದಾರೆಂದು ನೀವು ಮಾತಿದ್ದೀರಿ. ಕೆಲವು ಸದಸ್ಯರಿಗೆ ಹೇಗೆ ಮಾತನಾಡಬೇಕೆಂದು ಗೊತ್ತಿಲ್ಲ. ಹಾಗೂ ನಿಯಮಾವಳಿಗಳು ಸರಿ

ಯಾಗಿ ಗೊತ್ತಿರುವುದಿಲ್ಲ. ಸೆಕ್ರೆಟೇರಿಯೇಟ್‌ನವರು ನಿಮಗೆ ಬಹು ಭಾಗ ಅನುಕೂಲ ಮಾಡಿಕೊಡುವ ಸಲುವಾಗಿ ಕೆಲಸ ಮಾಡುತ್ತಿರುವುದರಿಂದ ನಿಮಗೆ ಅನುಕೂಲವಾಗುತ್ತಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ಟೈಪಿಂಗ್ ಪೂಲ್ ಇದೆ. ೪ ಜನ ಸೆಷನ್ ಟೈಂನಲ್ಲಿ ಕೆಲಸ ಮಾಡುತ್ತಾರೆ, ಎಂಬ ವಿವರ ಇದೆ.

ಶ್ರೀ ಕೆ. ಹೆಚ್. ಪಾಟೀಲ್.—ಅವರು ಸತತವಾಗಿ ೧೨ ಗಂಟೆ ಕಾಲ ಇರಬೇಕು. ಎಂಎಲ್‌ಎಗಳು ಹಾಕತಕ್ಕಂತಹ ಟಪಾಲುಗಳನ್ನು ಅಂದೇ ಎಲ್ಲಾ ಇಲಾಖೆಗಳಿಗೂ ಕಳಿಸುವಂತಹ ವ್ಯವಸ್ಥೆ ಆಗಬೇಕು. ಅಂತಹ ವ್ಯವಸ್ಥೆಯನ್ನು ಈ ಸೆಕ್ರೆಟೇರಿಯೇಟ್‌ನಲ್ಲಿ ಮಾಡಬೇಕು. ಅದಕ್ಕೋಸ್ಕರ ಒಬ್ಬ ಸಿಪಾಯಿಯನ್ನು ನೇಮಿಸಿ. ಇದು ಅಸೆಂಬ್ಲಿ ಸ್ಪೀಕರ್‌ರವರ ನೇತೃತ್ವದಲ್ಲಿ ಬರುವುದಿಲ್ಲ. ಅಸೆಂಬ್ಲಿ ನಡೆದಾಗ ಮಾತ್ರ ಸ್ಪೀಕರ್‌ರವರು ಮಾಡಬಹುದು. ಸದಸ್ಯರಿಂದ ಲಿಖಿತ ಮೊಹರು ಬಂದರೆ, ಫ್ರೀ ಡೆಲಿವರಿ ಆಗುವಂತಹ ವ್ಯವಸ್ಥೆ ಕೇಂದ್ರದಲ್ಲಿದೆ. ಅದನು ಇಲ್ಲಿಯೂ ಜಾರಿಗೆ ತನ್ನಿ. ಲೈಬ್ರರಿಯಲ್ಲಿ ಶಾಸಕರಿಗೆ ಸಂಬಂಧಪಡದೇ ಇರತಕ್ಕಂತಹ ಪುಸ್ತಕಗಳನ್ನು ಇಟ್ಟಿದ್ದಾರೆ. ವ್ಯವಸಾಯದ ಬಗ್ಗೆ ಮಾತನಾಡಬೇಕೆಂದರೆ, ಅಥವಾ ಇಂಡಸ್ಟ್ರೀಸ್ ಮೇಲೆ ಮಾತನಾಡಬೇಕೆಂದರೆ, ಅದಕ್ಕೆ ಬೇಕಾದಂತಹ ಪುಸ್ತಕಗಳು ಸಿಗುವಂತಹ ಅನುಕೂಲ ಮಾಡಬೇಕು. ಇವತ್ತು ನಮ್ಮಲ್ಲಿ ಅನೇಕ ಇಂಡಸ್ಟ್ರಿಗಳು ಇವೆ. ಮಂಡ್ಯದ ಅಸಿಟೇಟ್ ಫ್ಯಾಕ್ಟರಿ, ಶುಗರ್ ಫ್ಯಾಕ್ಟರಿ ಇದೆ. ಹಲವಾರು ಟೆಕ್ಸ್‌ಟೈಲ್ ಮಿಲ್‌ಗಳೂ ಇವೆ. ಸೋಪ್ಸ್ ಅಂಡ್ ಡಿಟರ್ಜೆಂಟ್ ಫ್ಯಾಕ್ಟರಿ ಇದೆ. ಇದರ ಬಗ್ಗೆ ಎಲ್ಲಾ ವರದಿಗಳು ಲೈಬ್ರರಿಯಲ್ಲಿ ಸಿಗಬೇಕು. ಮಾನ್ಯ ಮುಖ್ಯ ಮಂತ್ರಿಗಳು ಹೇಳಬಹುದು ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್‌ಗೆ ಸಂಬಂಧಪಟ್ಟ ವಿಷಯ ಇದು ಎಂದು. ಆದರೆ ಇಲ್ಲಿ ಕೆಲವು ಮುಖ್ಯವಾದ ಅಂಶಗಳು ಇವೆ. ಉದಾಹರಣೆಗೆ, ಬಿಜಾಪುರ ಟೆಕ್ಸ್‌ಟೈಲ್ ಮಿಲ್‌ಗೆ ದೊಡ್ಡ ಮನಸ್ಸು ಮಾಡಿ ಒಂದು ಕೋಟಿ ರೂಪಾಯಿ ಕೊಟ್ಟರು. ಆದರೆ, ಇವತ್ತು ನಮ್ಮ ಪಕ್ಷದವರು ಛೇರ್ಮನ್ ಇದ್ದು, ಅಲ್ಲಿ ಒಬ್ಬ ವ್ಯಾಪಾರಸ್ಥರಿಗೆ ಸಹಾಯ ಮಾಡಲು ನೀವು ಹಣ ಕೊಟ್ಟಿರಿ. ಆದರೆ, ಈಗ ಅದನ್ನು ಬಂದ್ ಮಾಡಿದ್ದಾರೆ. ಆದ್ದರಿಂದ ಜನರ ಮೇಲೆ ಯಾವರೀತಿಯ ಪರಿಣಾಮವಾಗುತ್ತದೆಂದರೆ, ತೋಳನನ್ನು ತಂದು ಕುರಿ ಕಾಯಿ ಎಂದರೆ ಆದೀತೆ ? ಕುರಿಯನ್ನು ಕಾಯುವುದಕ್ಕೆ ಟಗರನ್ನು ನೇಮಿಸಿ. ಅದು ಕುರಿಯನ್ನು ತಿನ್ನುವುದಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ.—ಬಿಜಾಪುರದಲ್ಲಿ, ಅಲ್ಲಿ ಜಿಲ್ಲಾಧಿಕಾರಿಗಳೇ ಛೇರ್ಮನ್ ಆಗಿದ್ದಾರೆ. ಒಬ್ಬ ಟೆಕ್ನಿಕಲ್ ಮ್ಯಾನ್ ಅನ್ನು ಮೇನೇಜಿಂಗ್ ಡೈರೆಕ್ಟರ್ ಆಗಿ ಅಪಾಯಿಂಟ್ ಮಾಡಿದ್ದೇವೆ. ಈಗ ಫ್ಯಾಕ್ಟರಿ ನಡೆಯುತ್ತಾ ಇದೆ.

ಶ್ರೀ ಕೆ. ಎಚ್. ಪಾಟೀಲ್.—ಅದನ್ನು ನೀವು ನಡೆಸಿದರೆ ಬಹಳ ಸಂತೋಷ. ಅದು ನಡೆಯಬೇಕೆಂದು ನಾನು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಬಹುಶಃ ಮಾನ್ಯ ಕೆ.ಎಚ್. ಪಾಟೀಲ್ ಅವರಿಗೆ ಮಾಹಿತಿ ಸರಿಯಾಗಿ ಸಿಕ್ಕಿಲ್ಲವೆಂದು ಕಾಣುತ್ತದೆ. ಅವರ ತಿಳುವಳಿಕೆ ಏನೆಂದರೆ, ೧ ಕೋಟಿ ರೂಪಾಯಿ ನಾವು ಕೊಟ್ಟಿದ್ದನ್ನು ಹತ್ತಿ ಪೂರೈಕೆ ಮಾಡಿದಂತಹ ವ್ಯಾಪಾರಸ್ಥರಿಗೆ ಹಳೆ ಬಾಕಿ ಸಲ್ಲಿಸುವುದಕ್ಕೆ ಖರ್ಚು ಮಾಡಿದ್ದಾರೆಂದು ಅವರು ಹೇಳಿದ್ದಾರೆ. ಈ ವ್ಯಾಪಾರಸ್ಥರೆಲ್ಲಾ ಸೇರಿ ನನ್ನ ಹತ್ತಿರವೂ ಬಂದಿದ್ದರು. ಹಾಗೂ ಅವರ ಹತ್ತಿರವೂ ಹೋಗಿದ್ದರು. ಹಳೇ ಬಾಕಿ ತೀರಿಸುವುದಕ್ಕೆ ಕನಿಷ್ಟಪಕ್ಷ ನಮಗೆ ೫೦ ಲಕ್ಷ ರೂಪಾಯಿ ಕೊಡಿ, ಎಂದು ಹೇಳಿದರು, ನಾವು ಸದ್ಯ ಕೊಡುವುದಕ್ಕಾಗುವುದಿಲ್ಲ ವೆಂದು ಹೇಳಿದೆ,

ಶ್ರೀ ಕೆ.ಎಚ್. ಪಾಟೀಲ್.—ಅವರಿಗೆ ಕೊಡಬೇಡಿ ಎಂದು ನಾನು ಹೇಳುವುದಿಲ್ಲ. ಅವರಿಗೆ ಕೊಡುವ ಹಣ ಸರಿಯಾಗಿ ವಿನಿಯೋಗ ಆಗಬೇಕು. ದೊಡ್ಡ ಮನಸ್ಸು ಮಾಡಿ ಕೊಟ್ಟಾಗ ಆ ಹಣ ವಿನಿಯೋಗ ಆಗಬೇಕು. ಮಾನ್ಯ ಜೆ.ಎಚ್. ಪಟೇಲರು ಒಂದು ಮಾತನ್ನು ಹೇಳಿದರು. ನಮ್ಮ ಬೋರ್ಡ್‌ಗಳಲ್ಲಿ ನಮ್ಮವರು ಎಲ್ಲೇ ಇದ್ದರೂ ನೇಮಿಸಿಕೊಳ್ಳುತ್ತೇವೆಂದು ಅವರು ಪ್ರಾಮಾಣಿಕವಾಗಿ ಹೇಳಿದರು. ಅದಕ್ಕೆ ನಾನು ಹೇಳಿದೆ, ಆಗಲಿ, ಆದರಿಂದ ನಿಮ್ಮ ಸೆಕ್ಷನ್ನಿನ ಜನವಾದರೂ ಸೊಸೈಟಿಯಲ್ಲಿ ಕಡಿಮೆಯಾಗುತ್ತಾರೆ ಎಂದು ಹೇಳಿದೆ, ಈ ದೃಷ್ಟಿಯಿಂದ ನಿಮ್ಮ ತತ್ವವೇ ಬೇರೆ, ಅವರ ತತ್ವವೆ ಬೇರೆ. ಏನಾದರೂ ಕೂಡಾ ಹಣದ ಬಗ್ಗೆ ಆಪಾದನೆ ಇಲ್ಲ. ಆದರೆ ಹಣದ ದುರುಪಯೋಗದ ಬಗ್ಗೆ

ಎಚ್ಚರಿಕೆ ವಹಿಸಬೇಕು. ಡಿ.ಸಿ. ಯವರನ್ನು ಅಲ್ಲಿ ಹಾಕಿದ್ದೇವೆಂದು ಜಾಲಪ್ಪನವರು ಹೇಳಿದರು. ಅಲ್ಲಿಯ ಮೇನೇಜರ್ ಹೀಗೆ ಮಾಡಿದ್ದರೆ ನೀವು ಏನು ಮಾಡುತ್ತಿದ್ದಿರಿ ? ಒಂದು ಪಕ್ಷ ನಾನೇ ಹಾಗೆ ಮಾಡಿದ್ದರೆ ಏನು ಮಾಡುತ್ತಿದ್ದಿರಿ ? ಇವತ್ತು ಆ ಕೆಲಸವನ್ನು ಡಿ.ಸಿ. ಯವರು ಮಾಡುತ್ತಿದ್ದಾರೆ. ಇವತ್ತು ತಾವು ಡಿ.ಸಿ. ಗಳ ಮೇಲೆ ಕೇಸ್ ಲಾಗೂ ಮಾಡುವುದಕ್ಕಾಗುವುದಿಲ್ಲ. ಇವತ್ತು ಅವರು ಐ.ಎ.ಎಸ್. ಅಧಿಕಾರಿಗಳಿದ್ದಾರೆ. ಕೋಟಿಗಟ್ಟಲೆ ಹಣವನ್ನು ನೀವು ಅವರಿಗೆ ಕೊಡುತ್ತೀರಿ. ಜಿಲ್ಲೆಯನ್ನು ಆಳುವವ ಅವ ಆಗಿರುವುದರಿಂದ......

ಶ್ರೀ ಆರ್. ಎಲ್ ಜಾಲಪ್ಪ.—ಒಂದು ಕಾಲದಲ್ಲಿ ನೀವು ಹೇಳುವುದು ನಿಜ ಇತ್ತು. ಆದರೆ ಇವತ್ತು ಐ.ಎ.ಎಸ್. ಅಧಿಕಾರಿಗಳೂ ತಪ್ಪು ಮಾಡಿದರೆ ಸಫರ್ ಮಾಡಬೇಕಾಗುತ್ತದೆ. ಆಡಳಿತದಲ್ಲಿ ಅಂತಹ ಬದಲಾವಣೆಗಳನ್ನು ಮಾಡಿದ್ದೇವೆ. ಇನ್ನು ಬಿಜಾಪುರ ಫ್ಯಾಕ್ಟರಿಗೆ ತಾವು ಹೇಳಿದಹಾಗೆ ಮತ್ತು ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಹೇಳಿದಹಾಗೆ ೭೨ ಲಕ್ಷ.

ರೂಪಾಯಿಗಳನ್ನು ನಾವು ಕೊಟ್ಟಿರುವುದರಲ್ಲಿ ಸಿಕ್ ಇಂಡಸ್ಟ್ರೀ ಎಂದು ಟ್ರೀಟ್ ಮಾಡಿ ಯಾರು ಯಾರಿಗೆ ಹಣವನ್ನು ಕೊಡಬೇಕಿತ್ತೋ ಅದನ್ನೆಲ್ಲಾ ಫೈನಲೈಸ್ ಮಾಡಿ ಎಂದು ಹೇಳಿ ಮಾಡಿದ್ದೇನೆ,

ಶ್ರೀ ಕೆ. ಹೆಚ್. ಪಾಟೀಲ್.—ಬಹಳ ಸಂತೋಷ. ಇನ್ನೂ ಕಡಿಮೆ ಬಿದ್ದರೆ ೧೦–೨೦ ಲಕ್ಷ ರೂಪಾಯಿ ಹೆಚ್ಚು ಕೊಡಿ. ನಾನು ಬೇಡವೆಂದು ಹೇಳುವುದಿಲ್ಲ. ಅದನ್ನು ಸರಿಯಾಗಿ ನಡೆಸುವ ಹಾಗೆ ಮಾಡಿ. ಇವತ್ತು ಡಿ.ಸಿ.ಯವರನ್ನು ಕರೆಸಿ ಹೇಳಿ. ಇದನ್ನು ನೀವು ಫಲೋ ನಡೆಸಬೇಕು. ಇನ್ನು ೬ ತಿಂಗಳಲ್ಲಿ ಸರಿಯಾಗಿ ನಡೆಸದೇ ಇದ್ದರೆ ನಿನಗೆ ಪ್ರೊಮೋಷನ್ ಇಲ್ಲ. ಡಿಮೋಷನ್ ಆಗುತ್ತದೆ ಎಂದು ಅವರಿಗೆ ಎಚ್ಚರಿಕೆ ಕೊಡಿ. ಹೇಗ್ಗಡೆಯವರೇ, ಒಬ್ಬರು ಚೌಗಲೆ ಎನ್ನುವವರನ್ನು ಹಿಂದೆ ಸೊಸೈಟಿಗೆ ನೇಮಿಸಿದ್ದರು. ಅವರು ಇವತ್ತು ಜಾಯಿಂಟ್ ರಿಜಿಸ್ಟ್ರಾರ್ ಆಗಿದ್ದಾರೆ.

ಶ್ರೀ ಆರ್. ಎಲ್. ಜಾಲಪ್ಪ.—ಆಯವ್ಯಯ ಭಾಷಣದಲ್ಲಿಯೇ ಈ ಬಗ್ಗೆ ನಾನು ವಿವರವಾಗಿ ಉತ್ತರವನ್ನು ಕೊಟ್ಟಿದ್ದೇನೆ. ಮತ್ತೆ ಏಕೆ ಪ್ರಸ್ತಾಪ ಮಾಡುತ್ತಿದ್ದೀರಿ?

ಶ್ರೀ ಕೆ.ಹೆಚ್. ಪಾಟೀಲ್.—ನಾನು ಈ ಬಗ್ಗೆ ವಿವರಕ್ಕೆ ಹೋಗುವುದಿಲ್ಲ. ಯಾರು ಈ ಕೋ–ಆಪರೇಟಿವ್ ರಿಜಿಸ್ಟ್ರಾರ್‌ರ ರೆಪ್ರೆಸೆಂಟೇಟಿವ್ ಆಗಿದ್ದರು, ಕರ್ನಾಟಕ ಸರ್ಕಾರದ ರೆಪ್ರೆಸೆಂಟೇಟೀವ್ ಆಗಿದ್ದರು. ಆ ಸೊಸೈಟಿಯ ಮೇನೆಜಿಂಗ್ ಡೈರೆಕ್ಟರ್ ಆಗಿದ್ದರು ಅವರು ಏನು ಮಾಡಿದರು ಎಂದರೆ, ಆ ಸೊಸೈಟಿಗೆ ಹಿಂದೆ ಅಮೇರಿಕಾದಿಂದ ಉತ್ತಮವಾದಂತಹ ಲ್ಯಾಬೊರೇಟರಿ ಟೆಸ್ಟ್ ಮಾಡುವ ಎಕ್ವಿಪ್‌ಮೆಂಟ್ಸ್ ತರಿಸಿದ್ದ. ಹಿಂದೆ ಈ ಸೊಸೈಟಿಯ ಛೇರ್ಮನ್ ಆಗಿ ಶಂಕರ್‌ನಾರಾಯಣ್ ಅವರು ಇದ್ದರು. ಆದರೆ ಈಗ ಆ ಮೇನೇಜಿಂಗ್ ಡೈರೆಕ್ಟರ್ ಆ ಉಪಕರಣಗಳನ್ನು ಬಹಳ ಕಡಿಮೆ ಬೆಲೆಗೆ ಯಾರೂ ಯಾರಿಗೋ ಕೊಟ್ಟು ಬಿಟ್ಟಿದ್ದಾರೆ. ಆ ೩೦ ಸಾವಿರ ರೂಪಾಯಿಯಲ್ಲಿ ಕೊಂಡ ಉಪಕರಣಗಳು ಈಗ ೩–೪ ಲಕ್ಷರೂಪಾಯಿ ಆಗುತ್ತದೆ. ಇವತ್ತು ಆ ಉಪಕರಣಗಳು ನಮ್ಮ ದೇಶದಲ್ಲಿ ಸಿಕ್ಕುವುದಿಲ್ಲ. ಹೊರಗಿನಿಂದ ತರಿಸಿದ್ದ ಇವೆಲ್ಲವನ್ನೂ ಮಾರಾಟ ಮಾಡಿದರು. ಒಂದು ಠರಾವು ಇಲ್ಲ, ಒಂದು ಪರವಾನಿಗಿ ಇಲ್ಲ. ಜನರಲ್ ಕಮಿಟಿಯ ಠರಾವೂ ಇಲ್ಲ. ಇದರ ಬಗ್ಗೆ ತಾವು ಆಕ್ಷನ್ ತೆಗೆದುಕೊಳ್ಳಬೇಕು. ಹಿಂದೆ ಮಾಲಿ ಎನ್ನುವವರನ್ನು ನೇಮಿಸಿದ್ದರು. ಆಗಿನ ಕಾಲದಲ್ಲಿ ಮಾಲಿ ಅವರು ೪೦ ಟನ್ ಗ್ರೌಂಡ್‌ನಟ್ ಆಯಿಲ್ ಎವಾಪರೇಟ್ ಆಗಿದೆ ಎಂದು ಹೇಳಿದರು, ಈ ಮಾತನ್ನು ಆಗಿನ ಸರ್ಕಾರ ಕೂಡಾ ಒಪ್ಪಿತು. ಆಯಿಲ್ ಎವಾಪರೇಟ್ ಆಗುವುದಿಲ್ಲ ಎಂಬುದು ನಿಮಗೂ ಗೊತ್ತು, ನಮಗೂ ಗೊತ್ತು. ಹೆಗಡೆಯವರೇ. ಇದು ನಮ್ಮ ಸರ್ಕಾರ ಮಾಡಿದ್ದು. ನಿಮ್ಮ ಸರ್ಕಾರ ಮಾಡಿದ್ದಲ್ಲ. ಆಗ ನಮ್ಮ ಸರ್ಕಾರ ಅಧಿಕಾರದಲ್ಲಿ ಇತ್ತು. ಆ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅನೇಕ ಅಪಾದನೆಗಳನ್ನು ಗೊತ್ತಿಲ್ಲದೇ ಮಾಡುತ್ತೇವೆ. ಇವತ್ತು ಅನೇಕ ಅಪಾದನೆಗಳು ಗೊತ್ತಿದ್ದರೂ ಮುಚ್ಚಿಕೊಳ್ಳುತ್ತೇವೆ. ಅಧಿಕಾರ ವರ್ಗದವರು ತಪ್ಪು ಮಾಡಿದಾಗ ಅದನ್ನು ಹೊರತೆಗೆಯುತಕ್ಕ ಶಕ್ತಿ ನಿಮಗೂ ಇಲ್ಲ, ನಮಗೂ ಇಲ್ಲ. ಈ ಬಗ್ಗೆ ಮುಖ್ಯಮಂತ್ರಿಗಳಿಗೂ ಧೈರ್ಯ ಇಲ್ಲ. ಈ ವರ್ಗವೇ ಹಾಗೇ ಇದೆ. ಅವರನ್ನು ಮುಚ್ಚಿ ಇಟ್ಟುಕೊಳ್ಳುತ್ತಾರೆ. ಇವತ್ತು ಏನೇ ಹೇಳಲಿ ಲೋಕಾಯುಕ್ತ ಇದೆ ಎಂದು ಹೇಳುತ್ತಿದ್ದಾರೆ. ನಾವು ಇಲ್ಲಿಗೇ ಬಂದು ಸಾಕಾಯಿತು. ಇನ್ನು ಉದ್ಯೋಗ, ಪಕ್ಷ ಬಿಟ್ಟು ಲೋಕಾಯುಕ್ತ ಮುಂದೆ ನಿಲ್ಲುವುದಕ್ಕಾಗುತ್ತದೆಯೇ? ಈ ವಿಷಯಗಳನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಇನ್ನು ಮುಂದೆ ಹೀಗೆ ಆಗದ ಹಾಗೆ ಮಾಡಿ. ಇವತ್ತೆಲ್ಲಾ ನಾಳೆ ಚೌಗಲೆಯವರು ಅಡಿಷನಲ್ ರಿಜಿಸ್ಟ್ರಾರರ್ ಆಗುತ್ತಾರೆ. ರಿಜಿಸ್ಟ್ರಾರರ್ ಆಗುತ್ತಾರೆ.

ಐ.ಎ.ಎಸ್.ಗೂ ಇವರನ್ನು ರೆಕಮಂಡ್ ಮಾಡುತ್ತೀರಿ. ನಮ್ಮ ಸ್ನೇಹಿತರಾದ ಇನಾಂದಾರ್ ಅವರು ಚೌಗಲೆಯವರ ಹೆಸರನ್ನು ರೆಕಮಂಡ್ ಮಾಡಿದ್ದರು. ಇವರನ್ನು ಏಕೆ ತೆಗೆದುಕೊಂಡೆ? ಮುಂದೆ ಇರುವ ಎಲ್ಲ ಸಕ್ಕರೆ ಫ್ಯಾಕ್ಟರಿಗಳು ಮಾರಾಟ ಆದಾವು ಎಂದು ಹೇಳಿದೆ. ಮುಂದೆ ಆತ ಹೇಳಿದ, ನಾನು ಬೇರೆ ಚೌಗಲೆ ಅವರನ್ನು ಬೇಕೆಂದು ಬರೆದು ಕಳುಹಿಸಿದ್ದೆ, ಇವರನ್ನು ನನಗೆ ಕೊಟ್ಟಿದ್ದಾರೆ ಎಂದು ಹೇಳಿದರು. ಆ ದೃಷ್ಟಿಯಿಂದ ನಾನು ಈ ಸಭೆಯಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ. ಈ ಬಗ್ಗೆ ನನಗೆ ಬಹಳ ವ್ಯಸನವಾಗುತ್ತಿದೆ. ಈ ದೇಶದಲ್ಲಿ ಸುಲಿಗೆ ಮಾಡತಕ್ಕ ಶಕ್ತಿಯನ್ನು ನಿರ್ನಾಮ ಮಾಡಬೇಕು, ನಿರ್ನಾಮ ಮಾಡದೇ ಇದ್ದರೆ ನಿಜವಾಗಿಯೂ ದೇವರಿಗೆ ಉತ್ತರವನ್ನು ಕೊಡಬೇಕಾಗುತ್ತದೆಯೇ ಹೊರತು ಮನುಷ್ಯರಿಗೆ ಅಲ್ಲ ಎಂದು ಹೇಳುತ್ತಿದ್ದೇನೆ. ಮಾನ್ಯ ಹೆಗಡೆಯವರಿಗೆ ಒಂದು ಮಾತನ್ನು ಕೇಳುತ್ತೇನೆ. ಅವರು ಸೋಷಿಯಲಿಸಂ ಅನುಸರಿಸದೇ ಇದ್ದರೂ ಅದನ್ನು ಪಾಲನೆ ಮಾಡುತ್ತಿದ್ದಾರೆ. ಹಾಗೂ ಕಾಂಗ್ರೆಸ್ ತತ್ವಗಳನ್ನು ಒಪ್ಪಿದವರಾಗಿದ್ದಾರೆ. ಇವತ್ತು ರಾಜಕೀಯ ಜೀವನದಲ್ಲಿ ವ್ಯಕಿಗಳ ಮಾದ ಬದಲಾವಣೆ ಆದಾಗ ಅಲ್ಲಿ ಅವರು ಕೂತಿದ್ದಾರೆ. ಅವರು ಎಲ್ಲೇ ಕುಳಿತಿರಲಿ ಅವರಲ್ಲಿ ಸೋಷಿಯಲಿಸಂ ಹೋಗಿಲ್ಲ. ಆದರೆ ನಾನು ಒಂದು ಮಾತು ಕೇಳುತ್ತಿದ್ದೇನೆ ಎಲ್ಲಾ ಪಬ್ಲಿಕ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ಒಂದರಿಂದ ಇನ್ನೊಂದು ಇನ್‌ಸ್ಟಿಟ್ಯೂಷನ್‌ಗೆ ಪ್ರೋತ್ಸಾಹ ಆಗಬೇಕೆಂದು ತಮ್ಮ ಅಭಿಪ್ರಾಯ ಇಲ್ಲವೇ? ಇವತ್ತು ಸಾಬೂನು ಕಾರ್ಖಾನೆಯು ಸೋಪುಗಳನ್ನು ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಹಂಚುವುದಕ್ಕೆ ಏಕೆ ಏರ್ಪಾಟು ಮಾಡಬಾರದು! ಏಕೆ ಬರೀ ಎಂ.ಎಸ್.ಐ.ಎಲ್‌ಗೆ ಕೊಡುತ್ತೀರಿ? ಅದಕ್ಕೇ ಏಕೆ ಸೀಮಿತ ಮಾಡಬೇಕು? ಈಗಲಾದರೂ ಸಹಕಾರಿ ಸಂಘಗಳ ಮುಖಾಂತರ ಮಾರಾಟ ಮಾಡಿದರೆ ಹೆಚ್ಚು ಸೋಪುಗಳನ್ನು ಖರ್ಚು ಮಾಡುವುದಕ್ಕೆ ಅನುಕೂಲವಾಗುತ್ತದೆ. ಅದೇ ರೀತಿ ನಮ್ಮಲ್ಲಿರತಕ್ಕ ಅಸಿಟಲೀನ್‌ಗೆ ಲಿಂಟಲ್ಸ್ ತರಬೇಕು, ಸಹಕಾರಿ ಸಂಸ್ಥೆಗಳಲ್ಲಿ ಅದನ್ನು ತೆಗೆದುಕೊಳ್ಳಬೇಕೆಂದು ಏಕೆ ತಾವು ಮಾಡಬಾರದು? ಇವತ್ತು ಹ್ಯಾಂಡ್‌ಲೂಮ್ ಕಾರ್ಪೊರೇಷನ್ ಇದೆ. ಮಾನ್ಯ ದೇಶಪಾಂಡೆಯವರೂ ಕೂಡಾ ಉತ್ಸಾಹೀ ಯುವ ಮಂತ್ರಿಗಳಾಗಿದ್ದಾರೆ. ಹಾಗೂ ಅವರೊಂದಿಗೆ ವಿಜಯ್ ಅಂತಹ ಉತ್ತಮ ಅಧಿಕಾರಿಗಳು ಇರುವುದರಿಂದ ಒಳ್ಳೆಯ ಕೆಲಸ ಮಾಡಿ ಸಂಸ್ಥೆಯನ್ನು ಬೆಳೆಸಿದ ಹಾಗೆ ಆಗುತ್ತದೆ. ಅಲ್ಲೂ ಕೂಡಾ ಸರ್ಕಾರದ ಹಣ ಇದೆ. ಇಲ್ಲೂ ಸಹಾ ಸರ್ಕಾರದ ಹಣ ತೊಡಗಿಸಲಾಗಿದೆ. ಆದುದರಿಂದ ಒಂದಕ್ಕೊಂದಕ್ಕೆ ಹೊಂದಾಣಿಕೆ ಆಗುವಂತೆ ಇಲ್ಲಿಗೆ ಬೇಕಾಗುವ ರಾ-ಮೆಟೀರಿಯಲ್ಸ್‌ನ್ನು ಅಲ್ಲಿಂದ ಪಡೆದು ಉಪಯೋಗ ಮಾಡಿದರೆ ಇಬ್ಬರಿಗೂ ಉಪಯೋಗವಾಗುತ್ತದೆ. ಇವತ್ತು ಪೇಪರ್ ಉದ್ಯಮವನ್ನೇ ತೆಗೆದುಕೊಳ್ಳಿ. ಎಲ್ಲಾ ಸಂಸ್ಥೆಗಳೂ ಕೂಡಾ ಮೈಸೂರು ಪೇಪರ್ ಮಿಲ್‌ನ ಪೇಪರ್ ಅನ್ನೇ ತೆಗೆದುಕೊಳ್ಳಬೇಕೆಂದು ಹೇಳಿ, ಇವತ್ತು ನಮಗೆ ಬೇಕಾದ ಕಾಗದವನ್ನೆಲ್ಲಾ ಅಲ್ಲಿಂದಲೇ ಕೊಳ್ಳುವುದರಿಂದ ಆ ಉದ್ಯಮವನ್ನು ಬೆಳೆಸಿದ ಹಾಗೆ ಆಗುತ್ತದೆ. ಇವತ್ತು ಒಂದು ಮಾತನ್ನು ಹೇಳುತ್ತೇನೆ. ಇವತ್ತು ಒಂದು ಪಕ್ಷದಲ್ಲಿ ಇದ್ದಾಗ ಪಕ್ಷದ ಅಭಿಮಾನದಿಂದಾಗಿ ಪಕ್ಷದ ಹಿತ ರಕ್ಷಣೆ ಮಾಡುವಾಗ ಉಳಿದ ನಿಯಮಗಳನ್ನು ಗಾಳಿ ಪಾಲು ಮಾಡಬಾರದು. ಇವತ್ತು ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯನ್ನೇ ತೆಗೆದುಕೊಳ್ಳೋಣ ತಾವು ಏನೋ ಬಹಳ ಅನುಭವಶಾಲಿಗಳು ಎನ್ನುವ ದೃಷ್ಟಿಯಿಂದ ಶ್ರೀಮಾನ್ ಮಾಗಡಿಯವರನ್ನು ತೆಗೆದುಕೊಂಡಿದ್ದೀರಿ, ಅವರು ನಿಮ್ಮಲ್ಲಿಯೇ ಇದ್ದಾರೆ. ಮಾಗಡಿಯವರು ತಮಗೆ ಗೊತ್ತಿರುವ ಹಾಗೆ ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಗೆ ಅನೇಕ ರೀತಿಯ ತ್ಯಾಗ ಮಾಡಿದವರು, ಅವರು ಅನೇಕ ಸಂಸ್ಥೆಗಳನ್ನು ಕಟ್ಟಿದವರಾಗಿದ್ದಾರೆ. ಇವತ್ತು ಅವರನ್ನು ಬಿಟ್ಟು ತಮ್ಮ ಪಕ್ಷದ ಪ್ರೆಸಿಡೆಂಟ್‌ನ್ನು ಛೇರ್ಮನ್ ಮಾಡಿದ್ದೀರಿ. ಇದು ಯಾವ ತತ್ವ? ಅವರು ನನ್ನ ಸ್ನೇಹಿತರಾಗಿದ್ದಾರೆ, ಅವರು ಆ ಬಗ್ಗೆ ದೊಡ್ಡ ಮನುಷ್ಯರಲ್ಲ. ಅವರಿಗೆ ಈ ಬಗ್ಗೆ ಏನು ಗೊತ್ತಿದೆ? ನನ್ನನ್ನು ಟೆಕ್ನಾಲಜಿ ಬಗ್ಗೆ ಹೇಳು ಎಂದು ನಿಲ್ಲಿಸಿದರೆ ನಾನು ಕೈಮೇಲೆ ಎತ್ತಿ ಬರಬೇಕಾಗುತ್ತದೆ. ಈಗ ಅಲ್ಲಿ ಅವರು ಏನು ಮಾಡುತ್ತಾರೆ? ನಾವು ಇಲ್ಲಿ ಬೈಯುವುದು ಅವರನ್ನಲ್ಲ. ಹಿರಿಯಕ್ಕನ ಚಾಳಿ ಮನೆ ಮಕ್ಕಳಿಗೆಲ್ಲಾ ಎನ್ನುವ ಹಾಗೆ ನಾವು ಇಲ್ಲಿ ಯಾರನ್ನು ಕೇಳುವುದು? ಇವತ್ತು ರಾಮಕೃಷ್ಣ ಹೆಗ್ಡೆಯವರು ಮಾಡಬಹುದು, ಅಥವಾ ಬೊಮ್ಮಾಯಿಯವರು ಇವರಿಗೆ ಹೇಳಿ ಮಾಡಿಸಬಹುದು. ಕೊನೆಗೆ ನಾವು ಮುಖ್ಯ ವ್ಯಕ್ತಿಗೆ ಹೇಳಬೇಕಾಗುತ್ತದೆ. ಇವರು ಪರಿಶಿಷ್ಟ ಜಾತಿ ಹಾಗೂ ಪಂಗಡದವರ ಬಗ್ಗೆ ಉದಾರವಾಗಿ ಮಾತನಾಡಿದ್ದಾರೆ. ನಾನು ಒಂದು ಮಾತನ್ನು ಹೇಳುತ್ತೇನೆ, ಇವತ್ತು ಪರಿಶಿಷ್ಟ ಜಾತಿ ಬಗ್ಗೆ ಅನೇಕ ಸಲ ಹೇಳಿದ್ದಾರೆ. ನಾವೂ ಕೂಡ ಇಲ್ಲಿ ಅವರ ಬಗ್ಗೆ ಅನೇಕ ಸಲ ಮಾತನಾಡುತ್ತೇವೆ. ಇವತ್ತು ನಾವು ಅವರ ಬಗ್ಗೆ ಇಲ್ಲಿ ಏನು ಹೇಳಿದ್ದೇವೆ ಅದನ್ನು ನೋಡುವುದಕ್ಕೆ ಸಿಗುವುದಿಲ್ಲ. ಇದನ್ನು ಪ್ರಿಂಟ್ ಮಾಡಿಸಲು ಸ್ಪೀಕರ್ ಅವರು ಎಷ್ಟೋ ವರ್ಷಗಳನ್ನು ತೆಗೆದುಕೊಳ್ಳು

ತ್ತಾರೆ. ಅದು ಪ್ರಿಂಟ್ ಆಗಿ ಅಧಿಕಾರಸ್ಥರ ಕೈ ಸೇರಬೇಕಾದರೆ ಎಷ್ಟೋ ವರ್ಷಗಳಾಗುತ್ತದೆ. ಇದರಿಂದ ಪ್ರಿಂಟಿಂಗ್, ಪ್ರೆಸ್‌ನವರ ಎಫಿಶಿಯನ್ಸಿ ಎಷ್ಟು ಇದೆ ಎಂಬುದು ತಿಳಿಯುತ್ತದೆ. ನಮ್ಮ ಶಿರಹಟ್ಟಿ ತಾಲ್ಲೂಕಿನಲ್ಲಿ ಮಾಗಡಿ ಎಂಬ ಗ್ರಾಮ ಇದೆ. ಈ ಗ್ರಾಮದ ಸರ್ವೇ ನಂ. ೫೨–೫೩–೫೪–೫೫ರಲ್ಲಿ ಮೊದಲು ಅದು ಮಾಲಿ ಇನಾಮ್ ಇದ್ದಾಗ ಮಾಗಡಿಯ ಪರಿಶಿಷ್ಟ ಜಾತಿಯ ಸಮಾಜದವರಿಗೆ ಈ ಜಾಗವನ್ನು ಕೊಟ್ಟಿದ್ದಾರೆ.

ಕೊಟ್ಟಂಥಾದ್ದು ಹಳೇ ಸೆಕ್ಷನ್ ಪ್ರಕಾರ ಕೊಟ್ಟಿದ್ದಾರೆ. ಅದು ಅವಿಭಾಜ್ಯವಾದಂಥ ಸ್ವತ್ತು. ಅದನ್ನು ಮಾರಾಟ ಮಾಡುವುದಕ್ಕೆ ಬರುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಸಚಿವರಾಗಿದ್ದಾಗ ಒಂದು ಕಾಯಿದೆಯನ್ನು ಮಾಡಿದರು. ಅದೇನೆಂದರೆ, ಯಾರೇ ಆಗಲಿ ಹರಿಜನರ ಹೊಲಗಳನ್ನು ೧೫ ವರ್ಷದೊಳಗೆ ತೆಗೆದುಕೊಂಡರೆ ಅದು ರದ್ದು ಆಗುತ್ತದೆಂದು. ಆ ಕಾಯಿದೆ ಇನ್ನೂ ಕೂಡ ಇದೆ. ಅದು ಎರಡನ್ನೂ ಬಿಟ್ಟು ಹರಿಜನರ ಹೆಸರಿನಲ್ಲಿ ಖೊಟ್ಟಿ ಪ್ರಮಾಣಪತ್ರವನ್ನು ತಯಾರು ಮಾಡಿ ಅದರ ಆಧಾರದ ಮೇಲೆ ಮತ್ತೊಂದು ಪ್ರಮಾಣ ಪತ್ರವನ್ನು ಬರೆದು ಅಧಿಕಾರಿಗಳಿಗೆ ಕಳುಹಿಸಿದರೆ ಯಾರೂ ಏನೂ ಮಾಡಲಿಲ್ಲ, ಅಸಿಸ್ಟೆಂಟ್ ಕಮೀಷನರ್‌ರವರೂ ಕೂಡ ಏನೂ ಮಾಡಲಿಲ್ಲ. ಪೋಲೀಸರಿಗೆ ಅವರು ಮ್ಯಾಜಿಸ್ಟ್ರೇಟ್‌ರವರ ಕೋರ್ಟಿನಲ್ಲಿ ದಾಖಲು ಮಾಡಿ ಎಂದು ಬರೆದು ಕಳುಹಿಸುತ್ತಾರೆ. ಜೊತೆಗೆ ನಾನು ಇಂಥವರನ್ನು ಅಂದರೆ ಈ ಕಾಗದವನ್ನು ಬರೆದವನನ್ನು ಜಮಾನತ್ತು ತೆಗೆದುಕೊಂಡಿದ್ದೇವೆಂದು, ಅವರು ಬರೆದಿದ್ದಾರೆ, ಇಂಥ ಅಧಿಕಾರಿಗಳು ನಿಮ್ಮಲ್ಲಿದ್ದಾರೆ. ಇವರು ಕಳ್ಳರನ್ನು ಹೇಗೆ ಹಿಡಿಯುತ್ತಾರೆ? ಸುಳ್ಳನನ್ನು ಹಿಡಿಯಿರಿ ಎಂದರೆ ಇವರು ಹೇಗೆ ಹಿಡಿಯುತ್ತಾರೆ? ಕೇವಲ ಕೇಸ್ ಫೈಲ್ಡ್ ಎಂದು ಹೇಳುತ್ತಾರೆ. ನಾವು ಏನಾದರೂ ಇಲ್ಲಿ ಹೇಳಿದರೆ, ಎದುರು ಪಕ್ಷದವರು ಏನೇನೋ ಹೇಳುತ್ತಾರೆಂಬ ಭಾವನೆ ನಿಮ್ಮಲ್ಲಿ ಬರುತ್ತದೆ. ವ್ಯಕ್ತಿಶಃ ಹೇಳುತ್ತಾರೆಂಬ ಭಾವನೆ ಬರುತ್ತದೆ. ಆದರೆ ನೀವೇನು ಮಾಡುವುದಕ್ಕಾಗುತ್ತದೆ? ನಿಮಗೂ ಕೂಡ ಪೊಲಿಟಿಕಲ್ ಪ್ರೆಷರ್ ಇದ್ದೇ ಇರುತ್ತದೆ. ಎರ್ ಈಸ್ ಹ್ಯೂಮನ್. ಅದು ಬೇಡವೆಂದು ನಾವು ಹೇಳುವುದಕ್ಕಾಗುವುದಿಲ್ಲ. ನಿಮಗೆ ಕಿವಿಯಲ್ಲಿ ಹೇಳುವವರು ಹೇಳುತ್ತಾರೆ. ಆಗ ಅದು ಬದಲಾವಣೆಯೂ ಆಗುತ್ತದೆ. ಇವತ್ತೂ ಕೂಡ ಅದೇ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಅಲ್ಲಿ ನಡೆಯುತ್ತಿದ್ದಾರೆ, ಅದೇ ಅಸಿಸ್ಟೆಂಟ್ ಕಮಿಷನರ್ ಅಲ್ಲೇ ನಡೆಯುತ್ತಿದ್ದಾರೆ. ಅವರನ್ನು ಹಿಡಿಯುವವರು ಯಾರೂ ಇಲ್ಲ. ತಾಳವೂ ಇಲ್ಲ, ತಂತಿಯೂ ಇಲ್ಲ. ಇವರಿಗೆ ಎಕ್ಸ್‌ಟೆನ್‌ಷನ್ ಬೇಕೆ? ಇದಕ್ಕೆ ಪ್ರಾಮಾಣಿಕರಾದ ಜನರು ಬೇಕೆ? ಇವತ್ತು ನೀವು ಲ್ಯಾಂಡ್ ಟ್ರಿಬ್ಯುನಲ್‌ಗಳಿಗೆ ಸದಸ್ಯರನ್ನು ನೇಮಕ ಮಾಡುತ್ತೀರಿ. ಅದರಲ್ಲಿ ಬಹಳ ಜನರು ವಿವೇಕದ ಮೇರೆಯನ್ನು ಮೀರಿದವರೂ ಇರುತ್ತಾರೆ. ಅಂಥವರು ನಿಮ್ಮಲ್ಲೂ ಇರುತ್ತಾರೆ. ನಮ್ಮಲ್ಲೂ ಇರುತ್ತಾರೆ. ಎಲ್ಲ ವರ್ಗದ ಜನರು ನಿಮ್ಮಲ್ಲೂ ಇದ್ದಾರೆ, ನಮ್ಮಲ್ಲೂ ಇದ್ದಾರೆ. ಆದರೆ ನೀವು ಒಂದು ವಿಚಾರವನ್ನು ಪರ್ಯಾಲೋಚನೆ ಮಾಡಬೇಕು ಪೋಲೀಸರ ಮುಖಾಂತರವಾಗಲಿ ಅಥವಾ ನಿಮಗೆ ಸಮರ್ಪಕವಾದ ರೀತಿಯಲ್ಲಾಗಲಿ, ಈ ಮನುಷ್ಯನನ್ನು ಈ ಟ್ರಿಬ್ಯುನಲ್‌ನಲ್ಲಿ ಹಾಕುವುದಕ್ಕೆ ಯೋಗ್ಯವಾಗಿದ್ದಾನೆಯೇ ಇಲ್ಲವೇ? ಎಂಬುದನ್ನು ತಿಳಿದುಕೊಳ್ಳಿ. ಮೊದಲು ನಾವು ಯಾರನ್ನಾದರೂ ಲ್ಯಾಂಡ್ ಟ್ರಿಬ್ಯುನಲ್‌ಗಾಗಲಿ ಅಥವಾ ಬೇರೆ ಕಡೆಗಾಗಲಿ,

ನಾಮಿನೇಟ್ ಮಾಡಬೇಕಾದರೆ ಅವನ ಕಾನ್‌ಫಿಡೆನ್‌ಷಿಯಲ್ ರಿಪೋರ್ಟ್‌ನ್ನು ತರಿಸಿಕೊಳ್ಳುತ್ತಿದ್ದೆವು. ಈಗ ನೀವು ಇಂಥ ರಿಪೋರ್ಟನ್ನು ತರಿಸಿಕೊಳ್ಳುವಂತೆ ಕಾಣುವುದಿಲ್ಲ. ಇದರಿಂದಾಗಿ ಕೊಲೆ ಪಾತಕರು, ಕಳ್ಳರು, ಸುಳ್ಳರು, ಇಂಥವರೆಲ್ಲಾ ಬರುತ್ತಿದ್ದಾರೆ. ಆದ್ದರಿಂದ ಇದರ ಬಗ್ಗೆ ತಾವು ಸಮಗ್ರವಾದ ಆದೇಶವನ್ನು ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಸೈನ್ಸ್ ಅಂಡ್ ಟೇಕ್ನಾಲಜಿಯ ಮೇಲೆ ಮಾತನಾಡಬೇಕಾದರೆ ನಾನು ಒಂದು ಮಾತನ್ನು ಹೇಳಲೇಬೇಕಾಗುತ್ತದೆ. ಏಕೆಂದರೆ ಈಗ್ಗೆ ಸ್ವಲ್ಪ ದಿವಸಗಳ ಹಿಂದೆ ಬಯೋ ಗ್ಯಾಸ್ ಬಗ್ಗೆ ಡಾ. ಚೌಗಲೆ ಎನ್ನುವವರು ಒಂದು ಯೋಜನೆಯನ್ನು ತಯಾರು ಮಾಡಿದರು. ಅದನ್ನು ಪ್ರಯೋಗಾರ್ಥವಾಗಿ ಒಂದು ಸೊಸೈಟಿಗೆ ಮಾಡಬೇಕೆಂದು ಮಾಡಿದ್ದರು. ಅದು ೭೫ಲಕ್ಷ ರೂಪಾಯಿಗಳ ಒಂದು ಯೋಜನೆ. ಅದಕ್ಕೆ ಆರ್. ಡಿ. ಸಿ, ಯವರು ಬಡ್ಡಿ ಇಲ್ಲದೆ ಹಣವನ್ನು ಕೊಡಲು ಮುಂದೆ ಬಂದರು. ಬೇಕಾದರೆ ೩ ಪರ್ಸೆಂಟ್ ಬಡ್ಡಿಯನ್ನು ಬೇಕಾದರೂ ತೆಗೆದುಕೊಳ್ಳಲಿ ಎಂದು ಮಾಡಿದ್ದೆ, ಆದರೆ ಅದಕ್ಕೆ ಒಂದು ಗ್ಯಾರಂಟಿ ಬೇಕಾಯಿತು. ಅದನ್ನು

ನಾವು ಕೊಡುತ್ತೇವೆಂದು ತಾವು ಹೇಳಿದಿರಿ, ಆದರೆ ಅದು ಸಿಕ್ಕಲಿಲ್ಲ, ಅಲ್ಲದೆ ನಾನೂ ಕೂಡ ಮತ್ತೊಮ್ಮೆ ನಿಮ್ಮ ಹತ್ತಿರ ಬರಬೇಕಾಗಿತ್ತು, ಬರಲಿಲ್ಲ, ಈ ಬಗ್ಗೆ ನಾನು ಒಂದು ತಪ್ಪನ್ನು ಮಾಡಿದೆ. ಯಾವ ಮನುಷ್ಯ ಸೈನ್ಸ್‌ನ್ನು ಬೆಳೆಸುವುದಕ್ಕೆ ಮುಂದೆ ಬಂದಿದ್ದಾರೆ ಅವರಿಗೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ಒದಗಿಸಬೇಕಾಗಿತ್ತು. ನಮ್ಮಲ್ಲಿ ಸೇಂಗಾದಿಂದ ಒಂದು ಚಟ್ಟು ಸಿಕ್ಕುತ್ತದೆ. ಆ ಚಟ್ಟಿನಿಂದ ವಿದ್ಯುತ್‌ನ್ನು ಉತ್ಪಾದಿಸತಕ್ಕಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಾಗ ಈ ಸರ್ಕಾರದ ಕಕ್ಷೆಯಲ್ಲಿ ಬರತಕ್ಕ ಜನರು ಅದನ್ನು ತಿರಸ್ಕಾರ ಮಾಡಿದರು. ಈ ದೇಶ ನಮ್ಮದು, ಈ ದೇಶದಲ್ಲಿರತಕ್ಕ ಎಲ್ಲ ವಸ್ತುಗಳೂ ನಮ್ಮವು, ಇಲ್ಲಿ ಹಾಕಿಕೊಳ್ಳತಕ್ಕ ಕಾರ್ಯಕ್ರಮಗಳೆಲ್ಲವೂ ನಮ್ಮವು, ಇಲ್ಲಿ ನಾವು ಇದನ್ನು ಮಾಡದಿದ್ದರೆ ಮುಂದೆ ದೇವರಿಗೆ ಉತ್ತರವನ್ನು ಕೊಡಬೇಕಾಗುತ್ತದೆ ಎನ್ನತಕ್ಕ ಮನೋಭಾವನೆ ಇವರಲಿಲ್ಲ. ನನಗೆ ಹೇಗೊ ಪಗಾರ ಬರುತ್ತದೆ. ಈಗ ಇವರಿಗೆ ೭೫ ಲಕ್ಷ ರೂಪಾಯಿಗಳಿಗೆ ನಾನು ಗ್ಯಾರಂಟಿಯನ್ನು ಕೊಟ್ಟರೆ ಮುಂದೆ ಅದು ನನ್ನ ಮೇಲೆ ಬರುತ್ತದೆ. ಈ ಜವಾಬ್ದಾರಿಯನ್ನು ತೆಗೆದುಕೊಳ್ಳುವುದಕ್ಕೆ ಬದಲಾಗಿ ಈಗಲೇ ಇದನ್ನು ನಾನು ರಿಜೆಕ್ಟ್ ಮಾಡಿದರೆ ಅನಂತರ ನನ್ನನ್ನು ಯಾಗೂ ಕೂಡ ಕೇಳುವುದಿಲ್ಲ ಎನ್ನುವ ಮನೋಭಾವನೆಯನ್ನು ಈ ಅಧಿಕಾರಿಗಳು ಹೊಂದಿದ್ದಾರೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಈ ಯೋಜನೆಯನ್ನು ರಿಜೆಕ್ಟ್ ಮಾಡಿದ್ದಾರೆ. ಈಗಾಗಲೇ ಅದು ರಿಜೆಕ್ಟ್ ಆಗಿದೆ, ಇಂಥ ಸಂದರ್ಭ ಬಂದಾಗ ಅದನ್ನು ಯಾವ ರೀತಿ ಬಗೆಹರಿಸುತ್ತಿರೆಂಬುದನ್ನು ತಾವೇ ಯೋಚನೆ ಮಾಡಿ. ಇವತ್ತು ನಾನು ನಿಮ್ಮ ಹತ್ತಿರ ಬಂದು ಹೇಳಬಹುದು. ಆದರೆ ನನ್ನಂತೆಯೇ ಅನೇಕ ಜನರು ನಿಮ್ಮ ಹತ್ತಿರ ಬಂದು ಹೇಳುವುದಕ್ಕೆ ಸಾಧ್ಯವಿಲ್ಲದವರೂ ಇದ್ದಾರೆ. ನಿಮ್ಮ ದರ್ಶನವನ್ನು ಮಾಡಲಿಕ್ಕೂ ಸಾಧ್ಯವಿಲ್ಲದಿರತಕ್ಕ ಜನರಿದ್ದಾರೆ. ಇವತ್ತು ಹೈಕೋರ್ಟ್‌ನಲ್ಲಿ ಅನೇಕ ನಿರ್ಣಯಗಳಾಗುತ್ತವೆ. ನಮ್ಮ ಸಂಘಸಂಸ್ಥೆಗಳಿಂದ ಬರತಕ್ಕ ಹಣ ಏನಿದೆ ಅದನ್ನು ಕೊಡಬೇಕೆಂದು ಹೈಕೋರ್ಟ್‌ನಲ್ಲಿ ನಿರ್ಣಯ ಆಗಿದ್ದರೂ ಸಹಿತ ಹಣವನ್ನು ಕೊಟ್ಟಿಲ್ಲ ಕನ್ಸೆಂಟ್‌ಗನುಗುಣವಾಗಿ ಷೇರು ಹಣವನ್ನು ಸರ್ಕಾರದವರು ಅಷ್ಟು ಕೊಟ್ಟಿರುವಾಗ ಅವನನ್ನು ಜಫ್ತಿ ಮಾಡಿ ಎಂದು ಹೇಳುವುದು ಹೇಗೆಂದು ನಮ್ಮ ಮನಸ್ಸಿಗೆ ಬಂದೇ ಬರುತ್ತದೆ. ಇದನ್ನು ತಾವು ಪರಿಶೀಲಿಸಬೇಕು. ಹೈಕೋರ್ಟಿನಲ್ಲಿ ನಿರ್ಣಯ ಆದಕೂಡಲೇ ಅದು ತಮ್ಮ ಗಮನಕ್ಕೆ ಬರಬೇಕು. ತಮ್ಮ ಗಮನಕ್ಕೆ ಬಂದಕೂಡಲೇ ತಾವು ಒಂದು ವಿಶೇಷ ಆರ್ಡರ್ ಮಾಡಿ, ಇಲ್ಲದಿದ್ದರೆ ನೀವು ಹಣವನ್ನು ಕೊಡುವುದಕ್ಕೆ ಆಗುವುದಿಲ್ಲ. ನಿಮಗೆ ಷೇರು ಕೊಡುತ್ತೇವೆ, ಆದರಲ್ಲಿ ನಾವು ಹಣವನ್ನು ಮುರಿದು ಕೊಳ್ಳುತ್ತೇವೆಂದು ಏನಾದರೂ ಒಂದು ಯೋಜನೆಯನ್ನು ಮಾಡತಕ್ಕ ಕೆಲಸವನ್ನು ನಿಮ್ಮ ಕಾನೂನು ಇಲಾಖೆಯವರನ್ನು ಕರೆದು ತಿಳಿಸಿ. ಇಂಥಾದ್ದು ನಿಮ್ಮ ಗಮನಕ್ಕೆ ಬಂದಾಗ series of Writ Petitions have been allowed against the Government. ಇದರ ಬಗ್ಗೆ ತಾವು ಯೋಚನೆ ಮಾಡಬೇಕು. ಮೊನ್ನೆ ತಾನೆ ನಾನು ಒಂದು ಮಾತನ್ನು ಹೇಳಿದೆ. ಮಾನ್ಯ ಕೌಜಲಗಿಯವರು ಬಹಳ ದೊಡ್ಡ ಮನೆತನದಿಂದ ಬಂದಿರುವವರು. ಇಂಥ ಪ್ರಗತಿಪರ ಕಾರ್ಯಕ್ರಮಗಳಲ್ಲಿ ಆಸಕ್ತಿ ಇರುವವರು. ಆದ್ದರಿಂದ ನನ್ನ ಹತ್ತಿರ ಒಬ್ಬರನ್ನು ಕರೆದುಕೊಂಡು ಬಂದಿದ್ದರು. ಅವರೂ, ನಾವೂ ಕೂಡಿ ಕೆಲವಾರು ಸಹಸ್ರ ರೂಪಾಯಿಗಳನ್ನು ಖರ್ಚುಮಾಡಿ ಕೌಜಲಗಿಯವರ ಟ್ರಸ್ಟ್ ಎಂದು ಮಾಡಿ ಅದರಿಂದ ಹಣವನ್ನು ಕೊಟ್ಟು ಮಾಡಿಸಿ ನೋಡಿದೆವು. ಆದರ ಒಂದು ವರದಿಯನ್ನು ತಮಗೆ ಕಳುಹಿಸಿ ಕೊಟ್ಟಿದ್ದೆವು. ತಾವೂ ಕೂಡ ಬಹಳ ಉದಾರ ಮನಸ್ಸಿನಿಂದ ವಾಪಸ್ಸು ಕಳುಹಿಸಿಕೊಟ್ಟಿರಿ, ಆದರೆ ಆ ವರದಿಯಲ್ಲಿ ''ಇದು ಬರಾಬರಿ ಇಲ್ಲ'' ಎಂದು ಒಂದು ವಾಕ್ಯವನ್ನು ಬರೆದು ಕಳುಹಿಸಿದಿರಿ. ಆದರೆ ಅದೇ ವಿಜ್ಞಾನಿ ಮದ್ರಾಸ್‌ನಲ್ಲಿ ಇನ್ನೂ ೧೦-೨೦ ಜನರೊಡನೆ ಕೂಡಿ ಪ್ರಯೋಗ ಮಾಡಿ ಇದು ಪರಿಶೀಲನಾರ್ಹ ಎಂದು ಮಾಡಿದ್ದಾರೆ. ಅದನ್ನು ತಾವು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಜನತೆಗೆ ಉಪಯೋಗವಾಗುವಂಥ ಹಲವಾರು ಕಾರ್ಯಕ್ರಮಗಳನ್ನು ತಾವು ಹಮ್ಮಿಕೊಂಡಿದ್ದೀರಿ ಆದರೆ ನಿಮ್ಮಲ್ಲಿರತಕ್ಕ ಒಂದು ಮನಸ್ಸು ಈ ಯೋಜನೆಯನ್ನು ಎಕ್ಸಿಕ್ಯೂಟ್ ಮಾಡುವವರಲ್ಲಿಲ್ಲ. ಹಾಗಾಗಿ ಎಕ್ಸಿಕ್ಯೂಟ್ ಮಾಡುವ ಸಂದರ್ಭದಲ್ಲಿ ನೀವು ಕೊಡತಕ್ಕ ದಾನ ವಿಪರ್ಯಾಸವಾಗುತ್ತದೆ. ಇವತ್ತು ತಾವು ಒಂದು ರೂಪಾಯಿ ದಾನ ಕೊಡುತ್ತೀರಿ ಆದರೆ ಅದು ದಾನ ತೆಗೆದುಕೊಳ್ಳುವವನಿಗೆ ಮುಟ್ಟುವಾಗ ಖೊಟ್ಟಿ ನಾಣ್ಯವಾಗಿ ಮುಟ್ಟಿದರೆ ಅದು ಏನು ಪ್ರಯೋಜನವಾಗುವುದಿಲ್ಲ. ಯಾವ ಉದ್ದೇಶದಿಂದ ನೀವು ಹಣವನ್ನು ಕೊಟ್ಟಿರುತ್ತೀರಿ. ಅದರ ಉದ್ದೇಶ ಸಫಲವಾಗುವುದಿಲ್ಲ. ಅದು ಅಪವ್ಯಯವಾದಂತಾಗುತ್ತದೆ. ಈ ರೀತಿ ಆಗದಂತೆ ತಾವು ನೋಡಿಕೊಳ್ಳಬೇಕಾದರೆ ಅದು ಸರಿಯಾದ ರೀತಿಯಲ್ಲಿ ವಿತರಣೆಯಾಗಬೇಕು. ಆದರಲ್ಲಿ ಆಗತಕ್ಕ ಲೋಪದೋಷಗಳೇನು ಎಂಬುದನ್ನು ತಾವು ಕಂಡುಹಿಡಿಯಬೇಕು. ಹಿಂದೊಮ್ಮೆ ನಾನು ತಮ್ಮನ್ನು ಎಸ್.ಕೆ.ಡಿ. ಎಂದು ಕರೆದಿದ್ದೆ. ಅದು ತಮಗೂ ಗೊತ್ತಿರಬಹುದು, ಹಾಗೆ ಕರೆಯು

ಬೇಕಾದರೆ ನಿಮಗೆ ಸಹಕಾರ ತತ್ವದಲ್ಲಿರತಕ್ಕ ಅಚಲವಾದ ನಿಷ್ಠೆಯನ್ನು ಕಂಡಿದ್ದುದು. ಆದರೆ ಇವತ್ತು ಏನಾಗಿದೆ ತಾವು ಏನೋ ಒಂದು ಸರ್ಕ್ಯುಲರ್‌ನ್ನು ಬಸವಣ್ಣೆಪ್ಪನವರಿಗೆ ಕೊಟ್ಟು ಹೇಳಿದರೆ he pleaded inability. ಅನೇಕ ಜನರಿಗೆ ಕೊಡುವುದಕ್ಕೆ ಆಗಿಲ್ಲ. ಆದ್ದರಿಂದ ನಾವು ಇದನ್ನು ಮತ್ತೆ ವಿಚಾರ ಮಾಡಲಿಕ್ಕೆ ಹತ್ತಿದ್ದೇವೆ. ಬಹಳ ಜನರು ನಮ್ಮ ಹತ್ತಿರ ಬಂದು ನಾವು ನಿರುದ್ಯೋಗಿಗಳಾಗುತ್ತಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ನಾವು ಇದನ್ನು ವಿಚಾರ ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಎಲ್ಲೆಲ್ಲಿ ಸಹಕಾರ ಸಂಘಗಳಿವೆ ಅವುಗಳನ್ನು ಕಿತ್ತು ನಾವು ಆ ನಿರುದ್ಯೋಗಿ ಗ್ರಾಜುಯೆಟ್ಸ್‌ಗೆ ಕೊಟ್ಟಿದ್ದೇವೆಂದು ಹೇಳುತ್ತಿದ್ದೀರಿ. ನೀವು ಅವರಿಗೆ ಕೊಟ್ಟಿದ್ದರೆ ಅದಕ್ಕೆ ನನ್ನ ತಕರಾರು ಇಲ್ಲ. ಏಕೆಂದರೆ ಒಬ್ಬ ಗ್ರಾಜುಯೆಟ್ ಆದರೂ ಮುಂದೆ ಬರುತ್ತಿದ್ದ. ಆದರೆ ನೀವು ಅವರನ್ನು ಹಾಗೆ ಮಾಡಲಿಲ್ಲ. ಹೆಬೆಟ್ಟು ಒತ್ತುವವರಿಗೂ ಕೊಟ್ಟಿದ್ದೀರಿ. ಅವರು ನಿರುದ್ಯೋಗಿ ಪದವೀಧರರು ಎಂದು ತಿಳಿದುಕೊಂಡು ಕೊಟ್ಟಿದ್ದೀರಿ, ಆದರೆ ವಾಸ್ತವವಾಗಿ ಆ ರೀತಿ ಆಗಿಲ್ಲ. ಆದ್ದರಿಂದ ಇದನ್ನು ತಾವು ಪರಿಶೀಲಿಸಬೇಕು. ಎಲ್ಲೆಲ್ಲಿ ನಿಮ್ಮ ಸಹಕಾರಸಂಘಗಳಲ್ಲಿ ರೇಷನ್ ಹಂಚುವುದಕ್ಕೆ ಸಾಧ್ಯ ಅಂಥ ಕಡೆ ನೀವು ಧೈರ್ಯವಾಗಿ ಸಹಕಾರಸಂಘಗಳಿಗೆ ಕೊಡಬೇಕು. ನಿಮಗೆ ಅನುಮಾನ ಬಂದರೆ ನಿಮ್ಮ ಪಕ್ಷದವರನ್ನೇ ಸಹಕಾರ ಸಂಘಗಳಿಗೆ ನಾಮಿನೇಟ್ ಮಾಡಿ. ಮಾನ್ಯ ಜಾಲಪ್ಪನವರು ಅನೇಕ ಸಂದರ್ಭಗಳಲ್ಲಿ ೬-೭ ಜನರನ್ನು ನಾಮಿನೇಟ್ ಮಾಡಿದ್ದಾರೆ. ಅದಕ್ಕೆ ಯಾವ ನೀತಿ ನಿಯಮಗಳೂ ಇಲ್ಲ. ಅವರು ಮಾಡಿದರೂ ಮಾಡಲಿ ಆದರೆ ಅದು ಚೆನ್ನಾಗಿ ನಡೆದರೆ ಸಾಕು, ಅದರಲ್ಲಿ ನಾವು ಮತ್ತೇ ಕೈಹಾಕಿ ಅದನ್ನು ಹೊಲಸು ಮಾಡುವುದು ಬೇಡ. ಈ ವಿಚಾರದಲ್ಲಿ ನಾವು ಟೀಕೆಮಾಡುವುದಕ್ಕೆ ಹೋಗುವುದಿಲ್ಲ. ಆದರೆ ನೀವು ಸಹಕಾರ ಸಂಘಗಳನ್ನು ಬಿಟ್ಟು ಬೇರೆಯವರಿಗೆ ಕೊಡುತ್ತೀರಿ. ಅದು ನಿಜವಾಗಿ ದೋಷಯುಕ್ತವಾಗುತ್ತದೆ.

ಇನ್ನೊಂದು ವಿಚಾರವನ್ನು ಹೇಳುವುದಾದರೆ. ನೀವು ಕಾಡಾಕ್ಕೆ ಛೇರ್ಮನ್‌ರವರನ್ನು ನೇಮಕ ಮಾಡುತ್ತೀರಿ. ಹಾಗೆ ಮಾಡುವಾಗ ನಿಮ್ಮ ಪಾರ್ಟಿಯವರನ್ನೇ ನೇಮಕ ಮಾಡಿ, ಆದರೆ ಒಳ್ಳೆಯವರನ್ನು, ಯೋಗ್ಯರನ್ನು ಮಾಡಿ. ಯಾರು ಲಾಗು ಆಗಿಲ್ಲ ಅಂಥವರನ್ನು ಮಾಡಿ. ಯಾರು ದುಡ್ಡು ತಿಂದಿಲ್ಲ, ನಿಷ್ಠಾವಂತರು ಎಂದು ಕೇಳಿಬರುತ್ತಾರೆ ಅಂಥವರನ್ನು ಮಾಡಿ. ನೀವು ನಮ್ಮನ್ನು ಕೇಳಲೇಬೇಡಿ. ನಿಮ್ಮ ಪೋಲೀಸರನ್ನು ಕೇಳಿ ಅವರಿಂದ ರಿಪೋರ್ಟ್ ತರಿಸಿಕೊಂಡು ನೇಮಕ ಮಾಡಿ. ನಿಮ್ಮ ಪೋಲೀಸರಿಗೆ ಬೇರೆ ಕೆಲಸ ಏನೂ ಇಲ್ಲ. ಅವರು ಕಳ್ಳರನ್ನು ಹಿಡಿಯುವುದಕ್ಕಾಗುವುದಿಲ್ಲ. ಅವರ ಕೆಲಸವೇ ಬೇರೆ ಆಗಿದ್ದೆ ಹೆಗಡೆಯವರು ಹೀಗೆ ಅಂದರು ಎಂದು ನಿಮ್ಮ ಹತ್ತಿರ ಹೇಳುವುದು, ಕೆ. ಹೆಚ್. ಪಾಟೀಲರು ಹಾಗೆ ಅಂದರು ಎಂದು ಇನ್ನೊಬ್ಬರ ಹತ್ತಿರ ಹೇಳುವುದು, ಇಂಥ ಕೆಲಸಗಳನ್ನು ಮಾಡುವವರು ಪೋಲೀಸರಲ್ಲಿ ಬಹಳ ಮಂದಿ ಇದ್ದಾರೆ......

• ಶ್ರೀ ಆರ್. ಎಲ್. ಜಾಲಪ್ಪ.— ಸ್ವಾಮಿ, ತಾವು ನನ್ನ ಹೆಸರನ್ನು ಉದಾಹರಿಸಿ ಮಾತನಾಡುತ್ತಿದ್ದಿರಿ. ಆಗ ನಾನು ಬೇರೆ ಕಡೆ ಮಾತನಾಡುತ್ತಿದ್ದೆ. ಯಾವುದೇ ನೀತಿ ನಿಯಮವೂ ಇಲ್ಲದೆ ನಾಮಿನೇಷನ್‌ನ್ನು ಜಾಲಪ್ಪನವರು ಮಾಡುತ್ತಾರೆ ಎಂದು ತಾವು ಹೇಳುತ್ತಿದ್ದೀರಿ. ಖಂಡಿತ ನಾನು ಆ ರೀತಿ ಏನೂ ಮಾಡಿಲ್ಲ. ಎಲ್ಲವನ್ನೂ ಕಾನೂನು ಪ್ರಕಾರವೇ ಮಾಡಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.— ನೀವೂ, ನಾವೂ, ಮಾನ್ಯ ರಾಮಕೃಷ್ಣ ಹೆಗಡೆಯವರೂ ಒಟ್ಟಿಗೆ ಕೂತುಕೊಳ್ಳೋಣ. ಏಕೆಂದರೆ, ತಾವೂ ಕೂಡ ಹೇಳಬಹುದು, ನಿಮ್ಮ ಸರ್ಕಾರ ಇದ್ದಾಗ ೭ ಜನರನ್ನು ಮಾಡಿದ್ದಿರಿ, ಈಗ ನಾವು ೫ ಜನರನ್ನು ಮಾಡಿದ್ದೇವೆ ಎಂದು, ಇವತ್ತು ೩ ಮಂದಿಗಿಂತ ಹೆಚ್ಚಿಗೆ ನಾಮಿನೇಷನ್ ಮಾಡಬಾರದೆಂದು ನಿಯಮ ಇದೆ......

ಶ್ರೀ ಆರ್. ಎಲ್. ಜಾಲಪ್ಪ.—ಸೆಕ್ಷನ್ ೨೯ರ ಪ್ರಕಾರ ನಾರ್ಮಲ್ ಅಸಿಸ್ಟೆನ್ಸ್ ಆದರೂ ಕೂಡ ಅವರು ಕೊಡತಕ್ಕ ಲೋನ್ಸ್‌ಗೆ ನಾವು ಗ್ಯಾರಂಟಿ ನಿಂತಿದ್ದೇವೆ. ಸೆಕ್ಷನ್ ೫೩ರ ಪ್ರಕಾರ ೩ ಜನರನ್ನು ಮಾಡುವುದಾದರೆ ೫ ಲಕ್ಷ ಷೇರು ಕ್ಯಾಪಿಟಲ್ ಕೊಟ್ಟಿದ್ದು ಅಥವಾ ಆ ಸಂಸ್ಥೆಯು......

೪—೩೦ ಪಿ.ಎಂ.

ಶ್ರೀ ಕೆ. ಹೆಚ್. ಪಾಟೀಲ್.—ಬಹಳ ಸಂತೋಷ, ನೀವು ಒಪ್ಪಿಕೊಳ್ಳುತ್ತಿದ್ದೀರಿ, ಆದರೆ ನಿಮ್ಮ ರಾಮಕೃಷ್ಣ ಹೆಗಡೆಯವರು ಆ ರೀತಿ ಹೇಳುತ್ತಿಲ್ಲ. ಈ ಬಿಲ್‌ನ ಸೆಕ್ಷನ್ ೨೯ರಲ್ಲಿ ಸ್ಪಷ್ಟವಾಗಿದೆ, ಮೂರು ವರದಿಯನ್ನು ಇಟ್ಟರೂ ಸಹಿತ ಅವರು ಹೇಳಿದ್ದನ್ನು ಹೇಳುತ್ತೇನೆ.

ಶ್ರೀ ಆರ್. ಎಲ್. ಜಾಲಪ್ಪ.—ನಾನು ಏನು ಹೊಸದಾಗಿ ಆಕ್ಟ್ ಮಾಡಲಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ಅದಕ್ಕೆ ನಾನು ಹೇಳುವುದು, ನಾನು ಎಸ್. ಕೆ ಡೇ ಅವರಿಗೆ ಹೇಳಿದೆ ಏನು ಹೇಳಿದೆ ಅಂದರೆ ತಾವು ಬಿಲ್ಲನ್ನು ಮಾಡಿ ದುರುಪಯೋಗ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೀರಿ ಎಂದು, ಅವರು ಹೇಳಿದರು ನಿಜವಾಗಿ ಮೂರು ಮಂದಿ ಹೆಸರು ಹಾಕಿದ್ದರೂ ಒಬ್ಬರನ್ನು ಪಾಟೀಲರು ತೆಗೆದುಕೊಂಡಿಲ್ಲವೆಂದು ಹೇಳಿದರು. ಅವಶ್ಯ ಬಿದ್ದರೆ ಒಬ್ಬರನ್ನು ಹಾಕುತ್ತೇವೆಂದು ಹೇಳಿ ಅಧಿಕಾರಿಗಳನ್ನೇ ಕಮಿಟಿಯೊಳಗೆ ಹಾಕಿದಿರಿ, ಒಟ್ಟು ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಎಷ್ಟು ಮಂದಿ ಇದ್ದಾರೋ ಅಷ್ಟು ಮಂದಿಯನ್ನು ಕಮಿಟಿಯೊಳಗೆ ಹಾಕಿದರು. ಇದರಿಂದ ಏನಾಯಿತು ಎಂದರೆ ರಿಜಿಸ್ಟ್ರಾರ್‌ರವರಿಗೆ ಮಾಹಿತಿಯನ್ನು ಒದಗಿಸಿ ಕೊಡುವುದಕ್ಕೂ ಯಾರು ಇಲ್ಲದಂತಾಗುವದಲ್ಲದೆ ಅವರೂ ಸಹಿತ ಕೆಲಸ ಮಾಡಲು ಸಾಧ್ಯವಾಗಲಿಲ್ಲ,

ಶ್ರೀ ಆರ್.ಎಲ್. ಜಾಲಪ್ಪ.—ಹಿಂದೆ ನಡೆದುದು ನಿಜ, ನಮ್ಮ ಅಧಿಕಾರಿಗಳೇನೋ ಕಣ್ಣು ಮುಚ್ಚಿಕೊಂಡು ಸೈನ್ ಮಾಡಿ ದೋಸೆ ತಿಂದು ಬಂದರು. ನಾನು ಬಂದಮೇಲೆ ಆರ್ಡರ್ಸ್ ಇಷ್ಯೂ ಮಾಡಿದ್ದೇನೆ. ಕೆಲವು ಸಂಸ್ಥೆಗಳು ಮಿಸ್ ಅಪ್ರೋಪ್ರಿಯೇಷನ್ ಮಾಡಿರತಕ್ಕಂಥದ್ದು ಏನು ಇದೆ ಅದರ ಮ್ಯಾನೇಜ್‌ಮೆಂಟನ್ನು ಮತ್ತು ಡೈರೆಕ್ಟರನ್ನೂ they are also equally responsible and they must also undergo all the punishment under Section 109. ಎಂದು ಮಾಡಿದ್ದೇನೆ. ಆ ಮೇಲೆ ಸೆಕ್ಷನ್ ೧೦೯ನಲ್ಲೂ ಕೂಡ ಕಳೆದ ಅಧಿವೇಶನದಲ್ಲಿ ಒಂದು ಪ್ರಾವಿಷನ್ ಅಳವಡಿಸಿದ್ದೇನೆ.

ಶ್ರೀ ಕೆ. ಹೆಚ್. ಪಾಟೀಲ್.—ಬಹಳ ಸಂತೋಷ.

ಶ್ರೀ ಬಿ. ಬಸವಣ್ಣೆಪ್ಪ.—ಮಾನ್ಯ ಸಭಾಪತಿಯವರೇ ಸಾರ್ವಜನಿಕ ವಿತರಣೆ ಪದ್ಧತಿಯಲ್ಲಿ ಸಹಕಾರಿ ಸಂಘಗಳಿಗೆ ಹೆಚ್ಚಿನ ಆಧ್ಯತೆಯನ್ನು ಕೊಟ್ಟಿದ್ದೇವೆ. ಒಟು ೧೪೩೬ ಸಗಟು ಕೇಂದ್ರಗಳನ್ನು ಟಿ.ಎ ಪಿ.ಸಿ. ಎಂ.ಎಸ್. ಮುಖಾಂತರ ನಡೆಸುತ್ತಿದ್ದೇವೆ ಮತ್ತು ವಿ.ಐ.ಎಸ್. ಎಲ್ಲ ಕೊಟ್ಟಿದ್ದೇವೆ. ಕೇವಲ ೬೫ ವಿತರಣಾ ಕೇಂದ್ರಗಳನ್ನು ಫುಡ್ ಕಾರ್ಪೊರೇಷನ್‌ಗೆ ಕೊಟ್ಟಿದ್ದೇವೆ. ಧಾರವಾಡ ಜಿಲ್ಲೆಯಲ್ಲಿ ೬೮೮ ನ್ಯಾಯ ಬೆಲೆ ಅಂಗಡಿಗಳನ್ನು ತೆಗೆದಿದ್ದೇವೆ. ೫೮೦ ಸಹಕಾರಿ ಸಂಘಗಳನ್ನು ನಾವು ಮಾಡಿದ್ದೇವೆ. ೫೫ ಜನರ ಪದವೀಧರರಿಗೆ ನ್ಯಾಯಬೆಲೆ ಅಂಗಡಿಗಳನ್ನು ತೆರೆಯಲು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಖಾಸಗಿಯವರು ನಡೆಸತಕ್ಕಂಥದ್ದು ಕೆಲವೇ ಜನರಿಗೆ ಮಾತ್ರ ಕೊಟ್ಟಿದ್ದೇವೆಂದು ಮಾನ್ಯ ಕೆ.ಹೆಚ್. ಪಾಟೀಲ್‌ರವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಕೆ. ಎಚ್. ಪಾಟೀಲ್.— ಮಾನ್ಯ ಅಧ್ಯಕ್ಷರೇ ಮಾನ್ಯ ಹೆಗಡೆಯವರು ಒಮ್ಮೊಮ್ಮೆ ಬಹಳ ಚಲೋ ಕೆಲಸಗಳನ್ನು ಮಾಡುತ್ತಾರೆ. ಮಂತ್ರಿಗಳ ಸಂಖ್ಯೆ ಎಷ್ಟಾದರೂ ಪರವಾಗಿಲ್ಲ, ಸಹಕಾರಿ ಕ್ಷೇತ್ರದಲ್ಲಿಂಥವರನ್ನೇ ಸಹಕಾರಿ ಮಂತ್ರಿಗಳನ್ನಾಗಿ ಮಾಡಬೇಕೆಂದು ಮಾನ್ಯ ಆರ್. ಎಲ್. ಜಾಲಪ್ಪನವರನ್ನು ಸಹಕಾರಿ ಮಂತ್ರಿಗಳನ್ನಾಗಿ ತೆಗೆದುಕೊಂಡಿರುವುದಕ್ಕೆ ಅಭಿನಂದನೆ ಸಲ್ಲಿಸಿದರೂ, ಆ ಅಭಿನಂದನೆ ಸಲ್ಲಲಾರದೆ ಶಾಪ ಕೊಡುವಂಥ ಕೆಲಸವನ್ನೂ ಕೂಡ ಮಾಡಿದ್ದಾರೆ. ಅವರಿಗೂ ನಮಗೂ ಕೂಡ ಬೆನ್ನೆಲಬಾಗಿರತಕ್ಕಂಥ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಸ್ಟೇಟ್ ಲೆವಲ್‌ನಲ್ಲಿ ಮಿನಿಸ್ಟರನ್ನು ಇಟ್ಟರೆ ತಮಗೆ ಭೂಷಣವಾಗುತ್ತದೆಯೇ ? ಫಿಷರೀಸ್ ಡಿಪಾರ್ಟ್‌ಮೆಂಟ್‌ಗೆ ಕ್ಯಾಬಿನೇಟ್ ಮಂತ್ರಿಗಳನ್ನಾಗಿ ಮಾಡಿರಬೇಕಾದರೆ ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟ್‌ಗೆ ಏತಕ್ಕೆ ಮಾಡಬಾರದು ? ನಿಜವಾಗಿಯೂ ಕೇಂದ್ರ ಸರ್ಕಾರ ಸಹಿತ ಮಾನ್ಯ ಬೂಟಾಸಿಂಗ್‌ರವರನ್ನು ಪ್ಲಾನಿಂಗ್ ಕಮಿಷನ್‌ಗೆ ಸೇರಿಸಿಕೊಂಡಿದ್ದಕ್ಕೆ ಒಂದು ಪತ್ರವನ್ನು ಬರೆದು ಮಾನ್ಯ ರಾಜೀವ್‌ಗಾಂಧಿಯವರಿಗೆ ಅಭಿನಂದನೆಯನ್ನು ಸಲ್ಲಿಸಿದೆ, ಏತಕ್ಕೆಂದರೆ ನಿಜವಾಗಿಯೂ ವ್ಯವಸಾಯಗಾರ ಪ್ರತಿನಿಧಿಯಾಗಿರತಕ್ಕಂಥ ಬೂಟಾಸಿಂಗ್‌ರವರನ್ನು ಪ್ಲಾನಿಂಗ್ ಕಮಿಷನರ್‌ರನ್ನಾಗಿ ಮಾಡಿ ಯೋಗ್ಯ ಕೆಲಸ ಮಾಡಿದ್ದೀರೆಂದು. ಹಾಗೆಯೇ ನಿಮಗೂ ಕೂಡ ಅಭಿನಂದನೆ ಪತ್ರ ಬರುವಂತೆ ಮಿನಿಸ್ಟ್ರಿ ರೀಷಫಲ್ ಮಾಡುವಾಗ ಮಾಡಿ ಅನೇಕ ಸಂದರ್ಭಗಳಲ್ಲಿ ತಾವು ಮಾಡತಕ್ಕಂಥ ಸಮಿತಿಗಳಿಗೆ ಅಪೋಸಿಷನ್‌ರವರಿಗೂ ಸ್ವಲ್ಪ ಪ್ರಿಫರೆನ್ಸ್ ಕೊಡಿ. ಇಲ್ಲದಿದ್ದರೆ ನಿಮ್ಮನ್ನು ತಪ್ಪು ಹಾದಿಗೆ ಎಳೆದು ಬಹಳ ಫಜೀತಿಗೆ ಇಳಿಸುತ್ತಾರೆ.

ಮತ್ತೊಂದು ವಿಷಯವೇನೆಂದರೆ ತಮಗೆ ಪೋಲೀಸ್ ದಳ ಇದೆ. ನಮಗೆ ಖಾದಿ ದಳ ಇದೆ. ನೀವು ಬಂದರೆ ನಿಮಗೆ ನಿಜ ಸಂಗತಿ ತಿಳಿದೀತು ಎಂದು ಹಾಗೆಯೇ ಕಳುಹಿಸಿಬಿಟ್ಟರು. ನಿಜವಾಗಿಯೂ ಹಾಗೆ ಮಾಡಬೇಡಿ. ನಿಜವಾಗಿಯೂ ತಾವು ನಮ್ಮ ಕಡೆ ಬಂದಿದ್ದರೆ ಉತ್ತಮವಾದ ಸ್ವಾಗತ ಸಿಕ್ಕುತ್ತಿತ್ತು, ಆದರೆ ಸ್ವಾಗತ ಸಿಕ್ಕುತ್ತದೆಂದು ಹೋಗಲಿಲ್ಲವೋ ಏನೋ. ಮುಖ್ಯಮಂತ್ರಿಗಳು ಬರುತ್ತಾರೆಂದು ಬರಗಾಲದೊಳಗೂ ಅವರನ್ನು ಜನರು ಕಾಣಲು ಕಾಯುತ್ತಿದ್ದರು. ಆದರೆ ಮುಖ್ಯಮಂತ್ರಿಗಳು ಬರಲಿಲ್ಲ. ಮಾನ್ಯ ಬೊಮ್ಮಾಯಿಯವರು ಅನೇಕ ಸಂದರ್ಭಗಳಲ್ಲಿ ಗೋಸಾಲೆಗಳನ್ನು ಮಾಡುತ್ತೇವೆಂದು ಹೇಳಿ, ಗೋಶಾಲೆಗಳನ್ನು ತೆರೆದರು. ಅದು ಈವತ್ತು ಹೇಗೆ ನಡೆಯುತ್ತಿದೆ ಎಂಬುದರ ಬಗ್ಗೆ ಫೋನ್ ಮಾಡಿ ತಿಳಿದುಕೊಳ್ಳಲಿ. ನಾನು ೩-೪ ಕಡೆ ಹೋದಲ್ಲಿ ನಮಗೆ ಮೇವನ್ನು ಕೊಡದಿದ್ದರೆ ನಾವು ಸತ್ತೇಸಾಯುತ್ತೇವೆಂದು ಹೇಳಿದ್ದರು. ನಾನು ಅದರ ಬಗ್ಗೆ ಪತ್ರವನ್ನೂ ಕೂಡ ಬರೆದಿದ್ದೇನೆ. ಸಣ್ಣ ವಿಷಯ ಅಸೆಂಬ್ಲಿಯಲ್ಲೆಲ್ಲಾ ತರಬಾರದು.

ಶ್ರಿ. ಎಚ್. ಎಲ್. ತಿಮ್ಮೇಗೌಡ.— ಮಾನ್ಯ ಸಭಾಧ್ಯಕ್ಷರೇ ನಾನು ಎಂಟು ದಿವಸಗಳ ಹಿಂದೆ ಹೋಗಿ ಗೋಶಾಲೆಗಳನ್ನು ನೋಡಿಕೊಂಡು ಬಂದಿದ್ದೇನೆ. ಎಷ್ಟು ಚೆನ್ನಾಗಿ ಮ್ಯಾನೇಜ್ ಮಾಡಿರುತ್ತಾರೆಂದರೆ, ಅಷ್ಟು ಚೆನ್ನಾಗಿ ಮ್ಯಾನೇಜ್ ಮಾಡಿರುತ್ತಾರೆ

ಶ್ರೀ ರಾಮಕೃಷ್ಣ ಹೆಗಡೆ.— ಐದು ಹಸುಗಳು ಕರುಗಳನ್ನು ಹಾಕಿವೆ.

ಶ್ರೀ ಕೆ. ಎಚ್. ಪಾಟೀಲ್.— ಮಾನ್ಯ ಗೌಡರು ದವಾಖಾನೆಗೆ ಭೇಟಿಕೊಡದೆ, ಗೋಶಾಲೆ ನೋಡಿಕೊಂಡು ಬಂದಿರುತ್ತಾರೆ ಇದು ಒಂದು ಸಂತೋಷ. ಮಾನ್ಯ ಹೆಗಡೆಜೀಯವರ ಗಮನಕ್ಕೆ ನಾನು ಇಷ್ಟೇ ತರಬಯಸುವುದು. ಈವತ್ತು ಗೋಶಾಲೆಗಳಿಗೆ ಮೇವನ್ನು ನೀಡುವ ಸಲುವಾಗಿ ಮೂರು ಸಾವಿರ ಟನ್ ಮೇವಿಗೆ ೩೩ ಲಕ್ಷ ರೂಪಾಯಿಗಳನ್ನು ಕೊಟ್ಟಿರುತ್ತೀರಿ. ಯಾರಪ್ಪನಮನೇದು ? ಹಣ ಕೊಟ್ಟಿದ್ದರೆ ಇಲ್ಲೇ ಬೇಕಾದಷ್ಟು ಪೌಷ್ಠಿಕ ಆಹಾರವನ್ನು ಕೊಂಡುಕೊಳ್ಳಬಹುದಾಗಿತ್ತು. ೧೨ ನೂರು ರೂಪಾಯಿಗಳಿಗೆ ಒಂದು ಟನ್ ನೋ ಪ್ರಾಫಿಟ್ ಮತ್ತು ನೋ ಲಾಸ್ ಆಧಾರದ ಮೇಲೆ ಹುಲಕೋಟೆ ಸೊಸೈಟಿಯವರು ಕೊಡಲಿಕ್ಕೆ ಮುಂದೆ ಬಂದಿದ್ದರು. ಮಾನ್ಯ ಜಾಲಪ್ಪನವರೂ ಅಷ್ಟು ಮಾಡೋಣವೆಂದು ಒಪ್ಪಿಯೂ ಇದ್ದರೂ. ಇದನ್ನು ಇಲ್ಲಿಯತನಕ ತೆಗೆದುಕೊಳ್ಳಲಿಲ್ಲ. ರಾಜಸ್ಥಾನ, ಮತ್ತು ಗುಜರಾತಿನಿಂದ ೩೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಮೇವನ್ನು ತರಿಸಲು ಹಣವನ್ನು ಕೊಟ್ಟಿದ್ದೀರಿ. ಇದು ಸರಿಯೇ ಎಂದು ಕೇಳಬೇಕಾಗಿದೆ.

ಇನ್ನೂ ಅನೇಕ ಯೋಜನೆಗಳು ನಿಮ್ಮ ಎದುರಿಗಿದೆ. ಈ ಯೋಜನೆಗಳನ್ನು ಪೂರ್ಣವಾಗಿ ಜಾರಿಗೆ ತರಬೇಕಾದರೆ ನಿಜಕ್ಕೂ ಪ್ರಾಮಾಣಿಕವಾದ ಪ್ರಯತ್ನಗಳು ನಡೆಯಬೇಕು. ನೀರಿನ ತಂತುಗಳು, ಟ್ಯಾಂಕ್‌ಗಳನ್ನು ಎಲ್ಲಿ ಮಾಡಿದ್ದೀರಿ ? ಅದಕ್ಕೆ ಅನುಗುಣವಾಗಿ ನಳಗಳನ್ನು ಕೂರಿಸಬೇಕು. ಟ್ಯಾಂಕ್‌ಗೆ ಅನುಗುಣವಾಗಿ ನಳಗಳನ್ನು ಕುಳ್ಳಿಸದೆ ಹೋದರೆ ಅದು ವ್ಯರ್ಥವಾಗುತ್ತದೆ. ನೀರು ಹರಿಯಲು ಸಾಧ್ಯವಾಗುವುದಿಲ್ಲ. ಮಾನ್ಯ ಕೆ.ಸಿ. ರೆಡ್ಡಿಯವರನ್ನು ಆರೋಪ ಮಾಡುತ್ತಾ ನಳಗಳನ್ನು ಸರಿಯಾಗಿ ಜೋಡಿಸಿ ನೀರು ಹರಿಯುವಂತೆ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳುತ್ತಾ ಈವತ್ತು ಅನೇಕ ಹಳ್ಳಿಗಳಲ್ಲಿ ನೀರಿನ ಅಭಾವ ಇದೆ. ಮಾನ್ಯ ನಜೀರ್‌ಸಾಬ್‌ರವರು ಎಷ್ಟೋ ಬೋರ್‌ವೆಲ್‌ಗಳನ್ನು ಹಾಕಿದರು. ಬೋರ್ ಹಾಕಿಬಂದರು ಆದರೆ ನೀರು ಕೆಳಕ್ಕೆ ಹೋಯಿತು. ಅದೇನು ಮಳೆ ಇಲ್ಲದೆ ಆ ರೀತಿ ಆಯಿತೋ ಅಥವಾ ನಾವು ಮಾಡಿದ ಪಾಪವೋ ಗೊತ್ತಾಗಲಿಲ್ಲ. ಮತ್ತಷ್ಟು ಕೆಳಕ್ಕೆ ಹೋಗ ತಕ್ಕಂಥ ಮೆಷಿನ್‌ಗಳನ್ನು ತಂದು ಅವರು ಪ್ರಯತ್ನ ಮಾಡುವುದು ಅವರ ಕರ್ತವ್ಯವೆಂದು ಹೇಳಿ ಇಷ್ಟು ಸಮಯವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾಳೆ, ನಾಡಿದ್ದು ನಾನು ಇರುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡುವಾಗ ನಾನು ಕೇಳಿರುವ ಪ್ರಶ್ನೆಗಳಿಗೆ ಮಾನ್ಯ ವೀರಪ್ಪಮೊಯಿಲಿಯವರು ನನ್ನ ಬಗ್ಗೆ ಕೇಳುವ ಪ್ರಶ್ನೆಗಳಿಗೆ ಉತ್ತರವನ್ನು ಹೇಳಲಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಎಸ್. ಅಜ್ಜಬಾಳ್ ಹೆಗಡೆ (ಅಂಕೋಲ).— ಮಾನ್ಯ ಅಧ್ಯಕ್ಷರೇ ಮೊಟ್ಟ ಮೊದಲನೆಯದಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಏತಕ್ಕೆಂದರೆ ನಾಲ್ಕು ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ರಿಯಾಯಿತಿ ಮಾಡಿ ರೈತರಿಗೆ ಬಹಳ ಸವಲತ್ತುಗಳನ್ನು ಮಾಡಿಕೊಟ್ಟಿದ್ದಾರೆ. ತಮ್ಮ ಬಡ್ಜೆಟ್‌ನಲ್ಲಿ ಒಂದು ರಾಜ್ಯಕ್ಕೆ ಬೇಕಾಗಿರುವ

ಅನೇಕ ಸಾಮಾನುಗಳ ಮೇಲೆ ಸೇಲ್ಸ್ ಟ್ಯಾಕ್ಸನ್ನು ಕಡಿಮೆ ಮಾಡಿದ್ದಾರೆ. ೫೨ ವಸ್ತುಗಳ ಮೇಲೆ ಈ ರೀತಿ ಮಾಡಿರತಕ್ಕಂಥದ್ದಕ್ಕೆ ನಿಜವಾಗಿಯೂ ಧನ್ಯವಾದಗಳು. ಏತಕ್ಕೆಂದರೆ ನಮ್ಮಲ್ಲಿ ಈವತ್ತು ಬೇರೆ ಬೇರೆ ರಾಜ್ಯಗಳಿಗೆ ಹೋಲಿಸಿದಾಗ ಅನೇಕ ವಸ್ತುಗಳ ಮೇಲೆ ಕಾಂಪಿಟೇಷನ್ ಮಾಡಿ ವ್ಯಾಪಾರ ಸ್ಥಗಿತವಾಗಿ ವ್ಯಾಪಾರವೆಲ್ಲ ಬೇರೆ ರಾಜ್ಯಗಳಿಗೆ ಹೋಗುತ್ತಿದೆ. ಇದನ್ನು ತಪ್ಪಿಸಲಿಕ್ಕೆ ೫೨ ಧಾನ್ಯಗಳ ಮೇಲೆ ಮಾರಾಟ ತೆರಿಗೆಯನ್ನು ಕಡಿಮೆಮಾಡಿರುವ ಬಗ್ಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅದೇ ರೀತಿಯಲ್ಲಿ ಸೇಲ್ ಟ್ಯಾಕ್ಸ್ ಮಾರಾಟ ಉತ್ಪಾದನೆಯಲ್ಲಿ ೫೮೩ ಕೋಟಿ ರೂಪಾಯಿಗಳ ಉತ್ಪಾದನೆ ಈ ವರ್ಷದಲ್ಲಿ ಬರಬಹುದು ಎನ್ನುವ ಅಂದಾಜಿದೆ. ಇದು ಐತಿಹಾಸಿಕ ದಾಖಲೆಯಾಗಿದೆ. ಇದಕ್ಕಾಗಿ ವಾಣಿಜ್ಯ ತೆರಿಗೆ ಇಲಾಖೆಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇದೇ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತೊಮ್ಮೆ ಅಭಿನಂದನೆಗಳನ್ನು ಸಲ್ಲಿಸುತ್ತಾ ಜಿಲ್ಲಾ ಆಡಳಿತದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಜಿಲ್ಲಾಮಟ್ಟದಲ್ಲಿ ರಚಿಸಿರತಕ್ಕಂಥ ಕಮಿಟಿಗಳು ಎಷ್ಟರಮಟ್ಟಿಗೆ ಚುರುಕಾಗಿ ಕೆಲಸ ಮಾಡಬೇಕಾಗಿತ್ತೋ ಅಷ್ಟರಮಟ್ಟಿಗೆ ಚುರುಕಾಗಿ ನಡೆಯುತ್ತಿಲ್ಲ. ಇದಕ್ಕೆ ಕಾರಣ ಅಡ್ಮಿನಿಸ್ಟ್ರೇಷನ್‌ನಲ್ಲಿ ಕೆಲವೊಂದು ಕುಂದುಕೊರತೆಗಳು ಇರುತ್ತದೆ. ಜಿಲ್ಲಾಮಟ್ಟದಲ್ಲಿ ಅನೇಕ ಸ್ಥಾನಗಳು ಭರ್ತಿಯಾಗಿಲ್ಲ. ಈ ಸ್ಥಾನಗಳನ್ನು ಭರ್ತಿ ಮಾಡಬೇಕು. ಮೇಲಾಗಿ ವಾರಕ್ಕೆ ಆರುದಿವಸಗಳ ಕೆಲಸವನ್ನು ಐದು ದಿವಸಗಳಿಗೆ ಇಳಿಸಿರುವುದರಿಂದ ಕೆಲಸ ಕಾರ್ಯಗಳು ಸರಿಯಾಗಿ ನಡೆಯದೆ ಜನ ಸಾಮಾನ್ಯರಿಗೆ ಬಹಳ ತೊಂದರೆಯಾಗುತ್ತಿದೆ. ಶನಿವಾರ, ಭಾನುವಾರ ರಜಾ ಇರುವುದರಿಂದ ಸಾಮಾನ್ಯವಾಗಿ ಶುಕ್ರವಾರವೇ ರಜವನ್ನು ಹಾಕಿ ಹೋಗುವುದರಿಂದ ಮೇಲಿನ ಅಧಿಕಾರಿ ರಜಾದಿನಗಳಲ್ಲಿ ಬಂದು ಕೆಲಸಮಾಡಿದರೂ ಸಹಿತ ಅವರ ಕೆಲಸಕ್ಕೆ ಸಹಾಯಕರಾಗಿ ಬೇರೆ ನೌಕರರು ಬಾರದೇ ಇರುವುದರಿಂದ ಬಹಳ ತೊಂದರೆಯಾಗುತ್ತಿದೆ. ಶುಕ್ರವಾರ ಮಧ್ಯಾಹ್ನದಿಂದಲೇ ತಾಲ್ಲೂಕು ಆಫೀಸುಗಳಲ್ಲಿ ಖಾಲಿ ಇರುವಂತೆ ಕಾಣುತ್ತದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ೫ ದಿವಸಗಳ ಬದಲಾಗಿ ೬ ದಿವಸಗಳ ಕೆಲಸದ ವಾರವನ್ನು ಅತಿಶೀಘ್ರವಾಗಿ ಜಾರಿಗೆ ತಂದರೆ ಸ್ವಲ್ಪಮಟ್ಟಿಗಾದರೂ ಆಡಳಿತ ಸುಧಾರಣೆಯಾಗುತ್ತದೆಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ವಿಜ್ಞಾನ ಮತ್ತು ಯಂತ್ರಗಳ ಇಲಾಖೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ. ಆದರೆ ನನ್ನ ತಿಳುವಳಿಕೆಯ ಪ್ರಕಾರ ಇದಕ್ಕೆ ಬಜೆಟ್‌ನಲ್ಲಿ ಕೊಟ್ಟಿರತಕ್ಕಂಥ ಹಣ ಬಹಳ ಕಡಿಮೆ ಇದೆ, ಏತಕ್ಕೂ ಸಾಲದಂತಾಗಿರುತ್ತದೆ.

ಇವೊತ್ತು ಒಂದೇ ಒಂದು ಅತಿ ಮುಖ್ಯವಾದ ವಿಷಯ ಹೇಳಬೇಕೆಂದರೆ, ಹಳ್ಳಿಗಳಲ್ಲಿ ಅಸ್ತ್ರ ಒಲೆಗಳ ಬಗ್ಗೆ ಹೆಚ್ಚಿನ ಪ್ರಚಾರ ಆಗುತ್ತಿದೆ. ಇದನ್ನು ಉಪಯೋಗ ಮಾಡಿದರೆ ಶೇಕಡಾ ೩೦ ರಿಂದ ಶೇಕಡಾ ೬೦ ರವರೆಗೆ ಸೌದೆ ಉಳಿತಾಯವಾಗುತ್ತದೆ. ಇದರಿಂದ ನಮ್ಮ ಕಾಡಿನ ರಕ್ಷಣೆಯೂ ಆಗುತ್ತದೆ. ಆದ್ದರಿಂದ ಇದಕ್ಕೆ ಈಗ ಕೊಡುತ್ತಿರುವ ೫೦ ಪರ್ಸೆಂಟ್ ಸಬ್ಸಿಡಿಯನ್ನು ಶೇಕಡಾ ನೂರಕ್ಕೆ ಹೆಚ್ಚು ಮಾಡಬೇಕು. ಈ ರೀತಿ ಮಾಡುವುದರಿಂದ ಈ ರಾಜ್ಯದ ಬೊಕ್ಕಸಕ್ಕೂ ಒಂದು ರೀತಿಯ ಲಾಭವಾಗುತ್ತದೆಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಐ. ಎ. ಎಸ್. ಅಧಿಕಾರಿಗಳು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ. ನಮ್ಮ ರಾಜ್ಯದವರು ಹೆಚ್ಚಾಗಿ ಈ ಐ. ಎ. ಎಸ್ ಪರೀಕ್ಷೆಯಲ್ಲಿ ಪಾಸಾಗುತ್ತಿಲ್ಲ. ಇದಕ್ಕೆ ಕಾರಣವೆಂದರೆ, ಈ ಪರೀಕ್ಷೆಗೆ ಕೂರುವವರಿಗೆ ಸರಿಯಾದ ತರಬೇತಿ ಇಲ್ಲದಿರುವುದು. ತಮಿಳು ನಾಡಿನಲ್ಲಿ ಎಸ್. ಸಿ ಮತ್ತು ಎಸ್. ಟಿ. ಪಂಗಡಕ್ಕೆ ಸೇರಿದವರು ಐ. ಎ. ಎಸ್. ಪರೀಕ್ಷೆಗೆ ಕುಳಿತುಕೊಳ್ಳುವ ಸಂದರ್ಭದಲ್ಲಿ ಅಲ್ಲಿನ ರಾವ್ ಕ್ಲಾಸ್‌ಗೆ ಅಟೆಂಡ್ ಆದರೆ, ಅಲ್ಲಿನ ಸರ್ಕಾರದವರು, ಶಿಕ್ಷಣದ ಶುಲ್ಕವನ್ನು ಕೊಡುತ್ತಾರೆ ಮತ್ತು ಅವರಿಗೆ ಊಟದ ವ್ಯವಸ್ಥೆಯನ್ನೂ ಸಹ ಮಾಡುತ್ತಾರೆ. ಇಂತ ಒಂದು ಪದ್ಧತಿಯನ್ನು ನಮ್ಮ ರಾಜ್ಯದಲ್ಲಿಯೂ ಸಹ ನಮ್ಮ ಸರ್ಕಾರದವರು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಈ ಸಲದ ಬಜೆಟ್‌ನಲ್ಲಿ ಸುಮಾರು ೫೨ ಸರಕುಗಳ ಮೇಲೆ ಮಾರಾಟ ಕರವನ್ನು ಕಡಿಮೆ ಮಾಡಿದ್ದಾರೆ. ಇದರಲ್ಲಿ ಎಲೆಕ್ಟ್ರಾನಿಕ್ ಸರಕುಗಳೂ ಸಹ ಸೇರಿವೆ. ಇವುಗಳ ಮೇಲೆ ೧೫ ಪರ್ಸೆಂಟ್ ಟ್ಯಾಕ್ಸ್ ಇದ್ದದ್ದನ್ನು ಈಗ ೪ ಪರ್ಸೆಂಟ್‌ಗೆ ಇಳಿಸಿದ್ದಾರೆ. ಈ ಬಗೆ

ನಾನು ಈಗಾಗಲೇ ಮುಖ್ಯ ಮಂತ್ರಿಗಳಿಗೆ ಒಂದು ಸೂಚನೆಯನ್ನು ಒಪ್ಪಿಸಿದ್ದೇನೆ ಬೇರೆ ರಾಜ್ಯಗಳಿಂದ ಇದಕ್ಕೆ ಪೈಪೋಟಿ ಬರುವುದು ಬೇಡ ಎಂಬ ಕಾರಣದಿಂದ ಇಲ್ಲಿಯೂ ಸಹ ಇದನ್ನು ೪ ಪರ್ಸೆಂಟಿಗೆ ಇಳಿಸಿದ್ದಾರೆ. ಆದರೆ ಇಲ್ಲಿ ಸ್ಥಳೀಯವಾಗಿ ಏನು ತಯಾರಾಗುತ್ತದೆ ಅದರ ಜೊತೆಗೆ ಹೊರ ರಾಜ್ಯಗಳಿಂದ ಬರುವಂತಹದ್ದನ್ನು ಯಾವ ರೀತಿಯಿಂದಲೂ ತಡೆಗಟ್ಟುವುದಕ್ಕಾಗುವುದಿಲ್ಲ. ಈ ಒಂದು ಪೈಪೋಟಿಯನ್ನು ಯಾವ ಕಾರಣದಿಂದಲೂ ತಪ್ಪಿಸುವುದಕ್ಕಾಗುವುದಿಲ್ಲ. ಇದೇ ಕಾರಣದಿಂದ ಮಹಾರಾಷ್ಟ್ರದಲ್ಲಿ ಕೆಲವರು ಹೈಕೋರ್ಟಿಗೆ ಹೋಗಿದ್ದಾರೆಂದು ನೀವು ಹೇಳುವುದು. ಆದರೆ ಅಲ್ಲಿನ ಹೈಕೋರ್ಟಿನವರು ಅದಕ್ಕೆ ಪುರಸ್ಕಾರ ಕೊಡದೆ ತಳ್ಳಿಹಾಕಿದ್ದಾರೆ. ನಮ್ಮ ರಾಜ್ಯದಲ್ಲಿ ಇದನ್ನು ೪ ಪರ್ಸೆಂಟ್‌ಗೆ ಇಳಿಸಿರುವುದಕ್ಕಾಗಿ ನಾನು ನನ್ನ ಧನ್ಯವಾದಗಳನ್ನು ಮಾನ್ಯ ಮುಖ್ಯ ಮಂತ್ರಿಗಳಿಗೆ ಅರ್ಪಿಸುತ್ತೇನೆ. ಆದರೆ ಇದರ ಒಂದು ಲಾಭ ಸ್ಥಳೀಯವಾಗಿ ತಯಾರಾಗುವಂತಹದ್ದಕ್ಕೆ ಮಾತ್ರ ಸೀಮಿತವಾಗಿರಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಮೈನ್ಸ್ ಅಂಡ್ ಜಿಯಾಲಜಿ ಇಲಾಖೆ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳುತ್ತೇನೆ. ಇವೊತ್ತು ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಮೈನ್ಸ್ ಇವೆ. ಅರಣ್ಯ ಸಂಪತ್ತು ಇವೆ. ಆದರೆ ಅಲ್ಲಿ ಕೆಲವು ಯೋಜನೆಗಳು ಬರುವ ಕಾರಣ ಇದೆಲ್ಲಾ ಮುಳುಗಡೆಯಾಗಿಬಿಡುತ್ತವೆ ಆದ್ದರಿಂದ ಈ ಸಂಪತ್ತೆಲ್ಲಾ ಮುಳುಗಡೆಯಾಗುವುದಕ್ಕೆ ಮೊದಲು ಅಲ್ಲಿಂದ ಹೊರತೆಗೆಯಲು ಮೈನ್ಸ್ ಖಾತೆಯ ಮಿನಿಸ್ಟರ್‌ರವರು ಕ್ರಮ ತೆಗೆದುಕೊಳ್ಳಬೇಕು. ಇದನ್ನೆಲ್ಲಾ ಹೊರತೆಗೆಯಲು ಲೈಸನ್ಸ್ ಪಡೆಯಬೇಕಾಗುತ್ತದೆ. ಆದರೆ ಸರ್ಕಾರದವರು ಇದಕ್ಕೆ ಸಂಬಂಧಪಟ್ಟ ಲೈಸನ್ಸ್‌ಗಳನ್ನು ಕಳೆದ ೩೦–೨೫ ವರ್ಷಗಳಿಂದ ರಿನ್ಯೂ ಮಾಡಿಲ್ಲ. ಆದ್ದರಿಂದ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಕೂಡಲೇ ಲೈಸನ್ಸ್‌ಗಳನ್ನು ರಿನ್ಯೂ ಮಾಡಿದರೆ ಸಂಬಂಧಪಟ್ಟವರು ಅಲ್ಲಿರುವಂತಹ ಮೈನ್ಸ್‌ನ್ನು ಹೊರತೆಗೆಯಲು ಕ್ರಮ ತೆಗೆದುಕೊಳ್ಳುತ್ತಾರೆ

ಇನ್ನು ನಮ್ಮ ಜಿಲ್ಲೆಯಲ್ಲಿ ವರ್ಷಕ್ಕೆ ಸರಾಸರಿ ೬೦ ಇಂಚುಗಳವರೆಗೆ ಮಳೆಯಾದರೆ ಕೆಲವು ಕಡೆಗಳಲ್ಲಿ ೧೦೦ ರಿಂದ ೧೨೫ ಇಂಚ್‌ಗಳವರೆಗೆ ಮಳೆಯಾಗುತ್ತದೆ ಆದರೆ ಇತ್ತೀಚೆಗೆ ಇಂತಹ ಕಡೆಗಳಲ್ಲಿಯೂ ಮಳೆ ಕಡಿಮೆ ಆಗುತ್ತಿದೆ. ಇದರಿಂದ ಫೆಬ್ರುವರಿ ತಿಂಗಳ ಹೊತ್ತಿಗೆ ಜನರು ನೀರು ಇಲ್ಲದೆ ಪರದಾಡಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ನಮ್ಮ ಜಿಲ್ಲೆಯಲ್ಲಿ ಹೆಚ್ಚು ಬೋರ್‌ವೆಲ್‌ಗಳನ್ನು ತೆಗೆಸಿದರೆ ಉಪಯೋಗವಾಗುವುದಿಲ್ಲ. ಏಕೆಂದರೆ, ಬೋರ್‌ವೆಲ್‌ಗಳಿಂದ ಉಪ್ಪಿನ ನೀರು ಬರುತ್ತದೆ, ಆದ್ದರಿಂದ ಓಪನ್–ವೆಲ್‌ಗಳನ್ನು ತೆಗೆಸುವುದರ ಕಡೆಗೆ ಹೆಚ್ಚಿನ ಲಕ್ಷ್ಯ ಕೊಡಬೇಕೆಂದು ಮತ್ತು ಇದಕ್ಕೆ ಹೆಚ್ಚಿನ ಸಹಾಯ ನೀಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಬೇಡಿಕೊಳ್ಳುತ್ತೇನೆ.

ಇನ್ನು ವಿದ್ಯುತ್ ಇಲಾಖೆ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ಇಲಾಖೆಯಲ್ಲಿ ಕೆಲಸಗಳು ಯಾವರೀತಿ ನಡೆಯುತ್ತಿವೆ ಎಂಬುದನ್ನು ಹೇಳಲು ನಾನು ಹೋಗುವುದಿಲ್ಲ. ಇವೊತ್ತು ವಿದ್ಯುತ್‌ನ ಕೊರತೆ ಇರುವುದರಿಂದ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಾಗಿ ಮಾಡಬೇಕಾಗಿದೆ. ಟ್ರಾನ್ಸ್‌ಮಿಷನ್ ಲಾಸ್ ಶೇಕಡಾ ೨೫ ರಿಂದ ೩೦ರವರೆಗೆ ಆದರೆ ಅದು ನಮಗೆ ಒಳ್ಳೆಯ ಕೀರ್ತಿಯನ್ನು ತರುವುದಿಲ್ಲ. ಇದು ಇಲ್ಲಿ ಮಾತ್ರವಲ್ಲ, ಎಲ್ಲ ಕಡೆಗಳಲ್ಲಿಯೂ ಆಗುತ್ತಿದೆ ಎಂದು ಹೇಳಬಹುದು. ಆದರೆ ಇದನ್ನು ಆದಷ್ಟು ಕಡಿಮೆ ಮಾಡಬೇಕು ಇವೊತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಉತ್ಪಾದನೆಯಾದರೂ ಸಹ ದೀಪದ ಕೆಳಗೆ ಕತ್ತಲು ಎಂಬಂತೆ. ನಮ್ಮ ಜಿಲ್ಲೆಯ ಶೇಕಡಾ ೩೦ರಷ್ಟು ಹಳ್ಳಿಗಳಿಗೆ ಇನ್ನು ವಿದ್ಯುತ್ ಸರಬರಾಜನ್ನು ಮಾಡಿಲ್ಲ. ಶೇಕಡಾ ೭೦ರಷ್ಟು ಹಳ್ಳಿಗಳಿಗೆ ಈ ಸೌಲಭ್ಯ ಸಿಕ್ಕಿದೆ. ಆದ್ದರಿಂದ ಇನ್ನುಳಿದ ಹಳ್ಳಿಗಳಿಗೂ ಸಹ ಟೈಮ್–ಬೌಂಡ್ ಪ್ರೋಗ್ರಾಮ್ ಹಾಕಿಕೊಂಡು ಇನ್ನು ಒಂದೆರಡು ವರ್ಷಗಳಲ್ಲಿ ವಿದ್ಯುತ್ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ

ಇನ್ನು ನಮ್ಮ ಜಿಲ್ಲೆಯಲ್ಲಿ ವಿದ್ಯುತ್ ಯೋಜನೆಗಳ ಸಲುವಾಗಿ ತಮ್ಮ ಜಮೀನುಗಳನ್ನು ಕಳೆದುಕೊಂಡ ಜನರು ಇದ್ದಾರೆ. ನಮ್ಮ ಜಿಲ್ಲೆಯಲ್ಲಿ ಸುಮಾರು ಒಂದೂವರೆ ಲಕ್ಷದಿಂದ ಎರಡು ಲಕ್ಷ ಎಕರೆಗಳಷ್ಟು ಅರಣ್ಯ ಜಮೀನು ಸಹ ಈ ಯೋಜನೆಗಳ ಸಲುವಾಗಿ ಮುಳುಗಿ ಹೋಗಿದೆ ಜಮೀನು ಕಳೆದುಕೊಂಡವರಿಗೆ ಅರಣ್ಯ ಇಲಾಖೆಗೆ ಸೇರಿದ ಜಮೀನಿನ ಪೈಕಿ ೫೦೦ ರಿಂದ ಒಂದು ಸಾವಿರ ಎಕರೆಯವರೆಗೆ ಬಿಟ್ಟುಕೊಡಿ ಎಂದು ಕೇಳಿದರೆ, ಅದು ಕೇಂದ್ರ ಸರ್ಕಾರದ ಕೈಯಲ್ಲಿದೆ ಎಂದು ಹೇಳುತ್ತಾರೆ ? ಎಲ್ಲವನ್ನೂ ತ್ಯಾಗ ಮಾಡಿದವರಿಗೆ ಸ್ವಲ್ಪ ಭಾಗದ ಅರಣ್ಯ ಭೂಮಿಯನ್ನು ಬಿಟ್ಟುಕೊಡಿ

ಎಂದರೆ ಅರಣ್ಯ ನಾಶವಾಗುತ್ತದೆಂದು ಹೇಳುವುದು ಸರಿಯಲ್ಲ ? ಜಮೀನು ಕಳೆದುಕೊಂಡವರಿಗೆ ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಬೇರೆ ಕಡೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವೊತ್ತಿನ ದಿವಸ ಕೆ. ಇ. ಬಿ. ಮತ್ತು ಕೆ. ಪಿ. ಸಿ. ಈ ಎರಡೂ ಇಲಾಖೆಗಳನ್ನು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ ಬೇಡ್ತಿ ಯೋಜನೆ ಸಂಬಂಧದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಅಡ್ಡ ಬರುತ್ತಿದ್ದಾರೆಂಬ ಬಗ್ಗೆ ಈ ಮನೆಯಲ್ಲಿ ಮತ್ತು ಮೇಲ್ಮನೆಯಲ್ಲಿ ಸಾಕಷ್ಟು ಟೀಕೆಗಳು ಬಂದಿವೆ. ಈ ಯೋಜನೆಯಿಂದ ೧೫೦ ಎಕರೆ ತೋಟ ಮುಳುಗಡೆಯಾಗುತ್ತದೆ, ಒಂದೂವರೆ ಸಾವಿರ ಎಕರೆಯಷ್ಟು ಹೊಲಗದ್ದೆಗಳು ಮುಳುಗಡೆ ಯಾಗುತ್ತದೆ ಎಂಬ ಕಾರಣನಿಂದ ಅಲ್ಲಿನ ಜನರು ಇದನ್ನು ವಿರೋಧ ಮಾಡಲಿಲ್ಲ. ಸುಮಾರು ೭೫ ಸಾವಿರ ಎಕರೆಗಳಷ್ಟು ಅರಣ್ಯ ಭೂಮಿ ಮುಳುಗಡೆಯಾಗುತ್ತದೆಂಬ ಕಾರಣದಿಂದ ಇದನ್ನು ವಿರೋಧ ಮಾಡಿದರು. ಇಷ್ಟೊಂದು ಭಾಗದ ಅರಣ್ಯ ಮುಳುಗಡೆಯಾದರೆ ಪರಿಸರ ಮಾಲಿನ್ಯದ ದೃಷ್ಟಿಯಿಂದ ಸಹ ಜನರು ಸಾಕಷ್ಟು ತೊಂದರೆಗೆ ಒಳಗಾಗಬೇಕಾಗುತ್ತದೆ ಈ ಬೇಡ್ತಿ ನದಿಯು ಉಗಮಸ್ಥಾನ ಧಾರವಾಡ ಜಿಲ್ಲೆ. ಆದ್ದರಿಂದ ಆ ಜಿಲ್ಲೆಗೂ ಸಾಕಷ್ಟು ಹಾನಿಯಾಗುತ್ತದೆಂಬ ಕಾರಣದಿಂದ ಈ ಯೋಜನೆಗೆ ಶ್ರೀ ದೇವರಾಜ್ ಅರಸ್ ಅವರ ಸರ್ಕಾರವಿದ್ದಾಗಲೇ ತಡೆಯಾಜ್ಞೆಯನ್ನು ಕೊಟ್ಟರು. ಇದಕ್ಕೆ ತಡೆಯಾಜ್ಞೆ ಕೊಟ್ಟಿದ್ದು ಈಗಿನ ಸರ್ಕಾರ ಅಲ್ಲ.

ಇನ್ನು ಕೈಗಾ ಅಣುವಿದ್ಯುತ್ ಯೋಜನೆಯ ಸಂಬಂಧದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ತಮ್ಮ ಅಭಿನಂದನೆಗಳನ್ನು ಸಲ್ಲಿಸಿಲ್ಲ ಎಂಬ ಮಾತನ್ನು ಶ್ರೀ ಅಶ್ವಥರೆಡ್ಡಿ ಯವರು ಹೇಳಿದ್ದಾರೆ. ಮಾನ್ಯ ಸದಸ್ಯರು ಈ ಹಿಂದಿನ ವರ್ಷದ ಬಡ್ಜೆಟ್‌ನ್ನು ನೋಡಿಲ್ಲವೆಂದು ಕಾಣುತ್ತದೆ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಹಿಂದಿನ ವರ್ಷದ ಬಡ್ಜೆಟ್‌ನಲ್ಲಿಯೇ ಕೇಂದ್ರ ಸರ್ಕಾರಕ್ಕೆ ತಮ್ಮ ಅಭಿನಂದನೆ ಗಳನ್ನು ಸಲ್ಲಿಸಿದ್ದಾರೆ. ನಾವು ಯಾವಾಗಲೂ ಈ ಜಲವಿದ್ಯುತ್ ಯೋಜನೆಗಳನ್ನೇ ಅವಲಂಭಿಸಬಾರದು ಇವೊತ್ತು ನಾವು ಶೇಕಡಾ ೮೦ ರಷ್ಟು ಈ ಯೋಜನೆಗಳನ್ನೇ ಅವಲಂಬಿಸಿದ್ದೇವೆ. ಇದು ಸರಿಯಲ್ಲ. ಜಲವಿದ್ಯುತ್ ಯೋಜನೆಗಳ ಜೊತೆಗೆ ಥರ್ಮಲ್ ಮತ್ತು ಅಣು ವಿದ್ಯುತ್ ಯೋಜನೆಗಳನ್ನು ಸಹ ಅವಲಂಬಿಸುವುದು ಒಳ್ಳೆಯದು. ಇದರಿಂದ ನಮ್ಮ ಅರಣ್ಯ ಸಂಪತ್ತು ಜಾಸ್ತಿ ನಾಶವಾಗುವುದಿಲ್ಲ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀಮತಿ ಸುಮವಸಂತ. (ವಿರಾಜಪೇಟೆ).—ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗಾಗಿ ಮೀಸಲಾತಿ ಬಗ್ಗೆ ಆರ್ಟಿಕಲ್ ೩೩೫ of the Constitution clause 4 ಆಫ್ ಆರ್ಟಿಕಲ್ ೧೬ ಇದರ ಪ್ರಕಾರ ಯಾರು ಯಾರು ಎಸ್.ಸಿ. ಮತ್ತು ಎಸ್. ಟಿ. ಪಟ್ಟಿಯಲ್ಲಿದ್ದಾರೆ. ಅಂತಹವರಿಗೆ ನೇರ ನೇಮಕಾತಿ ಮತ್ತುಬಡ್ತಿಯಲ್ಲಿ ೧೫ ಮತ್ತು ೩ರ ಪ್ರಕಾರ ಮತ್ತು ರೋಸ್ಟರ್ ಪ್ರಕಾರ ಕಟ್ಟುನಿಟ್ಟಾಗಿ ಜಾರಿಗೆ ಕೊಡಬೇಕು ಎಂದು ಇದೆ. ಈಗ ಈ ಬಗ್ಗೆ ಕೆಲವರು ಸ್ಟೇ ತಂದಿದ್ದಾರೆ. ಈ ಜನರ ಪೈಕಿ ಈಗ ೪೫ ಸಾವಿರದಷ್ಟು ಜನ ಕೆಲಸ ಇಲ್ಲದೆ ಇದ್ದಾರೆ. ಇಲ್ಲಿಯವರೆಗೆ ಸುಮಾರು ೨೧ ಸಾವಿರದಷ್ಟು ಜನರಿಗೆ ಕೆಲಸ ಕೊಟ್ಟು ಖಾಲಿ ಹುದ್ದೆಗಳನ್ನು ಭರ್ತಿ ಮಾಡಿದ್ದೀರಿ. ಇನ್ನೂ ೧೯ ಸಾವಿರ ಜನ ಕೆಲಸ ಇಲ್ಲದೆ ಈಗ ಇದ್ದಾರೆ ಖಾಲಿ ಇರುವ ಹುದ್ದೆಗಳಿಗೂ ಸಹ ನೇರವಾಗಿ ನೇಮಕಾತಿ ಮಾಡಿದ್ದರೆ ನಮ್ಮ ಜನಗಳಿಗೆ ಕೆಲಸ ಸಿಗುತ್ತಿತ್ತು. ನಮ್ಮ ರಾಜ್ಯದಲ್ಲಿ ೧೨ ಲಕ್ಷದ ೯೭ ಸಾವಿರ ನಿರುದ್ಯೋಗಿಗಳಿದ್ದಾರೆ. ಆದರಲ್ಲಿ ೮ ಸಾವಿರ ಜನರಿಗೆ ಮಾತ್ರ ಕೆಲಸ ಸಿಕ್ಕಿದೆ. ಇನ್ನು ಉಳಿದವರಿಗೆ ಯಾವಾಗ ಕೆಲಸ ಕೊಡಿಸುವಿರಿ ಎಂದು ಕೇಳುತ್ತಿದ್ದೇನೆ. ನೀವು ಅಧಿಕಾರಕ್ಕೆ ಬಂದಮೇಲೆ ಕೆಲಸ ಕೊಡುತ್ತೇವೆಂದು ಹೇಳಿದ್ದೀರಿ ಆದರೆ ಇದುವರೆಗೆ ಕೆಲಸ ಕೊಡುವ ಬಗ್ಗೆ ಪ್ರಯತ್ನ ಮಾಡಲಿಲ್ಲ ೧೯೭೧ ನೇ ಸೆನ್ಸಸ್ ಪ್ರಕಾರ ಸರ್ಕಾರಿ ನೌಕರಿಯಲ್ಲಿ ಎಸ್.ಟಿ. ಜನರು ೨ ಲಕ್ಷ ಮಾತ್ರ ಇದ್ದರು. ಈಗ ಸುಮಾರು ೧೮ ಲಕ್ಷಕ್ಕೆ ಆ ಸಂಖ್ಯೆ ಏರಿದೆ. ಕೆಲವು ಸಂದರ್ಭಗಳಲ್ಲಿ ಟ್ರೈಬಲ್ ಜನಾಂಗದವರಿಗೆ ಸಿಕ್ಕಬೇಕಾದ ಸೌಲಭ್ಯಗಳನ್ನು ಬಲಾಡ್ಯರು ಪಡೆದುಕೊಂಡುಬಿಟ್ಟಿದ್ದಾರೆ. ನಿಜವಾದ ಕಾಡುಕುರುಬರಿಗೆ, ಜೇನು ಕುರುಬರಿಗೆ ಹಾಗೂ ಇತರೇ ಟ್ರೈಬಲ್ ಜನರಿಗೆ ಕೆಲಸಗಳು ಸಿಕ್ಕಿಲ್ಲ. ಇದನ್ನು ನೋಡಿದರೆ ಬಲಾಡ್ಯರಿಗೆ ಈ ಸರ್ಕಾರ ಪ್ರೋತ್ಸಾಹ ಕೊಡುತ್ತಾರೆಯೇ ವಿನಃ ಬಲ ಹೀನರಿಗೆ ಪ್ರೋತ್ಸಾಹವನ್ನು ಕೊಡುತ್ತಿಲ್ಲ ಎಂದು ಗೊತ್ತಾಗುತ್ತದೆ, ಬಡವರಿಗೆ ಸ್ಪೆಷಲ್ ರಿಕ್ರೂಟ್ ಮೆಂಟ್ ಕೊಡಬೇಕೆಂದು ಆದೇಶವನ್ನು ಮಾಡುತ್ತೀರಿ ಅಷ್ಟರಲ್ಲಿ ಇತರೆ ಜನಾಂಗದವರು ಹೈಕೋರ್ಟಿಗೆ ಹೋಗಿ ಇದರ ವಿರುದ್ಧ ಸ್ಟೇ ಆರ್ಡರನ್ನು ತಂದುಬಿಡುತ್ತಾರೆ. ಈ ಸ್ಟೇ ಆರ್ಡರನ್ನು ವಜಾ

ಮಾಡಿಸುವುದಕ್ಕೆ ಸರ್ಕಾರದವರು ಪ್ರಯತ್ನಿಸುವುದೇ. ಇಲ್ಲ ಸರ್ಕಾರ ಕೂಡ ಇದಕ್ಕೆ ಶಾಮಿಲಾಗಿರುತ್ತದೆಯೇನೋ ಎಂದು ಅನುಮಾನ ಬರುವ ಹಾಗೆ ಆಗುತ್ತದೆ. ಆಮೇಲೆ ಎಸ್. ಸಿ. ಮತ್ತು ಎಸ್. ಟಿ. ಜನಾಂಗದ ವಿದ್ಯಾರ್ಥಿಗಳು ಶಾಲೆಗಳಲ್ಲಿ ಓದುತ್ತಿದ್ದಾರೆ. ಇವರುಗಳಿಗೆ ಸರಿಯಾದ ಹಾಸ್ಟೆಲ್‌ಗಳೇ ಇಲ್ಲ. ಈ ವರ್ಷ ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ ಎಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರನ್ನು ಕೇಳಿಕೊಳ್ಳುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ. ನಾನು ನನ್ನ ಕ್ಷೇತ್ರದಲ್ಲಿ ಪ್ರತಿಯೊಂದು ಹರಿಜನ ಗಿರಿಜನರು ಓದುತ್ತಿರುವ ಶಾಲೆಗಳಿಗೆ ಭೇಟಿ ಇತ್ತಿದ್ದೇನೆ, ಆ ಶಾಲೆಗಳು ಇರುವ ಪರಿಸ್ಥಿತಿಯನ್ನು ನೋಡಿದವರಿಗೆ ಮಾತ್ರ ಗೊತ್ತಾಗುತ್ತದೆ ದನದ ಕೊಟ್ಟಿಗೆಗಳಾದರೂ ಎಷ್ಟೋ ವಾಸಿಯಾಗಿರುತ್ತವೆ. ಆಮೇಲೆ ದೇವದಾಸಿ ಪದ್ಧತಿಯಲ್ಲಿ ನಮ್ಮ ರಾಜ್ಯದಲ್ಲಿ ೪ ಸಾವಿರ ಜನರಿದ್ದಾರೆ ಅವರುಗಳಲ್ಲಿ ೬ ಜನರಿಗೆ ಮಾತ್ರ ಇವರು ಮ್ಯಾರೇಜ್ ಮಾಡಿದ್ದಾರೆ. ಆಮೇಲೆ ೧೮ ವರ್ಷದ ನಂತರದ ಮತ್ತು ೩೫ ವರ್ಷದೊಳಗಿನ ವಿಧವೆಯವರಿಗೆ ಇದುವರೆಗೆ ಎಷ್ಟು ಮ್ಯಾರೇಜ್‌ನ್ನು ಮಾಡಿದ್ದೀರಿ? ಇದಕ್ಕಾಗಿ ಎಷ್ಟು ಹಣವನ್ನು ಇಟ್ಟಿದ್ದೀರಿ? ಇದರ ಬಗ್ಗೆ ಮಾಹಿತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ ಹರಿಜನ ಗಿರಿಜನರಿಗೆ ಬೇರೆಯವರಿಂದ ಹೊಡೆತ ಬಿದ್ದರೆ ಅಥವಾ ಅವರ ಮನೆಗಳು ಲೂಟಿಯಾದರೆ ಅವರುಗಳಿಗೆ ಪರಿಹಾರವನ್ನು ಕೊಡಲಿಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರಿ? ಇಲ್ಲಿಯ ತನಕ ಯಾರಿಗಾದರೂ ಪರಿಹಾರವನ್ನು ಕೊಟ್ಟಿರುವಿರಾ? ಇಂಟರ್‌ಕ್ಯಾಸ್ಟ್ ಮ್ಯಾರೇಜ್ ಆದವರಿಗೆ ಎಷ್ಟು ಹಣವನ್ನು ಕೊಡುತ್ತೀರಿ ಹಾಗೂ ಇದುವರೆಗೆ ಎಷ್ಟು ಇಂಟರ್‌ಕ್ಯಾಸ್ಟ್ ಮ್ಯಾರೇಜ್‌ಗಳನ್ನು ಮಾಡಿದ್ದೀರಿ. ಎಸ್. ಟಿ. ಜನಾಂಗದವರನ್ನು ಇಂಟರ್‌ಕ್ಯಾಸ್ಟ್ ಮ್ಯಾರೇಜ್ ಮಾಡಿಕೊಂಡರೆ ಹಣ ಕೊಡುವುದಕ್ಕೆ ಕ್ರಮ ಕೈಗೊಂಡಿಲ್ಲ. ಎಸ್. ಟಿ. ಜನಾಂಗದವರು ಇಂಟರ್‌ಕ್ಯಾಸ್ಟ್ ಮದುವೆ ಮಾಡಿಕೊಂಡರೆ ಅವರಿಗೆ ಪ್ರೋತ್ಸಾಹ ಕೊಡಲು ಹಣವನ್ನು ಇಡಬೇಕೆಂದು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಎಸ್. ಟಿ. ಜನಾಂಗದ ವಿದ್ಯಾರ್ಥಿಗಳಿಗೆ ೧೫೦ ರೂಪಾಯಿಗಳನ್ನು ಪರಿಹಾರಧನವಾಗಿ ಕೊಡುತ್ತಿದ್ದೀರಿ, ಅದನ್ನು ೨೦೦ ರೂಪಾಯಿಗಳವರೆಗೆ ಏರಿಸಬೇಕೆಂದು ಕೇಳಿಕೊಳ್ಳುತ್ತೇನೆ. ದಾವಣಗೆರೆಯಲ್ಲಿ 'ಅಶಕ್ತ ಪೋಷಕರ ಸಂಘ' ಎಂದು ಒಂದು ಸಂಘ ಇದೆ. ಅಲ್ಲಿ ಕುರುಡರು ಕುಂಟರು ಇರುವ ಬದಲಿಗೆ ಅಲ್ಲಿ ಒಂದು ಬ್ರಾಂದಿ ಅಂಗಡಿ, ಇಸ್ಪೀಟ್ ಕ್ಲಬ್ ಮಟನ್ ಹೋಟಲ್ ಇದೆ. ಈ ಸಂಘಕ್ಕೆ ಸೇರಿದಂತೆ ಒಂದು ಎಕರೆ ಜಾಗ ಸಹ ಇದೆ. ಈ ಸಂಘದಲ್ಲಿ ಹರಿಜನ ಮತ್ತು ಗಿರಿಜನರಿಗೆ ಅನುಕೂಲವಾಗುವ ಬದಲು ಬೇರೆಯವರಿಗೆ ಉಪಯೋಗವಾಗುತ್ತಿದೆ ಇದರ ಬಗ್ಗೆ ಮಾನ್ಯ ಸಚಿವರ ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ಟ್ರೈಬಲ್ ಏರಿಯಾ ಪ್ಲಾನ್ ಆರ್ಟಿಕಲ್ ೨೭೫ರ ಪ್ರಕಾರ ಟ್ರೈಬಲ್ ಪ್ಲಾನ್‌ನ್ನು ನಮ್ಮ ಕಡೆಯಲ್ಲಿರುವ ಹುಣಸೂರು ಮತ್ತು ಇನ್ನೂ ಕೆಲವು ಕಡೆ ಮಾಡಿದ್ದಾರೆ. ಈ ಯೋಜನೆಯಲ್ಲಿ ಟ್ರೈಬಲ್ ಜನಾಂಗದ ಕಲ್ಯಾಣ ಮಾಡುವುದಕ್ಕೆ ಕೇಂದ್ರ ಸರ್ಕಾರವು ಹಣವನ್ನು ಕೊಟ್ಟಿದೆ. ಈ ಹಣವನ್ನು ಗೌರ್ನರ್‌ರವರ ಆದೇಶದ ಮೇಲೆ ಖರ್ಚು ಮಾಡಬೇಕಾಗಿರುತ್ತದೆ. ಈ ಯೋಜನೆಗೆ ಕೇಂದ್ರ ಸರ್ಕಾರದವರು ಕೊಟ್ಟಿರುವ ಹಣ ಸರಿಯಾಗಿ ವಿನಿಯೋಗ ಆಗಿದೆಯೋ ಇಲ್ಲವೇ ಎಂಬುದನ್ನು ಇನ್‌ವೆಸ್ಟಿಗೇಷನ್ ಮಾಡಬೇಕು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಸುಮಾರು ೩೫ ವರ್ಷಗಳಾದರೂ ಸಹ ಟ್ರೈಬಲ್ ಜನಾಂಗದವರು ಸ್ವಾತಂತ್ರ್ಯ ಪೂರ್ವದಲ್ಲಿ ಯಾವ ಸ್ಥಿತಿಯಲ್ಲಿದ್ದರೋ ಇಂದಿಗೂ ಅದೇ ಸ್ಥಿತಿಯಲ್ಲಿ ಇದ್ದಾರೆ. ನನ್ನ ಕ್ಷೇತ್ರಕ್ಕೆ ಸೇರಿದ ಮುತ್ತೂರು ಮತ್ತು ಹುಣಸೂರಿನಲ್ಲಿ ಒಂದು ಟ್ರೈಬಲ್ ಕಾಲೋನಿಯನ್ನು ಮಾಡಿದ್ದರು. ಆದರೆ ಇದರಿಂದ ಯಾವುದೇ ರೀತಿಯ ಪ್ರಯೋಜನ ಟ್ರೈಬಲ್ ಜನಾಂಗದವರಿಗೆ ಸಿಕ್ಕಿಲ್ಲ. ಇದರ ಬಗ್ಗೆ ಗಮನ ಹರಿಸಿ ಟ್ರೈಬಲ್ ಜನಾಂಗದವರಿಗೆ ಅನುಕೂಲ ಮಾಡಿಕೊಡಿ ಎಂದು ಸಮಾಜ ಕಲ್ಯಾಣ ಮಂತ್ರಿಯವರಿಗೆ ಎಷ್ಟು ಸಾರಿ ಹೇಳಿದರೂ ಏನು ಪ್ರಯೋಜನವಾಗಿಲ್ಲ. ಆದ್ದರಿಂದ ನಾನು ಈ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ ನಮ್ಮ ಕ್ಷೇತ್ರದಲ್ಲಿ ಇರುವ ಟ್ರೈಬಲ್ ಜನಾಂಗದವರು ಇರುವ ಸ್ಥಳಗಳಿಗೆ ಯಾರಾದರೂ ಹೊಸಬರು ಹೋದರೆ, ಆ ಜನರು ಓಡಿ ಹೋಗುತ್ತಾರೆ. ಅವರುಗಳನ್ನು ಮುಂದೆ ತರತಕ್ಕ ಕೆಲಸ ಇಲ್ಲಿಯವರೆಗೂ ನಡೆದಿಲ್ಲ.

೩-೦೦ ಪಿ.ಎಂ.

ಇನ್ನು ಸರ್ಕಾರಿ ನೌಕರರಲ್ಲಿ ಶಿಸ್ತು, ಸೌಜನ್ಯತೆ ಇಲ್ಲವಾಗಿದೆ. ಜನಗಳೊಂದಿಗೆ ಬೇಜವಾಬ್ದಾರಿಯಿಂದ ವರ್ತಿಸುತ್ತಾರೆ. ಕೆಲಸಗಳನ್ನು ನಿಧಾನಗತಿಯಿಂದ ಮಾಡುತ್ತಿರುವುದರಿಂದ ಜನಗಳಿಗೆ ಬಹಳ

ತೊಂದರೆಯಾಗುತ್ತಿದೆ. ಇಂತಹ ಬೇಜವಾಬ್ದಾರಿ ಅಧಿಕಾರಿಗಳ ಮೇಲೆ ಕಠಿಣ ಕ್ರಮವನ್ನು ತೆಗೆದು ಕೊಳ್ಳಬೇಕು. ಐ ಎ. ಎಸ್. ಅಧಿಕಾರಿಗಳ ಕಡೆ ಸರ್ಕಾರದವರು ಗಮನ ಹರಿಸಿ ಯಾರಿಗೆ ಕನ್ನಡ ಬರುತ್ತದೆಯೋ ಅಂತಹ ಅಧಿಕಾರಿಗಳನ್ನು ಮೇಲಿನ ಹುದ್ದೆಗಳಿಗೆ ನೇಮಿಸಬೇಕು. ಮಹಿಳೆಯರು ಇಂದಿನ ಕಾಲದಲ್ಲಿ ಸರ್ಕಾರಿ ಕೆಲಸದಲ್ಲಿ ಇದ್ದಾರೆ. ಜಿಲ್ಲಾ ಕೇಂದ್ರದಲ್ಲಿ ಕೆಲಸ ಮಾಡುವ ಮಹಿಳೆಯರಿಗಿಂತ ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ವಸತಿ ಸಮಸ್ಯೆ ಜಾಸ್ತಿ ಇದೆ. ಆದ್ದರಿಂದ ತಾಲ್ಲೂಕು ಮಟ್ಟದಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರಿಗೆ ವಸತಿ ಸೌಕರ್ಯವನ್ನು ಮಾಡಿಕೊಡಬೇಕು. ಹಾಗೂ ಗಂಡ, ಹೆಂಡತಿಯರು ಒಂದೇ ಕಡೆ ಕೆಲಸ ಮಾಡುವಂತೆ ಏರ್ಪಾಡನ್ನು ಮಾಡಬೇಕು ಗಂಡ ಹೆಂಡತಿಯರು ಒಂದೇ ಕಡೆ ಕೆಲಸ ಮಾಡಲು ಅನುಕೂಲವಾಗುವಂತೆ ಪೋಸ್ಟಿಂಗ್ಸ್ ಕೊಡಬೇಕೆಂದು ಸರ್ಕಾರಿ ಆಜ್ಞೆ ಇದ್ದರೂ ಸಹ ಅದು ಸರಿಯಾಗಿ ಪಾಲನೆಯಾಗದೇ ಬಹಳ ತೊಂದರೆಯಾಗಿರುತ್ತದೆ. ಆದ್ದರಿಂದ ಇದರ ಕಡೆ ಸರ್ಕಾರವು ಗಮನ ಹರಿಸಿ ಗಂಡ ಹೆಂಡತಿ ಒಂದೇ ಕಡೆ ಕೆಲಸಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕು. ಆಮೇಲೆ ವಾರದಲ್ಲಿ ೬ ದಿನಗಳ ಕೆಲಸದ ಪದ್ಧತಿಯನ್ನು ತೆಗೆದು ೫ ದಿನಗಳ ಪದ್ಧತಿಯನ್ನು ಜಾರಿಗೆ ತಂದಿರುವುದರಿಂದ ಬೆಳಿಗ್ಗೆ ೧೦ ಗಂಟೆಗೆ ಆಫೀಸ್‌ಗೆ ಬಂದು ಸಂಜೆ ೬ ಗಂಟೆಗೆ ಮನೆಗೆ ಹೋಗಬೇಕಾಗುತ್ತದೆ. ೬ ಗಂಟೆಗೆ ಕಚೇರಿಯನ್ನು ಮುಗಿಸಿಕೊಂಡು ಬಸ್‌ಗೆ ಕ್ಯೂ ನಿಂತುಕೊಂಡು ಮನೆಗೆ ಹೋಗುವ ಹೊತ್ತಿಗೆ ಬಹಳ ಲೇಟಾಗುತ್ತದೆ. ಬಹಳ ಲೇಟಾಗುವುದರಿಂದ ಮಹಿಳೆಯರಿಗೆ ತುಂಬಾ ತೊಂದರೆಯಾಗಿರುತ್ತದೆ, ಹೆಣ್ಣುಮಕ್ಕಳಿಗೆ ಪ್ರಾಣ ಮತ್ತು ಮಾನಕ್ಕೆ ಇದರಿಂದ ತೊಂದರೆಯಾಗುತ್ತದೆ. ಅದೂ ಅಲ್ಲದೇ ಕೆಲವು ಕಚೇರಿಗಳಲ್ಲಿ ಕೆಲವು ನೌಕರರು, ಶುಕ್ರವಾರದ ಮಧ್ಯಾಹ್ನವೇ ತಮ್ಮ ಊರುಗಳಿಗೆ ಹೊರಟು ಹೋಗಿ ಸೋಮವಾರ ಮಧ್ಯಾಹ್ನ ಕಚೇರಿಗೆ ಬರುತ್ತಾರೆ ಇದರಿಂದ ಸರ್ಕಾರಿ ಕಚೇರಿಗಳಲ್ಲಿ ಸರಿಯಾಗಿ ಕೆಲಸ ನಡೆಯುವುದಿಲ್ಲ. ಆದ್ದರಿಂದ ೫ ದಿನಗಳ ಪದ್ಧತಿಯನ್ನು ತೆಗೆದು ಹಾಕಿ ಮೊದಲಿನಂತೆ ೬ ದಿನಗಳ ಪದ್ಧತಿಯನ್ನು ಜಾರಿಗೆ ತರಬೇಕೆಂದು ಕೇಳಿಕೊಳ್ಳುತ್ತೇನೆ. ಆಮೇಲೆ ನಿವೃತ್ತಿ ವಯಸ್ಸನ್ನು ಸರ್ಕಾರದವರು ೫೫ ವರ್ಷದಿಂದ ೫೮ ವರ್ಷಕ್ಕೆ ಏರಿಸಿದ್ದಾರೆ. ಸಾಮಾನ್ಯವಾಗಿ ೫೦ ವರ್ಷಗಳಾದ ಮೇಲೆ ಬಿ.ಪಿ., ಹಾಗೂ ಮತ್ತಿತರ ಕಾಯಿಲೆಗಳು ಬರುವುದರಿಂದ ವಯಸ್ಸಾದವರಿಂದ ಕಛೇರಿಗಳಲ್ಲಿ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ನಿವೃತ್ತಿ ವಯಸ್ಸು ಮೊದಲು ಇದ್ದಂತೆಯೇ ೫೫ ವರ್ಷಕ್ಕೆ ಇಳಿಸಬೇಕು. ಪ್ರತಿ ವರ್ಷ ೨೫ ಸಾವಿರ ಜನರು ನಿವೃತ್ತಿಯಾಗುತ್ತಿದ್ದರು. ೫೮ ವರ್ಷಕ್ಕೆ ನಿವೃತ್ತಿ ವಯಸ್ಸನ್ನು ಹೆಚ್ಚಿಸಿದ್ದರಿಂದ ಸುಮಾರು ೭೫ ಸಾವಿರ ನೌಕರರು ನಿವೃತ್ತಿಯಾಗದೇ ಇರುವುದರಿಂದ ಅಷ್ಟು ಪ್ರಮಾಣದ ನಿರುದ್ಯೋಗಿಗಳು ಬಹಳ ತೊಂದರೆಯಾಗಿದೆ. ಆಮೇಲೆ ಎಲ್ಲಾ ಕಮಿಟಿಗಳಿಗೂ ನಿಮ್ಮ ಪಕ್ಷದ ಸದಸ್ಯರುಗಳನ್ನೇ ಹೆಚ್ಚಿಗೆ ಹಾಕುತ್ತೀರಿ, ಉದಾಹರಣೆಗೆ ಲ್ಯಾಂಡ್ ಟ್ರಿಬ್ಯೂನಲ್‌ನಲ್ಲಿ ನಿಮ್ಮ ಪಕ್ಷದವರು ೩ ಜನ ಇರುತ್ತಾರೆ. ನಮ್ಮ ಪಕ್ಷದವರು ಒಬ್ಬರೇ ಒಬ್ಬರು ಇರುತ್ತಾರೆ. ಯಾರ ಕಡೆ ಬಹುಮತ ಇರುತ್ತದೆಯೋ ಆ ಕಡೆ ನ್ಯಾಯ ತೀರ್ಮಾನವಾಗುತ್ತದೆ. ಇದರಿಂದ ನಿಷ್ಪಕ್ಷಪಾತವಾದ ನ್ಯಾಯ ಜನರಿಗೆ ಸಿಕ್ಕುತ್ತಿಲ್ಲ. ಅನೇಕ ಕಡೆ ಸದಸ್ಯರುಗಳು ಲಂಚವನ್ನು ತೆಗೆದುಕೊಂಡು ಜಮೀನ್ದಾರರ ಪರವಾಗಿಯೇ ನ್ಯಾಯವನ್ನು ಕೊಟ್ಟು ಬಿಡುತ್ತಾರೆ ವಿಧಾನಸಭೆಯು ನಡೆಯುವ ಕಾಲದಲ್ಲಿ ಟ್ರಿಬ್ಯೂನಲ್‌ಗಳಿಗೆ ಸದಸ್ಯರುಗಳು ಹಾಜರಾಗುವುದಕ್ಕೆ ಸಾಧ್ಯವಾಗದೇ ಇರುವುದರಿಂದ ಟ್ರಿಬ್ಯೂನಲ್ ಕೆಲಸಗಳನ್ನು ವಿಧಾನಸಭೆಯ ದಿನಗಳಲ್ಲಿ ನಿಲ್ಲಿಸುವುದು ಒಳ್ಳೆಯದು. ಕೊನೆಯದಾಗಿ, ಹೇಳುವುದಾದರೆ ನಮ್ಮದು ಟ್ರೈಬಲ್ ಕ್ಷೇತ್ರ. ನನ್ನ ಕ್ಷೇತ್ರದಲ್ಲಿ ಯಾವ ಅಭಿವೃದ್ಧಿ ಕಾರ್ಯಕ್ರಮವೂ ಸರಿಯಾಗಿ ಆಗಿಲ್ಲ. ಹರಿಜನ ಮತ್ತು ಗಿರಿಜನರ ಹೆಸರಿನಲ್ಲಿ ಇಟ್ಟ ಹಣದ ದುರುಪಯೋಗ ಆಗುತ್ತಿದೆ. ಅಂತಹ ದುರುಪಯೋಗಗಳು ಆಗದಂತೆ ನೋಡಿಕೊಂಡು, ಹರಿಜನ ಗಿರಿಜನರಿಗೆ ಒದಗಿಸಲಾದ ಸೌಲಭ್ಯಗಳನ್ನು ಅವರಿಗೆ ತಲುಪಿಸುವಂತೆ ಮಾನ್ಯ ಮುಖ್ಯಮಂತ್ರಿಯವರು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಮ್ಮ ಭಾಷಣವನ್ನು ೧೫ ನಿಮಿಷಗಳಲ್ಲಿ ಮುಗಿಸಬೇಕು. ಇನ್ನೂ ಮಾತನಾಡುವವರು ತುಂಬಾ ಜನರು ಇದ್ದಾರೆ ದಯಮಾಡಿ ತಮ್ಮ ಅವಧಿಯಲ್ಲಿ ಮುಗಿಸಬೇಕು.

†ಶ್ರೀ ಕೆ.ಬಿ. ಶಾಣಪ್ಪ (ಶಹಬಾದ್) — ಮಾನ್ಯ ಅಧ್ಯಕ್ಷರೆ, ಇದರಲ್ಲಿ ಈಗ ೧೨ ಬೇಡಿಕೆಗಳು ಇವೆ. ಎಲ್ಲಾ ವಿಚಾರಗಳನ್ನು ಹೇಳುವಾಗ ಸ್ವಲ್ಪ ಸಮಯ ಬೇಕಾಗುತ್ತದೆ, ದಯಮಾಡಿ ಸ್ವಲ್ಪ ರಿಯಾಯ್ತಿ ಕೊಡಬೇಕು.

ಈಗಾಗಲೇ ಎರಡೂ ಕಡೆಯ ಮಾನ್ಯ ಸದಸ್ಯರುಗಳು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳ ಇಲಾಖೆಯ ಬೇಡಿಕೆಗಳ ಮೇಲೆ ಸಾಕಷ್ಟು ಮಾತನಾಡಿದ್ದಾರೆ. ಅದರಲ್ಲಿಯೂ ಕೂಡಾ ಎಲ್ಲರೂ ಅದಷ್ಟು ಮಟ್ಟಿಗೆ ಮಾನ್ಯ ಮುಖ್ಯಮಂತ್ರಿಯವರ ಇಲಾಖೆಗೆ ಸಂಬಂಧಪಟ್ಟಂತಹ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾತನಾಡಿದ್ದಾರೆ. ಇದು ಮಹತ್ವವಾದಂತಹ ಬೇಡಿಕೆಯೂ ಆಗಿದೆ. ಹಾಗೆಯೇ ಮಾನ್ಯ ದೆ ಶ್‌ಮುಖ್‌ರವರಿಗೆ ಸಂಬಂಧಪಟ್ಟಂತಹ ಇಲಾಖೆಯ ಬೇಡಿಕೆಯನ್ನು ಇದರಲ್ಲಿ ಸೇರಿಸಿದ್ದಾರೆ. ಅದರ ಮೇಲೆಯೂ ಮಾತನಾಡಬೇಕಾಗುತ್ತದೆ ಒಟ್ಟಿನಲ್ಲಿ ಇಲ್ಲಿ ಮಾತನಾಡುವುದು ಸ್ವಲ್ಪ ಹೆಚ್ಚು ಕಡಿಮೆ ಆಗುತ್ತದೆ ಯಾರು ಹೆಚ್ಚು ಮಾತನಾಡುತ್ತಾರೆ, ಯಾರು ಕಡಿಮೆ ಮಾತನಾಡುತ್ತಾರೆ. ಹುಚ್ಚಿಯ ಮದುವೆಯಲ್ಲಿ ಉಂಡವನು ಜಾಣ ಎಂದ ಹಾಗೆ ಆಗಿದೆ. ತಾವು ದಯವಿಟ್ಟು ಮುಗಿಸಿಬಿಡಿ ಎಂದು ಹೇಳುತ್ತೀರಿ. ವಿಷಯಕ್ಕೆ ಬರಲಾಗಿ, ರಾಜ್ಯದ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಮಾನ್ಯ ಹಿರಿಯ ಸದಸ್ಯರಾದ ಕೆ. ಹೆಚ್. ಪಾಟೀಲ್‌ರವರು ಬಹಳ ವಿಸ್ತಾರವಾಗಿ ಹೇಳಿದ್ದಾರೆ. ಅಧಿಕಾರಿಗಳ ನೀತಿ ಹೇಗಿರಬೇಕು ಎಂಬುದನ್ನು ಹೇಳಿದ್ದಾರೆ ಎಲ್ಲ ಅಧಿಕಾರಿಗಳು ಒಂದೇ ತರನಾಗಿ ಇರುತ್ತಾರೆ ಎಂದು ನಾನು ಹೇಳುವುದಿಲ್ಲ. ಒಳ್ಳೆಯವರೂ ಇದ್ದಾರೆ. ಕೆಟ್ಟವರೂ ಇದ್ದಾರೆ. ನಮ್ಮ ಜಿಲ್ಲೆಯಲ್ಲಿ ಕೂಡಾ ತುಂಬಾ ಒಳ್ಳೆಯ ಡಿ.ಸಿ.ಯವರು ಇದ್ದರು. ಅನೇಕ ಜನರು ಈಗ ಸದನದಲ್ಲಿ ಇದ್ದಾರೆ. ಅಧಿಕಾರಿಗಳು ಜನರ ಸಮಸ್ಯೆಗಳ ಬಗ್ಗೆ ಕಳಕಳಿಯನ್ನು ಇಟ್ಟುಕೊಂಡು, ಜನರೊಂದಿಗೆ ಪರಿಸರದೊಂದಿಗೆ ಹೊಂದಿಕೊಂಡು, ದೇಶದ ಪರಿಸ್ಥಿತಿಗೆ ಹೊಂದಿಕೊಂಡು ತಮ್ಮ ಕರ್ತವ್ಯವನ್ನು ನಿರ್ವಹಣೆ ಮಾಡುವ ಮನೋಭಾವನೆ ಅವರಲ್ಲಿ ಇರಬೇಕು. ಏಕೆಂದರೆ ನಾವು ಇಲ್ಲಿ ಕಾನೂನನ್ನು ಪಾಸ್ ಮಾಡುತ್ತೇವೆ ಆದರೆ ಅದನ್ನು ಜಾರಿಯಲ್ಲಿ ತರುವಂತಹ ಅಧಿಕಾರವನ್ನು ಅಧಿಕಾರಿಗಳ ಕೈಯಲ್ಲಿ ಕೊಟ್ಟಿದ್ದೇವೆ. ಇವರು ನಾವು ತಯಾರಿಸಿದ ಕಾನೂನು ಇಂಪ್ಲಿಮೆಂಟ್ ಮಾಡಬೇಕಾದವರು ಜಿಲ್ಲಾ ಮಟ್ಟದಲ್ಲಿ ಇರತಕ್ಕಂತಹ ಅಧಿಕಾರಿಗಳು ವ್ಯವಸ್ಥಿತವಾಗಿ ಕೆಲಸ ಮಾಡಿದಾಗ ಮತ್ತು ಜನರ ಕಳಕಳಿಯನ್ನು ಅರಿತಾಗ ಮಾತ್ರ ಸರಕಾರದ ಕಾನೂನಿನ ಸಾಫಲ್ಯತೆ ಸಾಧ್ಯವಾಗುತ್ತದೆ ಅನೇಕ ಜನ ಅಧಿಕಾರಿಗಳಲ್ಲಿ ಕೂಡಾ ತಕರಾರು ಇದೆ. ಇವರಲ್ಲಿ ಕೂಡಾ ತಾರತಮ್ಯ, ವ್ಯತ್ಯಾಸ, ಮುಂತಾಗಿ ಇವೆ. ಐ.ಎ.ಎಸ್.ನವರು ಒಂದು ರೀತಿಯಲ್ಲಿ ಇದ್ದರೆ, ಕೆ.ಎ.ಎಸ್.ನವರು ಒಂದು ರೀತಿಯಲ್ಲಿ ಇರುತ್ತಾರೆ. ಈ ವ್ಯತ್ಯಾಸ ಮತ್ತು ತಾರತಮ್ಯಗಳ ಬಗ್ಗೆ ಇವರಲ್ಲಿ ಭಿನ್ನಾಭಿಪ್ರಾಯಗಳು ಇವೆ. ಇವರು ತಮ್ಮ ಸಂಘ-ಸಂಘಟನೆಗಳ ಮೂಲಕ ತಮ್ಮ ಕುಂದು ಕೊರತೆಗಳನ್ನು ಸರಕಾರದ ಗಮನಕ್ಕೆ ತಂದಿದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು ೧೪೬ ಜನ ಐ.ಎ.ಎಸ್. ಅಧಿಕಾರಿಗಳು ಇದ್ದಾರೆ. ಇವರುಗಳಿಗೆ ನಾವು ಬಹಳಷ್ಟು ಸವಲತ್ತುಗಳನ್ನು ಕೊಟ್ಟಿದೇವೆ. ಆದರೆ ಈ ಪ್ರಜಾಪ್ರಭುತ್ವದ ಒಂದು ಚೌಕಟ್ಟಿನಲ್ಲಿ ಅಧಿಕಾರಿಗಳು ಸಮರ್ಪಕವಾಗಿ ತಮ್ಮ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ ಹಾಗೆಯೇ ಪ್ರಜಾಪ್ರತಿನಿಧಿಗಳಿಗೆ ಈ ಅಧಿಕಾರಿಗಳು ಸೂಕ್ತ ಗೌರವ ಕೊಡುವುದನ್ನು ಬಹಳಷ್ಟು ಕಡೆಗಳಲ್ಲಿ ನಾನು ಕಾಣಲಿಲ್ಲ, ತಮ್ಮ ಕ್ಷೇತ್ರಗಳ ಜನರ ಕುಂದುಕೊರತೆಗಳ ಬಗ್ಗೆ ಸಂಬಂಧಪಟ್ಟ ಅಧಿಕಾರಿಯ ಕಡೆಗೆ ನಾವು ಹೋಗಬೇಕಾಗುತ್ತದೆ. ಜನರು ನಮ್ಮ ಕಡೆಗೆ ಬಂದು ತಮ್ಮ ಸಂಕಷ್ಟಗಳನ್ನು ಹೇಳಿಕೊಳ್ಳುತ್ತಾರೆ ಅದನ್ನು ನಾವು ಅಧಿಕಾರಿಗಳ ಹತ್ತಿರ ತೆಗೆದುಕೊಂಡು ಹೋಗಿ ನಿವಾರಿಸಲು ಯತ್ನಪಡಬೇಕಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಅಲ್ಲಿದ್ದಂತಹ ಅಧಿಕಾರಿಗಳು ನೀವು ಶಾಸಕರು. ನಮ್ಮ ಆಡಳಿತದಲ್ಲಿ ನೀವು ಕೈಹಾಕಬೇಡಿ ಎಂದು ಹೇಳುತ್ತಾರೆ. ಹೀಗೆ ಅವರು ಜನರ ಸಮಸ್ಯೆಗಳ ಬಗ್ಗೆ ನಮಗೆ ಹೇಳಿದರೆ ನಮ್ಮ ಕ್ಷೇತ್ರದ ಕೆಲಸಗಳನ್ನು ನಾವು ಹೇಗೆ ಮಾಡುವುದು ? ಮಾನ್ಯ ಮಂತ್ರಿಯವರು ಈ ಬಗ್ಗೆ ಸ್ವಲ್ಪ ಗಮನ ಹರಿಸಿ, ಅಧಿಕಾರಿಗಳು ಶಾಸಕರು ಬಗ್ಗೆ ಸ್ವಲ್ಪ ಗೌರವವನ್ನು ಹೊಂದಿರುವಂತೆ ಮಾಡಬೇಕು. ಜಿಲ್ಲಾಧಿಕಾರಿಯವರು ನಮ್ಮ ಸಮಸ್ಯೆಗಳನ್ನು ಕೇಳಿಕೊಂಡು ನಮ್ಮ ಬಗ್ಗೆ ಆಡಳಿತ ವಿಚಾರದಲ್ಲಿ ಕೈಹಾಕಬೇಡಿ ಎಂದು ಹೇಳಿದರೆ ನಾವು ಹೇಗೆ ಕೆಲಸ ಮಾಡಲು ಸಾಧ್ಯವಾಗುತ್ತದೆ ? ಯಾವ ಅಧಿಕಾರಿಯವರೇ ಆಗಲೀ, ತಹಸಿಲ್ದಾರ್‌ರವರೆ ಆಗಿರಲಿ, ಬಿ.ಡಿ.ಓರವರೇ ಆಗಿರಲಿ, ಪೋಲೀಸ್ ಆಫೀಸರ್‌ರವರೇ ಆಗಿರಲಿ, ಒಂದೊಂದು ವೇಳೆ, ನಾವು ಯಾವ ಸಮಾಜದಲ್ಲಿ ಇದ್ದೇವೆಯೋ ಆ ಕಾನೂನಿನ ಚೌಕಟ್ಟನ್ನು ದಾಟಿ ಹೋಗಬೇಕಾದ ಪ್ರಸಂಗವೂ ಬರುತ್ತದೆ.

ಯಾವುದೋ ಒಂದು ಸಣ್ಣ ಅಪರಾಧ, ನಿರ್ಲಕ್ಷಿಸುವಂತಹ ಅಪರಾಧ ಮಾಡಿದ ಒಬ್ಬನನ್ನು ಬಿಟ್ಟುಬಿಡಿ ಎಂದರೂ ಕೂಡಾ ಅಧಿಕಾರಿಗಳು ಕಾನೂನನ್ನು ತೋರಿಸಿ, ಅದು ಹೀಗೆ ಇದೆ, ಆ ಕಾರಣಕ್ಕಾಗಿ ಬಿಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಸಣ್ಣಪುಟ್ಟ ಅಪರಾಧಿಗಳ ಮೇಲೆ ಕೇಸ್ ಹಾಕುವ ನಮ್ಮ ಪೋಲೀಸ್ ವ್ಯವಸ್ಥೆ, ಈ ಮೂಲಕ ನಾವು ಕೆಲಸ ಮಾಡುತ್ತಿದ್ದೇವೆ ಎಂಬುದನ್ನು ತೋರಿಸುತ್ತಾರೆ. ಆದರೆ ದೊಡ್ಡ ದೊಡ್ಡ ಅಪರಾಧಿಗಳನ್ನು ಹಿಡಿಯುವುದರಲ್ಲಿ ಇವರು ತಮ್ಮ ನೈಪುಣ್ಯತೆಯನ್ನು ತೋರುವುದು ಕಡಿಮೆ. ಉದಾಹರಣೆಗೆ ಮಟ್ಕಾ ಆಡುವವರ ಮೇಲೆ, ಚಿಟ್ ಏಜಂಟರ ಮೇಲೆ ಕೇಸ್ ಹಾಕುವ ಇಲಾಖೆ ಅದನ್ನು ನಡೆಸುವ ಮಾಲೀಕರುಗಳನ್ನು ಹಾಗೆಯೇ ಬಿಟ್ಟಿರುತ್ತದೆ. ಇದರಿಂದ ಜನಸಾಮಾನ್ಯರಲ್ಲಿ ಸರಕಾರದ ಬಗ್ಗೆ ಒಂದು ಕೆಟ್ಟ ಅಭಿಪ್ರಾಯವನ್ನು ಮೂಡಿಸುತ್ತದೆ ಅಲ್ಲದೆ ಸರಕಾರಕ್ಕೆ ಕಳಂಕ ತರುವಂಥಾದ್ದಾಗಿರುತ್ತದೆ. ಆದುದರಿಂದ ಇಂತಹ ಆಡಳಿತ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ನಡೆಸಿಕೊಂಡು ಹೋಗುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮೈನ್ಸ್ ಮತ್ತು ಜಿಯಾಲಜಿ ಬಗ್ಗೆ ಹೇಳುವುದಾದರೆ, ಈ ಖಾತೆಗೆ ಸಂಬಧಂಪಟ್ಟ ಹಾಗೆ ಒಂದು ವರದಿಯನ್ನು ಇಲ್ಲಿ ಕೊಟ್ಟಿದ್ದಾರೆ. ಸುಮಾರು ಎಂಟು ಪುಟಗಳ ವರದಿ ಇದು. ಈ ಎಂಟು ಪುಟಗಳಲ್ಲಿ ಏನು ವರದಿಯನ್ನು ಕೊಡುವುದಕ್ಕೆ ಸಾಧ್ಯ ? ಇದು ಒಂದು ಮುಖ್ಯವಾದಂತಹ ಇಲಾಖೆ, ಇದಕ್ಕೆ ತನ್ನದೆ ಆದ ಕಾರ್ಯಕ್ರಮಗಳು ಇವೆ. ಇಷ್ಟು ಸಂಕ್ಷಿಪ್ತವಾಗಿ ವರದಿಯನ್ನು ಕೊಡುವುದು ಸರಿಯಲ್ಲ. ಸವಿವರವಾದಂಥಹ ವರದಿಯನ್ನು ಇನ್ನು ಮುಂದಾದರೂ ಕೊಡುವಂತೆ ಮಾಡಬೇಕು. ಕೆಲವೊಂದು ಬೋರ್ಡ್‌ನವರು, ಖಾತೆಯವರು, ಸವಿಸ್ತಾರವಾದ ವರದಿಯನ್ನು ಕೊಟ್ಟಿದ್ದಾರೆ, ಕೆ.ಎಸ್.ಆರ್.ಟಿ.ಸಿ. ವಿದ್ಯುಚ್ಛಕ್ತಿ ಇಲಾಖೆ ಮುಂತಾದ ಶಾಖೆಯವರು ಒಳ್ಳೆಯ ವಿವರಗಳುಳ್ಳ ವರದಿಯನ್ನು ಕೊಟ್ಟಿದ್ದಾರೆ. ಮೈನ್ಸ್ ಏಂಡ್ ಜಿಯಾಲಜಿಯವರು ಮಾತ್ರ ಹೀಗೆ ಏಕೆ ಮಾಡಿದ್ದಾರೆ, ನಾವು ಚರ್ಚೆಯಲ್ಲಿ ಭಾಗವಹಿಸುವಾಗ ವರದಿಯಲ್ಲಿನ ಅಂಕಿಅಂಶಗಳನ್ನು ಕೂಲಂಕುಷವಾಗಿ ಓದಿಕೊಂಡು ಚರ್ಚೆಯಲ್ಲಿ ಭಾಗವಹಿಸುತ್ತೇವೆ. ಆದಕಾರಣ ವಿವರವಾದ ವರದಿಯನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ ಇವರ ಆಡಳಿತದ ಬಗ್ಗೆ ಕೆಲವು ದೂರುಗಳು ಇವೆ. ಈಗ ಮೈಸೂರು ಮಿನರಲ್ಸ್ ಲಿಮಿಟೆಡ್‌ನಲ್ಲಿರುವಂತಹ ಒಬ್ಬ ಅಧಿಕಾರಿಯ ಬಗ್ಗೆ ಸಾಕಷ್ಟು ದೂರುಗಳು ಇವೆ. ಆತನ ಹೆಸರನ್ನು ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆ ಅಧಿಕಾರಿ ಈ ಮೈಸೂರು ಮಿನರಲ್ಸ್ ಲಿಮಿಟೆಡ್‌ನಲ್ಲಿ ಟೆಕ್ನಿಕಲ್ ಡೈರೆಕ್ಟರ್ ಆಗಿದ್ದಾರೆ. ಇವರು ೧೯೭೭ನೇ ಇಸವಿಯಲ್ಲಿ ಕೆಲಸಕ್ಕೆ ಸೇರಿದರು. ಇವತ್ತು ಇವರು ಒಬ್ಬ ಟೆಕ್ನಿಕಲ್ ಡೈರೆಕ್ಟರ್ ಆಗಿದ್ದಾರೆ. ಇವರು ಯಾವ ರೀತಿಯಲ್ಲಿ ಟೆಕ್ನಿಕಲ್ ಡೈರೆಕ್ಟರ್ ಆಗಿದ್ದಾರೆಂದು ನಮಗೆ ಯಾವ ರೀತಿ ವರದಿಗಳು ಸಿಗುತ್ತವೆಂದರೆ, ಈ ಡಿಪಾರ್ಟ್‌ಮೆಂಟಿನಲ್ಲಿ ಯಾರಿಗೆ ಅನ್ಯಾಯವಾಗಿರುತ್ತದೆಯೋ ಯಾರಿಗೆ ಕಾನೂನು ಚೌಕಟ್ಟಿನಲ್ಲಿ ಸಿಗಬೇಕಾದಂಥ ಸೌಲಭ್ಯಗಳು ಸಿಗುವುದಿಲ್ಲವೋ ಮತ್ತು ಎಲ್ಲಿ ಪಕ್ಷಪಾತ ನಡೆದಿರುತ್ತದೆಯೋ ಅಂತಹ ಕಡೆಗಳಿಂದ ನಮಗೆ ವರದಿಗಳನ್ನು ತಂದು ಕೊಟ್ಟು ತಮ್ಮ ಕಷ್ಟಸುಖಗಳನ್ನು ಹೇಳಿಕೊಳ್ಳುತ್ತಾರೆ. ಆದರೆ ತಮಗೆ ಆ ವರದಿಯನ್ನು ಅವರು ಕೊಟ್ಟರೆ ಅವರಿಗೆ ಎಲ್ಲಿ ಕ್ರಮ ತೆಗೆದುಕೊಳ್ಳುತ್ತಾರೋ ಎನ್ನುವ ಅಂಜಿಕೆಯಿಂದ ಅವರು ನಿಮಗೆ ಆ ಮಾಹಿತಿಗಳನ್ನು ಕೊಡುವುದಿಲ್ಲ. ಆ ಟೆಕ್ನಿಕಲ್ ಡೈರೆಕ್ಟರ್ ಸುಮಾರು ೫೦–೬೦ ಲಕ್ಷ ರೂಪಾಯಿಗಳ ಆಸ್ತಿಪಾಸ್ತಿಗಳನ್ನು ಮಾಡಿದ್ದಾರೆ. ಆತ ಯಾವ ರೀತಿ ಮಾಡಿದ್ದಾನೆ ಎನ್ನುವುದಕ್ಕೆ ನನ್ನ ಬಳಿ ಡಿಟೇಲ್ ರಿಪೋರ್ಟ್ ಇದೆ. ಆ ವರದಿಯನ್ನು ತಮಗೆ ಬೇಕಾದರೂ ನಾನು ಕಳುಹಿಸಿಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳಿಗೂ ಬೇಕಾದರೂ ಕಳುಹಿಸಿಕೊಡುತ್ತೇನೆ. ಆತನಿಗೆ ಸುಮಾರು ೫೦-೬೦ ಲಕ್ಷ ರೂಪಾಯಿಗಳ ಆಸ್ತಿ ಇದೆ. ಅದರ ಎಲ್ಲಾ ವಿವರಗಳನ್ನು ಕೊಟ್ಟಿದ್ದಾರೆ. They have given a beautiful letter with facts and figures. Everything they have submitted to us. ಆದ್ದರಿಂದ ತಾವು ದಯಮಾಡಿ ಇದರ ಬಗ್ಗೆ ಒಂದು ಎನ್‌ಕ್ವೈರಿ ಕಮಿಷನ್ ಮಾಡಬೇಕು. ಈ ರೀತಿಯಲ್ಲಿ ಇವತ್ತು ರಾಜ್ಯದ ಆಡಳಿತ ನಡೆಯುತ್ತಿದೆ. ಆತ ಬಹಳ ಕ್ಲಿಯರ್ ಕಟ್ ಆಗಿ ನಮಗೆ ದಾಖಲೆಗಳನ್ನು ಕೊಟ್ಟಿದ್ದಾನೆ. ಆದ್ದರಿಂದ ದಯೆಮಾಡಿ ಇದರಲ್ಲಿ ನಡೆದಿರತಕ್ಕಂಥ ಅವ್ಯವಹಾರವನ್ನು ತಿಳಿದು ತಮಗೆ ವರದಿಯನ್ನು ಕೊಡುವುದಕ್ಕಾಗಿ ಒಂದು ಸದನದ ಸಮಿತಿಯನ್ನಾದರೂ ತಾವು ರಚನೆ ಮಾಡಬೇಕೆಂದು ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಬಗ್ಗೆ ತಾವು ಉತ್ತರ ಕೊಡುವಾಗ ಸ್ಪಷ್ಟವಾಗಿ ಹೇಳಬೇಕು. ಇನ್ನು

ನಮ್ಮ ರಾಜ್ಯದಲ್ಲಿ ಸಾಕಷ್ಟು ಲೈಮ್‌ಸ್ಟೋನ್ ಇದೆ. ಸಿಮೆಂಟ್ ಇಂಡಸ್ಟ್ರಿಗಳು ಇದರಿಂದ ಚೆನ್ನಾಗಿ ನಡೆಯುತ್ತಿವೆ. ನಮ್ಮ ರಾಜ್ಯದಲ್ಲಿ ಇನ್ನು ಇತರೆ ಖನಿಜ ಸಂಪತ್ತು ಇದೆ. ಬಹಳ ಮುಖ್ಯವಾದಂಥ ಖನಿಜ ಸಂಪತ್ತು ಎಂದರೆ ಗ್ರ್ಯಾನೈಟ್. ಇದರಲ್ಲಿ ಕಪ್ಪು ಗ್ರ್ಯಾನೈಟ್, ಬಿಳಿ ಗ್ರ್ಯಾನೈಟ್, ಕೆಂಪು ಗ್ರ್ಯಾನೈಟ್ ಮತ್ತು ಶಹಬಾದ್ ಲೈಮ್‌ಸ್ಟೋನ್ ಬಹಳ ಮುಖ್ಯವಾದದು. ಇವತ್ತು ಕೆಲವು ಕಡೆಗಳಲ್ಲಿ ಈ ಮಿನರಲ್ ವೆಲ್ತ್ ಅನ್ನು ಎಕ್ಸ್‌ಪೋರ್ಟ್ ಮಾಡಿದ್ದಾರೆ. ಇವುಗಳನ್ನು ಮದ್ರಾಸ್‌ನವರಿಗೆ ಲೀಜ್‌ಗೆ ಕೊಟ್ಟಿದ್ದಾರೆ. ಈ ಲ್ಯಾಂಡ್‌ಅನ್ನು ನಮ್ಮ ರಾಜ್ಯದ ಜನ ಉಪಯೋಗಿಸಿಕೊಳ್ಳುತ್ತಿಲ್ಲ. ಮದ್ರಾಸಿನಿಂದ ಬಂದು ನಮ್ಮ ರಾಜ್ಯದ ಗ್ರ್ಯಾನೈಟ್‌ಗಳನ್ನು ಅವರ ರಾಜ್ಯಕ್ಕೆ ತೆಗೆದುಕೊಂಡು ಹೋಗುತ್ತಿದ್ದಾರೆ. ಆ ಬಗ್ಗೆ ನನ್ನ ಬಳಿ ರಿಪೋರ್ಟ್ ಇದೆ. ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯ ಅಧಿಕಾರಿಗಳು ತಮ್ಮ ಸಂಬಂಧಿಗಳಿಗೆ ಲೀಜ್ ಕೊಟ್ಟಿದ್ದಾರೆ. ಅವರೇ ಇವತ್ತಿನ ದಿವಸ ಕೆಲವು ಗಣಿಗಳನ್ನು ನಡೆಸುತ್ತಿದ್ದಾರೆ. ಇವತ್ತು ಸಾವಿರಾರು ಎಕರೆ ಜಮೀನುಗಳು ಸರ್ಕಾರದ ಜಾಗವನ್ನು ಇವರು ಬೇನಾಮಿ ಟ್ರಾನ್‌ಜಾಕ್ಷನ್ ಮಾಡಿದ್ದಾರೆ. ಅಧಿಕಾರಿಗಳ ಸಂಬಂಧೀಕರಿಗೆ ಕೊಟ್ಟುಕೊಂಡಿದ್ದಾರೆ. ಇದನ್ನು ಮಾನ್ಯ ಮಂತ್ರಿಗಳು ಚೆಕ್ ಮಾಡಬೇಕು. ನನಗನಿಸಿದ ಮಟ್ಟಿಗೆ ಈ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆ ಏನಿದೆ ಇದರಲ್ಲಿ ಪ್ರತಿಯೊಂದನ್ನೂ ಲೀಜ್‌ಗೆ ಕೊಟ್ಟೇ ನಡೆಸುತ್ತಿದ್ದಾರೆ. ಇದರಿಂದ ಈ ಇಲಾಖೆಯ ಅಧಿಕಾರಿಗಳಿಗೆ ರೊಕ್ಕ ಸಿಗುತ್ತದೆ. ನಮ್ಮ ಶಹಬಾದ್‌ನಲ್ಲಿ ಕೊಟ್ಟಿದ್ದಂತಹ ಒಂದು ಲೀಜ್ ಅನ್ನು ವಾಪಸ್ ತೆಗೆದುಕೊಳ್ಳುವುದಕ್ಕೆ ಅಲ್ಲಿನ ಒಬ್ಬ ಜಾಯಿಂಟ್ ಡೈರೆಕ್ಟರ್ ಬಳಿ ಹೋದೆ. ಆತ ನನ್ನನ್ನು ಪ್ರಶ್ನೆ ಮಾಡಿದ ಶಾಸಕರಾದವರು ತಾವು ಇಂತಹ ಕೇಸ್‌ಗಳಿಗೆ ಏಕೆ ಕೈ ಹಾಕುತ್ತೀರಿ ? ಎಂದು ಕೇಳಿದ. ಅದಕ್ಕೆ ನಾನು ಹೇಳಿದೆ ತಾವು ಅಪ್ರತ್ಯಕ್ಷವಾಗಿ ಲಂಚಗುಳಿತನಕ್ಕೆ ಕೈ ಹಾಕುತ್ತಿದ್ದೀರಿ ಆಗ ಜನ ನಮ್ಮ ಬಳಿ ಬರುತ್ತಾರೆ. ಆಗ ನಾವು ನಿಮ್ಮ ಬಳಿ ಬರಲೇ ಬೇಕಾಗುತ್ತದೆ ಎಂದು ಹೇಳಿದೆ. ಇವತ್ತು ಈ ರೀತಿಯ ಒಂದು ವ್ಯವಸ್ಥೆ ಎಲ್ಲಾ ಕಡೆ ನಡೆಯುತ್ತಿದೆ. ಈ ರೀತಿಯಾದರೆ ನಮ್ಮ ರಾಜ್ಯದ ಖನಿಜ ಸಂಪತ್ತು ಯಾವ ರೀತಿ ವೃದ್ಧಿಯಾಗಿ ನಮಗೆ ಆದಾಯ ಬರುತ್ತದೆ ? ಮಾನ್ಯ ಸದಸ್ಯರಾದಂಥ ಶ್ರೀಮಾನ್ ವೀರಪ್ಪ ಮೊಯ್ಲಿಯವರು ತಮ್ಮ ಭಾಷಣ ಮಾಡುವಂತಹ ಕಾಲದಲ್ಲಿ ಒಂದು ಮಾತು ಹೇಳಿದರು ಅದೇನೆಂದರೆ ನಮ್ಮ ರಾಜ್ಯದಲ್ಲಿ ಮ್ಯಾಂಗನೀಸ್ ದೊರೆಯುತ್ತದೆ ಅದನ್ನು ಉಳಿಸಿಕೊಳ್ಳುವುದಕ್ಕೆ ನಮ್ಮ ಬಳಿ ಈಗ ಹಣವಿಲ್ಲದೆ ಇರಬಹುದು. ಈ ಒಂದು ಸಂಪತ್ತನ್ನು ಉಳಿಸಿಕೊಳ್ಳಬೇಕಾದರೆ ನಮಗೆ ಕೋಟ್ಯಂತರ ರೂಪಾಯಿಗಳು ಬೇಕಾಗುತ್ತದೆ ಆದ್ದರಿಂದ ಸ್ವಲ್ಪ ಸ್ವಲ್ಪ ಹಣ ಬಡ್ಜೆಟ್‌ನಲ್ಲಿ ತೊಡಗಿಸಿಟ್ಟು ಆ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ನಿಜವಾಗಿಯೂ ನಾನೂ ಕೂಡ ಒಪ್ಪಿಕೊಳ್ಳುತ್ತೇನೆ, ಮತ್ತು ಮೈಸೂರು ಜಿಯಾಲಜಿಕಲ್ ಡಿಪಾರ್ಟ್‌ಮೆಂಟಿನಲ್ಲಿ ಇದ್ದಂತಹ ಒಬ್ಬ ನಿವೃತ್ತ ಡೈರೆಕ್ಟರ್ ಒಂದು ರೀಸರ್ಚ್ ಮಾಡಿ ನಮ್ಮ ರಾಜ್ಯದಲ್ಲಿ ಚಿನ್ನ ಎಲ್ಲೆಲ್ಲ ಸಿಗುತ್ತದೆ ಎಂದು ಹೇಳಿದ್ದಾರೆ. ಅವರ ಒಂದು ವರದಿ ಪ್ರಕಾರ ನಾನು ಇಲ್ಲಿ ಹೇಳುವುದಾದರೆ ಹಟ್ಟಿ ಗೋಲ್ಡ್ ಮೈನ್ಸ್‌ನಲ್ಲಿ ಮತ್ತು ಕೋಲಾರ ಗೋಲ್ಡ್ ಮೈನ್ಸ್‌ನಲ್ಲಿ ಇನ್ನಿತರೆ ಎಷ್ಟೆಷ್ಟು ಚಿನ್ನ ಸಿಗುತ್ತದೆ ಎನ್ನುವ ವಿವರ ಸಿಗುತ್ತದೆ. ಅದನ್ನು ನಾನು ಇಲ್ಲಿ ಓದಿ ಹೇಳುತ್ತಾ ಹೋದರೆ ಸಮಯ ಸಾಕಾಗುವುದಿಲ್ಲ. ಆದರೆ ನಾವು ಇವತ್ತು ಸರಿಯಾದ ಪ್ರಮಾಣದಲ್ಲಿ ಡ್ರಿಲ್ ಮಾಡುತ್ತಿಲ್ಲ. ಇನ್ನು ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ ನಾವು ಕನಸು ಕಾಣಬೇಕಾಗಿದೆ, ಈ ವಿಜಯನಗರದ ಉಕ್ಕಿನ ಕಾರ್ಖಾನೆ ನಮ್ಮ ರಾಜ್ಯದಲ್ಲಿ ಸ್ಥಾಪನೆಯಾದರೆ ಆ ಭಾಗದ ಜನರಿಗಾದರೂ ಉದ್ಯೋಗ ಸಿಗುತ್ತದೆ, ದಯಮಾಡಿ ಈ ಬಗ್ಗೆ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕು. ಇನ್ನು ಕೈಗಾ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರಾದಂಥ ಶ್ರೀಮಾನ್ ಅಜ್ಜಿಬಾಳ ಹೆಗಡೆಯವರು ಪ್ರಸ್ತಾಪ ಮಾಡಿದ್ದಾರೆ. ಈ ಯೋಜನೆ ಸುಮಾರು ೬೩೦ ಕೋಟಿ ರೂಪಾಯಿಗಳ ಯೋಜನೆ. ಈ ಕೈಗಾ ಮುಗಿದರೆ ಮಾತ್ರ ನಮಗೆ ವಿಜಯನಗರದ ಉಕ್ಕಿನ ಕಾರ್ಖಾನೆ ಬರುವುದು ಇಲ್ಲದಿದ್ದರೆ ಆಗುವುದಿಲ್ಲ. ಈ ಉಕ್ಕಿನ ಕಾರ್ಖಾನೆ ಬಂದರೆ ಸುಮಾರು ೫ ಸಾವಿರ ಜನರಿಗೆ ಉದ್ಯೋಗ ಸಿಗುತ್ತದೆ. ಆದ್ದರಿಂದ ಆದಷ್ಟು ಬೇಗ ತಾವು ಈ ಕೈಗಾ ಯೋಜನೆ ಮುಗಿಸಿ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ. ಇನ್ನು ಕೆ.ಇ.ಬಿ. ಬಗ್ಗೆ, ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಕೆ.ಇ.ಬಿ.ರವರು, ಈ ಕನ್‌ಸ್ಯೂಮರ್ಸ್ ಸಮಸ್ಯೆ ಬಗ್ಗೆ, ಒಂದು ಸಾವಿರ ಮೀಟರ್‌ಗೆ ಒಬ್ಬ ಮೀಟರ್ ರೀಡರ್ ಎಂದು ಮಾಡಿರುತ್ತಾರೆ, ಈತ ೬ ತಿಂಗಳ ನಂತರ ಮೀಟರ್ ರೀಡಿಂಗ್‌ಗೆ ಬರುತ್ತಾನೆ. ಇವರು ಹೆಚ್ಚು ಮೀಟರ್ ಓಡಿದ್ದರೂ, ಕಡಿಮೆ ಎಂದು ತೋರಿಸುತ್ತಾರೆ. ಇಲ್ಲಿ ಕನ್‌ಸ್ಯೂಮರ್‌ಗೂ ಇವರಿಗೂ ಒಂದು ರೀತಿಯ ಒಪ್ಪಂದವಾಗುತ್ತದೆ.

SRI RAMESH KUMAR.—Why do the members disturb him so often.

ಶ್ರೀ ಆರ್. ವೆಂಕಟರಾಮಯ್ಯ.—ಈಗಲೂ ನಾನು ಕೇಳಿಕೊಳ್ಳುತ್ತಿದ್ದೇನೆ, ಎರ್ರಿಂಗ್ ಆಫೀಸರ್ಸ್ ಏನಿದ್ದಾರೆ ಅಂತಹವರ ಮೇಲೆ ತಕ್ಷಣವೇ ೨೮೫ ರೂಲ್ ಅಪ್ಲೈ ಮಾಡಿ ಮನೆಗೆ ಕಳುಹಿಸಿ. ಇನ್ ಎಫಿಸಿಯೆಂಟ್ ಆಫೀಸರ್ಸ್ ನೂರಾರು ಜನ ಇದ್ದಾರೆ. ಕೆ.ಸಿ.ಎಸ್.ಆರ್. ರೂಲ್ ೨೮೫ ಅಪ್ಲೈ ಮಾಡಿ ಮನೆಗೆ ಕಳುಹಿಸಿ. ನಮ್ಮ ಸರ್ಕಾರದವರು ಲಂಚ ಕೋರ ಅಧಿಕಾರಿಗಳು ಏನಿದ್ದಾರೆ ಅವರನ್ನು ಎಷ್ಟು ಜನ ಹಿಡಿದಿದ್ದೀರಿ? ರೂಲ್ ೨೮೫ ಅನ್ನು ಎಷ್ಟು ಜನರ ಮೇಲೆ ಅಪ್ಲೈ ಮಾಡಿದ್ದೀರಿ?

ಅಧ್ಯಕ್ಷರು.—ತಾವು ಹೇಳುವ ರೀತಿ ಏನಿದೆ ಅದನ್ನು ಜಿದ್ದು ಎಂದು ಹೇಳುತ್ತಾರೆ, ತಾವು ಜಿದ್ದು ಕಟ್ಟುವುದು ಬೇಡ. ಸಲಹೆ ಕೊಡಿ.

ಶ್ರೀ ಆರ್. ವೆಂಕಟರಾಮಯ್ಯ.—ನನಗೆ ಗೊತ್ತು, ನೀವು ಹಿಡಿಯಲಿಕ್ಕೆ ಹೋದರೆ ಶೇಕಡ ೭೫ರಷ್ಟು ಅಧಿಕಾರಿಗಳು ಸಿಗುತ್ತಾರೆ. ಯೂಸ್‌ಲೆಸ್ ಫೆಲೋಸ್, ಕರಪ್ಷನ್ ಫೆಲೋಸ್ ಇನ್ ಎಫಿಸಿಯೆಂಟ್ ಫೆಲೋಸ್ ಸಿಗುತ್ತಾರೆ. ಇಂತಹ ಮಹಾನುಭಾವರು ಜಾಸ್ತಿ ಇದ್ದಾರೆ. ತಿಂಗಳಿಗೆ ೨೦–೨೫ ಜನಗಳನ್ನು ಮನೆಗೆ ಕಳುಹಿಸುವಂತಹ ಕೆಲಸ ಮಾಡಿದರೆ ಅಡ್ಮಿನಿಸ್ಟ್ರೇಷನ್‌ನಲ್ಲಿ ಎಫಿಸಿಯೆನ್ಸಿ ಬರುತ್ತದೆ. ಪ್ರೂನಿಂಗ್ ಬರುತ್ತದೆ. ೩೧೧ ಏನಿದೆ ಅದನ್ನು ನಾನು ಒಪ್ಪುವುದಿಲ್ಲ. ಇದರ ಬಗ್ಗೆ ಪಶ್ಚಿಮ ಬಂಗಾಳ ಸರ್ಕಾರ ಕೂಡ ಸ್ಪಷ್ಟವಾಗಿ ಹೇಳಿದೆ. ಯಾವುದೇ ನೋಟೀಸ್ ಇಲ್ಲದೆ ತೆಗೆದು ಹಾಕಬಹುದೆಂದು ಸುಪ್ರೀಂ ಕೋರ್ಟಿನ ಆದೇಶ ಏನಿದೆ ಅದು ಇರಬೇಕಾಗಿಲ್ಲ. ಹಾಗೆಯೇ ಮನೆಗೆ ಕಳುಹಿಸುವುದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ೩೧೧ ಅನ್ನು ಅಪ್ಲೈ ಮಾಡುವುದು ಬೇಡ.

ಅಧ್ಯಕ್ಷರು.—ತಾವು ಒಂದೊಂದಾಗಿ ಹೇಳಿ.

ಶ್ರೀ ಆರ್. ವೆಂಕಟರಾಮಯ್ಯ.—ಲಂಚವನ್ನು ಕಂಟ್ರೋಲ್ ಮಾಡಬೇಕು. ಲಂಚವನ್ನು ಕಂಟ್ರೋಲ್ ಮಾಡುವುದು ಹೇಗೆಂದರೆ ಅದರ ಬಗ್ಗೆ ಒಂದು ಮಾತು ಹೇಳಿ ಮುಗಿಸುತ್ತೇನೆ. ಮಂತ್ರಿಗಳು ಸರಿಯಾಗಿದ್ದರೆ ಕಮಿಷನರ್ ಸರಿಯಾಗಿರುತ್ತಾರೆ. ಕಮಿಷನರ್ ಸರಿಯಾಗಿದ್ದರೆ ಡೆಪ್ಯುಟಿ ಕಮಿಷನರ್ ಸರಿಯಾಗಿರುತ್ತಾರೆ. ಡೆಪ್ಯುಟಿ ಕಮಿಷನರ್ ಮರ್ಯಾದೆಯಿಂದ ಇದ್ದರೆ ಅಸಿಸ್ಟೆಂಟ್ ಕಮಿಷನರ್ ಮರ್ಯಾದೆಯಿಂದ ಇರುತ್ತಾರೆ. ಹೀಗೆ ಒಂದೊಂದು ಮಟ್ಟದಲ್ಲೂ ಕೂಡ ಸರಿಯಾಗಿರಬೇಕು. ಅಸಿಸ್ಟೆಂಟ್ ಕಮಿಷನರ್ ತಹಶೀಲ್ದಾರ್ ಸರಿಯಾಗಿದ್ದರೆ, ರೆವಿನ್ಯು ಇನ್ಸ್‌ಪೆಕ್ಟರ್ ಸರಿಯಾಗಿರುತ್ತಾನೆ. ರೆವಿನ್ಯು ಇನ್ಸ್‌ಪೆಕ್ಟರ್ ಸರಿಯಿಲ್ಲದಿದ್ದರೆ ವಿಲೇಜ್ ಅಕೌಂಟೆಂಟ್ ಸರಿಯಾಗಿರುವುದಿಲ್ಲ. ಎಲ್ಲರೂ ಒಂದಾಗಿ ಬಿಟ್ಟು ಅವರ ಪಾಲು ಇಷ್ಟಿಷ್ಟು ಎಂದು ಫಿಕ್ಸ್ ಮಾಡಿಕೊಂಡಿರುತ್ತಾರೆ. ಇದು ಒಂದೇ ಡಿಪಾರ್ಟ್‌ಮೆಂಟ್‌ನಲ್ಲಿ ಅಲ್ಲ ಎಲ್ಲ ಡಿಪಾರ್ಟ್‌ಮೆಂಟ್‌ಗಳಲ್ಲೂ ಲಂಚಾವತಾರ ತಾಳಿದೆ. ಅದು ಯಾವ ಸ್ಟೇಜಿಗೆ ಹೋಗಿದೆ ಎಂದರೆ ರಾಜ್ಯದ ಬೊಕ್ಕಸದಲ್ಲಿ ನೌಕರರ ಸಂಬಳ ಸಾರಿಗೆ ಭತ್ಯಕ್ಕಾಗಿ ೩೩ ಪರ್ಸೆಂಟ್ ಹೋಗುತ್ತದೆ. ೨೦ ಪರ್ಸೆಂಟ್ ಲಂಚಕ್ಕೆ ಹೋಗುತ್ತದೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದನ್ನು ಕಂಟ್ರೋಲ್ ಮಾಡಬೇಕು.

ಇನ್ನು ಎಲೆಕ್ಷನ್ ಬಗ್ಗೆ ಹೇಳುವುದಾದರೆ ಒಂದು ವೇಳೆ ಎಲೆಕ್ಷನ್‌ನಲ್ಲಿ ನಾವು ಖರ್ಚುಮಾಡತಕ್ಕದ್ದನ್ನು ಲೆಕ್ಕಹಾಕಿದರೆ ನಾವು ವಿಪರೀತ ಖರ್ಚುಮಾಡಿದ್ದೇವೆ. ನಾವು ಕೊಡುವುದು ತಪ್ಪು ಲೆಕ್ಕ ಅದನ್ನು ಹೇಳಬೇಕಾಗಿಲ್ಲ. ಒಟ್ಟು ಒಬ್ಬರಿಗೆ ೨೫ ಸಾವಿರ ಎಂದು ಲೆಕ್ಕ ಹಾಕಿದರೂ ೫೬ ಲಕ್ಷ ಆಗುತ್ತದೆ. ಇದೇರೀತಿ ಪಾರ್ಲಿಮೆಂಟರಿ ಸದಸ್ಯರು ಕೊಟ್ಟರೆ ಅದೊಂದು ೭೫ ಲಕ್ಷ ಆಗುತ್ತದೆ. ಅದರ ಬಗ್ಗೆ ಒಂದು ಕಂಡೀಷನ್ ಹಾಕಬೇಕು. ಸಿಕ್ಕಾಪಟ್ಟೆ ಎಲೆಕ್ಷನ್‌ಗೆ ನಿಂತು ಠೇವಣಿ ಕಳೆದುಕೊಂಡಿದ್ದರೆ ಅಂತಹ ಎಲೆಕ್ಷನ್‌ಗೆ ನಿಂತುಕೊಳ್ಳಬಾರದೆಂದು ಅವರು ಡಿಸ್‌ಕ್ವಾಲಿಫೈ ಎಂದು ಮಾಡಿದರೆ ಎಲೆಕ್ಷನ್‌ನಲ್ಲಿ ಗೆಲ್ಲುವ ಅಭ್ಯರ್ಥಿಗೆ ಜಾಸ್ತಿ ಖರ್ಚಾಗುವುದಿಲ್ಲ ಅದರ ಬಗ್ಗೆ ಯೋಚನೆ ಮಾಡಬೇಕು.

ಇನ್ನೊಂದು ಅಧಿಕಾರಿಗಳ ಬಗ್ಗೆ ಹೇಳುವುದಾದರೆ ಬ್ಯುರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಎಂದು ಇವೆ. ಅವುಗಳ ಬಗ್ಗೆ ನಾವು ಚರ್ಚೆಮಾಡಿದ್ದೇವೆ. ಪಿ.ಎಸ್.ಐ.ಎಲ್. ಆಫೀಸರ್ಸ್ ಜೊತೆ ಚರ್ಚೆಮಾಡಿದ್ದೇವೆ. ಆಡಳಿತದಲ್ಲಿ ಸಮರ್ಥರಿರತಕ್ಕ ಅಧಿಕಾರಿಗಳನ್ನು ೨೦ ಕೋಟಿ ೭೦ ಕೋಟಿ ೮೦

ಕೋಟಿ ಕಾಂಪಿಟೆಂಟ್ ಇರುವ ಕಡೆ ಸಿಕ್ಕಾಪಟ್ಟೆ ಅಧಿಕಾರಿಗಳನ್ನು ಬದಲಾವಣೆ ಮಾಡುವುದು ವೈಸ್ ಛೇರ್ಮನ್ ಮಾಡುವುದು ಅಲ್ಲಿಂದ ಕಮಿಷನರ್ ಮಾಡುವುದು ಅದು ಇಲ್ಲದಿದ್ದರೆ ರೆವಿನ್ಯೂ ಕಮಿಷನರ್ ಮಾಡುವುದು ಈ ತರಹ ಬದಲಾವಣೆ ಮಾಡಿದರೆ ಅವರು ಏನು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಟೆಕ್ನೋಕ್ರಾಟ್ಸ್ ಯಾರಿದ್ದಾರೆ ಅವರನ್ನು ಪರ್ಮನೆಂಟ್ ಆಗಿ ಅಲ್ಲೇ ಹಾಕಬೇಕು. ಅಂತಹವರು ಯಾರಿದ್ದಾರೆ ಅವರನ್ನು ಪರ್ಮನೆಂಟ್ ಆಗಿ ಅಲ್ಲೇ ಇರಿಸಬೇಕೆಂದು ಮಾನ್ಯ ಹೆಗಡೆಯವರಲ್ಲಿ ಕೇಳಿಕೊಂಡು, ಕೊನೆಯಪಕ್ಷ ಮೂರ್‍ನಾಲ್ಕು ವರ್ಷಗಳಾದರೂ ಇರುವಂತೆ ಮಾಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ. ಐ.ಎ.ಎಸ್. ಮತ್ತು ಕೆ.ಎ.ಎಸ್. ಅಧಿಕಾರಿಗಳ ಬಗ್ಗೆ ಒಬ್ಬ ಸ್ನೇಹಿತರು ಹೇಳಿದರು. ಅವರಿಗೆ ಸಂಬಳ ಸಾರಿಗೆಗಳು ಜಾಸ್ತಿ ಇದ್ದರೂ ಕೂಡ ಅವರಿಗೆ ತೃಪ್ತಿ ಇಲ್ಲ. ಸಿವಿಲ್ ಲಿಸ್ಟ್‌ನಲ್ಲಿ ಯಾವಾಗ ನಮಗೆ ಪ್ರಮೋಷನ್ ಬರುತ್ತದೋ, ಯಾವರೀತಿ ಇನ್ನೊಬ್ಬರನ್ನು ಹಿಂದೆ ಹಾಕಿ ಮುಂದೆ ಹೋಗಬೇಕು. ಒಬ್ಬೊಬ್ಬ ಅಧಿಕಾರಿಗಳ ಬಗ್ಗೆ ಒಂದೊಂದು ಹೈಕೋರ್ಟ್ ಆರ್ಡರ್ ಇದೆ. ಇದರ ಬಗ್ಗೆ ಕಾನ್‌ಸೆಕ್ವೆಂಟ್ ಆರ್ಡರ್ಸ್ ಇರುವಂತೆ ಕ್ಯಾಬಿನೆಟ್‌ನಲ್ಲಿ ತೀರ್ಮಾನವನ್ನು ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ತಾವು ಮಾತನಾಡಲಿಕ್ಕೆ ಪ್ರಾರಂಭ ಮಾಡಿ ೧೦ ನಿಮಿಷಗಳ ಮೇಲಾಯಿತು, ಇನ್ನು ಇಬ್ಬರು ಸದಸ್ಯರು ಮಾತನಾಡಬೇಕಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಆಯಿತು ಬೇಗ ಮುಗಿಸುತ್ತೇನೆ. ಲೋಕಸೇವಾ ಆಯೋಗದ ಬಗ್ಗೆ ನಾವು ಎಷ್ಟು ಹೇಳಿದರೂ ಸಾಲದು. ಕಾಂಗ್ರೆಸ್‌ನವರ ಕಾಲದಲ್ಲಿ ಓಪನ್ ವ್ಯಾಪಾರ ಇತ್ತು. ರ್‍ಯಾಂಕ್ ನಿಂತಿಲ್ಲ ಅಸಿಸ್ಟೆಂಟ್ ಕಮಿಷನರ್ ಆಗಬೇಕಾದರೆ ೫೦ ಸಾವಿರ ಸಬ್ ಇನ್‌ಸ್ಪೆಕ್ಟರ್ ಆಗ ಬೇಕಾದರೆ ೨೫ ಸಾವಿರ. ಕ್ಲಾಸ್–೧ ಅಸಿಸ್ಟೆಂಟ್ ಕಮಿಷನರ್ ಇತರೆ ಹುದ್ದೆಗಳು ೪೦ ಸಾವಿರ ಈ ತರಹ ಫಿಕ್ಸ್ ಮಾಡಿಕೊಂಡು ಏಜೆಂಟರುಗಳ ಮುಖಾಂತರ ತೆಗೆದುಕೊಳ್ಳುತ್ತಾರೆಂದು ಹೇಳುತ್ತಿದ್ದರು. ಈಗ ವಿಜಿಲೆನ್ಸ್ ಕಮಿಷನ್ ತೆಗೆದು ಲೋಕಾಯುಕ್ತ ಉಪ-ಲೋಕಾಯುಕ್ತ ಎಂದು ಮಾಡಿದ್ದಾರೆ, ಈಗ ಅದನ್ನೆಲ್ಲ ಎಫೆಕ್ಟೀವಾಗಿ ಉಪಯೋಗ ಮಾಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಎಲೆಕ್ಟ್ರಿಸಿಟಿ ಬಗ್ಗೆ ಹೇಳುವುದಾದರೆ ಎಲ್ಲರೂ ಹೇಳಿದ್ದಾರೆ. ನಾನು ಹಳ್ಳಿಗಾಡಿನ ಎಲೆಕ್ಟ್ರಿಸಿಟಿ ಬಗ್ಗೆ ಹೇಳುತ್ತೇನೆ. ವಿದ್ಯುಚ್ಛಕ್ತಿ ಸೋರಿಕೆ ಸುಮಾರು ೬೦ ರಷ್ಟು ಇದೆ. ಪಂಪ್‌ಸೆಟ್ ಗಳಿಗೆ ಮಾತ್ರ ಕೊಟ್ಟಿದರೆ ಲೋಡ್‌ಶೆಡ್ಡಿಂಗ್ ಎಂದು ಹೇಳಿ ಎಲೆಕ್ಟ್ರಿಸಿಟಿ ನಿಲ್ಲಿಸುತ್ತಾರೆ. ಒಂದು ವೇಳೆ ಕೊಟ್ಟರೂ ಲೋಡ್‌ಶೆಡ್ಡಿಂಗ್ ಒಂದೇ ಅಲ್ಲ ಅಲ್ಲಿ ಏನಾಗುತ್ತದೆ ಅಂದರೆ ಮೆಷಿನ್ ಓಡುವುದಿಲ್ಲ. ಸಂಪ್ಮೆನೆ ಸುತ್ತಾಡುತ್ತಾ ನಿಂತುಕೊಳ್ಳುತ್ತದೆ. ಅದಕ್ಕೆ ಕಾರಣ ಏನೆಂದರೆ ವೋಲ್ಟೇಜ್ ಇಲ್ಲ. ಮುಖ್ಯವಾಗಿ ಹಳ್ಳಿಗಾಡು ಪ್ರದೇಶಗಳಿಗೆ ಯಾವಾಗ ನೋಡಿದರೂ ಟ್ರಾನ್ಸ್‌ಫಾರ್ಮರ್ ಸಪ್ಲೈ ಮಾಡುವುದಿಲ್ಲ. ಅನೇಕ ಸಾರಿ ನಮ್ಮ ವಿದ್ಯುತ್ ಮಂತ್ರಿಗಳಿಗೆ ಕೋಪ ಬರಲಿಯೆಂದು ನಿಮಗೆ ವೋಲ್ಟೇಜ್ ಇಲ್ಲವೆಂದು ಹೇಳಿದ್ದೇವೆ, ನಿಮಗೆ ವೋಲ್ಟೇಜ್ ಇಲ್ಲ ನಮಗೆಲ್ಲಿ ಕೊಡುತ್ತೀರಿ ವೋಲ್ಟೇಜ್ ಎಂದು ಹೇಳಿದ್ದೇವೆ. ಈಗಲೂ ಕೂಡ ಅವರಿಗೆ ವೋಲ್ಟೇಜ್ ಇಲ್ಲ ಮಂತ್ರಿಗಳು ಹಳ್ಳಿಗಳ ಕಡೆ ಧೈರ್ಯವಾಗಿ ಓಡಾಡಬೇಕು. ಮಿನಿಸ್ಟರ್ ಅಂದರೆ ಬೆಂಗಳೂರು ಬಿಟ್ಟು ಬಿಜಾಪುರಕ್ಕೆ ಹೋಗುವುದಲ್ಲ. ಬಿಜಾಪುರ ಬಿಟ್ಟರೆ ಇನ್ನು ಎಲ್ಲಿಯಾದರೂ ನೋಡಿದ್ದಾರೋ ಏನೋ ಗೊತ್ತಿಲ್ಲ. ಅವರು ಅಂದುಕೊಂಡಿರುವುದು ಬೆಂಗಳೂರಿನಲ್ಲಿರುವ ಮತ್ತೆ ಬಿಜಾಪುರ ಅಷ್ಟೆ ಅಲ್ಲ ದಯವಿಟ್ಟು ಹೊರಗೆ ಬಂದು ನೋಡಲಿ,

ಮೈನ್ಸ್ ಅಂಡ್ ಜಿಯಾಲಜಿ ಮಂತ್ರಿಗಳ ಬಗ್ಗೆ ನನ್ನದೊಂದು ಸ್ಪಷ್ಟ ಆಪಾದನೆ ಇದೆ. ಹಿಂದೆ ಎರಡು ಸಲ ಆಶ್ವಾಸನೆ ಕೊಟ್ಟಿದ್ದರು. ಅವರು ದೊಡ್ಡ ಮನೆತನದಿಂದ ಬಂದವರು ಎಂದು ಕೇಳಿದ್ದೇನೆ. ಆದ್ದರಿಂದ ಅವರು ಕೊಟ್ಟಿರುವ ಮಾತನ್ನು ಗಮನದಲ್ಲಿಟ್ಟು ಅದನ್ನು ಈಡೇರಿಸಬೇಕು. ಹೋದಸಲ ಈ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯ ಇನ್‌ಸ್ಪೆಕ್ಟರ್ ಕೋಲಾರ, ಮುಳಬಾಗಿಲು ತಾಲ್ಲೂಕು ಗಳನ್ನು ಬಿಟ್ಟು ಉಳಿದೆಲ್ಲ ೭ ತಾಲ್ಲೂಕುಗಳೂ ಡ್ರೈ ಏರಿಯಾ ಎಂದು ಮಾಡಿದ್ದಾರೆ. ಇದು ಏಕೆ ಹೀಗಾಗಿದೆ ಎಂದರೆ ಅವರು ಇನ್‌ಸ್ಪೆಕ್ಷನ್‌ಗೆ ಬಂದಾಗ ಕುಡಿಯುವುದಕ್ಕೆ ತಿನ್ನುವುದಕ್ಕೆ ಏನೂ ಕೊಡಲಿಲ್ಲ ಹೀಗೆ ಮಾಡಿಹೋಗಿದ್ದಾನೆ. ಈ ಎರಡು ತಾಲ್ಲೂಕುಗಳನ್ನು ಮಾತ್ರ ಸೇರಿಸದಿರುವುದಕ್ಕೆ ಏನು ಕಾರಣವೇನು? ಆದ್ದರಿಂದ ಆ ತಪ್ಪು ಬರೆದಿರುವ ಇನ್‌ಸ್ಪೆಕ್ಟರನನ್ನೇ ಕರೆಸಿ ಮತ್ತೇ ಇವನ್ನೂ ಸೇರಿಸುವ ಹಾಗೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಅಧ್ಯಕ್ಷರೇ, ಈ ದಿನ ಇಟ್ಟಿರತಕ್ಕಂತಹ ಬೇಡಿಕೆಯನ್ನು ನಾನು ವಿರೋಧಿಸುತ್ತಾ, ಈ ಹಿಂದೆ ಈ ವಿಧಾನಸಭೆಯಲ್ಲಿ ನಾವೆಲ್ಲ ಪ್ರಸ್ತಾಪ ಮಾಡಿ ಸರ್ಕಾರ ಮಾಡುವೆನೆಂದು ಆಶ್ವಾಸನೆ ನೀಡಿದ್ದೆಲ್ಲ ಈಡೇರದಿದ್ದರೆ ಬಹುಶ: ರಾಜ್ಯದ ಪರಿಸ್ಥಿತಿ ಸ್ವಲ್ಪ ಹತೋಟಿಗೆ ಬರುತ್ತಿತ್ತೋ ಏನೋ ? ಪ್ರತಿಫಲವೇ ಇಲ್ಲದ ಅರಣ್ಯರೋದವನ್ನು ನಾವು ಮಾಡುವಂತಾಗಿದೆ. ನಾವು ವಿಧಾನಸಭೆಗೆ ಬಂದಾಗ ನಮ್ಮ ಜವಾಬ್ದಾರಿ ಹೆಚ್ಚಿರುತ್ತದೆ, ನಮ್ಮ ಸುತ್ತಮುತ್ತಲ ಜನ ಸಮಾಜದ ಕುಂದುಕೊರತೆಗಳನ್ನು ನಾವು ಇಲ್ಲಿ ಸರ್ಕಾರದ ಗಮನಕ್ಕೆ ತರಲು.........

ಅಧ್ಯಕ್ಷರು.—ಸಬ್ಜೆಕ್ಟ್‌ಗೆ ಬನ್ನಿ ಬಿಡಿ.

ಶ್ರೀ ಬಿ. ಸ್ವಾಮಿರಾವ್.—ನಮ್ಮ ಕ್ಷೇತ್ರದ ಸಮಸ್ಯೆಗಳನ್ನು ನಾವು ೩೩೪ರ ಮೂಲಕವೋ ೭೨ರ ಮೂಲಕವೋ ತರುತ್ತೇವೆ. ಅನೇಕ ಗಮನಾರ್ಹ ಸಮಸ್ಯೆಗಳನ್ನು ೩೩೪ರ ಪ್ರಕಾರ ಇಲ್ಲಿ ತಂದಿದ್ದೇವೆ. ತಂದಾಗಲೆಲ್ಲಾ ಆ ಕಡೆ ಲಕ್ಷ್ಮಿಸಾಗರ್ ಅವರು ಇದನ್ನು ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇನೆ, ಉತ್ತರ ತರಿಸುತ್ತೇನೆ. ಆ ಮೇಲೆ ತಿಳಿಸುತ್ತೇನೆ ಎಂದೇ ಉತ್ತರಿಸುತಾರೇ ಹೊರತು ಉತ್ತರವಂತೂ ಇದುವರೆಗೆ ಬಂದಿಲ್ಲ, ನಾನು ನಾಲ್ಕು ದಿವಸದ ಹಿಂದೆ ನಿಯಮ ೩೩೪ರಲ್ಲಿ ಒಂದು ವಿಷಯ ಹಾಕಿದ್ದೆ, ಅದಕ್ಕೆ ಉತ್ತರವನ್ನು ಮಿನಿಸ್ಟ್ರು ಆ ದಿವಸದಿಂದಲೂ ತರಿಸಿಕೊಟ್ಟಿಲ್ಲ.

ಅಧ್ಯಕ್ಷರು.—ಅದನ್ನು ಈಗ ಬೇರೆ ವ್ಯವಸ್ಥೆಗೆ ಒಪ್ಪಿಸಿದ್ದೇವೆ, ಇಲ್ಲಿರುವವರೇ ಒಬ್ಬರು ಅದರ ನೇತೃತ್ವ ನೋಡಿಕೊಳ್ಳುತ್ತಿದ್ದಾರೆ. ಅಲ್ಲಿ ಬರುತ್ತದೆ, ಬಿಡಿ.

ಶ್ರೀ ಬಿ. ಸ್ವಾಮಿರಾವ್,—ಅಲ್ಲಿ ಅದು ಬಗೆಹರಿದರೂ ನನ್ನ ಸಮಸ್ಯೆಗಳನ್ನು ನಾನು ಇಲ್ಲಿ ಹೇಳಬೇಕಾಗಿದೆ, ಇಲ್ಲಿ ನಮ್ಮ ಕೂಗಿಗೆ ಬೆಲೆಯೇ ಬರುವುದಿಲ್ಲವೆಂದು ಅನ್ನಿಸುತ್ತದೆ. ೩೩೪ಕ್ಕೆ ಬೆಲೆ ಕೊಟ್ಟಿಲ್ಲ. ನಾವು ಉತ್ತರ ಕೊಟ್ಟಿಲ್ಲ ನಾವು ಕಾಂಗ್ರೆಸ್‌ನಲ್ಲಿದ್ದೇವೆ. ಅವರು ಜನತಾದಲ್ಲಿದ್ದಾರೆ, ನಮ್ಮಲ್ಲಿ ಪಕ್ಷದ ತಿಕ್ಕಾಟ ಇದ್ದರೂ ಕೂಡ ಈ ಸರ್ಕಾರದಲ್ಲಿ ಏನು ಇಲಾಖೆಗಳಿವೆ ಅವುಗಳಲ್ಲಿ ಹೊಂದಾಣಿಕೆ ಇಲ್ಲ. ಅವರಲ್ಲೇ ಒಂದು ತಿಕ್ಕಾಟ ಇದೆ. ಉದಾಹರಣೆಗೆ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಅರಣ್ಯ ಇಲಾಖೆ ಮತ್ತು ಪಿಡಬ್ಲ್ಯುಡಿ ಇಲಾಖೆ ಮಧ್ಯೆ ಪ್ರತಿನಿತ್ಯ ಹೋರಾಟ, ಕೂಗಾಟ. ಇದು ಸರ್ಕಾರದ ಮಂತ್ರಿಗಳ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಪಿಡಬ್ಲ್ಯುಡಿಯವರು ನಮ್ಮ ಜಾಗ ಎಂದರೆ ಅರಣ್ಯ ಇಲಾಖೆಯವರು ಆ ಜಾಗ ನಮ್ಮದೇ ಎನ್ನುತ್ತಾರೆ. ಅರಣ್ಯ ಇಲಾಖೆಯವರು ಬುಲ್‌ಡೋಜರ್ ತೆಗೆದುಕೊಂಡುಹೋಗಿ ಹೊಡೆಯುತ್ತಿದ್ದಾರೆ. ಅವರ ಮೇಲೆ ಇವರದು ಇವರ ಮೇಲೆ ಅವರದು ಕಂಪ್ಲೇಂಟ್, ಸುಮಾರು ೫-೬ ವರ್ಷಗಳಿಂದ ನಮ್ಮಲ್ಲಿನ ಕಲ್‌ತೊರೆಹಳ್ಳಿ ಪ್ರದೇಶವನ್ನು ಅರಣ್ಯ ಇಲಾಖೆಯವರು ನಮ್ಮದು ಎಂದರೆ ಅಲ್ಲಿನ ಮುಳುಗಡೆ ರೈತರು ಶರಾವತಿ ಯೋಜನೆಯ ಮುಳುಗಡೆಯಾದ ರೈತರಿಗಾಗಿ ಕೊಟ್ಟ ಜಮೀನು ಇದು ಎನ್ನುತ್ತಾರೆ. ಪಿಡಬ್ಲ್ಯುಡಿಯವರು ನಮ್ಮದು ಎನ್ನುತ್ತಾರೆ. ಅರಣ್ಯ ಇಲಾಖೆಯವರು ಒಳಗೆ ಕಾಲಿಡುವುದಕ್ಕೆ ಬಿಡುವುದಿಲ್ಲ,

ರೈತರು ಹೋದರೆ ಅವರನ್ನು ಪೋಲೀಸ್ ಸ್ಟೇಷನ್‌ಗೆ ಹಾಕಿಸುತ್ತಾರೆ. ಈ ವಿಷಯವನ್ನು ಅರಣ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಪಿಡಬ್ಲ್ಯುಡಿ ಮಂತ್ರಿಗಳಿಗೂ ಹೇಳಿದ್ದೇನೆ. ಕಳೆದ ಮೂರು ವರ್ಷದಿಂದ ಹೇಳುತ್ತಲೇ ಇದ್ದೇನೆ. ಆ ಭಾಗವನ್ನು ಅಭಿವೃದ್ಧಿ ಕೆಲಸಗಳಿಗೆ ಒಳಪಡಿಸಿ ಎಂದಿದ್ದೇನೆ ಅದರೂ ಪ್ರಯೋಜನವಾಗಿದ್ದರಿಂದ ಆ ಭಾಗದ ಕೂಲಿಕಾರರು ಹೊಟ್ಟೆಗಿಲ್ಲದೆ ಉಪವಾಸ ನರಳುತ್ತಿದ್ದಾರೆ. ಅಲ್ಲೇ ಪಕ್ಕದಲ್ಲಿ ಶೆಟ್ಟಿಹಳ್ಳಿ ಎಂಬ ಊರಿದೆ. ಅಲ್ಲಿ ಕಲ್ಲು ಕೆಲಸಕ್ಕೆ ಜನ ಹೋಗಿ ಬರುತ್ತಾರೆ. ಆದರೆ ರಸ್ತೆ ಹೋಗಿಬರುವುದಕ್ಕೆ ಸ್ವಲ್ಪವೂ ಚೆನ್ನಾಗಿಲ್ಲ, ರಸ್ತೆ ರಿಪೇರಿಗೆ ಅರಣ್ಯ ಇಲಾಖೆಯವರಾಗಲೀ, ಪಿಡಬ್ಲ್ಯುಡಿಯವರಾಗಲೀ ಮುಂದೆ ಬರದೆ ಅಲ್ಲಿ ಪರಿಸ್ಥಿತಿ ತುಂಬಾ ಕಷ್ಟವಿದೆ. ಇದನ್ನು ಜನ ಹೇಳಿದ್ದಾರೆ, ನಾನು ಹೇಳಿದ್ದೇನೆ, ಡಿ.ಸಿ. ಯವರ ಮೀಟಿಂಗ್‌ನಲ್ಲೂ ಹೇಳಿದ್ದೇನೆ. ಅರ್ಜಿ ಮೂಲಕ ತಿಳಿಸಿದ್ದೇವೆ. ಆದರೂ ಪ್ರಯೋಜನವಾಗಲಿಲ್ಲ. ಇನ್ನು ಯಾರ ಹತ್ತಿರ ಕೇಳಬೇಕು ? ಈ ಥರಹದ ಎಷ್ಟೋ ಸಮಸ್ಯೆಗಳು ಸರಮಾಲೆಯಾಗಿ ಜನಗಳ ಜೀವ ಹಿಂಡುತ್ತಿವೆ. ಹಾಗೆಯೇ ಅನೇಕ ಸಮಸ್ಯೆಗಳು ಈ ರಾಜ್ಯದಲ್ಲಿ ಇವೆ.

ನನ್ನ ಕ್ಷೇತ್ರವಾದ ಹೊಸನಗರ ತಾಲ್ಲೂಕಿನಲ್ಲೇ ಎಲ್ಲ ವಿದ್ಯುತ್ ಯೋಜನೆಗಳೂ ಬಂದಿವೆ ಶರಾವತಿ. ಲಿಂಗನಮಕ್ಕಿ, ಚಕ್ರಾ. ವಾರಾಹಿ, ಸಾವೆಹಕ್ಲು. ಆದರೂ ನಮಗೆ ಸಾಕಷ್ಟು ವಿದ್ಯುಚ್ಛಕ್ತಿ ಕೊಟ್ಟಿಲ್ಲ. ಅದೇನೋ ೧೩೭ ಗ್ರಾಮಗಳಿಗೆ ಎಂದು ಕೊಟ್ಟಿದ್ದಾರೆ. ಆದರೆ ಒಂದೊಂದು ಗ್ರಾಮದಲ್ಲಿ ಒಂದೊಂದು ಮನೆ ತೆಗೆದುಕೊಂಡರೂ ಬಹಳಷ್ಟು ಬಿಟ್ಟಿದ್ದಾರೆ. ನಾನು ಕಳೆದ ಸಲ ವಿದ್ಯುತ್ ಮಂತ್ರಿಗಳ ಮನೆಗೇ ಹೋಗಿ ವಿಚಾರ ಹೇಳಿಬಂದೆ. ಯಾರೂ ಅನುಕೂಲಸ್ಥರೋ ಅವರ ಮನೆಗೆ ಮಾತ್ರ

ಹಾಕಿಸಿದ್ದಾರೆಂದು ಕೇಳಿದೆ. ಹಾಗೆಯೇ ಸ್ಪೆಷಲ್ ಕಾಂಪೊನೆಂಟ್ ಯೋಜನೆಯಡಿ ಬರುವ ಜನರಿಗೂ ಇವರು ಏನೂ ಮಾಡಿಲ್ಲ. ವ್ಯವಸಾಯಕ್ಕೆಂದು, ಮನೆಗೆ ಎಂದು ವಿದ್ಯುತ್ತಿಗಾಗಿ ಅವರು ಬ್ಯಾಂಕ್‌ಗಳಲ್ಲಿ ಸಾಲಸೋಲ ಮಾಡಿಕೊಂಡಿದ್ದರೂ ಇವತ್ತಿಗೂ ವಿದ್ಯುತ್ ಸರಬರಾಜು ಕೊಟ್ಟಿಲ್ಲ. ಇವರಿಗೆ ಹೇಳುವವರಿಲ್ಲ ಕೇಳುವವರಿಲ್ಲ. ಈ ರೀತಿ ಆಗಿಬಿಟ್ಟರೆ ಇಂಥ ವ್ಯವಸ್ಥೆಯನ್ನು ರಿಪೇರಿ ಮಾಡುವಂಥ ದಿವಸ ಯಾವಾಗ ಬರುತ್ತದೆಯೋ ತಿಳಿಯುತ್ತಿಲ್ಲ. ಹಾಗೆಯೇ ನಮ್ಮ ಹೊಸನಗರ ತಾಲ್ಲೂಕನ್ನು ಬರಗಾಲ ಪ್ರದೇಶವೆಂದು ಘೋಷಿಸಿದ್ದಾರೆ. ಎರಡುಮೂರ್ನಾಲ್ಕು ಮೀಟಿಂಗ್ ಅನ್ನು ಎ.ಸಿ.ಯವರ ಅಧ್ಯಕ್ಷತೆಯಲ್ಲೇ ಮಾಡಲಾಗಿದೆ. ಅಲ್ಲಿ ಈ ಸಲ ೨೦ ಪರ್ಸೆಂಟ್ ಫಸಲು ಹಾಳಾಗಿದೆ ಎಂದು ಬರೆದುಕಳಿಸಿದರೆ ಡಿ.ಸಿ.ಯವರು ಕ್ರಾಪಿಂಗ್ ಪ್ಯಾಟರ್ನ್ ಎಕ್ಸ್‌ಪೆರಿಮೆಂಟ್ ಮಾಡಿದ್ದೇವೆ, ಅದು ಬರಗಾಲ ಪ್ರದೇಶಕ್ಕೆ ಸೇರುವುದಿಲ್ಲ ಎಂದು ಹೇಳುತ್ತಾರೆ. ಯಾರ ಹತ್ತಿರ ಪ್ಯಾಟರ್ನ್ ಮಾಡಿಸಿದ್ದೀರಿ ಎಂದು ಕೇಳಿದರೆ ಕೃಷಿ ಇಲಾಖೆಯಿಂದ ಎಂದು ಹೇಳುತ್ತಾರೆ. ಅವರನ್ನು ಕೇಳಿದರೆ ನಾವು ಮಾಡಿಲ್ಲ, ೨೦ ಪರ್ಸೆಂಟ್ ಫಸಲು ಹಾಳಾಗಿರುವುದು ನಿಜ ಎನ್ನುತ್ತಾರೆ. ಯಾರ ಮಾತನ್ನು ನಂಬಬೇಕೋ, ಬೇಡವೋ ಶಾಸಕರಾದ ನಮಗೆ ಗೊತ್ತಿಲ್ಲ ಎಂದರೆ ಬೇರೆಯವರ ಪಾಡೇನು ?

ಬೆಳೆ ವಿಮೆಯ ಬಗ್ಗೆ ಅನೇಕ ಜನ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ನನ್ನನ್ನೂ ಕೂಡ ಅನೇಕ ಜನರು ಬಂದು ಈ ಬಗ್ಗೆ ಕೇಳಿದರು. ಈ ವಿಷಯದ ಬಗ್ಗೆ ನಾನು ತಿಳಿದು ಅವರಿಗೆ ಹೇಳಬೇಕಾಗಿದೆ. ಯಾವ ತಾಲ್ಲೂಕಿನಲ್ಲಿ ಸರಾಸರಿ ಇವರ ಲೆಕ್ಕದಲ್ಲಿ ಮಳೆ ಕಡಿಮೆಯಾಗಿತ್ತು. ಅಂತಹ ತಾಲ್ಲೂಕನ್ನು ಮಾತ್ರ ಬೆಳೆ ವಿಮೆಗೆ ಒಳಪಡಿಸಬಹುದೆಂದು ಮಾಡಿದ್ದಾರೆ. ಇದು ಯಾವ ಲೆಕ್ಕಾಚಾರ ? ದಡ್ಡರು ಹೊಳೆ ದಾಟುವುದಕ್ಕೆ ಹಾಕುವ ಲೆಕ್ಕಾಚಾರದಂತಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಅರ್ಧ ಭಾಗ ನೀರಾವರಿ ಪ್ರದೇಶ ಮತ್ತು ಅರಣ್ಯಪ್ರದೇಶ ಸಂಪೂರ್ಣ ಎಲ್ಲಾ ಸುಟ್ಟುಹೋಗಿದೆ. ಅಲ್ಲಿ ಕುಡಿಯುವ ನೀರು ಇಲ್ಲ. ಇಂತಹ ಜನರಿಗೆ ಬೆಳೆ ವಿಮೆ ಪರಿಹಾರವನ್ನು ಕೊಡದೇ ಇರುವುದರಿಂದ ರೈತರು ಕಂಗಾಲಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಬರಗಾಲವಿದ್ದರೂ ಡಿಸಂಬರ್ ತಿಂಗಳಿನಿಂದ ಈಚೆಗೆ ಬೋರ್‌ವೆಲ್‌ಗಳನ್ನು ಕೊಟ್ಟಿದ್ದಾರೆ. ಎಲ್ಲ ಅಧಿಕಾರವನ್ನು ಜಿಲ್ಲಾಧಿಕಾರಿಗಳವರಿಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಡಿಸಂಬರ್‌ನಲ್ಲಿ ನನ್ನ ತಾಲ್ಲೂಕಿಗೆ ನಾಲ್ಕು ಬೋರ್‌ವೆಲ್‌ಗಳನ್ನು ಕೊಟ್ಟಿದ್ದಾರೆ. ನಾಲ್ಕು ಬೋರ್‌ವೆಲ್‌ಗಳನ್ನ ಯಾವ ಊರಿಗೆ ಕೊಡುವುದು ? ಅದಕ್ಕೆ ನಾನು ಈ ಕಡೆಗೆ ಬಂದಿದ್ದೇನೆ. ಕುಡಿಯುವ ನೀರಿಗಾಗಿ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಮಾನ್ಯ ನಜೀರ್‌ಸಾಬ್ ಮತ್ತು ಬೊಮ್ಮಾಯಿಯವರು ಹೇಳುತ್ತಾರೆ. ಬೆಂಗಳೂರಿನಲ್ಲಿರುವವರಿಗೆ ನೀರಿನ ತಾಪತ್ರಯ ಕಡಿಮೆ. ಈ ಪರಿಸ್ಥಿತಿಯನ್ನು ಆದಷ್ಟು ಬೇಗ ಬಗೆಹರಿಸುವುದಕ್ಕೆ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ. ವಿಧಾನಸೌಧದ ಕಟ್ಟಡದಲ್ಲಿರತಕ್ಕ ಕಛೇರಿಗಳಲ್ಲಿಯೇ ಲೋಪದೋಷಗಳಿವೆ. ಇಲ್ಲಿ ಕೆಲಸ ಮಾಡತಕ್ಕವರು ಮುಷ್ಕರ ನಡೆಸಿದರು ಅದನ್ನು ನಾವು ನೀವೆಲ್ಲ ನೋಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ವಿಧಾನಸೌಧದಲ್ಲಿರತಕ್ಕ ನೌಕರರಿಗೆ ಒಂದು ತಿಂಗಳ ಹಿಂದೆ ಔತಣಕೂಟವನ್ನು ಏರ್ಪಾಡು ಮಾಡಿದ್ದಾಗ, ಯಾರೂ ಕೂಡ ಅದರಲ್ಲಿ ಪಾಲ್ಗೊಳ್ಳಲಿಲ್ಲವೆಂದು ಕೇಳಿದ್ದೇವೆ. ಅದಕ್ಕೆ ಸುಮಾರು ೪೦ಸಾವಿರ ರೂಪಾಯಿ ಖರ್ಚಾಗಿದೆ.

ಅಧ್ಯಕ್ಷರು.—ತಾವು ಮತ್ತೆ ಹಳಿ ತಪ್ಪುತ್ತಿದ್ದೀರಿ.

ಶ್ರೀ ಬಿ. ಸ್ವಾಮಿರಾವ್.—ವಿಧಾನಸೌಧದ ಪಕ್ಕದಲ್ಲಿ ಮೀನುಗಾರಿಕೆ ಇಲಾಖೆಯ ಗೋಪಾಲ ಎಂಬ ನೌಕರ ಸುಮಾರು ೪೦೦ ದಿವಸಗಳಿಗೂ ಮೇಲ್ಪಟ್ಟು ದೊಡ್ಡ ಸತ್ಯಾಗ್ರಹವನ್ನು ಮಾಡುತ್ತಿದ್ದಾನೆ. ಸತ್ಯಾಗ್ರಹ ಮಾಡತಕ್ಕ ಜಾಗದಲ್ಲಿ ಆತನ ಬೇಡಿಕೆಯ ಬಗ್ಗೆ ಬೋರ್ಡ್‌ಗಳನ್ನು ಹಾಕಿದ್ದಾನೆ. ವಿಧಾನಸೌಧದ ಹತ್ತಿರ ಎಲ್ಲರೂ ತಿರುಗಾಡತಕ್ಕ ಜಾಗದಲ್ಲಿ ಈ ದೊಡ್ಡ ನಗರದಲ್ಲಿ ಆ ತರಹ ಕುಳಿತಿರುವುದು ಅತ್ಯಂತ ದೊಡ್ಡ ಅವಮಾನ. ಅವನನ್ನು ನೋಡಿದಾಗ ನನ್ನ ಮನಸ್ಸಿಗೆ ನೋವಾಯಿತು. ಬೇರೆ ದೇಶಗಳವರು ಅವನು ಹಾಕಿರತಕ್ಕ ಬೋರ್ಡ್‌ಗಳನ್ನು ನೋಡಿದರೆ ಈ ದೇಶದಲ್ಲೆಲ್ಲಾ ಹೀಗೆ ಇರಬಹುದೆಂದು ತಿಳಿದುಕೊಳ್ಳುತ್ತಾರೆನ್ನುವ ಒಂದು ಸಂಶಯ ಬಂತು. ಅವನಿಗೆ ಏನೋ ಒಂದು ನೋವು ಇರಬೇಕು, ಅವನಿಗೆ ಏನೋ ಕಷ್ಟ ಇರಬೇಕು, ಅವನು ಹೇಳುವುದರಲ್ಲಿ ನ್ಯಾಯವಿರಬೇಕು. ಅದರ ಬಗ್ಗೆ ಮಾನ್ಯಮಂತ್ರಿಗಳು ಇಂದಾದರೂ ಕೂಡ ಬಗೆಹರಿಸಬೇಕು. ಆ ರೀತಿ ಮಾಡಿದರೆ ಅವನಿಗೂ ಮತ್ತು ನನಗೂ ಸಮಾಧಾನವಾಗುತ್ತದೆ. ಅವನಿಗೆ ಪರಿಹಾರವನ್ನು ದೊರಕಿಸಿ ಕೊಟ್ಟರೆ ನಿಮಗೂ ಸಮಾಧಾನವಾಗುತ್ತದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ತಾವು ಕುಳಿತುಕೊಳ್ಳಿ, ತಮಗೆ ಮತ್ತೊಮ್ಮೆ ಅವಕಾಶ ಕೊಡುತ್ತೇನೆ.

ಶ್ರೀ ಬಿ. ಸ್ವಾಮಿರಾವ್.—ನಾನು ಹೆಚ್ಚು ಮಾತನಾಡುವುದಿಲ್ಲ, ನಾನು ಕೊಟ್ಟಂತಹ ಸಲಹೆ ಮತ್ತು ವಿಚಾರಗಳ ಬಗ್ಗೆ ಮಾನ್ಯಮಂತ್ರಿಗಳು ಗಮನಹರಿಸಬೇಕೆಂದು ಹೇಳುತ್ತಾ ನನಗೆ ತಾವು ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ನಾರಾಯಣಕುಮಾರ್ (ಬಿನ್ನಿಪೇಟೆ).—ಮಾನ್ಯಅಧ್ಯಕ್ಷರೇ, ನಿನ್ನೆ ದಿವಸ ಸ್ವಲ್ಪ ಅಸಮಾಧಾನವಿತ್ತು. ಇವತ್ತು ಅಧ್ಯಕ್ಷರನ್ನು ನೋಡಿದರೆ ಮನಸ್ಸಿಗೆ ಅಪಾರವಾಗಿ ಉಲ್ಲಾಸವಾಗುತ್ತದೆ. ನಮಗೂ, ನಿಮಗೂ ತಂದೆ ಮಕ್ಕಳ ಸಂಬಂಧ, ಮಕ್ಕಳು ಅಂದರೆ ತಂದೆಗೆ ಎಷ್ಟೇ ಆದರೂ ಇಷ್ಟ. ಮಾನ್ಯ ಮುಖ್ಯ ಮಂತ್ರಿಗಳವರ ಬೇಡಿಕೆಗಳ ಬಗ್ಗೆ ನಾನು ಮಾತನಾಡಲು ಅವಕಾಶ ಕೊಟ್ಟಿದ್ದೀರಿ ಅದಕ್ಕಾಗಿ ನಾನು ನಿಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಕಳೆದ ಮೂರು ವರ್ಷಗಳಿಂದ ಕೊಟ್ಟಂತಹ ಆಡಳಿತ ಏನಿದೆ ಅದರಲ್ಲಿ ಕನ್ನಡ ಬಗ್ಗೆ ಬಹಳ ಕ್ರಾಂತಿಯನ್ನೇ ಮಾಡಿದರೆಂದು ಹೇಳಿದರೆ ತಪ್ಪಾಗಲಾರದು. ಹಿಂದಿನ ಸರ್ಕಾರಗಳವರು ಸಹ ಅವರ ಕೈಲಾದ ಮಟ್ಟಿಗೆ ಮಾಡಿದ್ದಾರೆ. ಕನ್ನಡದ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳತಕ್ಕ ನಿರ್ಧಾರವನ್ನು ಅಷ್ಟು ಉಚಿತವಾಗಿ ಮಾಡಿರಲಿಲ್ಲವೆಂದು ನನ್ನ ಅನಿಸಿಕೆ. ಆದರೆ ಇವತ್ತು ಆಡಳಿತ ಪಕ್ಷ ವಿರೋಧಪಕ್ಷಗಳೆಂದು ಏನು ಹೇಳುತ್ತೇವೆ. ಆಡಳಿತ ಪಕ್ಷ ಮಾಡತಕ್ಕ ಕೆಲಸಗಳನ್ನು ನೋಡಿ ತಪ್ಪುಗಳಿದ್ದರೆ ಅದನ್ನು ಎತ್ತಿತೋರಿಸತಕ್ಕ ಕೆಲಸವನ್ನು ವಿರೋಧ ಪಕ್ಷ ಮಾಡುವುದು ಉಚಿತವೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಒಬ್ಬ ಬಡ ಕುಟುಂಬದ ರೈತನ ಮಗನಾಗಿದ್ದು, ಬೆಂಗಳೂರಿಗೆ ಕಾರ್ಮಿಕನಾಗಿ ಬಂದು ಎರಡು ಬಾರಿ ಶಾಸಕನಾಗಿದ್ದೇನೆ. ನಗರ ಸಭೆಯ ಸದಸ್ಯನಾಗಿ, ವಿಧಾನಸಭೆಯ ಸದಸ್ಯನಾಗಿ ಎರಡು ಬಾರಿ ಬರಬೇಕಾದರೆ ನಾನೇನೂ ಆಗರ್ಭ ಶ್ರೀಮಂತರಲ್ಲ, ಶ್ರೀಮಂತನೂ ಅಲ್ಲ. ಶ್ರೀಸಾಮಾನ್ಯನಾಗಿ ಬೆಂಗಳೂರು ನಗರಕ್ಕೆ ಬಂದು ಎರಡು ಬಾರಿ ಶಾಸಕನಾಗಬೇಕಾದರೆ ನನ್ನಲ್ಲಿ ಸೇವಾ ಪ್ರವೃತ್ತಿ ಇದ್ದರೆ ಮಾತ್ರ ಬರಲಿಕ್ಕೆ ಸಾಧ್ಯವೆಂದು ನನ್ನ ಅರಿವಿಗೆ ಬಂದಿರತಕ್ಕ ಮಾತು. ನಾನು ಸುಮಾರು ೨೫ ವರ್ಷಗಳ ಕಾಲ ನನ್ನ ಒಂದು ರಾಜಕೀಯ ಅನುಭವದಲ್ಲಿ ೧೯೬೦ರಲ್ಲಿ ಅ. ನ. ಕೃ. ರವರು ರಾಮಮೂರ್ತಿ ಇಂತಹವರ ಕೈಕೆಳಗೆ ಬೆಳೆದು ಬಂದವನು. ಅವರಿಗೆ ಕನ್ನಡದ ಬಗ್ಗೆ ಪರಿಪೂರ್ಣವಾದ ವಿದ್ವತ್ ಇದೆ. ಅವರು ಗಣ್ಯ ವ್ಯಕ್ತಿಗಳು ಅವರಿಂದ ನಾನು ತಪ್ಪುದಾರಿಗೆ ಹೋಗಲಿಕ್ಕೆ ಅವಕಾಶವಾಗಲಿಲ್ಲ. ಅವರು ಅದಕ್ಕೆ ಅವಕಾಶ ಕೂಡ ಕೊಡಲಿಲ್ಲ. ನಾನು ಏನಾದರೂ ತಪ್ಪು ಮಾಡಿದರೆ ಅವರು ತಿದ್ದುತ್ತಿದ್ದರು ಸೂಕ್ತರೀತಿಯಲ್ಲಿ ಸಲಹೆ ಸೂಚನೆಗಳನ್ನು ನೀಡಿದಂತಹ ಮಹಾ ಪುರುಷರು ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಏನು ಮೂರು ವರ್ಷಗಳಿಂದ ಜನತಾ ಸರ್ಕಾರ ಅಧಿಕಾರದಲ್ಲಿದೆ ಅದೊಂದು ಸಣ್ಣ ಶಿಶು. ಜನತಾ ಸರ್ಕಾರದ ಬಗ್ಗೆ ವಿರೋಧಪಕ್ಷದವರು ಟೀಕೆಟಿಪ್ಪಣಿಗಳನ್ನು ಮಾಡಿದ್ದಾರೆ. ಅವರ ಮನಸ್ಸಿಗೆ ತೋಚಿದಂತೆ ದಿ. ಬೀಚಿಯವರು ಹೇಳುತ್ತಿದ್ದಂತೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿದ್ದಾರೆ. ಜನತಾ ಸರಕಾರ ಇನ್ನೂ ಮೂರು ವರ್ಷದ ಶಿಶು. ೨೧ ವರ್ಷ ಆದಮೇಲೆ ಹೇಗೆ ಎಲ್ಲ ಶಕ್ತಿಯು ಬರುತ್ತದೋ ಅದೇರೀತಿ ಮಾನ್ಯ ರಾಮಕೃಷ್ಣ ಹೆಗಡೆಯವರ ಸರ್ಕಾರಕ್ಕೆ ೨೧ವರ್ಷ ಆದ ಮೇಲೆ ಪರಿಪೂರ್ಣ ಶಕ್ತಿ ಬರುತ್ತದೆ, ಅದರಲ್ಲಿ ಏನೂ ಆಶ್ಚರ್ಯವಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಹೆಗಡೆಯವರ ಅಧಿಕಾರಾವಧಿಯಲ್ಲಿ ಕನ್ನಡದಲ್ಲಿ ಆಡಳಿತ ಸುಮಾರು ೬೦ಭಾಗ ನಡೆಯುತ್ತಿದೆ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಇಲ್ಲಿ ಮಾತನಾಡುವಾಗ ಬಹಳ ಜನ ನಾರಾಯಣಕುಮಾರ್‌ರವರಿಗೆ ಬುದ್ಧಿಭ್ರಮಣೆ ಹಾಗೆ ಹೀಗೆ ಎಂದು ಹೇಳುತ್ತಾರೆ. ಕನ್ನಡದ ಬಗ್ಗೆ ನನಗೆ ಆ ಭಾವನೆ ಇದೆ, ಮೂಲ ಧೋರಣೆಯೇ ಅದು, ನಾನು ನಡೆದು ಬಂದ ದಾರಿ ಹಾಗೆ ಇದೆ. ನನ್ನ ಮೂಲ ತತ್ವವನ್ನು ನಾನು ನನ್ನ ಪ್ರಾಣ ಹೋದರೂ ಬಿಡುವುದಿಲ್ಲ. ನನ್ನ ಗುರಿ ಏನಿದೆ ನನ್ನ ನೀತಿ ಏನಿದೆ ಅದನ್ನು ನಾನು ಸಾಧಿಸಲಿಕ್ಕೆ ಏನು ಬೇಕಾದರೂ ಮಾಡಲಿಕ್ಕೆ ಸಿದ್ಧನಿದ್ದೇನೆಂದು ತಮ್ಮಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಸರ್ಕಾರ ಶೇಕಡ ೬೦ರಷ್ಟು ಕನ್ನಡವನ್ನು ಆಡಳಿತದಲ್ಲಿ ಜಾರಿಗೆ ತಂದಿದೆ. ಡಾ. ಸರೋಜಿನಿ ಮಹಿಷಿಯವರ ಕಮಿಟಿಯನ್ನು ನೇಮಕ ಮಾಡಿ ಸಾರ್ವಜನಿಕ ಉದ್ದಿಮೆಗಳಲ್ಲಿ ಖಾಸಗಿ ಉದ್ದಿಮೆಗಳಲ್ಲಿ ಶೇಕಡ ೮೦ರಷ್ಟು ಹುದ್ದೆಗಳನ್ನು ಕನ್ನಡಿಗರಿಗೆ ಕೊಡಬೇಕೆಂದು ಆ ಸಮಿತಿಯು ಕೆಲಸವನ್ನು ಮಾಡುತ್ತಿದೆ. ಆ ರೀತಿಯ ಕಾರ್ಯಾಚರಣೆ ಮಾಡುವಂತಹ ನೀತಿಯನ್ನು ಈ ಸರ್ಕಾರ ಅಳವಡಿಸಿಕೊಂಡಿದೆ.

೬-೩೦ ಪಿ.ಎಂ.

ಮೂರು ಮತ್ತು ನಾಲ್ಕನೇ ದರ್ಜೆ ನೌಕರರನ್ನು ನೇಮಕ ಮಾಡುವಾಗ ಕನ್ನಡ ಕಡ್ಡಾಯವಾಗಿ ಗೊತ್ತಿದ್ದವರಿಗೆ, ಕನ್ನಡ ಬಲ್ಲವರಿಗೆ ಕೆಲಸ ಕೊಡಬೇಕೆಂಬ ನೀತಿಯನ್ನು ಮಾಡಿದ್ದಾರೆ. ಅವತ್ತು ಈ ಬಗ್ಗೆ ಗೋಕಾಕ್ ಚಳುವಳಿಯಲ್ಲಿ ಭೀಕರವಾದ ಹೋರಾಟವನ್ನು ಮಾಡಿದ್ದೇವೆ. ಇಂತಹ ಒಂದು ಸಂದರ್ಭದಲ್ಲಿ ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಕನ್ನಡದ ಬಗ್ಗೆ ಅವರಿಗೆ ಇರತಕ್ಕಂತಹ ಕಳಕಳಿ ಅರಿವಾಗುತ್ತದೆ. ಕನ್ನಡ ಬಲ್ಲವರನ್ನೇ ನೇಮಕಾತಿ ಮಾಡಿಕೊಳ್ಳಬೇಕು, ಎಂಬ ನೀತಿಯನ್ನು ಜನತಾ ಸರ್ಕಾರ ತೀರ್ಮಾನ ತೆಗೆದುಕೊಂಡಿರುವಂತಹದ್ದು ಸುಸ್ವಾಗತ. ಅದಕ್ಕೆ ನಾನು ಅಭಿನಂದನೆಗಳನ್ನು ಸಲ್ಲಿಸದಿದ್ದರೆ, ನನ್ನ ಮೂರ್ಖತನವಾಗುತ್ತದೆಂದು ಹೇಳುತ್ತೇನೆ. ಗಡಿ ಸಲಹಾ ಸಮಿತಿ ಇದೆ. ಆ ಒಂದು ಸಮಿತಿ ಕನ್ನಡದ ಬಗ್ಗೆ ಕಳಕಳಿಯನ್ನಿಟ್ಟುಕೊಂಡು ಕೆಲಸ ಮಾಡುತ್ತಿವೆ. ಆದರೆ ಸಾಮಾನ್ಯ ಜನರಿಗೆ ಈ ಸಮಿತಿಯು ಯಾವರೀತಿ ಕೆಲಸ ಮಾಡುತ್ತಿದೆ ಎಂಬುದು ಗೊತ್ತಾಗುವುದಿಲ್ಲ. ಅದೇ ರೀತಿ ಕನ್ನಡ ಕಾವಲು ಸಮಿತಿ ಮಾಡಿದ್ದು, ಬಹಳ ಚುರುಕಾಗಿ ಕೆಲಸ ಮಾಡುತ್ತಿದೆ. ಅದರಿಂದಾಗಿ ಇವತ್ತು ಅಧಿಕಾರಿಗಳು ಸ್ವಲ್ಪ ಎಚ್ಚೆತ್ತು ಕನ್ನಡದಲ್ಲೇ ವ್ಯವಹಾರ ಮಾಡುವುದಕ್ಕೆ ಪ್ರಯತ್ನ ನಡೆಸುತ್ತಿದ್ದಾರೆ. ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ನುಡಿದಂತೆ ನಡೆ-ನಡೆದಂತೆ ನುಡಿ ಎಂಬ ಗಾದೆಯಂತೆ ಅವರು ಹೇಳಿರುವ ಮಾತನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಬಂದಿದ್ದಾರೆ. ಸಮಂತಾವಾದ ಸಮಾಜವಾದ ಏನಿದೆ, ಅದರ ಬಗ್ಗೆ ನಮ್ಮ ಜನತಾ ಸರ್ಕಾರ ಅಳವಡಿಸಿಕೊಂಡು ಬರುತ್ತಿದೆ ಎಂದು ಹೇಳಬಯಸುತ್ತೇನೆ. ನಾನೂ ಕೂಡ ೧೭ ವರ್ಷಗಳ ಕಾಲ ಕಾರ್ಮಿಕನಾಗಿ, ದುಡಿಮೆಗಾರನಾಗಿ, ನನ್ನ ಬೆವರನ್ನು ಸುರಿಸಿ ಕೆಲಸ ಮಾಡಿರತಕ್ಕಂತಹವನು. ಎಲ್ಲೋ ಅಡ್ಡಾಡಿಕೊಂಡಿದ್ದು ಶಾಸಕನಾಗಿ ಬಂದವನಲ್ಲ. ಎನ್ನು ಶಕ್ಕಂತಹ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಹಳ್ಳಿಯಲ್ಲಿ ಹುಲ್ಲನ್ನು ಕಿತ್ತು, ದನಗಳನ್ನು ಮೇಯಿಸಿ ಬೇಸಾಯವನ್ನೂ ಕೂಡ ಮಾಡಿ ಇವತ್ತು ಈ ಹಂತಕ್ಕೆ ಬಂದಿರುವಂತಹ ನಾರಾಯಣ್ ಕುಮಾರ್ ನಾನು. ದುಡಿಮೆಗಾರರ ಬಗ್ಗೆ ಸರ್ಕಾರ ಕಳಕಳಿ ವಹಿಸಿ ಅವರ ಕಷ್ಟಗಳನ್ನು ನಿವಾರಣೆ ಮಾಡಬೇಕೆಂದು ಸರ್ಕಾರಕ್ಕೆ ನಾನು ಮನವಿ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಈ ದೇಶದಲ್ಲಿ ಹಾಗೂ ಕರ್ನಾಟಕ ರಾಜ್ಯದಲ್ಲಿ ಭಕ್ತಿ ಭಂಡಾರಿ ಬಸವಣ್ಣನವರು ೮೦೦ ವರ್ಷಗಳ ಹಿಂದೆಯೇ ಕ್ರಾಂತಿ ಮಾಡಿದರು. ಅವರು ಏನು ವಚನಗಳನ್ನು ಬರೆದಿದ್ದಾರೆ, ಅವುಗಳನ್ನು ನಾವು ಪರಿಪೂರ್ಣವಾಗಿ ಉಪಯೋಗಿಸಿಕೊಳ್ಳುವುದಕ್ಕೆ ಆಗಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಹಾಗೂ ಭಾರತದಲ್ಲಿ ಸಂಪೂರ್ಣವಾಗಿ ಅವುಗಳನ್ನು ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆದರೆ ವಿದೇಶಗಳಲ್ಲಿ ಇವರ ಕ್ರಾಂತಿವಚನಗಳನ್ನು ತೆಗೆದುಕೊಂಡು ಹೋಗಿ ಅವರ ಭಾಷೆಯಲ್ಲಿ ಅನುವಾದ ಮಾಡಿಕೊಂಡು ಅನುಕರಣೆ ಮಾಡುತ್ತಿದ್ದಾರೆ. ಅದನ್ನು ಅವರು ಉಪಯೋಗ ಮಾಡಿಕೊಳ್ಳುವುದರಲ್ಲಿ ಯಶಸ್ವಿಯಾಗಿದ್ದಾರೆ ಎಂದು ಹೇಳಿದರೆ ತಪ್ಪಾಗಲಾರದು. ಬಹಳ ಹೆಮ್ಮೆಯಿಂದ ಹೇಳಿರತಕ್ಕಂತಹ ಮಾತು ಇದು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಅವರ ತತ್ವವನ್ನು ಪಾಲನೆ ಮಾಡಿದವರು ಮಹಾತ್ಮಗಾಂಧಿಯವರು ಎಂ.ಎನ್. ರಾಯ್‌ರವರು. ಕಮ್ಯೂನಿಸ್ಟ್ ರಾಜ್ಯಕ್ಕೆ ಹೋದಾಗ ಲೆನಿನ್, ಸ್ಟಾಲಿನ್, ಬ್ರೆಜ್ನೆವ್. ನಂತರ ಚೈನಾ ದೇಶಕ್ಕೆ ಹೋದಾಗ ಅಲ್ಲಿದ್ದಂತಹ ಮಾಹೋತ್ಸೆತುಂಗ್, ಇವರೆಲ್ಲಾ ದುಡಿಮೆಗಾರನ ಬಗ್ಗೆ ಸದ್ಭಾವನೆಯನ್ನು ಹೊಂದಿರುವುದನ್ನು ನಾವು ನೋಡಬಹುದು. ಶ್ರೀಸಾಮಾನ್ಯನ ಬಗ್ಗೆ, ಅತಿ ಬಡವರ ಬಗ್ಗೆ ಮೇಲು ಕೀಳು ಎನ್ನತಕ್ಕಂತಹದ್ದು, ಶ್ರೀಮಂತ ಬಡವರ ನಡುವೆ, ಇರತಕ್ಕಂತಹ ಅಂತರವನ್ನು ಹೋಗಲಾಡಿಸುವುದಕ್ಕೆ ಬಹಳ ಕ್ರಾಂತಿ ಮಾಡಿದ್ದಾರೆ. ಅಂತಹ ಹಿರಿಯರು ಕ್ರಾಂತಿಕಾರಕ ಪುರುಷರು ಏನು ಮಾಡಿದ್ದಾರೆ, ಅವರನ್ನು ನಾವು ಅನುಸರಿಸೋಣ. ದುಡಿಮೆಗಾರನ ಬಗ್ಗೆ ಏನು ಶೋಷಣೆ ನಡೆಯುತ್ತಿದೆ, ರೈತರ ಬಗ್ಗೆ ಏನು ಶೋಷಣೆ ನಡೆಯುತ್ತಿದೆ, ಆ ಶೋಷಣೆಯನ್ನು ಸುಧಾರಿಸುವುದಕ್ಕೋಸ್ಕರ ಮಾನ್ಯ ರಾಮಕೃಷ್ಣ ಹೆಗಡೆಯವರು ಸರ್ವ ಪ್ರಯತ್ನ ಮಾಡಬೇಕೆಂದು ಈ ಒಂದು ಸಂದರ್ಭದಲ್ಲಿ ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ. ಚಿಲಿ ದೇಶದ ಅಲೆಂಡಿಯವರು ದುಡಿಮೆಗಾರನ ಬಗ್ಗೆ ತಮ್ಮ ಪ್ರಾಣವನ್ನೇ ತೆತ್ತಿದ್ದಾರೆ. ಭಾರತ ರಾಷ್ಟ್ರದಲ್ಲಿ ಅದರಲ್ಲೂ ಕರ್ನಾಟಕಕ್ಕೆ ಬಂದಾಗ ನಮ್ಮಲ್ಲಿ ಬಹಳ ವೃತ್ತಿ ಕಲಾವಿಧರಿಗೆ ನೃತ್ಯಕಾರರಿಗೆ ಭಾರತರತ್ನ ಪ್ರಶಸ್ತಿಯನ್ನು ಕೊಡುತ್ತಿದ್ದಾರೆ. ಆದರೆ ಈ ದೇಶದ ಬೆನ್ನೆಲುಬು ಆಗಿರತಕ್ಕಂತಹ ರೈತರು ಯಾರು ಇದ್ದಾರೆ, ಈ ದೇಶಕ್ಕೋಸ್ಕರ ತನ್ನ ಪ್ರಾಣವನ್ನೇ ತೆತ್ತಂತಹ ರೈತನ ಬಗ್ಗೆ ಭಾರತ ಸರ್ಕಾರವಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಅದರ ಕಡೆ ಗಮನಹರಿಸುತ್ತಿಲ್ಲ. ರೈತನು ತನ್ನ ಕಾಯಕವನ್ನು ಹೇಳದೆ, ಯಾವ ಲಾಭವನ್ನು

ಕೇಳದೆ ತನ್ನ ಕರ್ತವ್ಯವನ್ನು ಮಾಡುತ್ತಿದ್ದಾನೆ. ಶ್ರೀಮಾನ್ ಕುವೆಂಪುರವರು ಹೇಳಿದ ಒಂದು ಮಾತು ನೆನಪಿಗೆ ಬರುತ್ತಿದೆ. ಅದೇನೆಂದರೆ, ''ನೇಗಿಲು ಹಿಡಿದು ಹೊಲದೊಳು ಹಾಡುತ ದುಡಿವಾ ರೈತನ ನೋಡು ಅಲ್ಲಿ ಎಂಬ ಪದವನ್ನು ಹೇಳುತ್ತಾರೆ. ಯುದ್ಧರಂಗದಲ್ಲಿ ಇರುವಂತಹ ಯೋಧ ಯಾವುದೇ ಸನ್ನಿವೇಶದಲ್ಲೂ ತನ್ನ ಗಮನವನ್ನು ಬೇರೆ ಕಡೆಗೆ ಹರಿಸುವುದಿಲ್ಲವೋ ಅದೇ ರೀತಿಯಲ್ಲಿ ರೈತನೂ ಕೂಡ ತನ್ನ ಕರ್ತವ್ಯವನ್ನು ತಾನು ಮಾಡುತ್ತಿರುತ್ತಾನೆಯೇ ಹೊರತು ಬೇರೆ ಯಾವ ಕಡೆಗೂ ತನ್ನ ಗಮನ ವನ್ನು ಹರಿಸುವುದಿಲ್ಲ, ಅಂತಹ ರೈತನನ್ನು ಗುರುತಿಸಿ ಅವರಿಗೆ ಭಾರತ ರತ್ನ ಪ್ರಶಸ್ತಿಯನ್ನು ಕೊಡಿಸಿ ಆವಾಗ ಈ ರಾಜ್ಯ ಯಾವರೀತಿ ನಿಮ್ಮನ್ನು ಕೊಂಡಾಡುತ್ತದೆ ಎಂಬುದು ನಿಮಗೇ ಅರಿವಾಗುತ್ತದೆ. ಅವರ ಪರವಾಗಿ ನಾನು ಕಳಕಳಿಯಿಂದ ವಿಷಯಪೂರ್ವಕವಾಗಿ ತಮ್ಮ ಹೃದಯ ಮುಟ್ಟಲಿ ಎಂಬುದಕ್ಕಾಗಿ ಈ ಒಂದು ಮನವಿಯನ್ನು ತಮ್ಮಲ್ಲಿ ಮಾಡುತ್ತಿದ್ದೇನೆ.

ಇನ್ನು ಕರ್ನಾಟಕ ರಾಜ್ಯದಲ್ಲಿ ಕೇಳುವಂತಹದ್ದು ಪರಿಶಿಷ್ಟ ಜಾತಿ ಅಂದರೆ ಯಾರು ತುಳಿತಕ್ಕೆ ಒಳ ಗಾಗಿದ್ದರೆ, ಅಂತಹವರ ಬಗ್ಗೆ ಅನುಕಂಪ ಹಾಗೂ ಔದಾರ್ಯ ಇರಬೇಕು ಎಂದು ಹೇಳುತ್ತಿದ್ದೇನೆ. ಮಾನ್ಯ ಬಸವಲಿಂಗಪ್ಪನವರು ಬಹಳ ಹಿರಿಯರು. ಒಳ್ಳೆಯ ಅನುಭವಿ ರಾಜಕಾರಣಿಗಳು, ನುರಿತಂತ ಹವರು, ಅರಿತಂತಹವರು. ಅವರು ಹಿಂದೆ ನಗರಾಡಳಿತ ಮಂತ್ರಿಗಳಾಗಿದ್ದಂತಹ ಕಾಲದಲ್ಲಿ ನಾನು ನೋಡಿದ್ದೇನೆ. ಬಹಳ ಅನುಭವಿಗಳು. ಲೇಖನಿಯನ್ನು ಹಿಡಿದು ಬರೆಯುವುದಕ್ಕೆ ಪ್ರಾರಂಭ ಮಾಡಿ ದರು ಅಂದರೆ ಅವರ ಕೈಕೆಳಗೆ ಇರತಕ್ಕಂತಹ ಅಧಿಕಾರಿಗಳು ಹೆದರುತ್ತಿದ್ದರು ಅಂತ ನಾನು ಕೇಳಿದ್ದೇನೆ. ಏಕೆಂದರೆ ಅವರಿಗೆ ಭಯ, ಯಾವ ಸಂದರ್ಭದಲ್ಲಿ ಏನು ಮಾಡುತ್ತಾರೋ ಎಂಬ ಭಯ ಅಧಿಕಾರಿಗಳಿಗೆ ಇತ್ತು ಎಂಬುದನ್ನು ನಾನು ಕೇಳಿದ್ದೇನೆ. ನಾನು ಪ್ರತ್ಯಕ್ಷವಾಗಿ ಸಾರ್ವಜನಿಕರ ಗ್ಯಾಲರಿಯಲ್ಲಿ ಕುಳಿತು ಕೊಂಡು ನೋಡಿದ್ದೇನೆ. ಆಗ ಶ್ರೀಮಾನ್ ವೈಕುಂಠ ಬಾಳಿಗಾರವರು ಅಧ್ಯಕ್ಷರಾಗಿದ್ದರು. ನಾನೂ ಕೂಡ ಅಂದು ನಡೆಯುತ್ತಿದ್ದ ಸಭೆಯ ಕಾರ್ಯಕಲಾಪಗಳನ್ನು ಮೇಲುಗಡೆ ಕುಳಿತು ವೀಕ್ಷಣೆ ಮಾಡಿ ದ್ದೇನೆ. ಶ್ರೀಮಾನ್ ಗೋಪಾಲಗೌಡರು ವಿರೋಧಪಕ್ಷದಲ್ಲಿದ್ದಾಗ ಅವರ ಹೊಡೆತವನ್ನು ಸಹಿಸಿಕೊಳ್ಳ ಲಾಗದೆ ತಾವು ಧರಿಸಿದ್ದ ಕಿರೀಟವನ್ನು ಕಿತ್ತು ಬಿಸಾಕಿ ಹೋದವರು ಮತ್ತೆ ಹಿಡಿತಕ್ಕೆ ಸಿಕ್ಕಲಿಲ್ಲ. ಅಂತಹ ಪ್ರಸಂಗ ಹಿಂದೆ ಏನು ಈ ಸದನದಲ್ಲಿ ನಡೆಯಿತು ಅದನ್ನು ನಾನು ಬಲ್ಲೆ. ಈ ಮೂರು ವರ್ಷಗಳ ಜನತಾ ಸರ್ಕಾರದ ಆಡಳಿತದ ಬಗ್ಗೆ ಪ್ರತಿ ಪಕ್ಷದವರು ತಮ್ಮ ಮೆಚ್ಚುಗೆಯನ್ನು ವ್ಯಕ್ತ ಮಾಡಬೇಕಾ ಗಿತ್ತು, ತಪ್ಪು ಇದ್ದರೆ ತಮ್ಮಲ್ಲಿ ಅಂತ ಹೇಳಲಿ. ಒಳ್ಳೆಯ ಕೆಲಸ ಮಾಡಿದ್ದನ್ನು ಗುರುತಿಸಿ ಒಳ್ಳೆಯ ಕೆಲಸ ಮಾಡಿದ್ದೀರಿ ಎಂಬುದನ್ನು ಹೇಳಿಬಿಟ್ಟರೆ ಪ್ರತಿ ಪಕ್ಷವಾಗುವುದಿಲ್ಲವೇನೋ ಎಂಬ ಅಭಿಪ್ರಾಯವನ್ನು ತಾಳುವುದು ಸರಿಯಾದುದಲ್ಲ. ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಹಾಗೂ ಉಳಿದ ಮಂತ್ರಿಗಳು ಏನು ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ ಅವುಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಮಾಡಬೇಕಾ ಗಿತ್ತು. ಕೆಲವು ಸಾರಿ ತಪ್ಪುಗಳಾಗುತ್ತವೆ. ನಡೆಯುವವನು ಎಡವದೆ ಇರುವುದಿಲ್ಲ. ನಾನೂ ಕೂಡ ತಪ್ಪು ಒಂದೊಂದು ಸಾರಿ ಮಾಡುತ್ತೇನೆ. ಗೊತ್ತಿದ್ದೋ ಗೊತ್ತಿಲ್ಲದೆಯೋ ತಪ್ಪುಗಳನ್ನು ಮಾಡುತ್ತೇನೆ. ತಪ್ಪನ್ನು ಒಪ್ಪಿಕೊಳ್ಳುವುದರಲ್ಲಿ ಅರ್ಥವಿದೆ. ಮೇಲ್ಮಟ್ಟದಲ್ಲಿ ಆಡಳಿತವನ್ನು ವಿಶೇಷವಾಗಿ ನಡೆಸಿಕೊಂಡು ಬರು ತ್ತಿದ್ದಾರೆ. ಇವತ್ತು ನಾವು ಹೇಳುವುದಾದರೆ, ರಾಷ್ಟ್ರಮಟ್ಟದ ಧೋರಣೆಯ ಮುಖಂಡರಾಗಿರತಕ್ಕಂತಹ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಭಾರತ ರಾಷ್ಟ್ರಕ್ಕೆ ಅಗತ್ಯವಾಗಿ ಬೇಕಾಗಿರತಕ್ಕ ಮುಖಂಡರು. ಇವತ್ತು ಶ್ರೀಮಾನ್ ರಾಜೀವ್ ಗಾಂಧಿಯವರು ಪ್ರಧಾನಮಂತ್ರಿಯಾಗಿದ್ದಾರೆ. ಅವರನ್ನು ಬಿಟ್ಟರೆ ಬೇರೆ ಮುಖಂಡರು ಇಲ್ಲ. ಅವರನ್ನು ಬಿಟ್ಟರೆ ಶ್ರೀಮಾನ್ ರಾಮಕೃಷ್ಣ ಹೆಗಡೆಯವರೇ ಮುಂದಿನ ಭಾರತದ ಮುಖಂಡರು ಎಂಬುದಾಗಿ ಖಚಿತವಾಗಿ ಈ ಸದನದಲ್ಲಿ ಹೇಳುತ್ತಿದ್ದೇನೆ.

ಶ್ರೀ ಆರ್. ಎಸ್. ನಾಯಕ್.—ಪ್ರೊಮೋಷನ್ ಸಿಕ್ಕುತ್ತದೆಯೇ?

ಶ್ರೀ ಜಿ. ನಾರಾಯಣಕುಮಾರ್.—ನಮ್ಮ ಪ್ರತಿ ಪಕ್ಷದ ಸ್ನೇಹಿತರು ಅವರುಗಳ ಹೃದಯದಲ್ಲಿಟ್ಟು ಕೊಳ್ಳಬೇಕು. ಇವತ್ತು ಪ್ರಧಾನಿ ರಾಜೀವ್ ಗಾಂಧಿಯವರ ಬಗ್ಗೆ ನಿಮಗಿಂತ 100 ಪಟ್ಟು ನಮಗೆ ಹೆಮ್ಮೆ ಇದೆ. ಅವರು ಮಾಡತಕ್ಕಂತಹ ಒಳ್ಳೆಯ ಕಾರ್ಯಗಳನ್ನು ನಾವೂ ಕೂಡ ಶ್ಲಾಘನೆ ಮಾಡು ತ್ತೇವೆ. ತಲೆ ಪ್ರಧಾನಿ ರಾಜೀವ್ ಗಾಂಧಿಯವರದು. ಬುದ್ಧಿ ರಾಮಕೃಷ್ಣ ಹೆಗಡೆಯವರದು.

ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಜ್ಞಾನ ಭಂಡಾರದ ತಲೆ ಕೇಂದ್ರ ಸರ್ಕಾರದಲ್ಲಿದೆ. ಅದ ಕ್ಕಾಗಿ ಆಗಾಗ್ಗೆ ಪ್ರಧಾನಿಯವರು ನಮ್ಮ ಶ್ರೀಮಾನ್ ರಾಮಕೃಷ್ಣ ಹೆಗಡೆಯವರನ್ನು ಭೇಟಿಯಾಗು

ತ್ತಿದ್ದು ಅವರ ಸಲಹೆಯ ಮೇಲೆ ಅಲ್ಲಿ ಪ್ರಧಾನಿಯವರು ಆಡಳಿತವನ್ನು ನಡೆಸುತ್ತಿದ್ದಾರೆ. ಇದನ್ನು ಯಾರೂ ಮರೆಯಬಾರದು. ಇದು ತಮಗೂ ಗೊತ್ತಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದಲ್ಲಿ ನಡೆಯುತಕ್ಕಂತಹ ಕೆಲಸದ ಬಗ್ಗೆ ಒಂದು ಮಾತನ್ನು ಹೇಳಬೇಕಾಗುತ್ತದೆ. ನಮ್ಮಲ್ಲಿರತಕ್ಕ ಸಾಮಾನ್ಯ ಆಡಳಿತದ ಬಗ್ಗೆ ಸಾಕಷ್ಟು ಸರಳವಾಗಿ, ಸುಲಭವಾಗಿ ಮಾಡುತ್ತಿದ್ದರೆಂದರೆ, ಸುಲಿದ ಬಾಳೆ ಹಣ್ಣಿನಂದದಿ, ಕಳಿದ ಚಿಗುರಿದ ಕಟ್ಟಿನಂದದಿ, ಹಳಿದ ಉಷ್ಣದ ಹಾಲಿನಂದದಿ ಸುಲಿಭವಾಗಿರತಕ್ಕ ಕನ್ನಡದ ನುಡಿ ಅಷ್ಟೊಂದು ಚೆನ್ನಾಗಿ ಜನತಾ ಸರ್ಕಾರ ಆಡಳಿತದಲ್ಲಿ ನಡೆಯುತ್ತಿವೆ. ಅಷ್ಟು ಸುಲಭವಾಗಿ ನಡೆಯುತ್ತಿದೆ. ಅದನ್ನು ಅವರೂ ಸಹ ಅಲಕ್ಷ್ಯ ಮಾಡಬಾರದು. ಲಾಲಿಸಬೇಕೆದೂರದರ್ಶನಮತ್ತು ಆಕಾಶವಾಣಿಯ ಬಗ್ಗೆ ತಮಗೂ ಅಕ್ಕರೆ ಇದೆ. ಆದರೆ ಕೇಂದ್ರ ಸರ್ಕಾರದ ಧೋರಣೆ ಬದಲಾಗಿದೆ. ರಾಜ್ಯ ಸರ್ಕಾರಗಳು ಇಲ್ಲದೇ ಕೇಂದ್ರ ಸರ್ಕಾರ ಇಲ್ಲ. ನಾವಿಲ್ಲದೆ ಅವರಿಲ್ಲ. ರಾಜ್ಯಗಳು ಇಲ್ಲದೇ ರಾಷ್ಟ್ರ ಆಗುವುದಕ್ಕೆ ಸಾಧ್ಯವಿಲ್ಲ. ಇವತ್ತು ದೂರದರ್ಶನ ಮತ್ತು ಆಕಾಶವಾಣಿ ಕೇಂದ್ರ ಸರ್ಕಾರಕ್ಕೆ ಮಾತ್ರ ಮೀಸಲಾಗಿರತಕ್ಕದ್ದನ್ನು ವಿರೋಧಿಸದೆ ವಿಧಿಯಿಲ್ಲ. ಇವತ್ತು ರಾಜ್ಯ ಸರ್ಕಾರಗಳು ಇಲ್ಲದಿದ್ದರೆ ಕೇಂದ್ರ ಸರ್ಕಾರ ಇಲ್ಲ. ಇವತ್ತು ಕೇಂದ್ರ ಸರ್ಕಾರ ಸರ್ವಾಧಿಕಾರ ಭಾವನೆ ತಾಳುತ್ತಿದೆ. ಇದು ಸಲ್ಲದು. ನಮ್ಮ ರಾಜ್ಯಕ್ಕೂ ದೂರದರ್ಶನ ಮತ್ತು ಆಕಾಶವಾಣಿ ಸೇರಿದೆ. ದೆಹಲಿಗೆ ಹೋದಾಗ ಸುಮ್ಮನೆ ಇದ್ದು ಬರಬೇಡಿ. ಅವರ ಅನಿಸಿಕೆ ಅಭಿಪ್ರಾಯಗಳೇನು, ಸಮಾಜವಾದಿ, ಸಮತಾವಾದಿ ಸರ್ಕಾರಗಳು ತಮ್ಮ ತಮ್ಮ ರಾಜ್ಯಗಳಲ್ಲಿ ಏನು ನೀತಿ ತತ್ವಗಳನ್ನು ಅನುಸರಣೆ ಮಾಡುತ್ತಿವೆ ಅದನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ರಾಜೀವ್ ಗಾಂಧಿಯವರು ಇಂದಿರಾಗಾಂಧಿಯವರ ವಿರುದ್ಧ ಏನಲ್ಲ. ತಮ್ಮದೇ ಆದ ವೈಶಿಷ್ಟ್ಯಕ್ಕೆ ಒಳಪಟ್ಟು ಕೆಲಸ ಮಾಡುತ್ತಾರೆ. ಅವರೂ ಕೂಡ ಎಲ್ಲ ರಾಜ್ಯಗಳ ಜನತಾ ಸರ್ಕಾರಗಳು ಏನು ಒಂದು ಮಾದರಿಯಾಗಿ ಆಡಳಿತ ಮಾಡುತ್ತಿವೆಯೋ ಅದಕ್ಕೆ ತಕ್ಕಂತೆ ಅವಕಾಶ ನೀಡಬೇಕು. ಈ ಸರ್ಕಾರದಲ್ಲಿ ವಾರಕ್ಕೆ ೫ ದಿನ ಕೆಲಸ ಎಂಬುದನ್ನು ಘೋಷಣೆ ಮಾಡಿರುವುದು ನನಗೂ ನೋವಾಗಿದೆ. ಹಿಂದೆ ವಾರಕ್ಕೆ ೬ ದಿನ ಕೆಲಸ ನಡೆಯುತ್ತಿತ್ತು. ಅದರಿಂದ ಜನಸಾಮಾನ್ಯರಿಗೆ ಅನುಕೂಲವಾಗಿತ್ತು. ಆದ್ದರಿಂದ ಪುನಃ ವಾರಕ್ಕೆ ೬ ದಿನ ಕೆಲಸ ಮಾಡುವಂತೆ ಮಾಡಬೇಕೆಂದು ಹೇಳುತ್ತೇನೆ. ಕೇಂದ್ರ ಸರ್ಕಾರದ ಕೈಗಾರಿಕೆಗಳಲ್ಲಿ ಏನು ಉತ್ಪತ್ತಿ ಇದೆಯೋ ಅದರಲ್ಲಿ ಕರ್ನಾಟಕ ಸರ್ಕಾರ ಶೇಕಡ ೫೦ ಭಾಗ ಹಣವನ್ನು ಇಟ್ಟುಕೊಂಡು ಉಳಿದುದನ್ನು ಕೇಂದ್ರ ಸರ್ಕಾರಕ್ಕೆ ವಹಿಸುವ ನೀತಿಯನ್ನು ಅಳವಡಿಸಿಕೊಂಡರೆ ನಮ್ಮ ರಾಜ್ಯಕ್ಕೆ ಅನುಕೂಲವಾಗುತ್ತದೆ ಒಂದು ಸಿದ್ಧಾಂತ ಕೈಗೊಳ್ಳಪಡತಕ್ಕ ಅವಕಾಶವಾಗುತ್ತದೆ. ಕನ್ನಡಿಗರ ಅನಿಸಿಕೆಗನುಗುಣವಾಗಿ ನಾಡಿನ ಆಡಳಿತಕ್ಕೆ ಸುಭದ್ರತೆ ಬರುತ್ತದೆ. ಇನ್ನೂ ಮಾತನಾಡುವುದು ಇತ್ತು, ಆದರೆ ಕಾಲಾವಕಾಶ ಹೆಚ್ಚಿಗೆ ಇಲ್ಲದಿರುವುದರಿಂದ ಮುಂದೆ ಅಧ್ಯಕ್ಷರು ಅವಕಾಶ ಮಾಡಿಕೊಡುತ್ತಾರೆಂದು ನಂಬಿ, ಹೆಗಡೆಯವರು ಅಷ್ಟು ಸುಲಭಸಾಧ್ಯವಾದ ವ್ಯಕ್ತಿ ಎಂದು ತಿಳಿಯಬಾರದೆಂದು ಹೇಳುತ್ತೇನೆ. ಈ ರಾಜ್ಯದಲ್ಲಿ ಅವರು ೧೫ ವರ್ಷಗಳ ಕಾಲ ಆಡಳಿತದಲ್ಲಿರುತ್ತಾರೆಂದು ನನ್ನ ನಂಬಿಕೆ. ಮುಂದೆ ಅವರು ಪ್ರಧಾನಿಯಾಗಿ ಹೋಗುವವರೆಗೆ ಇರುತ್ತಾರೆ. ಮುಖ್ಯಮಂತ್ರಿಗಳಿಗೆ ಅರಿವು ಮೂಡುತ್ತಿದೆ. ಅವರು ರೈತನ ಅನಿಸಿಕೆಗಳನ್ನು ಅರ್ಥಮಾಡಿಕೊಂಡು ಅವನ ಏಳಿಗೆಗಾಗಿ ದಿಟ್ಟ ನಿಲುವನ್ನು ತಾಳಿದ್ದಾರೆ. ಅವನ ಸಮಸ್ಯೆಗಳನ್ನು ನಿವಾರಣೆ ಮಾಡಬೇಕೆಂಬ ಸಂಕಲ್ಪ ಮಾಡಿದ್ದಾರೆ. ಅವರು ತಮ್ಮ ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಲು ಭುವನೇಶ್ವರಿಯ ಆಶೀರ್ವಾದ ಸದಾ ಇರಲಿ ಎಂದು ಹಾರೈಸಿ ಇಷ್ಟು ವೇಳೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SMT. MUKTHARUNNISA (Narasimharaja).—Respected Mr. Speaker Sir, first of all I thank you for giving me an opporunity to speak for a few minutes I don't want to go around like our Narayan Kumar. I would only like to bring a few points and request the Hon. Chief Minister to look into it and do the needful.

Sir, the officials from the cadre of Head Clerks are being promoted as Senior Inspectors of Cooperative Societies in accordance with the existing Cadre and Recruitment Rules of the Department of Co-

operation. Their pay scale in the cadre of Head Clerk is fixed as Rs. 860-1650. But the payscale of the Senior Inspector, which is a promotional post from the cadre of Head Clerk, is fixed at Rs. 750-1500. This is confusing. I am requesting the hon. Chief Minister to take action and do the needful. Similarly, another thing is the District Auditor of Cooperative Societies is given a payscale of Rs. 920-1725. Whereas, an Asst. Engineer in the PWD and other similar cadres in other Departments are given the scale of Rs. 1050-1950. This shows that District Auditors are given step-motherly treatment and are discriminated. I request the Hon. Chief Minister to do the needful.

In Mysore there are some houses alloted by the CITB in 1978-79 under MIG, LIG and EWS schemes. The rate for MIG Houses was Rs. 42,000 LIG — Rs. 18,000 and EWS — Rs. 8,000. After one year, the CITB has enhanced the rates by 33%. Whereas the Houses constructed by the Housing Board under the HUDCO scheme for similar houses is enhanced only by Rs. 4,000. I have brought this to the notice of the hon. Minister Sri A. Lakshmisagar, but he has not given any answer to it. I request the hon. Chief Minister to look into this and do the needful.

I must congratulate the Government for deputing more Kannada teachers to Urdu schools to teach Kannada because, Kannada has been made a compulsory subject as well as a third language. When our (Congress) Government was there they posted 5,000 teachers to Urdu schools to teach Kannada. Now there are more graduates coming for government appointments. Most of these graduates are not getting jobs because they have not studied Kannada. The recruitment committee members are harrassing the minorities. First they ask whether they have passed Kannada. When these minorities completed their graduation, at that time, Kannada wasnot compulsory. Later on, the Government made Kannada a compulsory subject. As a result, persons who finished their graduation earlier could not learn Kannada. Therefore, I request the Government to give maximum time limit to such persons to learn Kannada. Even the teachers who were recruited on contract basis for two years they have been removed because they have not passed Kannada. This has resulted in more unemployment. I request the Hon. Chief Minister to give more time to learn Kannada.

Further I also request the Hon. Chief Minister to allot more funds to the Minorities Development Corporation so that our minority youths can get more help from that Corporation. Another small

request is, "Urdu News" should be introduced in the All-India Radio, for atleast three minutes for the benefit of minorities.

Mr. Speaker Sir, I have not spoken much, but I require another 3-4 minutes.

If the AIR Bangalore broadcastes 3 minutes Urdu news, it will go a long way in educating the uneducated muslims because mostly they are all poor people and they are in a position to buy news-papers every day. Therefore, I request the Government to introduce 5 minutes urdu news bulletin after the Kannada news bulletin atleast in your regime so that your name will be remembered for ever. I am not asking for Delhi broadcasting. I am asking only for local news bulletin from Bangalore, AIR. They will be able to know atleast what is going on in Karnataka if not in the wholeof the country. In my opinion, out of all departments, the Department of Information and Publicity is the most important Department.

Now, I come to Tourism Department. Here, all the literatures are given only in Kannada. But, tourists come from all over the country and also from all corners of the world. Simultaneously, English literature also should be provided to tourists by the Tourism Department so that all types of tourists can know what to be seen and where to go, and also know about hisorical places. So many times tourists do not have time to grasp or read the literature and that is the reason why I insist upon the Government to introduce audio-visual method i.e., display on the Television all the important tourist places and their local importance and also the history. Of course, there are so many Video-coaches and also there are someany television sets at Railway Station, Bus Station and Airport; it will facilitate them to dssplay there. Whenever tourists come to Delhi they first prefer to go to Sound and Light programme and this programme has become a very popular programme. Liewise, why not the Government think of introducing Sound and Likght programme to highlight the importance and historical back ground of places like Srirangapatna, Belur, Halebidu etc ? If you introduce such programmes we will have more publicity and also we will be able to get more money. Moreover, there will be propoganda of our rich heritage and culture. Here, references can be made of kings and important historical places.

Now, I come to K.R. hospital of Mysore. For the construction of out-patient and in patient wards tenders were called for in 1977-78. The construction is not completed and because of the mismanage ment and the work being not upto the mark, some of the engineers have been suspended and some are blacklisted. It has caused very

much inconvenience to the public. Please look into it and do justice in the matter.

Now, I come to Social Welfare and Women Welfare Department. Women represent 53% of the population, This is a major portfolio with less financial allocation. Women are not getting their due share though they are in majority when compared to men. If you just give a mangalsutra or Rs. 3,000 for the marriage of a woman, it will not solve her problem and it does not amount to woman welfare. Women are not encouraged in having small scale industries; they are not encouraged in all fields as the menfolk are encourged. Take for example self—employment scheme, women are not getting encouragement and their due share is not given. Naturally it hurts our feelings, So also children are not getting their due benefits. Child labour is exploited every where. They are suffering from malnutrition. With these words, I conclude my speech and thank the Chair for having given me the opportunity to putforth my views.

Demands for Excess Grants for the year s 1981-82, and (1982-83 presentation)

A. LAKSHMISAGAR (Hon. Minister for Law and Parliamentary Affairs).—Sir, on behalf of the hon. Chief Minister. I present a statement showing the Demands for Grants to cover the expenditure incurred in excesf of voted grants and charged appropriation during the years 1981-82 and 1982-83; as required under Article 205 (i) (b) of the Constitution of India.

MR. SPEAKER.—Demands for excelss grants Presented Now, the House stands djourned to meet tomorrow at 9-00 A.M.

The House adjourned at Seven of the Clock to meet again at Nine of the Clock on Friday, the 14th day of March 1986.